ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

ಅಕ್ಟೋಬರ್ 12, 2011 ಪುಟ 20 ರೂ. 14/-

ಕಂಬಾರರ ಹಾಡು ದಳವಾಯಿ ಕುಣಿತ




ಾಲಕೃಷ್ಣ ಗೌಡ

ಅಕ್ರಮಗಳ ಪರಾಕ್ರಮ

ರೆಡ್ಡಿ ಪತ್ನಿ

ಜೈಲಿಗೆ?


ೊಸ ದಿಗಂತ ಸಂಪಾದಕನಿಗೆ ಹಡಬೆ ಸೈಟು ಕೊಟ್ಟ ಯಡ್ಡಿ!



ರ್ಪೊರೇಟರ್ ಾಬುನ ೋಗಸ್ ಸ್ತಿಪತ್ರ

ದ್ವಾರಕೀಶ್ ಕಿತಾಪತಿ

ಪೋಕರಿ ಪಾತ್ರಕ್ಕೆ ವಿಷ್ಣು ಹೆಸರು!



ೂ ಲೂಟಿಗೆ ರೈತನನ್ನು ಅಪಹರಿಸಿದ ಶಿವಕುಮಾರ ಉದಾಸಿ




ಪೂನಾ ಒಪ್ಪಂದ

ಹಿಂತಿರುಗಿ ನೋಡಿದಾಗ...



ಲಂಕೇಶರ ಅವ್ವ ಕಣ್ಣು ಮುಚ್ಚಿದರು

ಒಂದು ದಿನ ವಿಕ್ಟೋರಿಯಾ ಹೋಟೆಲ್‌ಗೆ ಇಬ್ಬರೂ ಹೋದೆವು. ಲಂಕೇಶರು ಒಂದು ಬಾಟಲ್ ತೆಗೆದುಕೊಂಡರು. ಆದರೆ ನಮ್ಮ ಪಕ್ಕದ ಟೇಬಲ್‌ನಲ್ಲಿ ಕುಳಿತಿದ್ದವರು ತಮ್ಮ ಗ್ಲಾಸ್‌ನಲ್ಲಿ ಸ್ವಲ್ಪ ಹಾಕಿಕೊಂಡು ಅದಕ್ಕೆ ನೀರು ಬೆರೆಸಿಕೊಂಡು ಕುಡಿಯುತ್ತಿದ್ದರು. ಅದನ್ನು ನೋಡಿದ ನಾನು "ಅವರನ್ನು ನೋಡಿ. ಎಷ್ಟು ಕಡಿಮೆ ಕುಡಿಯುತ್ತಿದ್ದಾರೆ. ನೀವು ಒಂದು ಬಾಟಲ್ ತೆಗೆದುಕೊಂಡಿದ್ದೀರ" ಎಂದೆ. ಅದಕ್ಕೆ ಲಂಕೇಶರು "ಅವರು ಕುಡಿಯುತ್ತಿರುವುದು ವಿಸ್ಕಿ. ಅದನ್ನು ಕಡಿಮೆ ಕುಡಿಯುತ್ತಾರೆ. ನಾನು ಕುಡಿಯುತ್ತಿರುವುದು ಬಿಯರ್. ಇದನ್ನು ಒಂದು ಬಾಟಲ್ ಕುಡಿದರೂ ಏನೂ ಆಗಲ್ಲ" ಎಂದರು. ಆದಾದ ಮಾರನೆಯ ದಿನ ಮನೆಯಲ್ಲಿ "ನೀನೂ ಸ್ವಲ್ಪ ಬಿಯರ್ ಕುಡಿ" ಅಂತ ಕರೆದು ಒಂದು ಗ್ಲಾಸ್‌ನಲ್ಲಿ ಬಿಯರ್ ತುಂಬಿಸಿ ನನಗೆ ಕೊಟ್ಟರು. ಅದನ್ನು ಕುಡಿದು ತಲೆ ಸುತ್ತಿದರೆ ಏನು ಗತಿ ಎಂದು ನನಗೆ ಭಯವಾಯಿತು. ಹೇಗಾದರೂ ಆಗಲಿ ಅಂತ ಹಾಸಿಗೆ ಹಾಸಿಕೊಂಡು ತಲೆ ಸುತ್ತಿದರೆ ಹಾಗೇ ಮಲಗಲು ಎಲ್ಲಾ ತಯಾರಿ ಮಾಡಿಕೊಂಡು ಗ್ಲಾಸ್ ತೆಗೆದುಕೊಂಡೆ. ಅದನ್ನು ಬಾಯಿಗೆ ತೆಗೆದುಕೊಂಡಾಗ



"ಒಂಥರಾ ವಾಸನೆ. ಬೇಡ ರೀ" ಅಂದೆ. "ಏನಾಗಲ್ಲ, ಫಸ್ಟ್ ಹಾಗನ್ನಿಸುತ್ತೆ ಆಮೇಲೆ ಏನೂ ಅನ್ನಿಸೋಲ್ಲ ಕುಡಿ" ಎಂದರು. ನಾನು ಕುಡಿದೆ. ತಲೆ ಸುತ್ತುತ್ತೆ ಅಂತ ಕಾದರೆ ತಲೆ ಸುತ್ತಲೇ ಇಲ್ಲ, ಕೆಟ್ಟ ವಾಸನೆ ಬೇರೆ. ಬೇಡಪ್ಪ ಇದರ ಸಹವಾಸ ಎಂದು ಬಿಟ್ಟೆ.

ಮಲ್ಲೇಶ್ವರದಲ್ಲಿ ಇವರ ಫ್ರೆಂಡ್ಸ್ ಇದ್ದರು. ಎಲ್ಲರೂ ಡ್ರಾಮಾ, ಸಾಹಿತ್ಯದಲ್ಲಿ ತುಂಬಾ ಇನ್‌ವಾಲ್ವ್ ಆಗಿದ್ದವರು. ಅವರಲ್ಲಿ ಒಬ್ಬರ ಹೆಸರು ಬುಟ್ಟಿ ಅಂತ. ಹಲವು ವರ್ಷಗಳ ಮುಂಚೆ ಆಕೆ ನೋಡಲು ತುಂಬಾ ಚೆನ್ನಾಗಿದ್ದರಿಂದ ಅವರನ್ನು ಎಲ್ಲರೂ 'ಬ್ಯೂಟಿ' ಎಂದು ಕರೆಯುತ್ತಿದ್ದರಂತೆ. ಆದರೀಗ ಅವರು ಅಷ್ಟು ಬ್ಯೂಟಿಫುಲ್ ಆಗಿರದಿದ್ದ ಕಾರಣ ಅವರನ್ನು ಎಲ್ಲರೂ ಬುಟ್ಟಿ ಎಂದು ಕರೆಯಲಾರಂಭಿಸಿದ್ದರು. ಈ ಬುಟ್ಟಿ ಅವರ ಮನೆಗೆ ಕಂಚಿಯಿಂದ, ಮೊಣಕಾಲ್‌ಮೂರ್‌ನಿಂದ ಸೀರೆ ಮಾರಲು ಜನ ಬರುತ್ತಿದ್ದರಂತೆ. ಒಂದು ದಿನ ಲಂಕೇಶರು ಅವರ ಮನೆಯಿಂದ ರಸ್ಟ್ ಬಾರ್ಡರ್ ಇದ್ದ ನೀಲಿ ರೇಷ್ಮೆ ಸೀರೆ ತಂದುಕೊಟ್ಟರು. ಅವರು ಮೊದಲ ಬಾರಿಗೆ ನನಗೆ ತಂದುಕೊಟ್ಟ ಸೀರೆ ಅದು. ಈಗ ಅದು ಹರಿದಿದ್ದರೂ ಅದನ್ನು ಇನ್ನೂ ಇಟ್ಟುಕೊಂಡಿದ್ದೇನೆ.

ಆಮೇಲೆ ಯಾವಾಗಲಾದರೊಮ್ಮೆ "ನಿನಗೆ ಸೀರೆ ಕೊಡಿಸುತ್ತೇನೆ ಬಾ" ಎಂದು ಅಂಗಡಿಗೆ ಕರೆದುಕೊಂಡು ಹೋಗುತ್ತಿದ್ದರು. ಆದರೆ ಇವರು ಅರ್ಧ ಸಿಗರೇಟ್ ಸೇದುವ ಹೊತ್ತಿಗೆ ನಾನು ಸೀರೆ ಸೆಲೆಕ್ಟ್ ಮಾಡಬೇಕಿತ್ತು, ನಾನು ತಡ ಮಾಡಿದರೆ "ಜೀವನವೆಲ್ಲಾ ಒಂದೇ ಸೀರೆ ಉಡುತ್ತೀಯ? ಬೇಗ ತೆಗೆದುಕೊಂಡು ಬಾ" ಎನ್ನುತ್ತಿದ್ದರು. ಹೀಗೆ ಒಂದೆರಡು ಬಾರಿ ಆದನಂತರ ನಾನು ಪಾಠ ಕಲಿತೆ. ನಾನು ಮುಂಚಿತವಾಗಿಯೇ ಅಂಗಡಿಗೆ ಹೋಗಿ ಸೀರೆ ಸೆಲೆಕ್ಟ್ ಮಾಡಿ ಅದನ್ನು ಕಾಯ್ದಿರಿಸಿ ಬರುತ್ತಿದ್ದೆ. ಆಮೇಲೆ ಇವರೊಂದಿಗೆ ಹೋಗಿ "ಒಂದೇ ನಿಮಿಷದಲ್ಲಿ ಸೀರೆ ಸೆಲೆಕ್ಟ್ ಮಾಡಿದೆ" ಎಂದು ಅದನ್ನು ತೆಗೆದುಕೊಂಡು ಬರುತ್ತಿದ್ದೆ.

ಲಂಕೇಶರಿಗೆ ಸೀರೆಗಳ ಬಗ್ಗೆ ಒಂದಿಷ್ಟೂ ತಿಳಿವಳಿಕೆ ಇರಲಿಲ್ಲ, ಸೀರೆಗೆ ಜರಿ ಇದ್ದರೆ ಸಾಕು ಎನ್ನುತ್ತಿದ್ದರು. ಆದರೆ ಆದರಲ್ಲಿನ ಜರಿ ನಿಜವಾದ ಜರಿಯೋ ಅಥವಾ ನಕಲಿ ಜರಿಯೋ ಎಂದು ಅವರಿಗೆ ಗೊತ್ತಾಗುತ್ತಿರಲಿಲ್ಲ, ಅಷ್ಟೇ ಅಲ್ಲ ಯಾವ ಸೀರೆ ಹೆಚ್ಚು ಭಾರವಿದೆಯೋ ಅದೇ ದುಬಾರಿ ಸೀರೆ ಎಂದು ನಂಬಿದ್ದರು.

ಲಂಕೇಶರು ನನ್ನನ್ನು ಮೊದಲಬಾರಿಗೆ ನೋಡಲು ಬಂದಾಗ ನನ್ನ ಅಕ್ಕನ ಮನೆಯ ಹಿಂದೆ ವಾಸ ಇದ್ದವರು ಇನ್ನೂ ಅಲ್ಲೇ ಇದ್ದರು. ನಾನು ಒಂದೂ ಚಿನ್ನದ ಸರ ಹಾಕಿಕೊಂಡಿರದಿದ್ದನ್ನು ಗಮನಿಸಿದ ಅವರು "ಏನು ಇಂದೂ, ಇನ್ನೂ ಬರೀ ಕತ್ತಿನಲ್ಲಿ ಇದ್ದೀಯಾ" ಎಂದು ನನ್ನನ್ನು ಚಿನ್ನದ ಅಂಗಡಿಗೆ ಕರೆದುಕೊಂಡು ಹೋಗಿ ಒಂದು ಸರ ಕೊಡಿಸಿದರು. ಆದರ ಬಾಬತ್ತನ್ನು ಕಂತಿನಲ್ಲಿ ಕಟ್ಟಿದೆ.

****

ಗೌರಿಗೆ ಎರಡು ವರ್ಷ ಎರಡು ತಿಂಗಳಾದಾಗ ನಾನು ಮತ್ತೆ ಗರ್ಭಿಣಿ ಆದೆ. ಇಷ್ಟು ಬೇಗ ಇನ್ನೊಂದು ಮಗು ಬೇಡ ಎಂದು ಏನೇನೋ ಪ್ಲಾನ್ ಮಾಡಿದ್ದರೂ ಮತ್ತೆ ಮಗು ಹೊತ್ತಿದ್ದೆ. ಆಗ ಲಂಕೇಶರಿಗೆ ಮುಂಚಿನಂತೆ ಜಾಸ್ತಿ ಬಿಡುವು ಸಿಗುತ್ತಿರಲಿಲ್ಲ, ಪ್ರತಿ ದಿನ ಮನೆಗೆ ಸ್ವಲ್ಪ ತಡವಾಗಿ ಬರಲು ಶುರು ಮಾಡಿದರು. ಈ ಮಧ್ಯೆ ನಮ್ಮ ವಾಸ್ತವ್ಯವನ್ನು ಜಯನಗರದಿಂದ ನನ್ನ ಅಕ್ಕನ ಮನೆಗೆ ಹತ್ತಿರವಿದ್ದ ಜರ್ನಲಿಸ್ಟ್ ಕಾಲೋನಿಗೆ ಬದಲಾಯಿಸಿದ್ದೆವು.

ಒಮ್ಮೆ ಅತ್ತೆ ಮತ್ತು ಮಾವ ಬೆಂಗಳೂರಿಗೆ ಬಂದರು. ನನ್ನ ಮಾವನವರಿಗೆ ಸಿನಿಮಾ ಎಂದರೆ ತುಂಬಾ ಇಷ್ಟ. ಆದರಲ್ಲೂ ರಾಜ್‌ಕುಮಾರ್ ಸಿನಿಮಾ ಅಂದರೆ ಮುಗಿಯಿತು. ಅವರನ್ನು ಒಂದು ಸಾರಿ ರಾಜ್‌ಕುಮಾರ್ ನಟಿಸಿದ್ದ ಸಿನಿಮಾ ನೋಡಲು ಕರೆದುಕೊಂಡು ಹೋಗಿದ್ದೆ ಆ ಸಿನಿಮಾದ ಹೆಸರು ಮರೆತಿದೆ. ಆ ಚಿತ್ರದಲ್ಲಿ ಹತ್ತು ರಾಜ್‌ಕುಮಾರ್‌ಗಳು ಒಟ್ಟಿಗೆ ಸಂಗೀತ ಕಚೇರಿ ನಡೆಸುವುದನ್ನು ನೋಡಿ "ತಾಯಿ, ಎಷ್ಟು ಚೆನ್ನಾಗಿ ಮಾಡಿದ್ದಾನೆ ರಾಜಕುಮಾರ. ಈ ಪಿಕ್ಚರ್ ಮತ್ತೆ



ನೋಡಬೇಕು" ಎಂದಿದ್ದರು. ಆದರೆ ನನ್ನ ಅತ್ತೆಗೆ ಸಿನಿಮಾಗಳೆಂದರೆ ಅಷ್ಟು ಹಿಡಿಸುತ್ತಿರಲಿಲ್ಲ, ಅವರು 'ಕಿತ್ತೂರು ಚೆನ್ನಮ್ಮ' ಚಿತ್ರ ನೋಡಿ "ಅದರಲ್ಲಿ ರಾಜಕುಮಾರನೇ ಹುಲಿಯಾಗಿ ಬಂದಿದ್ದು" ಎನ್ನುತ್ತಿದ್ದರು.

ಅತ್ತೆ ಮತ್ತು ಮಾವ ಬೆಂಗಳೂರಿಗೆ ಬಂದಾಗ ನಾನೇ ಅವರಿಬ್ಬರನ್ನು ಸಿನಿಮಾ, ಲಾಲ್‌ಬಾಗ್, ವಿಧಾನಸೌಧ ಮಾತ್ರ ಇತ್ಯಾದಿ ಜಾಗಗಳಿಗೆ ಕರೆದುಕೊಂಡು ಹೋಗಿ ತೋರಿಸಿಕೊಂಡು ಬರುತ್ತಿದ್ದೆ. ಒಂದು ದಿನ ಮಾವನವರು "ಬರೀ ಇಂದಿರಾ ನಮ್ಮನ್ನು ಆಚೆ ತಿರುಗಾಡಲು ಕರೆದುಕೊಂಡು ಹೋಗುತ್ತಾಳೆ. ನೀನು ನಮ್ಮನ್ನು ಎಲ್ಲಿಗೂ ಕರೆದುಕೊಂಡು ಹೋಗುವುದಿಲ್ಲ" ಎಂದು ಲಂಕೇಶರಿಗೆ ಹೇಳಿದರು. ಆದಕ್ಕೆ ಲಂಕೇಶರು "ನಾನು ಕರೆದುಕೊಂಡು ಹೋದರೇನು, ಆಕೆ ಕರೆದುಕೊಂಡು ಹೋದರೇನು. ಎಲ್ಲಾ ಒಂದೆ" ಅಂದಾಗ ಮಾವ "ಅದೂ ಸರಿ ಬಿಡು" ಎಂದು ಸುಮ್ಮನಾದರು. ಕೆಲವೊಮ್ಮೆ ತಂದೆ ಮತ್ತು ಮಗ ಒಟ್ಟಿಗೆ ಸಿಗರೇಟು ಸೇದುತ್ತಾ ಕೂರುತ್ತಿದ್ದರು.

ನನ್ನ ಅತ್ತೆ ದೇವೀರಮ್ಮ ಒಮ್ಮೆ ಲಂಕೇಶರಿಗೆ "ನಿನ್ನ ಮಾವ ಮೊಮ್ಮಗಳಿಗೆ ಏನೂ ಒಡವೆ ಕೊಟ್ಟಿಲ್ಲ" ಎಂದು ದೂರಿದರು. ಆಗ ಲಂಕೇಶರು "ನೀನು ನಿನ್ನ ಮೊಮ್ಮಗಳಿಗೆ ಏನು ಕೊಟ್ಟಿದ್ದೀಯಾ?" ಅಂತ ಕೇಳಿದರು. ಅದಕ್ಕೆ ಅತ್ತೆ "ಕೊಡಬೇಕಿತ್ತಪ್ಪ" ಎಂದು ಸುಮ್ಮನಾದರು.

ಲಂಕೇಶರು ಮನೆಗೆ ತಡವಾಗಿ ಬರುತ್ತಿರುವುದನ್ನು ಗಮನಿಸಿದ ಮಾವ "ತಾಯಿ, ಯಾಕೆ ತಡವಾಗಿ ಬರುತ್ತಾನೆ? ಕುಡಿಯುವುದನ್ನು ಕಲಿತಿದ್ದಾನಾ?" ಎಂದು ಕೇಳಿದರು. ನಾನು "ಇಲ್ಲ ಮಾವ. ಯಾರೋ ಫ್ರೆಂಡ್ಸ್ ಮನೆಗೆ ಹೋಗಿರುತ್ತಾರೆ" ಎಂದಾಗ ಅವರು "ಅದೇ ಮತ್ತೆ, ಅವನು ಯಾವಾಗಲೂ ಅವನಾಯಿತು ಅವನ ಓದಾಯಿತು" ಎಂದು ತಮ್ಮ ಮಗನ ಬಗ್ಗೆ ಹೆಮ್ಮೆ ಪಟ್ಟರು.

ಅವರಿಬ್ಬರಿಗೂ ಬೆಂಗಳೂರಿಗೆ ಬಂದ ಕೆಲವೇ ದಿನಗಳಲ್ಲಿ ಪೇಟೆ ಜೀವನ ಬೇಜಾರು ತರಿಸುತ್ತಿತ್ತು. 1963ರಲ್ಲಿ ನನ್ನ ಅತ್ತೆಗೆ ಯಾಕೋ ಮೈಯಲ್ಲಿ ಸರಿ ಇಲ್ಲದಂತಾಯಿತು. ಡಾಕ್ಟರ್ ಹತ್ತಿರ ಹೋಗೋಣ ಎಂದರೆ "ಇಲ್ಲ, ಶಿವಮೊಗ್ಗದ ಮಲ್ನಾಡ್ ಡಾಕ್ಟರ್ ಹತ್ತಿರ ತೋರಿಸಿಕೊಳ್ಳುತ್ತೇನೆ. ನನ್ನನ್ನು ಶಿವಮೊಗ್ಗಕ್ಕೆ ಕಳಿಸಿಬಿಡು" ಎಂದು ಹಠ ಹಿಡಿದರು. ಲಂಕೇಶರು "ಬೇಡ. ಇಲ್ಲೇ ಡಾಕ್ಟರ್‌ಗೆ ತೋರಿಸುತ್ತೇನೆ" ಎಂದರೆ "ಬೇಡ. ನನ್ನನ್ನು ಈಗಲೇ ಊರಿಗೆ ಕಳಿಸಿಬಿಡು" ಅಂತ ಮನೆ ಬಾಗಿಲ ಮುಂದೆ ಕುಳಿತುಬಿಟ್ಟರು. ಆಗ ವಿಧಿ ಇಲ್ಲದೆ ಅವರ[illegible] ಶಿವಮೊಗ್ಗಕ್ಕೆ ಕಳುಹಿಸಿಕೊಟ್ಟೆವು.


ಅವರಿಬ್ಬರು ಊರಿಗೆ ಹೋಗಿ ಮೂರು ತಿ[illegible] ಆಗಿರಲಿಲ್ಲ, ಅತ್ತೆ ದೇವೀರಮ್ಮ ಹಾಸಿಗೆ ಹಿಡಿದುಬಿ[illegible] ಅವರಿಗೆ ಟಿಬಿ ಅಂಟಿಕೊಂಡಿತ್ತು. ನಾವಿಬ್ಬರು ಅ[illegible] ನೋಡಲು ಕೊನಗವಳ್ಳಿಗೆ ಹೋದೆವು. ಬೆಳಗ್ಗೆ ತಲುಪಿದಾಗ ಅವರು ಎದ್ದು ಕೂತು ಚೆನ್ನಾ[illegible] ಮಾತನಾಡಿದರು. "ಯಾಕೆ ಸುಮ್ಮನೆ ಬರಲು ಹೋ[illegible] ದುಡ್ಡು ಖರ್ಚು ಮಾಡಿಕೊಂಡು" ಎಂದರು. ಸ್ವಲ್ಪ [illegible] ಕುಡಿದರು. ನಾವಿಬ್ಬರು [illegible]ರನ್ನು ನೋಡುತ್ತಲೇ "[illegible] ಸ್ವಲ್ಪ ಮುಂದಕ್ಕೆ "ಯಾಕೋ ಸಂಕಟ" [illegible] ಹಿಂದಕ್ಕೆ ವಾಲಿದರು. ಕಣ್ಣುಮುಚ್ಚಿಬಿಟ್ಟರು.



ನಾನೆಂದೂ ಲಂಕೇ[illegible] ಅತ್ತಿದ್ದನ್ನು ನೋಡಿರಲಿ[illegible] ಅವತ್ತು ಅವರು ಎಷ್ಟು [illegible] ಅತ್ತರೆಂದರೆ ಅವರ ಕಣ್[illegible] ಪೂರಾ ಕೆಂಪಗಾಗಿದ್ದವು. ಲಂಕೇಶರು ತಮ್ಮ ತಾಯಿಯನ್ನು ಎಷ್ಟು [illegible] ಪಡುತ್ತಿದ್ದರು ಅಂತ ಅ[illegible] 'ಅವ್ವ' ಕವನ ಓದಿದರೆ ತಿಳಿಯುತ್ತದೆ.

****

ಕೊನಗವಳ್ಳಿಯಲ್ಲಿ ಯಾರಾದರೂ ತೀರಿಕೊಂಡರೆ [illegible] ಬಗ್ಗೆ ಹಾಡುತ್ತಾ ಅಳುತ್ತಾರೆ. ಅಂದರೆ ಸತ್ತವರು ಏ[illegible] ಮಾಡಿದ್ದರೋ ಅವುಗಳ ಬಗ್ಗೆ ಹಾಡುತ್ತಲೇ ಅಳ[illegible] ಕೆಲವರು ನಿಜವಾಗಲೂ ಅತ್ತರೆ ಕೆಲವರು ಅಳುತ್ತಿರ[illegible] ನಟಿಸುತ್ತಾರೆ. ನನ್ನ ಅತ್ತೆ ನನಗೆ ಎಂದೂ ಆತ್ಮೀಯರಾಗಿ[illegible] ಅವರ ಇಷ್ಟದ ವಿರುದ್ಧವಾಗಿ ತಮ್ಮ ಮೊಮ್ಮಗಳ ಬ[illegible]



• ಇಂದಿರಾ ಲಂಕೇಶ್

ಲಂಕೇಶರು ನನ್ನನ್ನು ಮದುವೆಯಾಗಿದ್ದರಿಂದ ಅವರಿ[illegible] ಬಗ್ಗೆ ಕೊನೆಯವರೆಗೂ ಬೇಸರವಿತ್ತು. ಅವರು ತೀರಿಕೊ[illegible] ನನಗೆ ಸ್ವಲ್ಪ ಅಳು ಬಂತು. ಒಂದು ಮೂಲೆಯಲ್ಲಿ ಸು[illegible] ನಿಂತಿದ್ದೆ ಯಾರೋ ನನ್ನಲ್ಲಿಗೆ ಬಂದು "ಅಳಬೇಕು" ಅ[illegible] ನಾನು "ಆಗ ಅಳು ಬಂತು. ಈಗ ಬರುತ್ತಿಲ್ಲ" [illegible] ಅದಕ್ಕವರು "ಬರದಿದ್ದರೂ ಅಳಬೇಕು" ಎಂದರು.

ನನ್ನ ಓರಗಿತ್ತಿ ಹಾಡಾಡಿಕೊಂಡು ಅಳುತ್ತಿದ್ದಳು. "[illegible] ನಮ್ಮ ಮನೆಗೆ ಬಂದರೆ ಯಾವಾಗ ಹೋಗುತ್ತಾಳೆ ನಿ[illegible] ಅಂತ ಕೇಳುತ್ತಿದ್ದಲ್ಲ ನಮ್ಮತ್ತೆ... ಇನ್ನು ಮೇಲೆ ಯಾರೇ [illegible] ಹಾಗೆ ಕೇಳೋರು ನನ್ನತ್ತೆ..." ಅಂತ ಆಕೆ ರಾಗವಾಗಿ ಹಾ[illegible] ಅಳುತ್ತಿದ್ದಳು. ಅಂತ ದುಃಖದ ಸಮಯದಲ್ಲೂ ಅ[illegible] ಕೇಳಿದಾಗ ನನಗೆ ನಗು ಬಂತು. ಆದರೆ ತಡೆದುಕೊಂಡೆ. [illegible] ಮಾವ ಮುಂದಿನ ಕೆಲಸ ಕಾರ್ಯ ನೋಡಿಕೊಳ್ಳುತ್ತಿ[illegible] ನಾನು ಗರ್ಭಿಣಿ ಆಗಿದ್ದರಿಂದ ಮಣ್ಣು ಮಾಡುವ [illegible] ಹೋಗುವುದು ಬೇಡ ಎಂದರು. ನಾನು ಮನೆ[illegible] ಉಳಿದುಕೊಂಡೆ.

ನೋ ಕಾಮೆಂಟ್ಸ್

ನರೇಂದ್ರ ಮೋದಿಯ ಕಪಟ ನಾಟಕ

ನರೇಂದ್ರ ಮೋದಿಯ ಉಪವಾಸಕ್ಕೆ ವೆಚ್ಚವಾದ ಹಣ ನೂರು ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು.

- ಗುಜರಾತ್ ಕಾಂಗ್ರೆಸ್ ಅಧ್ಯಕ್ಷ ಅರ್ಜುನ್ ಮೋಧ್ವಾಡಿಯಾ

ಟಾಟಾ ಕಂಪನಿಗೆ ನರೇಂದ್ರ ಮೋದಿ ನೀಡಿರುವ ಸವಲತ್ತುಗಳ ಒಟ್ಟು ಮೌಲ್ಯ 33,000 ಕೋಟಿ ರೂಪಾಯಿ. ಹಾಗೆಯೇ ಅದಾನಿ, ಡಿಎಲ್‌ಎಫ್ ಮತ್ತು ಇತರೆ ಕಂಪನಿಗಳಿಗೂ ಮೋದಿ ಹಲವಾರು ರೀತಿಯಲ್ಲಿ ನೆರವು ನೀಡಿದ್ದಾನೆ. ಅವರೆಲ್ಲರಿಗೆ ಮೋದಿ ಪುಕ್ಕಟೆಯಾಗಿ ನೂರಾರು ಎಕರೆ ಭೂಮಿಯನ್ನು ಕೊಟ್ಟಿದ್ದಾನೆ. ಇಂತಹ ಕಾರಣಗಳಿಗೇ ಕಾರ್ಪೊರೇಟ್ ಕಂಪನಿಗಳು ನರೇಂದ್ರ ಮೋದಿಯನ್ನು ಹೊಗಳುತ್ತವೆ.

- ಗುಜರಾತ್ ಕಾಂಗ್ರೆಸ್ ಅಧ್ಯಕ್ಷ ಅರ್ಜುನ್ ಮೋಧ್ವಾಡಿಯಾ

ಭಾರತದ ಮುಂದಿನ ಪ್ರಧಾನಿ ಆಗಲು ನರೇಂದ್ರ ಮೋದಿ ತನ್ನ ಉಪವಾಸದ ಮೂಲಕ ಮೊದಲ ಹೆಜ್ಜೆ ಇಟ್ಟಾಗ ತಾನು ಮುಸಲ್ಮಾನರ ಟೋಪಿಯಿಂದಾಗಿ ಮುಗ್ಗರಿಸುತ್ತೇನೆ ಎಂದು ಆತ ಕನಸಿನಲ್ಲೂ ಅಂದುಕೊಂಡಿರಲಾರ.

- ಇಮಾಮ್ ಶಾಹಿ ಮೆಹೆಂದಿ ಹುಸ್ಸೆನ್ ಅವರು ಕೊಟ್ಟ ಟೋಪಿಯನ್ನು ತನ್ನ ತಲೆ ಮೇಲೆ ಹಾಕಿಕೊಳ್ಳಲು ನರೇಂದ್ರ ಮೋದಿ ನಿರಾಕರಿಸಿದ್ದನ್ನು ಕುರಿತು ಇಂಡಿಯಾ ಟುಡೆ ಪತ್ರಿಕೆಯ ವಿಶ್ಲೇಷಣೆ

ಕಳೆದ ಹತ್ತು ವರ್ಷಗಳಲ್ಲಿ ನರೇಂದ್ರ ಮೋದಿ ಗುಜರಾತಿನಲ್ಲಿ ಆರೆಸ್ಸೆಸ್ ಮತ್ತು ವಿಶ್ವ ಹಿಂದೂ ಪರಿಷತ್ತನ್ನು ನಿರ್ನಾಮ ಮಾಡಿದ್ದಾನೆ. ಆದ್ದರಿಂದ ಆತ ದೇಶದ ಪ್ರಧಾನಿಯಾದರೆ ಆತ ಇಡೀ ದೇಶದಲ್ಲೇ ಆರೆಸ್ಸೆಸ್ ಮತು ವಿಶ್ವ ಹಿಂದೂ ಪರಿಷತ್ತನ್ನು ನಾಶ ಮಾಡುತ್ತಾನೆ ಎಂಬ ಭಯ ಸಂಘಪರಿವಾರಕ್ಕೆ ಇದೆ.

- ಪತ್ರಿಕಾ ವರದಿ

ನರೇಂದ್ರ ಮೋದಿ ತಮ್ಮ ಪರವಾಗಿದ್ದಾನೆಂದು ಹಿಂದೂಗಳು ನಂಬಿದ್ದರು. ಆದರೀಗ ಆತ ಮುಸಲ್ಮಾನರನ್ನು ಓಲೈಸುತ್ತಿದ್ದಾನೆ. ಇದೇ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಯಾವ ಯೋಜನೆಯೂ ಗುಜರಾತಿನ ಮುಸಲ್ಮಾನರಿಗೆ ಸಿಗದಂತೆ ಎಚ್ಚರ ವಹಿಸುತ್ತಿದ್ದಾನೆ. ಆತನ ಸದ್ಭಾವನೆ ಉಪವಾಸ ಒಂದು ತಮಾಷೆಯ ನಾಟಕ.

- ಹನೀಫ್ ಲಕ್ಡಾವಾಲಾ, ಗುಜರಾತಿನ ಸಾಮಾಜಿಕ ಕಾರ್ಯಕರ್ತ

ಒಂದು ನಿಜವಾದ ಉಪವಾಸ ಸತ್ಯಾಗ್ರಹಕ್ಕೆ ಬೇಕಾದ ಯಾವ ಅಂಶವೂ ನರೇಂದ್ರ ಮೋದಿಯ ಉಪವಾಸದಲ್ಲಿ ಇರಲಿಲ್ಲ, ಅದು ಆರಂಭದಿಂದ ಕೊನೆಯವರೆಗೂ ಹವಾನಿಯಂತ್ರಣ ಕೊಠಡಿಯಲ್ಲಿ ಮೋದಿಯ ನಿಯಂತ್ರಣದಲ್ಲಿ ನಡೆದ ಒಂದು ಕಾರ್ಯಕ್ರಮವಾಗಿತ್ತು, ಅದೆಷ್ಟು ಹಾಸ್ಯಾಸ್ಪದವಾಗಿತ್ತೆಂದರೆ ಸರ್ಕಸ್ ಮುಗಿದ ನಂತರ ಜೋಕರ್ ಬಂದು ತಮಾಷೆ ಮಾಡಿದಂತಿತ್ತು.

- ದಿಪಂಕರ್ ಗುಪ್ತ, ಸಮಾಜಶಾಸ್ತ್ರಜ್ಞ

ಇದು ತಿವಿತವಾದರೆ ಗೂಸ ಹೇಗಿರುತ್ತೆ?

ಸಿಕ್ಕಿಂನಲ್ಲಿ ಸಂಭವಿಸಿದ ಭೂಕಂಪನ ಭೂಮಿ ಕೊಟ್ಟಿರುವ ಸಣ್ಣ ತಿವಿತ ಅಷ್ಟೇ. ಹಿಮಾಲಯದ ಅಡಿ ಇರುವ ಸೈಸ್ಮಿಕ್ ತಟ್ಟೆಗಳು ಹೇಗೆ ಚಲಿಸುತ್ತಿವೆ ಎಂದರೆ ಅದು ಒಂದು ಟೈಮ್ ಬಾಂಬ್ ಇದ್ದಂತೆ. ಉತ್ತರ ಭಾರತದಲ್ಲಿ ಯಾವ ಕ್ಷಣದಲ್ಲಾದರೂ ರಿಕ್ಟರ್ ಸ್ಕೇಲಿನಲ್ಲಿ 8 ಕ್ಕಿಂತಲೂ ಹೆಚ್ಚು ಶಕ್ತಿಶಾಲಿಯ[illegible] ಭೂಕಂಪ ಸಂಭವಿಸುವುದು ಶತಸಿದ್ಧ.

- ಸಿ.ಪಿ.ರಾಜೇಂದ್ರನ್, ಭೂಕಂಪನಶಾಸ್ತ್ರ[illegible]

'ದಂತ'ಕತೆ

ಮಹಾತ್ಮಾ ಗಾಂಧೀಜಿ ಅವರು ಒಮ್ಮೆ ಆಮರಣಾಂತ ಉಪವಾಸ ಕೂರ[illegible] ಮುನ್ನ ಒಂದು ಜೊತೆ ಹೊಸ ನಕಲಿ ದಂತಗಳನ್ನು ಖರೀದಿಸಿದರು.

- ಮಹಾತ್ಮಾ ಗಾಂಧಿ ಅವರ ಮೊಮ್ಮಗ ಗೋಪಾಲ[illegible] ಗಾಂಧಿ ಅವರು ಬರೆದಿರುವ ಹೊಸ ಪುಸ್ತಕದ[illegible]




ಕ್ರಿಕೆಟ್ ಎಂಬ ಧರ್ಮ

ಭಾರತದ ವಿರುದ್ಧ ನಾವು ಆಡುತ್ತಿದ್ದಾಗ ನ[illegible] ಪಾಕಿಸ್ತಾನದ ತಂಡದಲ್ಲಿ ಒಗ್ಗಟ್ಟು ಇರುತ್ತಿತ್ತು. ಆದರೆ ಭಾರ[illegible] ತಂಡದವರು ತಮ್ಮ ತಂಡದ ಪರವಾಗಿ ಆಡದೇ ತ[illegible] ವೈಯಕ್ತಿಕ ಹಿತಾಸಕ್ತಿಗೇ ಆಡುತ್ತಿದ್ದರು.

- ಪಾಕಿಸ್ತಾನದ ಮಾಜಿ ಕ್ರಿಕೆಟಿಗ ಶೋಯಾಬ್ ಅಖ್ತ[illegible]

ಹೀಗೂ ಉಂಟೆ?



ಪುನರ್ಜನ್ಮ ಪಡೆಯಬೇಕೋ ಬೇಡವೋ ಎಂಬುದು ನನ್ನ ಆಯ್ಕೆ.

- ದಲೈ ಲಾಮಾ

ಯಾರಿಗೂ ತಲೆಬಾಗದ ವಂಗಾರಿ



• ಗೌರಿ ಲಂಕೇಶ್

editorlankesh@gmail.com

ಕಂಡಹಾಗೆ

"ಆಕೆ ತುಂಬಾ ಓದಿದ್ದಾಳೆ, ತುಂಬಾ ಗಟ್ಟಿಗಿತ್ತಿಯಾಗಿದ್ದಾಳೆ, ತುಂಬಾ ಯಶಸ್ಸು ಕಂಡಿದ್ದಾಳೆ, ತುಂಬಾ ಹಠಮಾರಿಯಾಗಿದ್ದಾಳೆ, ಆಕೆಯನ್ನು ನನ್ನ ನಿಯಂತ್ರಣದಲ್ಲಿಟ್ಟುಕೊಳ್ಳುವುದೇ ಕಷ್ಟವಾಗಿದೆ..." ಹೀಗೆಂದು ಆಕೆಯ ಗಂಡನೇ ನ್ಯಾಯಾಲಯದ ಮುಂದೆ ದೂರಿ ಆಕೆಯಿಂದ ವಿಚ್ಛೇದನ ಬಯಸಿದ. ಗಂಡ ನೀಡಿದ ಈ ಕಾರಣಗಳು ನ್ಯಾಯಾಧೀಶನಿಗೆ ಒಪ್ಪಿಗೆಯೆನ್ನಿಸಿ ಗಂಡನ ಪರ ತೀರ್ಪು ನೀಡಿದ. ಅದನ್ನು ಕಂಡು ಆಕೆಗೆ ರೇಗಿತು. ನ್ಯಾಯಾಧೀಶ ಅದಕ್ಷನಾಗಿರಬೇಕು ಅಥವಾ ಭ್ರಷ್ಟನಾಗಿರಬೇಕು ಎಂದು ಕಿಡಿಕಾರಿದಳು. ಆಕೆ ನ್ಯಾಯಾಲಯ ನಿಂದನೆ ಮಾಡಿದ್ದಾಳೆಂದು ಅದೇ ನ್ಯಾಯಾಧೀಶ ಆಕೆಗೆ ಆರು ತಿಂಗಳ ಸೆರೆವಾಸ ಶಿಕ್ಷೆಯನ್ನು ವಿಧಿಸಿದ. ಆಕೆ ಜೈಲಿಗೆ ಹೋದಳು. ಆಗ ಮಾಜಿ ಗಂಡ "ಇನ್ನು ಮುಂದೆ ನೀನು ನನ್ನ ಹೆಂಡತಿ ಅಲ್ಲ, ಆದ್ದರಿಂದ ಇನ್ನು ಮುಂದೆ ನೀನು ನನ್ನ ಮನೆತನದ ಹೆಸರನ್ನು ನಿನ್ನ ಹೆಸರಿನೊಂದಿಗೆ ಬಳಸಕೂಡದು" ಎಂದು ಆದೇಶಿಸಿದ. ಆಗ ಆಕೆ 'ಎ' ಅಕ್ಷರವನ್ನು ಸೇರಿಸಿ ಒಂದು ಮಥೈ ಎಂದಿದ್ದ ಆತನ ಮನೆತನದ ಹೆಸರನ್ನು ಮಾಥೈ ಎಂದು ಬದಲಿಸಿದಳು.

ಆಕೆ ಬೇರೆ ಯಾರೂ ಅಲ್ಲ, ಪರಿಸರ ರಕ್ಷಣೆಗೆ, ಮಹಿಳಾ ಹಕ್ಕುಗಳಿಗೆ, ನೈಜ ಪ್ರಜಾತಂತ್ರಕ್ಕೆ, ರಾಜಕೀಯ ಕೈದಿಗಳ ಬಿಡುಗಡೆಗೆ ಶ್ರಮಿಸಿದ, ನೋಬೆಲ್ ಪ್ರಶಸ್ತಿ ಪಡೆದ, ಮೊನ್ನೆ ತೀರಿಕೊಂಡ, ಆಫ್ರಿಕಾದಲ್ಲಿರುವ ಕೀನ್ಯಾ ದೇಶದ ಹೋರಾಟಗಾರ್ತಿ ವಂಗಾರಿ ಮಾಥೈ.

ವಂಗಾರಿ ಮಾಥೈಳ ಹಲವಾರು ಸಾಧನೆಗಳಲ್ಲಿ ಪ್ರಮುಖವಾದದ್ದು ಆಕೆ ತನ್ನ ಕೀನ್ಯಾ ದೇಶದಲ್ಲಿ ಒಂದು ಕೋಟಿಗಿಂತಲೂ ಹೆಚ್ಚು ಮರಗಳನ್ನು ಬೆಳೆಸಿದ್ದು, ಆ ಮೂಲಕ ಹಬ್ಬುತ್ತಾ ಬರುತ್ತಿದ್ದ ಮರುಭೂಮಿಯನ್ನು ತಡೆದದ್ದು ಮತ್ತು ಆ ದೇಶದ ಮಹಿಳೆಯರ ಬದುಕಿನಲ್ಲಿ ಒಂದಿಷ್ಟು ಆರ್ಥಿಕ ಸ್ಥಿರತೆಯನ್ನು ಮತ್ತು ನೆಮ್ಮದಿಯನ್ನು ತಂದಿದ್ದು.

1940ರಲ್ಲಿ ವಂಗಾರಿ ಹುಟ್ಟಿದ್ದು ಬಡ ಕೂಲಿಕಾರನ ದೊಡ್ಡಕಟ್ಟು ಕುಟುಂಬದಲ್ಲಿ. ಚಿಕ್ಕವಳಾಗಿದ್ದಾಗ ಆಕೆಯ ಜೀವನದ ಏಕೈಕ ಗುರಿ ಉತ್ತಮ ಶಿಕ್ಷಣವನ್ನು ಪಡೆಯುವುದಾಗಿತ್ತು. ಆಕೆ ಕ್ರೈಸ್ತರು ನಡೆಸುತ್ತಿದ್ದ ಕಾನ್ವೆಂಟಿನಲ್ಲಿ ಉತ್ತಮ ವಿದ್ಯಾರ್ಥಿಯಾಗಿದ್ದಳು. ಆಗ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಂಡು ಮೇರಿ ಜೋಸೆಫೀನ್ ಎಂದು ಪುನರ್‌ನಾಮಕರಣ ಮಾಡಿಸಿಕೊಂಡಳು. ಆಕೆ ಹೈಸ್ಕೂಲು ಮುಗಿಸುವ ಹೊತ್ತಿಗೆ ಕೀನ್ಯಾ ದೇಶ ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆಯಿತು. ಅದೇ ಸಮಯದಲ್ಲಿ ಕೆಲವು ಅಮೆರಿಕನ್ನರು ಆಫ್ರಿಕಾದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅಮೆರಿಕದಲ್ಲಿ ಕಾಲೇಜು ಶಿಕ್ಷಣ ಒದಗಿಸುವ ಯೋಜನೆ ಒಂದನ್ನು ಪ್ರಾರಂಭಿಸಿದ್ದರು. ಮುಂದೆ ಅಮೆರಿಕದ ಅಧ್ಯಕ್ಷನಾದ, ಆದರೆ ಆಗಿನ ಕಾಲದಲ್ಲಿ ಸೆನೇಟರ್ ಆಗಿದ್ದ ಜಾನ್ ಎಫ್. ಕೆನಡಿ ಎಂಬ ಸಿರಿವಂತ ತನ್ನ ತಂದೆಯ ಹೆಸರಲ್ಲಿ ಸ್ಥಾಪಿಸಿದ್ದ ದತ್ತಿ ನಿಧಿಯಡಿ ಕೀನ್ಯಾದ ಮುನ್ನೂರು ವಿದ್ಯಾರ್ಥಿಗಳನ್ನು ಅಮೆರಿಕಕ್ಕೆ ಕರೆದುಕೊಂಡು ಹೋಗಲಾಯಿತು. ಅವರಲ್ಲಿ ವಂಗಾರಿ ಕೂಡ ಒಬ್ಬಳಾಗಿದ್ದಳು.



ಅಮೆರಿಕದಲ್ಲಿ ಡಿಗ್ರಿ ಮತ್ತು ಎಂ.ಎ. ಮುಗಿಸಿದ ವಂಗಾರಿ ತನ್ನ ತಾಯಿನಾಡಿಗೆ ಹಿಂದಿರುಗಿ ತನ್ನ ಕ್ರಿಶ್ಚಿಯನ್ ಹೆಸರನ್ನು ತೊರೆದು ತನ್ನ ಹೆತ್ತ ತಾಯಿ ಇಟ್ಟಿದ್ದ ವಂಗಾರಿ ಹೆಸರನ್ನೇ ತನ್ನದಾಗಿಸಿಕೊಂಡಳು. ತನ್ನಂತೆಯೇ ಅಮೆರಿಕದಲ್ಲಿ ಶಿಕ್ಷಣ ಪಡೆದಿದ್ದ ಮ್ವಾಂಗಿ ಮಥೈ ಎಂಬಾತನೊಂದಿಗೆ ಆಕೆಗೆ ಪ್ರೇಮಾಂಕುರವಾಯಿತು. ಅವರಿಬ್ಬರೂ ಮದುವೆಯಾದರು. ವಂಗಾರಿ ಕೀನ್ಯಾದ ರಾಜಧಾನಿ ನೈರೋಬಿಯದಲ್ಲಿರುವ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕಿಯಾದರೆ ಆಕೆಯ ಗಂಡ ರಾಜಕೀಯ ಪ್ರವೇಶಿಸಿ ಚುನಾವಣೆಯಲ್ಲಿ ಸ್ಪರ್ಧಿಸಿ ಸೋತ. ನಂತರದ ವರ್ಷಗಳಲ್ಲಿ ಇಬ್ಬರು ಮಕ್ಕಳನ್ನು ಹಡೆದ ವಂಗಾರಿ ಅದೇ ಸಮಯದಲ್ಲಿ ತನ್ನ ಪಿಎಚ್‌ಡಿಯನ್ನೂ ಮುಗಿಸಿ ಆಫ್ರಿಕಾ ಖಂಡದಲ್ಲೇ ಡಾಕ್ಟರೇಟ್ ಪದವಿ ಪಡೆದ ಪ್ರಥಮ ಮಹಿಳೆ ಎಂಬ ಕೀರ್ತಿ ಪಡೆದಳು.

ಅಧ್ಯಾಪಕಿ, ತಾಯಿ, ಹೆಂಡತಿ... ಇಂತಹ ಎಲ್ಲ ಜವಾಬ್ದಾರಿಗಳ ನಡುವೆಯೂ ವಂಗಾರಿ ವಿವಿಧ ಸಾಮಾಜಿಕ ಕೆಲಸಗಳಲ್ಲಿ ತನ್ನನ್ನು ತೊಡಗಿಸಿಕೊಂಡಳು. ಮಹಿಳೆಯರ ಹಕ್ಕುಗಳು, ಸಮಾನವೇತನ, ರೆಡ್‌ಕ್ರಾಸ್ ಇತ್ಯಾದಿಗಳಲ್ಲಿ ಸಕ್ರಿಯವಾಗಿದ್ದ ವಂಗಾರಿಯಲ್ಲಿ ಒಂದು ಅಂಶ ಸ್ಪಷ್ಟವಾಗುತ್ತಾ ಹೋಯಿತು. ಅದೇನೆಂದರೆ ತನ್ನ ದೇಶದ ಹಲವಾರು ಸಮಸ್ಯೆಗಳಿಗೆ ಮೂಲಭೂತ ಕಾರಣ ಅಲ್ಲಿನ ಪರಿಸರದ ನಾಶ, ಅರಣ್ಯಗಳ ನಾಶ.

1974ರಲ್ಲಿ ವಂಗಾರಿಯ ಗಂಡ ಮ್ವಾಂಗಿ ಮತ್ತೆ ಚುನಾವಣೆಗೆ ನಿಂತು ಪ್ರಚಾರ ಮಾಡುವಾಗ ತಾನು ಗೆದ್ದರೆ ನಿರುದ್ಯೋಗಿಗಳಿಗೆ ಕೆಲಸ ಕೊಡುತ್ತೇನೆಂದು ಭರವಸೆ ನೀಡಿದ್ದ. ಆತ ಗೆದ್ದ ನಂತರ ಆ ಭರವಸೆಯನ್ನು ಈಡೇರಿಸಬೇಕಾಯಿತು. ಆಗ ವಂಗಾರಿಗೆ ಹೊಳೆದದ್ದೇ ಸಸಿ ನೆಡುವ ಯೋಜನೆ. ಆಕೆ ಸಸಿ ಕೇಂದ್ರವನ್ನು ತೆರೆದು ಸಸಿಗಳನ್ನು ಬೇರೆ ಪ್ರದೇಶಗಳಲ್ಲಿ ನೆಡಲು ಯುವಕರಿಗೆ ಮತ್ತು ಮಹಿಳೆಯರಿಗೆ ಚಿಕ್ಕ ಸಂಭಾವನೆಯನ್ನು ಕೊಡಲಾರಂಭಿಸಿದಳು. ಆದರೆ ಹಣದ ಕೊರತೆಯಿಂದ ಈ ಯೋಜನೆ ಸ್ವಲ್ಪ ಸಮಯದಲ್ಲೇ ಕಣ್ಣುಮುಚ್ಚಿತು.

1977ರಲ್ಲಿ ವಂಗಾರಿಯನ್ನು ತೊರೆದ ಮ್ವಾಂಗಿ ನ್ಯಾಯಾಲಯದಲ್ಲಿ ಆಕೆಯ ವಿರುದ್ಧ ಇಲ್ಲಸಲ್ಲದ ಆರೋಪಗಳನ್ನು ಮಾಡುವ ಮೂಲಕ ಆಕೆಯ ಮನೋಸ್ಥೈರ್ಯವನ್ನೇ ಕುಗ್ಗಿಸಲು ಪ್ರಯತ್ನಿಸಿದ. ಆಫ್ರಿಕಾದ ಸಮಾಜದಲ್ಲಿ ದಾಂಪತ್ಯವೇ ಮಹಿಳೆಯರ ಬದುಕಿನಲ್ಲಿ ಪ್ರಮುಖ ಅಂಶವಾಗಿರುವಾಗ ಈಕೆಯನ್ನು ಗಂಡ ತೊರೆದ ಎಂಬುದೇ ಒಂದು 'ಕಳಂಕ'. ಆದರೆ ಇದ್ಯಾವುದರಿಂದಲೂ ವಂಗಾರಿ ಕುಗ್ಗಲಿಲ್ಲ. ಬದಲಾಗಿ ಆಕೆ ಮತ್ತಷ್ಟು ಧೈರ್ಯಶಾಲಿಯಾದಳು, ಬದುಕಿನ ಸವಾಲುಗಳನ್ನು ಎದುರಿಸುವ ಶಕ್ತಿ ಪಡೆದಳು.

ತನ್ನ ವೈಯಕ್ತಿಕ ಬದುಕಿನಲ್ಲಿ ಇಷ್ಟೆಲ್ಲ ಏರುಪೇರುಗಳಾಗುತ್ತಿದ್ದರೂ ವಂಗಾರಿ ತನ್ನ ಪರಿಸರ ರಕ್ಷಣೆ ಕೆಲಸಗಳನ್ನು ಮುಂದುವರಿಸಿದಳು. "ಅರಣ್ಯಕ್ಕೆ ಜನರ ಅಗತ್ಯವಿಲ್ಲ, ಆದರೆ ಜನರಿಗೆ ಅರಣ್ಯಗಳ ಅಗತ್ಯತೆ ಇದೆ" ಎಂಬುದೇ ಆಕೆಯ ದೃಢ ನಿಲುವಾಗಿತ್ತು.

ಈ ಮಧ್ಯೆ ಡೇನಿಯಲ್ ಮೋಯಿ ಎಂಬ ಸರ್ವಾಧಿಕಾರಿ ಕೀನ್ಯಾದ ಅಧ್ಯಕ್ಷನಾದ. ಆತನಿಗೆ ವಂಗಾರಿ ತರಹದ ದಿಟ್ಟ ಮಹಿಳೆಯರನ್ನು ಕಂಡರಾಗುತ್ತಿರಲಿಲ್ಲ. 1979ರಲ್ಲಿ ವಂಗಾರಿ ಕೀನ್ಯಾ ಮಹಿಳೆಯರ ಒಕ್ಕೂಟದ ರಾಷ್ಟ್ರೀಯ ಪರಿಷತ್ತಿನ ಅಧ್ಯಕ್ಷೆ ಸ್ಥಾನದ ಚುನಾವಣೆಯಲ್ಲಿ ಸ್ಪರ್ಧಿಸಿದಾಗ ಮೋಯಿ ಆಕೆಯನ್ನು ಸೋಲಿಸುವುದಕ್ಕೆ ಹಲವಾರು ತಂತ್ರಗಳನ್ನು ಪ್ರಯೋಗಿಸಿದ. ಆದರೂ ವಂಗಾರಿ ಗೆದ್ದಳು. ಆಗ ಮೋಯಿ ಆ ಪರಿಷತ್ತಿಗೆ ಸರ್ಕಾರದ ಆರ್ಥಿಕ ನೆರವು ಸಿಗದಂತೆ ನೋಡಿಕೊಂಡ.

1982ರಲ್ಲಿ ವಂಗಾರಿ ಕೀನ್ಯಾದ ಸಂಸತ್ತಿಗೆ ಸ್ಪರ್ಧಿಸಲು ಸಜ್ಜಾದಳು. ಆಗ ಕಾನೂನಿನ ಪ್ರಕಾರ ಆಕೆ ತನ್ನ ಅಧ್ಯಾಪಕಿ ಹುದ್ದೆಗೆ ರಾಜೀನಾಮೆ ನೀಡಿದಳು. ಆದರೆ ಚುನಾವಣೆ ಆಯೋಗಕ್ಕೆ ಆಕೆ ಸಲ್ಲಿಸಿದ್ದ ಅರ್ಜಿ ತಿರಸ್ಕೃತಗೊಳ್ಳುವಂತೆ ಮೋಯಿ ನೋಡಿಕೊಂಡ. ಆಗ ವಂಗಾರಿ ವಿಶ್ವವಿದ್ಯಾಲಯಕ್ಕೆ ನೀಡಿದ್ದ ರಾಜೀನಾಮೆ ಅರ್ಜಿಯನ್ನು ವಾಪಸ್ ಪಡೆಯಲು ನೋಡಿದಳು. ಆದರೆ ವಿವಿಯ ಕುಲಪತಿಯೂ ಮೋಯಿ ಆಗಿದ್ದರಿಂದ ಅದೂ ವಿಫಲವಾಯಿತು.

ವಂಗಾರಿಯ ಬದುಕೇ ಅಲ್ಲೋಲಕಲ್ಲೋಲವಾಗಿತ್ತು. ಒಂದೆಡೆ ಗಂಡ ಆಕೆಯನ್ನು ತೊರೆದಿದ್ದ. ಇನ್ನೊಂದೆಡೆ ವಿಶ್ವವಿದ್ಯಾಲಯದ ಕೆಲಸವೂ ಕೈಬಿಟ್ಟಿತ್ತು, ಅದರೊಂದಿಗೆ ಸಿಕ್ಕಿದ್ದ ತಲೆ ಮೇಲಿನ ಸೂರೂ ಇಲ್ಲದಂತಾಗಿತ್ತು. ಮತ್ತೊಂದೆಡೆ ಆಕೆ ಅಧ್ಯಕ್ಷೆಯಾಗಿದ್ದ ಮಹಿಳಾ ಪರಿಷತ್ತು ಹಣವಿಲ್ಲದೆ ತತ್ತರಿಸುತ್ತಿತ್ತು. ಇದೆಲ್ಲಕ್ಕೆ ಕಲಶವಿಟ್ಟಂತೆ ದೇಶದ ಅಧ್ಯಕ್ಷನೇ ಆಕೆಯನ್ನು ದಮನ ಮಾಡಲು ಸಜ್ಜಾಗಿ ನಿಂತಿದ್ದ. ಎಂತಹ ದಿಟ್ಟ ಮಹಿಳೆಯೂ ಹೈರಾಣಾಗುವಂತಹ ಪರಿಸ್ಥಿತಿ ಅದು. ಆದರೆ ವಂಗಾರಿ ಸಾಮಾನ್ಯ ಮಹಿಳೆ ಆಗಿರಲಿಲ್ಲ. ಆಕೆ ಚಿಕ್ಕ ಮನೆಗೆ ತನ್ನ ವಾಸ್ತವ್ಯವನ್ನು ಬದಲಾಯಿಸಿ ಹೊಸ ಉದ್ಯೋಗ ಹುಡುಕಲು ಯತ್ನಿಸಿದಳು. ಆಗ ಆಕೆಯ ನೆರವಿಗೆ ಬಂದದ್ದೇ ನಾರ್ವೆ ದೇಶದಲ್ಲಿದ್ದ ಅರಣ್ಯ ಅಭಿವೃದ್ಧಿ ಸಂಸ್ಥೆ. ಆ ಸಂಸ್ಥೆಯ ನೆರವಿನೊಂದಿಗೆ ವಂಗಾರಿ ತನ್ನ ಪ್ರಖ್ಯಾತ ಹಸಿರುಪಟ್ಟಿ ಚಳವಳಿಯನ್ನು ಪ್ರಾರಂಭಿಸಿದಳು. 1990ರಲ್ಲಿ ಅಪ್ಪ ವಂಗಾರಿ ಬಗ್ಗೆ ಒಂದು ಟಿಪ್ಪಣಿಯಲ್ಲಿ ಹೀಗೆ ಬರೆದಿದ್ದರು: "ಐವತ್ತು ಸಾವಿರ ಜನ ಹೆಣ್ಣುಮಕ್ಕಳ ಸಂಘಟನೆ ಮಾಡಿದ ವಂಗಾರಿ ಸಾವಿರಾರು ಊರುಗಳಲ್ಲಿ ಗಿಡ ಬೆಳೆಯಲು ಪ್ರೋತ್ಸಾಹಿಸಿದಳು. ತಾನು ಸಂಗ್ರಹಿಸಿದ ಹಣದಲ್ಲಿ ಒಂದು ಗಿಡ ಬೆಳೆಯುವವರಿಗೆ ಎರಡು ಸೆಂಟ್ (ಸುಮಾರು 25 ಪೈಸೆ) ಕೊಡತೊಡಗಿದಳು. ಹೇಳಿದಳು: "ಮರ, ಪ್ರಾಣಿಗಳು ಮಹಿಳೆಯರಿಗೆ ಮುಖ್ಯ; ಯಾಕೆಂದರೆ ಬರ ಬಂದರೆ ಅನುಭವಿಸುವವರು ಹೆತ್ತ ತಾಯಿಯರು; ಮಕ್ಕಳಿಗೆ ಉಣ್ಣಿಸಬೇಕಾದ ಕೈಗಳುಳ್ಳ ಜೀವಗಳು." ಚಾಚಿಕೊಂಡು ಬರುತ್ತಿದ್ದ ಮರುಭೂಮಿ ತನ್ನ ಚಲನೆ ನಿಲ್ಲಿಸಿತು. ಹತ್ತು ಲಕ್ಷ ಮರಗಳನ್ನು ನೆಟ್ಟು, ರಕ್ಷಿಸುತ್ತಿರುವ ವಂಗಾರಿ ಇದರಿಂದ ತೃಪ್ತಳಾಗಿಲ್ಲ, ಕೀನ್ಯಾದ ಎರಡೂವರೆ ಕೋಟಿ ಜನರಿಗೆ ಒಬ್ಬೊಬ್ಬರಿಗೆ ಒಂದೊಂದು ಮರವಾಗುವವರೆಗೆ, ಅಂದರೆ ಎರಡೂವರೆ ಕೋಟಿ ಮರಗಳನ್ನು ಬೆಳೆಯುವವರೆಗೆ ಆಕೆ ಸುಮ್ಮನಿರುವುದಿಲ್ಲ."

ವಂಗಾರಿಯ ಕಾಳಜಿ ಪರಿಸರ ರಕ್ಷಣೆಗೆ ಸೀಮಿತವಾಗಿರಲಿಲ್ಲ. ಆಕೆಯ ಹಸಿರು ಪಟ್ಟಿ ಚಳವಳಿ ಅಧ್ಯಕ್ಷ ಮೋಯಿಯ ಏಕಪಕ್ಷ ಪ್ರಜಾಪ್ರಭುತ್ವದ ವಿರುದ್ಧ ಹಾಗೂ ಪ್ರಜೆಗಳ ಹಕ್ಕುಗಳ ಬಗ್ಗೆಯೂ ಜನಾಭಿಪ್ರಾಯ ಮೂಡಿಸಲಾರಂಭಿಸಿತು. ಸಹಜವಾಗಿಯೇ ವಂಗಾರಿ ಮೇಲೆ ಅಧ್ಯಕ್ಷ ಮೋಯಿಯ ಕೆಂಗಣ್ಣು ಬಿತ್ತು. ಆತನ ಸರ್ಕಾರ ವಂಗಾರಿಯನ್ನು "ಹುಚ್ಚು ಹೆಂಗಸು" ಎಂದು ಬಣ್ಣಿಸಿತು. ಆಕೆಯ ಹಸಿರುಪಟ್ಟಿ ಚಳವಳಿಯನ್ನು "ಕೊಟ್ಟ ಸಂಘಟನೆ" ಎಂದೂ, ಅದರಲ್ಲಿ ಸಕ್ರಿಯವಾಗಿದ್ದವರು "ವಿಚ್ಛೇದನ ಪಡೆದಿರುವ ಮಹಿಳೆಯರು" ಎಂದೂ ಜರಿಯಿತು.

ವಂಗಾರಿ ಆದ್ಯಾವುದರ ಬಗ್ಗೆಯೂ ತಲೆ ಕೆಡಿಸಿಕೊಳ್ಳಲಿಲ್ಲ. ಬದಲಾಗಿ ಆಕೆಯ ಗಮನವೆಲ್ಲ ರಾಜಧಾನಿ ನೈರೋಬಿಯದಲ್ಲಿರುವ ಸುಂದರವಾದ ಮತ್ತು ಪ್ರಶಾಂತವಾದ ಉಹುರು ಪಾರ್ಕ್‌ಅನ್ನು ರಕ್ಷಿಸುವುದರ ಮೇಲಿತ್ತು. ಈ ಪಾರ್ಕ್ ನೈರೋಬಿಯ ಮಧ್ಯಭಾಗದಲ್ಲಿದ್ದು ಅಲ್ಲೊಂದು ಮಾನವ ನಿರ್ಮಿತ ಕೆರೆಯೂ ಇದೆ. ಈ ಹಸಿರು ಪ್ರದೇಶ ಬೆಂಗಳೂರಿಗೆ ಹೇಗೆ ಲಾಲ್‌ಬಾಗ್ ಮತ್ತು ಕಬ್ಬನ್‌ಪಾರ್ಕ್‌ಗಳು ಮುಖ್ಯವೋ ಅಷ್ಟೇ ಮುಖ್ಯವಾಗಿದೆ ನೈರೋಬಿ ನಗರಕ್ಕೆ. ಆದರೆ ಬ್ರಿಟನ್ನಿನ ಬಂಡವಾಳಶಾಹಿಯೊಬ್ಬನ ಸಹಯೋಗದೊಂದಿಗೆ ಅಧ್ಯಕ್ಷ ಮೋಯಿ ಅವರ ಸರ್ಕಾರ ಈ ಪಾರ್ಕ್ ಅನ್ನು ನಾಶ ಮಾಡಿ ಅಲ್ಲೊಂದು 60 ಮಹಡಿಗಳ ಕಟ್ಟಡವನ್ನು ಕಟ್ಟಲು ಸಿದ್ಧತೆ ನಡೆಸಿತ್ತು. ಆ ಕಟ್ಟಡದಲ್ಲಿ ಶಾಪಿಂಗ್ ಮಾಲ್‌ಗಳು, ಮೋಯಿಯ ರಾಜಕೀಯ ಪಕ್ಷದ ಕಚೇರಿ, ಸಿನಿಮಾ ಥಿಯೇಟರ್‌ಗಳು ಇತ್ಯಾದಿಗಳು ಸ್ಥಳ ಪಡೆಯಲಿದ್ದವು. ಅಷ್ಟೇ ಅಲ್ಲ, ಆ ಕಟ್ಟಡದ ಮುಂದೆ ಮೋಯಿಯ ಬೃಹತ್ ಪ್ರತಿಮೆಯೂ ಸ್ಥಾಪನೆ ಆಗಲಿತ್ತು. ಸಹಜವಾಗಿಯೇ ಈ ಯೋಜನೆಯ ವಿರುದ್ಧ ವಂಗಾರಿ ಪ್ರತಿಭಟಿಸಲಾರಂಭಿಸಿದಳು. ಆಕೆಗೆ ಅಂತರರಾಷ್ಟ್ರೀಯ ಬೆಂಬಲವೂ ಸಿಗಲಾರಂಭಿಸಿತು.

ಆಗ ಮೋಯಿ "ಆಫ್ರಿಕಾದ ಸಂಪ್ರದಾಯದಂತೆ ವಂಗಾರಿ ಪುರುಷರಿಗೆ ಮರ್ಯಾದೆ ಕೊಡುವುದನ್ನೂ, ಬಾಯಿಮುಚ್ಚಿಕೊಂಡಿರುವುದನ್ನೂ ಕಲಿಯಬೇಕು" ಎಂದ. ಕೀನ್ಯಾದ ಸಂಸತ್ತು ವಂಗಾರಿಯ ವಿರುದ್ಧ ನಿರ್ಣಯ ಮಂಡಿಸಿತು. ಆಕೆಯ ಹಸಿರುಪಟ್ಟಿ ಚಳವಳಿಯ ಮೇಲೆ ತನಿಖೆ ನಡೆಯಿತು. ಸರ್ಕಾರ ವಂಗಾರಿಯನ್ನು ಜೈಲಿಗೆ ದೂಡಿತು, ಆಕೆಯ ಪ್ರಾಣಕ್ಕೂ ಬೆದರಿಕೆ ಹಾಕಿತು. ಆದರೆ ಈ ಯೋಜನೆ ವಿರುದ್ಧ ಬ್ರಿಟನ್ನಿನಲ್ಲೂ ಅಭಿಪ್ರಾಯ ಎದ್ದಿದ್ದರಿಂದ ಅಲ್ಲಿನ ಬಂಡವಾಳಶಾಹಿಗಳು ಇದರಿಂದ ಹಿಂದೆ ಸರಿದರು. ಆಗ ಇಡೀ ಯೋಜನೆ ರದ್ದಾಯಿತು.

ಬಹುಪಕ್ಷ ಪ್ರಜಾಪ್ರಭುತ್ವಕ್ಕೆ ಒತ್ತಾಯಿಸುತ್ತಿದ್ದ ವಂಗಾರಿಯನ್ನು ಮೋಯಿಯ ಸರ್ಕಾರ 1992ರಲ್ಲಿ ಮತ್ತೆ ಬಂಧಿಸಲು ಮುಂದಾಯಿತು. ಆಗ ವಂಗಾರಿ ತನ್ನ ಮನೆಯ ಸುತ್ತ ಅಡೆತಡೆಗಳನ್ನು ನಿರ್ಮಿಸಿ ತನ್ನ ಮನೆಯ ಬಾಗಿಲನ್ನು ಬಿಗಿದಳು. ಮೂರು ದಿನಗಳ ಕಾಲ ಆಕೆಯ ಮನೆಯನ್ನು ಪೊಲೀಸರು ಸುತ್ತುವರೆದಿದ್ದರು. ಕೊನೆಗೆ ಬಾಗಿಲನ್ನು ಮುರಿದು ಆಕೆಯನ್ನು ಬಂಧಿಸಿದರು. ಆಕೆಯ ಬಂಧನದ ವಿರುದ್ಧ ಅಮೆರಿಕದ ಎಂಟು ಜನ ಸೆನೇಟರ್‌ಗಳು ಕೀನ್ಯಾ ಸರ್ಕಾರದ ಮೇಲೆ ಒತ್ತಡ ತಂದರು; ಆಕೆ ವಿರುದ್ಧದ ಆರೋಪಗಳನ್ನು ಸಾಬೀತು ಪಡಿಸಿ ಎಂದರು. ಆನಂತರದಲ್ಲಿ ಅಮೆರಿಕದ ಉಪಾಧ್ಯಕ್ಷರಾದ, ಆಗ ಸೆನೇಟರ್ ಆಗಿದ್ದ ಆಲ್ ಗೋರ್ "ವಂಗಾರಿ ಬಂಧನದಿಂದಾಗಿ ಕೀನ್ಯಾ ನಡುವಿನ ಅಮೆರಿಕದ ಬಾಂಧವ್ಯಕ್ಕೆ ಧಕ್ಕೆ ಆಗಲಿದೆ" ಎಂದು ಎಚ್ಚರಿಸಿದರು. ವಿಧಿ ಇಲ್ಲದೆ ಮೋಯಿ ಸರ್ಕಾರ ವಂಗಾರಿಯನ್ನು ಬಿಡುಗಡೆ ಮಾಡಿತು.

ಜೈಲಿನಿಂದ ಹೊರಬರುತ್ತಿದ್ದಂತೆ ವಂಗಾರಿ ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಬೇಕೆಂದು ಉಹುರು ಪಾರ್ಕ್‌ನಲ್ಲಿ ಉಪವಾಸ ಪ್ರತಿಭಟನೆಯನ್ನು ಪ್ರಾರಂಭಿಸಿದಳು. ಆಗ ಅಧ್ಯಕ್ಷ ಮೋಯಿ "ಈ ಹುಚ್ಚು ಹೆಂಗಸು ದೇಶದ ಭದ್ರತೆಗೇ ಅಪಾಯ ಆಗಿದ್ದಾಳೆ" ಎಂದು ಆಕೆಯ ವಿರುದ್ಧ ಪೊಲೀಸರನ್ನು ಬಿಟ್ಟ. ವಂಗಾರಿ ಸೇರಿದಂತೆ ಹತ್ತಾರು ಜನ ಮೂರ್ಛೆ ಹೋಗುವಂತೆ ಪೊಲೀಸರು ಪ್ರತಿಭಟನಾ ನಿರತರನ್ನು ಬಡಿದರು. ಆದರೂ ಪ್ರತಿಭಟನೆ ಮುಂದುವರೆಯುತ್ತಾ, ಬೆಳೆಯುತ್ತಾ ಹೋಯಿತು. ಕೊನೆಗೆ ವಿಧಿ ಇಲ್ಲದೆ ಎಲ್ಲ ರಾಜಕೀಯ ಬಂಧಿಗಳನ್ನು ಸರ್ಕಾರ ಬಿಡುಗಡೆ ಮಾಡಬೇಕಾಯಿತು.

ಆನಂತರದ ವರ್ಷಗಳಲ್ಲಿ ಅರಣ್ಯ ಭೂಮಿಯನ್ನು ಮತ್ತು ಸರ್ಕಾರಿ ಭೂಮಿಯನ್ನು ಖಾಸಗಿಯವರಿಗೆ ಹಾಗು ತನ್ನ ಭಂಟರಿಗೆ ಕೊಡಲು ಮೋಯಿ ಸರ್ಕಾರ ಮುಂದಾದಾಗಲೂ ವಂಗಾರಿ ಮತ್ತು ಆಕೆಯ ಸಂಗಡಿಗರು ಪ್ರತಿಭಟಿಸಿದರು, ಜೈಲು ಸೇರಿದರು, ಸರ್ಕಾರದ ಅವಹೇಳನಕ್ಕೆ ಗುರಿಯಾದರು. ಆದರೆ ಇದೆಲ್ಲದರಿಂದ ವಂಗಾರಿ ಎಷ್ಟು ಜನಪ್ರಿಯಳಾದಳೆಂದರೆ ಆಕೆ 2002ರಲ್ಲಿ ಸಂಸತ್ತಿನ ಚುನಾವಣೆಗೆ ಸ್ಪರ್ಧಿಸಿದಾಗ ಆಕೆಯ ಕ್ಷೇತ್ರದ ಶೇ. 98 ಮತದಾರರು ಆಕೆಯ ಪರವಾಗಿ ತಮ್ಮ ಮತ ಚಲಾಯಿಸಿದರು. ಅದಕ್ಕಿಂತ ಮುಖ್ಯವಾಗಿ ಮೋಯಿಯ ಸರ್ಕಾರದ ವಿರುದ್ಧ ವಿರೋಧ ಪಕ್ಷಗಳು ಒಗ್ಗೂಡುವಂತೆ ವಂಗಾರಿ ಮಾಡಿದ್ದಳು. ಪರಿಣಾಮವಾಗಿ ಆ ಚುನಾವಣೆಯಲ್ಲಿ ವಿರೋಧ ಪಕ್ಷಗಳು ಗೆದ್ದು ಮೋಯಿಯನ್ನು ಪ್ರಥಮ ಬಾರಿಗೆ ಸೋಲಿಸುವಲ್ಲಿ ಯಶಸ್ವಿಯಾದವು.

ವಂಗಾರಿ ಬಗ್ಗೆ ಅಪ್ಪ ಬರೆದಿದ್ದ ಲೇಖನದ ಹಲವು ಸಾಲುಗಳು ಹೀಗಿವೆ: "ಕೀನ್ಯಾ ದೇಶವೆಂಬುದು ವಂಗಾರಿಯ ಹೊರಗಿರುವ ಮಣ್ಣು ಮರವಲ್ಲ, ವಂಗಾರಿಯ ಅಂತರ್ಯಕ್ಕೆ ಅಗತ್ಯವಾದದ್ದು ಕೀನ್ಯಾ. ಆಕೆಯಲ್ಲಿ ಬೆಳೆಯಬಹುದಾಗಿದ್ದ ಬಂಜರು ಕೀನ್ಯಾದಲ್ಲಿ ಬೆಳೆಯತೊಡಗಿದಾಗ ಅರ್ಥಪೂರ್ಣ ಕ್ರಿಯೆಯಲ್ಲಿ ವಂಗಾರಿ ತೊಡಗಿದಳು. ವಂಗಾರಿ ನಿಜವಾದ ಸುಂದರಿ, ಕಪ್ಪು ಸುಂದರಿ. ನಮ್ಮ ಆತ್ಮಕ್ಕೆ ಕೂಡ ಸಾಂತ್ವನ ನೀಡಬಲ್ಲ ಚೆಲುವೆ ವಂಗಾರಿ."

ಇಂತಹ ವಂಗಾರಿಗೆ 2004ರಲ್ಲಿ ನೋಬೆಲ್ ಪ್ರಶಸ್ತಿ ಬಂದಿತು. ಆ ಪ್ರತಿಷ್ಠಿತ ಪ್ರಶಸ್ತಿಯನ್ನು ಪರಿಸರ ರಕ್ಷಣೆಗೆ ಪಡೆದ ಮೊದಲ ವ್ಯಕ್ತಿಯೂ, ಆಫ್ರಿಕಾದ ಮೊದಲ ಮಹಿಳೆಯೂ ವಂಗಾರಿ ಮಾಥೈ ಎಂಬ ಕೀರ್ತಿ ಆಕೆಯದ್ದು.

"ವಂಗಾರಿಯ ಸಾಧನೆ ಮರಗಳನ್ನು ನೆಟ್ಟಿದ್ದು, ಆದರೆ ಅದಕ್ಕೆಂದು ನೋಬೆಲ್ ಪ್ರಶಸ್ತಿ ಯಾಕೆ ಎಂದು ಕೆಲವರು ಕೇಳಿದರು. ನಿಜ, ವಂಗಾರಿ ಮಾಥೈ ಮರಗಳನ್ನು ನೆಟ್ಟಿದಳು. ಪರಿಸರವನ್ನು ರಕ್ಷಿಸಲು, ಮರುಭೂಮಿಯನ್ನು ತಡೆಯಲು ಆಕೆ ಲಕ್ಷಾಂತರ ಮರಗಳನ್ನು ನೆಟ್ಟಳು. ಆದರೆ ಈ ಮರಗಳನ್ನು ನೆಡುವ ಕ್ರಿಯೆಯ ಮೂಲಕ ಆಕೆ ತನ್ನ ದೇಶದ ಸರ್ವಾಧಿಕಾರಿಯನ್ನೇ ಯಶಸ್ವಿಯಾಗಿ ಎದುರಿಸಿದಳು" ಎಂದು ಮೊನ್ನೆ ವಂಗಾರಿ ತೀರಿಕೊಂಡಾಗ ನೊಬೆಲ್ ಸಮಿತಿ ಹೇಳಿತು.


ಬದುಕು ತನ್ನ ಮುಂದೆ ಎಂತಹ ಸವಾಲುಗಳನ್ನು ಒಡ್ಡಿದರೂ ಅದನ್ನೆಲ್ಲ ಮೀರಿ ನಿಂತವಳು; ತನ್ನ ದೇಶದ, ತನ್ನ ಜನರ, ತನ್ನ ಪರಿಸರದ ಉದ್ಧಾರಕ್ಕಾಗಿ ಶ್ರಮಿಸಿದವಳು; ಎಂತಹ ಬೆದರಿಕೆಗೂ ಬಗ್ಗದವಳು ವಂಗಾರಿ. ಇಂತಹ ಮಹಿಳೆಯನ್ನು ಕೊನೆಗೂ ಬಲಿ ತೆಗೆದುಕೊಂಡಿದ್ದು ಅಂಡಾಣು ಕ್ಯಾನ್ಸರ್.

ಅಂದಹಾಗೆ, ವಂಗಾರಿ ಮಾಥೈ ತನ್ನ ಆತ್ಮಕಥನಕ್ಕೆ 'ಅನ್‌ಬೋಡ್' (Unbowed-ತಲೆ ತಗ್ಗಿಸಲಿಲ್ಲ) ಎಂದು ಹೆಸರಿಟ್ಟಿದ್ದಳು. ಯಾರಿಗೂ ತಲೆ ಬಾಗದೆ ಬದುಕಿದ ವಂಗಾರಿ ಹಾಗೆಯೇ ಹೊರಟುಹೋದ ದಿಟ್ಟ ಮಹಿಳೆ...

ಹಬ್ಬದ ಕಾರಣ ಮುಂದಿನ 'ಲಂಕೇಶ್' ಬುಧವಾರವೇ ಬರಲಿದೆ

ಮುಂದಿನ ವಾರದ 'ಲಂಕೇಶ್' ಶುಕ್ರವಾರದ ಬದಲಾಗಿ ಎರಡು ದಿನ ಮುಂಚಿತವಾಗಿ ಬುಧವಾರವೇ ಮಾರುಕಟ್ಟೆಗೆ ಬರಲಿದೆ. ಆಯುಧ ಪೂಜೆಯ ಕಾರಣ ಪ್ರಿಂಟಿಂಗ್ ಪ್ರೆಸ್‌ನವರ ರಜೆ ಆಧರಿಸಿ ನಮ್ಮ ಶೆಡ್ಯೂಲ್ ಬದಲಾಗಿದೆ. ಅದರ ನಂತರ ಎಂದಿನಂತೆ ಲಂಕೇಶ್ ಪ್ರತಿ ಶುಕ್ರವಾರ ನಿಮ್ಮ ಕೈ ಸೇರಲಿದೆ.

ಪಟೌಡಿ ಅಂಗಣದಾಚೆಯ ರಿಂಗಣಗಳು




ಕಾಲನ ಓಟ ಮನ್ಸೂರ್ ಅಲಿ ಖಾನ್ ಪಟೌಡಿಯನ್ನು ಸದ್ದಿಲ್ಲದಂತೆ ನುಂಗಿಹಾಕಿದೆ. ಕ್ರಿಕೆಟ್‌ನ ಅಂಗಳದಲ್ಲಿ ಅದ್ಭುತ ಸಾಧನೆಗಳ ಬರೆದ ಆತ ಇದೇ ಸೆಪ್ಟೆಂಬರ್ 24ರ ಗುರುವಾರ ದಂದು ಸರ್ ಗಂಗರಾಮ್ ಆಸ್ಪತ್ರೆಯ ಹಾಸಿಗೆಯ ಮೇಲೆ ಅಸುನೀಗುವ ಹೊತ್ತಿಗೆ ಭಾರತೀಯ ಕ್ರಿಕೆಟ್ ಜಗತ್ತಿನಲ್ಲೊಂದು ಶೂನ್ಯ ಸೃಷ್ಟಿಯಾಗಿತ್ತು. ವಿದೇಶಿ ನೆಲದಲ್ಲಿ ಭಾರತಕ್ಕೆ ಮೊದಲ ಗೆಲುವಿನ ರುಚಿ ತೋರಿಸಿದ ನಾಯಕ ಪಟೌಡಿ ಆತ್ಮೀಯರ ಕೂಗಳತೆಯಲ್ಲಿ ಟೈಗರ್ ಎಂದೇ ಪ್ರಸಿದ್ಧಿಯಾದವರು. ಬಾಲಿವುಡ್ ನಟಿಯಾಗಿ ತನ್ನ ಯೌವ್ವನಾವಸ್ಥೆಯಲ್ಲಿದ್ದ ಶರ್ಮಿಳಾ ಟ್ಯಾಗೋರ್‌ರನ್ನು ಪ್ರೇಮಿಸಿ ಮದುವೆಯಾಗಿದ್ದ ಪಟೌಡಿಗೆ ಸೋಹಾ, ಸಬಾ ಮತ್ತು ಸೈಫ್ ಅಲಿ ಖಾನ್ ಮಕ್ಕಳಿದ್ದ ಮುದ್ದು ಕುಟುಂಬವಿತ್ತಾದರೂ ಎಂದಿಗೂ ಅಷ್ಟನ್ನೇ ಪರಿವಾರವೆಂದು ಭಾವಿಸಿದವರಲ್ಲ. ಪಟೌಡಿ ಪ್ರಾಂತ್ಯದ 9ನೇ ನವಾಬನಂತಹ ಪ್ರಭಾವಿ ಸ್ಥಾನದಿಂದ ಬಂದಿದ್ದರೂ ಆತ್ಮೀಯರು, ಅಭಿಮಾನಿಗಳು ಅಂತ ಬೃಹತ್ ಬಳಗದೊಂದಿಗೆ ಕೊನೇವರೆಗೂ ಕಿಂಚಿತ್ತೂ ಸಣ್ಣತನ ತೋರಿಸಿಕೊಳ್ಳದೆ ಗಂಭೀರವಾಗಿ ಬದುಕಿದ ಟೈಗರ್ ಪಟೌಡಿ ಈಗೇನಿದ್ದರು ನೆನಪು ಮಾತ್ರ! ಹುಲ್ಲು ಅಂಗಣದಲ್ಲಿನ ಅವರ ಆಟದ ವೈಖರಿಗಳು ಕ್ರಿಕೆಟ್ ಪ್ರೇಮಿಗಳ ಪಾಲಿಗೆ ಯಾವತ್ತೂ ಹಸಿರಾಗೆ ಉಳಿಯುತ್ತವೆ. ಅದರ ಹೊರತಾಗಿ ತಮ್ಮ ದಿಟ್ಟತನ, ಹಾಸ್ಯಪ್ರಜ್ಞೆ, ನೇರ


ಸಂಗಡಿಗರೊಂದಿಗೆ...ಪಟೌಡಿ

ನುಡಿಗಳಿಂದಾಗಿಯೂ ಟೈಗರ್ ನಮ್ಮ ನೆನಪಿನಲ್ಲುಳಿಯುತ್ತಾರೆ. ಅವರೇ ಬರೆದ ಟೈಗರ್ ಟೇಲ್ ಎಂಬ ಆತ್ಮಕಥೆ ಹಾಗೂ ಆತ್ಮೀಯರ ಮೆಲುಕುಗಳಲ್ಲಿನ ಇಂತಹ ಕೆಲ ಸ್ವಾರಸ್ಯಕರ ಘಟನೆಗಳ ಸರಣಿ ಇಲ್ಲಿದೆ.

ಕಾಡಿನಲ್ಲಿ ಕಿಡ್ನ್ಯಾಪ್ ಆದದ್ದು..........

ಅದಿನ್ನು ೧೯೭೦ನೇ ಇಸವಿ, ಗ್ವಾಲಿಯರ್‌ನಲ್ಲಿ ಮಹಾರಾಜ ಮಾಧವ್ ರಾವ್ ಸಿಂಧಿಯ ಆಯೋಜಿಸಿದ್ದ ಸಿಂಧಿಯಾ ಕ್ರಿಕೆಟ್ ಟ್ರೋಫಿ ನಡೆದಿತ್ತು, ಒಂದು ತಂಡದಲ್ಲಿ ಟೈಗರ್ ಪಟೌಡಿ, ಇ.ಎ.ಎಸ್. ಪ್ರಸನ್ನ, ಬಿ.ಎಸ್ ಚಂದ್ರಶೇಖರ್, ಅಬ್ಬಾಸ್ ಅಲಿಬೇಗ್ ಮತ್ತು ಜಿ.ಆರ್.ವಿಶ್ವನಾಥ್ ಭಾಗವಹಿಸಿದ್ದರು. ಆಟದ ವಿರಾಮದ ದಿನದಲ್ಲಿ ಆಟಗಾರರನ್ನೆಲ್ಲಾ ಹತ್ತಿರದ ಸೇನಾ ನೆಲೆಯೊಂದಕ್ಕೆ ಭೇಟಿಗಾಗಿ ಕರೆದುಕೊಂಡು ಹೋಗಲು ಯೋಜಿಸಲಾಗಿತ್ತು, ಆ ಸೇನಾನೆಲೆಗೆ ಹೋಗಬೇಕೆಂದರೆ ಚಂಬಲ್ ಕಣಿವೆಯನ್ನು ಹಾದುಹೋಗಬೇಕಿತ್ತು, ಆಗಿನ್ನು ಚಂಬಲ್ ಕಣಿವೆಯೆಂದರೆ ಡಕಾಯಿತರ ರಾಜಧಾನಿಯೆಂಬ ಕುಖ್ಯಾತಿ ಉತ್ತುಂಗದಲ್ಲಿದ್ದ ಕಾಲವಾದ್ದರಿಂದ ಒಂದು ಭರ್ಜರಿ ಸೇನಾ ಕಾವಲಿನ ಪ್ರತ್ಯೇಕ ಕಾರುಗಳಲ್ಲಿ ಇವರನ್ನು ಕಳುಹಿಸುವ ವ್ಯವಸ್ಥೆ ಮಾಡಲಾಗಿತ್ತು, ಭೇಟಿ ಸುಸೂತ್ರವಾಗಿ ಮುಗಿದು ವಾಪಾಸು ಗ್ವಾಲಿಯರ್‌ಗೆ ಪ್ರಯಾಣ ಬೆಳೆಸುವ ವೇಳೆಗಾಗಲೆ ಸಂಜೆ ಗತ್ತಲು ಆವರಿಸುತ್ತಿತ್ತು. ಇ.ಎ.ಎಸ್ ಪ್ರಸನ್ನ, ಚಂದ್ರಶೇಖರ್, ಜೋಶಿ ಮತ್ತು ವಿಶ್ವನಾಥ್‌ರಿದ್ದ ಕಾರು ಚಂಬಲ್ ಕಣಿವೆ ಬಳಿ ಬರುತ್ತಿದ್ದಂತೆಯೇ ಡಕಾಯಿತರ ತಂಡವೊಂದು ಅವರನ್ನು ಸುತ್ತುವರೆದು ಬಲವಂತವಾಗಿ ಕಾರನ್ನು ಕಾಡಿನ ಒಳಗೆ ಕರೆದೊಯ್ಯಿತು. ಒಳಗಿದ್ದವರಿಗೆ ಅಕ್ಷರಶಃ ದಿಗ್ಭ್ರಾಂತಿ, ಏನು ಆಗಬಾರದ್ದು ಅಂತ ಬೇಡಿಕೊಳ್ಳುತ್ತಿದ್ದರೊ ಅದು ನಡೆದೇಹೋಗಿತ್ತು, ಸುಮಾರು ದೂರ ಹೋದ ನಂತರ ಕಾರನ್ನು ನಿಲ್ಲಿಸಿ ಅವರನ್ನೆಲ್ಲಾ ಹೊರಗೆಳೆದು ಥೇಟು ಸಿನಿಮಾ ರೀತಿಯಲ್ಲೆ ಮರಕ್ಕೆ ಬಿಗಿಯಲಾಯಿತು. ಹತ್ತಿರ ಬಂದ ಡಕಾಯಿತರು ತಮಗೆ ಒತ್ತೆ ಹಣ ನೀಡಿದರೆ ಮಾತ್ರ ನಿಮ್ಮನ್ನು ಜೀವಂತ ಉಳಿಸುವುದಾಗಿ ಹಿಂದಿಯಲ್ಲಿ ಭಾರಿ ಬೆದರಿಕೆಯನ್ನು ಹಾಕುತ್ತಿದ್ದರೆ, ಮಹಾನ್ ಕ್ರಿಕೆಟಿಗರೆಲ್ಲ ತಮ್ಮ ಜೀವದ ಮೇಲಿನ ಆಸೆಯಿಂದ ಇಂಚಿಂಚೇ ದೂರ ಸರಿಯುತ್ತಿದ್ದರು. ಪರಿಸ್ಥಿತಿ ಆ ಪರಿ ಟೈಟಾಗಿತ್ತು, ಬಂಧಿತರಾಗಿದ್ದವರಲ್ಲಿ ಅಲ್ಪ ಸ್ವಲ್ಪ ಹಿಂದಿ ಬರುತ್ತಿದ್ದುದು, ಜೋಶಿಗೆ ಮಾತ್ರ. ಅತ್ತ ಬೆದರಿದ ಧ್ವನಿಯಲ್ಲಿ ಡಕಾಯಿತರೊಂದಿಗೆ ಜೋಶಿಯವರು ಜೀವದ ಚೌಕಾಶಿಗಿಳಿದಿದ್ದರೆ ಇತ್ತ ಇ.ಎ.ಎಸ್ ಪ್ರಸನ್ನ ಮಾತ್ರ ಕೈಗೆ ಕಟ್ಟಿದ್ದ ಹಗ್ಗವನ್ನು ಅದೇಗೋ ಬಿಚ್ಚಿಕೊಂಡು, ಬಡ ಜೀವವನ್ನು ಉಳಿಸಿಕೊಳ್ಳುವ ಇರಾದೆಯಿಂದ ಓಡಬೇಕೆನ್ನುವಷ್ಟರಲ್ಲಿ ಡಕಾಯಿತರ ಕೈಲಿದ್ದ ಬಂದೂಕುಗಳು ಅವರತ್ತ ತಿರುಗಿ ಮಾರಣಹೋಮದ ಸದ್ದು ಮಾಡಿದವು. ಅಷ್ಟೆ, ಕ್ರಿಕೆಟ್ ತಾರೆ ನೆಲಕ್ಕುರುಳಿ ಮೌನವಾಗಿಬಿಟ್ಟ! ಅರೆ ಸೆಕೆಂಡಿನಲ್ಲಾದ ಈ ಆಘಾತಕರ ಘಟನೆಯನ್ನು ಜೀರ್ಣಿಸಿಕೊಳ್ಳುವುದು ಇನ್ನುಳಿದವರಿಗೆ ಸಾಧ್ಯವೇ ಇರಲಿಲ್ಲ, ಜಿ.ಆರ್.ವಿಶ್ವನಾಥ್‌ರಂತು 'ಪ್ರಸನ್ನ ಸತ್ತೆ ಹೋದ' ಅಂತ ಕಿರುಚಿ ಜೋರಾಗಿ ಅಳಲಿಕ್ಕೇ ಶುರುಹಚ್ಚಿಕೊಂಡರು. ಬೆವೆತು ಹೋಗಿದ್ದ ದೇಹದೊಳಗೆ ಅವಿತು ಕುಳಿತಿದ್ದ ಅವರ ಮನಸ್ಸು, ಒಂದು ಕತ್ತಲು ಅದೆಷ್ಟು ಭಯಾನಕವಾಗಬಹುದೆನ್ನುವ ಅಂದಾಜಿನಲ್ಲಿದ್ದರೆ ಡಕಾಯಿತರು ಮಾತ್ರ ತಮ್ಮ ಒತ್ತೆ ಹಣದ ವ್ಯವಹಾರದ ಕುರಿತು ಜೋಶಿಯೊಂದಿಗೆ ಭಯಾನಕ ಸಂವಾದಕ್ಕಿಳಿದಿದ್ದರು. ತಮ್ಮ ಈ ಅಪಹರಣದ ವಿಷಯವನ್ನು ರಾಜರಿಗೆ ತಿಳಿಸಲು ಗಾರ್ಡ್ ಅನ್ನು ಕಳಿಸಿರುವುದಾಗಿಯೂ, ಇನ್ನೇನು ಪ್ರತ್ಯುತ್ತರ ಬರಬಹುದಾಗಿ ಡಕಾಯಿತರಿಗೆ ಮನವರಿಕೆ ಮಾಡಿಕೊಡುವಷ್ಟರಲ್ಲಿ ರಾತ್ರಿ ಕಳೆದು ಬೆಳಗಿನ ಜಾವ ಮೂರರ ಹೊತ್ತಾಗಿತ್ತು, ಬೆಳಕನ್ನು ನೋಡುವುದೂ ಅನುಮಾನವೇನೊ ಎಂಬಂತಹ ಸಂದಿಗ್ಧತೆಯಲ್ಲಿರುವಾಗಲೆ ಖುದ್ದು ಸಿಂಧ್ಯಾ ಮಹಾರಾಜರೆ ಸ್ಥಳಕ್ಕಾಗಮಿಸಿದರು. ಇವರ ಪರಿಸ್ಥಿತಿಯನ್ನು ನೋಡಿದ್ದೇ ತಡ ಡಕಾಯಿತರ ಮೇಲೆ ರೇಗಿಕೊಳ್ಳುತ್ತಲೇ ಬಂಧನದಿಂದ ಬಿಡುವಂತೆ ಆಜ್ಞೆಯನ್ನೂ ಮಾಡಿದರು. ಆಪ್ಪೊತ್ತು ವಿಜೃಂಭಿಸುತ್ತಿದ್ದ ಡಕಾಯಿತರಾದರೂ ರಾಜನನ್ನು


ವಾಡೇಕರ್–ಪಟೌಡಿ

ನೋಡುತ್ತಲೇ ವಿನಮ್ರರಾಗಿ ತಪ್ಪಾಯಿತೆಂಬಂತೆ ಬೇಡುವುದು ಅನುಮಾನ ಮೂಡಿಸುವಂತದ್ದಾದರು ಕ್ರಿಕೆಟ್ ಕಲಿಗಳು ಜೀವ ಬಚಾವಾದ ಖುಷಿಯಲ್ಲಿ ಅದರತ್ತ ಗಮನವನ್ನೇ ಹರಿಸಲಿಲ್ಲ, ಬೆದರಿ ಮರಕ್ಕೆ ಬಿಗಿಸಿಕೊಂಡವರಿಗೆ ನಿಜಕ್ಕೂ ಅಚ್ಚರಿಯಾದದ್ದು ಅಷ್ಟೂ ಹೊತ್ತು ಸತ್ತಂತೆ ಬಿದ್ದುಕೊಂಡಿದ್ದ ಪ್ರಸನ್ನ ಎದ್ದು ಓಡಿಬಂದಾಗ. ತಮ್ಮೊಂದಿಗಿದ್ದ ಪಟೌಡಿಯತ್ತ ತಿರುಗಿದ ರಾಜ 'ಈ ನಿನ್ನ ನಾಟಕ ಸ್ವಲ್ಪ ಹೆಚ್ಚು ಕಡಿಮೆಯಾಗಿದ್ದರು, ಅದಕ್ಕೆಲ್ಲಾ ನೀನೆ ಜವಾಬ್ದಾರಿಯಾಗಬೇಕಿತ್ತು' ಎಂದಾಗಲೆ ಅವರೆಲ್ಲರಿಗೂ ಗೊತ್ತಾದದ್ದು, ಇದು ಟೈಗರ್ ಪಟೌಡಿ ಸಾಹೇಬರು ಆಡಿಸಿದ ತಮಾಷೆಯ ಹೈಡ್ರಾಮಾ ಅಂತ. ಅದರಲ್ಲೂ ಡಕಾಯಿತರ ಗುಂಡೇಟಿಗೆ ಬಲಿಯಾಗಿ ಬಿದ್ದ ಪ್ರಸನ್ನರಂತೂ ತಮ್ಮ ಜೀವ ಉಳಿಸಿಕೊಳ್ಳಲು ಅಂತಹ ಕ್ರಿಟಿಕಲ್ ಸಮಯದಲ್ಲೂ ಬಲು ಸೊಗಸಾದ ನಾಟಕವಾಡಿದ್ದರು. ತಾನು ಸತ್ತೆನೆಂದು ಡಕಾಯಿತರು ಬಿಟ್ಟು ಹೋದರೆ ಆಮೇಲೆ ಎಸ್ಕೇಪ್ ಆಗಬಹುದೆಂಬ ದೂರಾಲೋಚನೆಯಿಂದ ಬಂದೂಕಿನ ಡಮಾರ್ ಕೇಳುತ್ತಿದ್ದಂತೆ ನೆಲಕ್ಕೆ ರಾವಿಕೊಂಡಿದ್ದರಂತೆ. ಜಿ.ಆರ್ ವಿಶ್ವನಾಥ್‌ರಂತು ಏನು ನಡೆಯುತ್ತಿದೆ ಎಂಬುದನ್ನೂ ತಿಳಿಯದಷ್ಟು ವೇಗದ ನಿಟ್ಟುಸಿರಿನಲ್ಲಿ ಕಳೆದು ಹೋಗಿದ್ದರು. ಪಟೌಡಿಯವರ ಈ ಕಿಡ್ನ್ಯಾಪ್ ಪ್ರಹಸನ ಅವರ ಆಪ್ತರ ವಲಯದಲ್ಲಿ ಇವತ್ತಿಗೂ ತಾಜಾ ನೆನಪಾಗೆ ಉಳಿದಿದೆ. ಪಟೌಡಿಯವರೂ ತಮ್ಮ ಆತ್ಮ ಚರಿತ್ರೆಯಲ್ಲಿ ಅದನ್ನು ವಿಶೇಷವಾಗೆ ಉಲ್ಲೇಖಿಸಿದ್ದಾರೆ.

ಎರಡೆರಡು ಬಾಲ್‌ಗಳು ಕಾಣಿಸ್ತವೆ

ಪಟೌಡಿಯವರು ಅಸಾಧಾರಣ ಕ್ರಿಕೆಟ್ ಪಟು ಎಂಬುದು ಗೊತ್ತಿರುವಷ್ಟು ಸಲೀಸಾಗಿ ಅವರಿಗೆ ಕಾಣುತ್ತಿದ್ದುದು ಒಂದೇ ಕಣ್ಣು ಎಂಬ ಸಂಗತಿ ಬಹಳ ಜನಕ್ಕೆ ಗೊತ್ತೇ ಇಲ್ಲ, ಆಗ ಅವರಿಗಿನ್ನು 20 ವಯಸ್ಸಿರಬೇಕು. ತಾವು ಕ್ರಿಕೆಟ್ ಜೀವನಕ್ಕೆ ಕಾಲಿಡುವುದಕ್ಕೂ ಆರು ತಿಂಗಳ ಮುನ್ನ ಕಾರು ಅಪಘಾತವೊಂದರಲ್ಲಿ ತಮ್ಮ ಬಲಗಣ್ಣಿನ ದೃಷ್ಟಿಯನ್ನು ಕಳೆದುಕೊಂಡಿದ್ದರು. ಒಂದೇ ಕಣ್ಣಿನಲ್ಲಿ ಅವರು ಆ ಪರಿ ಬ್ಯಾಟ್‌ಮಾಡಿ ಸೆಂಚುರಿಗಳನ್ನು ಬಾರಿಸಿದ್ದು ಇವತ್ತಿನ ಪೀಳಿಗೆಗೆ ದೊಡ್ಡ ಅಚ್ಚರಿಯಿರಬಹುದು. ಆದರೆ ಖುದ್ದು ಪಟೌಡಿಗೆ ಅದು ದೊಡ್ಡ ವಿಷಯವೇ ಆಗಿರಲಿಲ್ಲ, ಏಕೆಂದರೆ ಅವರ ಆತ್ಮವಿಶ್ವಾಸವೇ ಅಂತಹ ಅಗಾಧವಾಗಿತ್ತು. ಒಮ್ಮೆ ಸಂದರ್ಶನವೊಂದರಲ್ಲಿ ಅದರ ಕುರಿತು ಹೀಗೆ ಹೇಳಿದ್ದಾರೆ 'ನಾನು ಅಪಘಾತದಲ್ಲಿ ಕಣ್ಣು ಕಳೆದುಕೊಂಡಿದ್ದೇನೊ ನಿಜ ಆದರೆ ನನ್ನ ಗುರಿಯ ದೃಷ್ಟಿಯನ್ನು ನಾನು ಕಳೆದುಕೊಂಡಿರಲಿಲ್ಲ, ಹಾಗಾಗಿ ನನಗ್ಯಾವತ್ತಿಗೂ ಇನ್ನು ಕ್ರಿಕೆಟ್ ಆಡಲಾಗುವುದಿಲ್ಲ ಎಂಬ ಭಾವನೆಯೇ ಮೂಡಿಲ್ಲ.' ಅದೇ ಸಂದರ್ಶನದಲ್ಲಿ ಮುಂದುವರೆದು ಒಂದೇ ಕಣ್ಣಿನಲ್ಲಿ ಹೇಗೆ ಮ್ಯಾನೇಜ್ ಮಾಡುತ್ತಿದ್ದಿರೆಂಬ ಪ್ರಶ್ನೆಗೆ ತಮಾಷೆಯಾಗಿ 'ನಾನು ಬ್ಯಾಟಿಂಗ್ ಮಾಡೋವಾಗ ಬೌಲರ್ ಒಂದೇ ಬಾಲನ್ನು ಎಸೆಯುತ್ತಿದ್ದರಾದರೂ ನನಗದು ಎರಡೆರಡು ಕಾಣುತ್ತಿದ್ದವು. ಅವುಗಳಲ್ಲಿ ಒಳಗಿರುತ್ತಿದ್ದ ಬಾಲ್‌ನ ಮೇಲೆ ನಿಗಾ ಇರಿಸಿ ಬ್ಯಾಟ್‌ಬೀಸುತ್ತಿದ್ದೆ' ಅಂತ ಗೇಲಿಮಾಡಿಕೊಳ್ತಾರೆ. ಅಂದ ಹಾಗೆ ಪಟೌಡಿಯವರಿಗೆ ಜೀವನದುದ್ದಕ್ಕೂ ದೃಷ್ಟಿಯ ಮಹತ್ವ ಅರಿವಿತ್ತಾದ್ದರಿಂದ ಸಾವಿನ ನಂತರ ಸುಸ್ಥಿತಿಯಲ್ಲಿದ್ದ ತಮ್ಮ ಒಂದು ಕಣ್ಣನ್ನೆ ದಾನ ಮಾಡಿ ದೊಡ್ಡವರಾಗಿಯೇ ವಿದಾಯ ಹೇಳಿದ್ದಾರೆ.

ಆಕೆ ಸುದೀರ್ಘ ಬ್ಯಾಟಿಂಗ್ ಮಾಡಿದ್ದಳು

ಮನ್ಸೂರ್ ಅಲಿಖಾನ್ ಪಟೌಡಿ ಮತ್ತು ಶರ್ಮಿಳಾ ಟ್ಯಾಗೋರ್‌ರದ್ದು ಬ್ಲಾಕ್ ಅಂಡ್ ವೈಟ್ ಸಮಯದಲ್ಲೆ ನಡೆದ ಕಲರ್‌ಫುಲ್ ಲವ್‌ಸ್ಟೋರಿ ಮಾತ್ರವಲ್ಲ ಕ್ರಿಕೆಟ್ ಹಾಗೂ ಸಿನಿಮಾ ತಾರೆಗಳ ನಡುವಿನ ಪ್ರಪ್ರಥಮ ಪ್ರೇಮ ಪಲ್ಲವಿ. ಜಾತಿ, ಧರ್ಮಗಳ ಕಟ್ಟಳೆಗಳನ್ನೂ ಮೀರಿ ಅದನ್ನವರು ಗೆಲ್ಲಿಸಿಕೊಂಡಿದ್ದರು. ಅದರ ಮೆಲುಕನ್ನು ಸವಿಯುತ್ತಾ ಪಟೌಡಿಯವರು ಹೀಗೆ ಹೇಳಿಕೊಂಡಿದ್ದಾರೆ: 'ನನ್ನ ಆಕೆಯ ಭೇಟಿ ನಾವಿಬ್ಬರೂ ಇಷ್ಟಪಟ್ಟಾಯಿತಾದರು ಆಕೆ ಸುಲಭಕ್ಕೆ ನನಗೆ ಒಲಿಯುವಂತಿರಲಿಲ್ಲ, ಆಕೆಗೆ ರೆಫ್ರಿಜರೇಟರ್ ಅಂದ್ರೆ ತುಂಬಾ ಇಷ್ಟವಿತ್ತಾದ್ದರಿಂದ ಆಕೆಗೋಸ್ಕರ ಇಂಗ್ಲೆಂಡ್‌ನಿಂದ ಅದನ್ನು ತಂದು ಉಡುಗೊರೆಯಾಗಿ ನೀಡಿದ್ದೆ. ಆದರೂ ಆಕೆ ತುಂಬಾ ದೀರ್ಘವಾಗೇ ಬ್ಯಾಟಿಂಗ್ ಮಾಡಿದಳು. ಕೊನೆಗೂ ನಾನವಳನ್ನು ಔಟ್ ಮಾಡುವಲ್ಲಿ ಯಶಸ್ವಿಯಾದೆ.' ಇನ್ನು ಶರ್ಮಿಳಾ ಟ್ಯಾಗೋರ್‌ರಿಗೆ ಪಟೌಡಿ ಮೇಲೆ ಪ್ರೀತಿ ಹುಟ್ಟಲು ಅವರಲ್ಲಿದ್ದ ಹಾಸ್ಯಪ್ರಜ್ಞೆ ಟೈಮ್‌ಸೆನ್ಸ್ ಕಾರಣವಂತೆ. ಮತ್ತೂ ಒಂದು ಸ್ವಾರಸ್ಯಕರ ಸಂಗತಿಯೆಂದರೆ ಶರ್ಮಿಳಾ ಕ್ರಿಕೆಟ್ ಮ್ಯಾಚ್ ನೋಡಲು ಹೋದಾಗಲೆಲ್ಲ ಪಟೌಡಿ ಹೇಳುತ್ತಿದ್ದರಂತೆ 'ನೀನು ಎಲ್ಲಿ ಕೂತುಕೊಳ್ತೀಯೊ ಅಲ್ಲಿಗೆ ಬಾಲ್ ಬಂದು ಬೀಳುವಂತೆ ಸಿಕ್ಸರ್ ಬಾರಿಸ್ತೀನಿ' ಅಂತ. ಅದು ಕೇವಲ ಮಾತಿಗೆ ಮಾತ್ರವಾಗಿರಲಿಲ್ಲ, ಹೇಳಿದಂತೆ ಶರ್ಮಿಳಾ ಬಳಿಗೆ ಬಾಲ್ ಹೋಗುವಂತೆಯೇ ಸಿಕ್ಸರ್ ಕೂಡ ಬಾರಿಸುತ್ತಿದ್ದರಂತೆ. ಅವರ ಈ ಪ್ರೇಮ ಕೊನೆವರೆಗೂ ತನ್ನ ತುಡಿತವನ್ನು ಕಳೆದುಕೊಳ್ಳಲೇ ಇಲ್ಲ, ತೀರಾ ಮೊನ್ನೆ ಪಟೌಡಿಯವರಿಗೆ ಆರೋಗ್ಯ ತುಂಬಾನೆ ತ್ರಾಸು ನೀಡಿ ಆಸ್ಪತ್ರೆಗೆ ದಾಖಲಾಗಬೇಕಾಗಿ ಬಂದಾಗಲು ಶರ್ಮಿಳಾ ಮನೆಯನ್ನೆ ತೊರೆದು ಹಗಲು–ರಾತ್ರಿ ಆಸ್ಪತ್ರೆಯಲ್ಲೆ ಶುಶ್ರೂಷೆಗೆ ನಿಂತಿದ್ದರು.


ಪಟೌಡಿ–ಶರ್ಮಿಳಾ

ಭಾರತದ ಎಳೆಯ ನಾಯಕ

ಭಾರತ ಕ್ರಿಕೆಟ್ ತಂಡದ ಅತ್ಯಂತ ಕಿರಿಯ ವಯಸ್ಸಿನ ನಾಯಕನ ದಾಖಲೆಗಳನ್ನು ಹುಡುಕಹೊರಟರೆ ಟೈಗರ್ ಪಟೌಡಿಯವರ ಹೆಸರೇ ಎದುರಾಗುತ್ತೆ. ತಮ್ಮ 21ನೇ ವಯಸ್ಸಿನಲ್ಲೆ ಅಂದರೆ ಕ್ರಿಕೆಟ್ ಜೀವನಕ್ಕೆ ಕಾಲಿಟ್ಟು ಇನ್ನು ಒಂದು ವರ್ಷ ಕಳೆಯುವ ಮುನ್ನವೆ ನಾಯಕನ ಪಟ್ಟ ಅವರನ್ನು ಹುಡುಕಿಕೊಂಡು ಬಂದಿತ್ತು, ಆಗ ಭಾರತ ತಂಡ ವೆಸ್ಟ್ ಇಂಡೀಸ್ ಪ್ರವಾಸ ಕೈಗೊಂಡಿದ್ದ ಸಮಯ. ನಾಯಕನ ಸ್ಥಾನದಲ್ಲಿದ್ದ ನಾರಿ ಕಂಟ್ರ್ಯಾಕ್ಟರ್‌ರವರು ಅಪಘಾತಕ್ಕೆ ತುತ್ತಾದ ಕಾರಣ ಪರ್ಯಾಯ ನಾಯಕನ್ನು ಹುಡುಕುವ ಅನಿವಾರ್ಯತೆ ಉದ್ಭವಿಸಿತ್ತು, ಅನೇಕ ಹಿರಿಯ ಆಟಗಾರರಿದ್ದರೂ ಆಯ್ಕೆ ಸಮಿತಿ ದೃಷ್ಟಿಗೆ ಪಟೌಡಿಯವರೆ ಸೂಕ್ತ ಅನ್ನಿಸಿದ್ದರಿಂದ ಜವಾಬ್ದಾರಿ ಇವರ ಹೆಗಲೇರಿತ್ತು. ಅದನ್ನು ಸಮರ್ಥವಾಗಿಯೇ ನಿಭಾಯಿಸಿದ ಪಟೌಡಿಯವರು ಅಲ್ಲಿಂದ ಹಿಂದೆ ತಿರುಗಲೇ ಇಲ್ಲ. ಭಾರತ ಅನೇಕ ಪ್ರಥಮಗಳನ್ನು ಬರೆಯಲು ಕಾರಣಕರ್ತರಾದರು. ಇವರ ತಂದೆ ಅಂದರೆ ಪಟೌಡಿ ಪ್ರಾಂತ್ಯದ ಎಂಟನೇ ನವಾಬ ಇಫ್ತಿಕಾರ್ ಅಲಿಖಾನ್ ಪಟೌಡಿ ಸ್ವತಃ ಅಪ್ಪಟ ಕ್ರಿಕೆಟ್ ಪ್ರತಿಭೆಯಾಗಿದ್ದವರು, ಭಾರತ ಮತ್ತು ಇಂಗ್ಲೆಂಡ್ ಎರಡೂ ದೇಶಗಳ ಪರ ಆಡಿದ ಕೆಲವೇ ಕೆಲವು ಆಟಗಾರರಲ್ಲಿ ಅವರೂ ಒಬ್ಬರಾಗಿದ್ದವರು. ಆದರೆ ದುರದೃಷ್ಟವಶಾತ್ ಟೈಗರ್ ಪಟೌಡಿಗೆ 11 ವರ್ಷವಾಗುವ ಹೊತ್ತಿಗೆ ತಂದೆ ತೀರಿಕೊಂಡರು. ತಂದೆಯ ಕ್ರಿಕೆಟ್ ಕನಸನ್ನು ಮಗನಾಗಿ ಪಟೌಡಿ ಪೂರ್ಣಗೊಳಿಸಿ ಹೋಗಿದ್ದಾರೆ.

ನನ್ನ ರನೌಟ್ ಮಾಡಬೇಡಪ್ಪಾ........

ಆಯ್ಕೆ ಸಮಿತಿಯೊಂದಿಗೆ ಪಟ್ಟು ಹಿಡಿದು ಸಾಕಷ್ಟು ಪ್ರತಿಭಾವಂತ ಯುವ ಆಟಗಾರರಿಗೆ ಅವಕಾಶ ಕಲ್ಪಿಸಿದ ಸಾರ್ಥಕ ಕೆಲಸವನ್ನೂ ಪಟೌಡಿ ಮಾಡಿದ್ದಾರೆ. ಅವರಲ್ಲಿ ಅಜಿತ್ ವಾಡೇಕರ್ ಕೂಡ ಒಬ್ಬರು. ಅಜಿತ್‌ರ ಮೇಲೆ ಪಟೌಡಿಗೆ ಎಲ್ಲಿಲ್ಲದ ವಿಶ್ವಾಸ. ಕಡೆಗೆ ವಾಡೇಕರ್‌ರನ್ನು ಕ್ಯಾಪ್ಟನ್ ಮಾಡುವಲ್ಲಿಯೂ ಅವರು ಯಶಸ್ವಿಯಾಗಿದ್ದರು. ಅನುಭವವನ್ನು ಸ್ವತಃ ಅಜಿತ್ ಸಮಯ ಸಿಕ್ಕಾಗಲೆಲ್ಲ ಮೆ... ಹಾಕುತ್ತಿರುತ್ತಾರೆ. 1971ನೇ ಇಸವಿಯಲ್ಲಿ ಇನ್ನೇನು ಭ... ಕ್ರಿಕೆಟ್ ತಂಡವು ವೆಸ್ಟ್ ಇಂಡೀಸ್ ಪ್ರ... ಕೈಗೊಳ್ಳಬೇಕೆನ್ನುವಾಗ ತಂಡದ ಹಾಗೂ ಹೊಸ ನಾಯ... ಆಯ್ಕೆಯೂ ಶುರುವಾಗಿತ್ತು, ಪ್ರವಾಸಕ್ಕೂ ಮುನ್ನ ಇದ್ದ ಲೀ... ಮ್ಯಾಚ್‌ನಲ್ಲಿ ಎಲ್ಲರೂ ಭಾಗವಹಿಸಿದ್ದರು. ಆಟ ಮು... ಮೇಲೆ ಪಟೌಡಿ ಡ್ರೆಸ್ಸಿಂಗ್ ರೂಮ್‌ನಲ್ಲಿ ಹಾಯಾಗಿ ಬಿಂ... ಹೀರುತ್ತಿರುವಾಗ ವಾಡೇಕರ್ ಅವರ ಬಳಿ ಸರಿದು, '... ಇಂಡೀಸ್ ಟೂರ್‌ಗೆ ನನಗೂ ತಂಡದಲ್ಲಿ ಅವಕಾಶ ... ಬಹುದಾ' ಅಂತ ಆಸೆಗಣ್ಣಿನಲ್ಲೆ ಕೇಳಿದ್ದರು. ಮೆಲು... ಬೀರಿದ ಪಟೌಡಿ 'ಕೇಳಬೇಕಿರುವುದು ನೀನಲ್ಲಪ್ಪ ನಾನು. ನಿ... ಕ್ಯಾಪ್ಟನ್ ಆದರೆ ನನ್ನನ್ನ ಟೀಮ್‌ನಲ್ಲಿ ಸೇರಿಸಿಕೊ... ಮಾರಾಯಾ' ಅಂದಿದ್ದರಂತೆ. ಹಿರಿಯ ಆಟಗಾರ ಕಮ್ ... ನಾಯಕನ ಈ ತಮಾಷೆಗೆ ವಾಡೇಕರ್‌ನಂತ ಯುವ ಆಟ... ಉದಾಸೀನ ಮಾಡುವುದನ್ನು ಬಿಟ್ಟು ಬೇರೆ... ಮಾಡುವಂತಿರಲಿಲ್ಲ, ಅದರಂತೆಯೇ ತನ್ನತ್ತಲೇ ಉದಾ... ನಗೆಯನ್ನು ಬೀರಿಕೊಂಡು ಸುಮ್ಮನಾಗಿದ್ದರು. ಅ... ಅಚ್ಚರಿಯೆಂಬಂತೆ ಈ ಮಾತುಕತೆ ಮುಗಿದು ಮೂರು ದಿ... ದಾಟುವ ಮುನ್ನವೆ ತಾನು ಭಾರತ ಟೀಮ್‌ನ ಕ್ಯಾಪ್ಟನ್ ... ಆಯ್ಕೆಯಾಗಿರುವ ಮತ್ತು ಅದು ಪಟೌಡಿಯವರ ಶಿಫಾ... ಆಗಿತ್ತೆಂಬ ಸುದ್ದಿ ವಾಡೇಕರ್‌ಗೆ ಬಡಿಯುತ್ತದೆ. ಕೂ... ಪಟೌಡಿಯವರನ್ನ ಸಂಪರ್ಕಿಸಿ ಥ್ಯಾಂಕ್ಸ್ ಹೇಳುವುದರ ಜೊ... 'ನೀವೂ ನಮ್ಮ ಜೊತೆ ಟೀಮ್‌ನಲ್ಲಿ ಇರಬೇಕು' ... ಕೇಳಿದಾಗ 'ನಾನೀಗ ರಾಜಕೀಯಕ್ಕೆ ಹೆಜ್ಜೆ ಇರಿಸೊ... ಅಂದುಕೊಂಡಿದ್ದೇನೆ. ನನ್ನನ್ನು ಅವರು ಸ್ವೀಕರಿಸುತ್ತಾ... ಇಲ್ಲವೊ ಗೊತ್ತಿಲ್ಲ. ಆದರೆ ಒಂದು ಬಾರಿ ಪ್ರಯತ್ನಿಸೊ... ಅಂದುಕೊಂಡಿದ್ದೇನೆ. ಹಾಗಾಗಿ ನೀವೆ ಹೋಗಿ ಬನ್ನಿ' ... ಪಟೌಡಿಯವರ ಪ್ರತ್ಯುತ್ತರದಲ್ಲಿ ಯುವ ಆಟಗಾರರ... ಅವರಿಗಿದ್ದ ಪ್ರೋತ್ಸಾಹ ಎದ್ದು ಕಾಣುವಂತಿತ್ತು.

ಮತ್ತೊಂದು ಸಂದರ್ಭದಲ್ಲಿ, ಅಂದರೆ ಮೇ... ಘಟನೆಗೂ ಮುನ್ನ 1967ರಲ್ಲಿ, ಮೆಲ್ಬೋರ್ನ್... ಆಸ್ಟ್ರೇಲಿಯಾ ವಿರುದ್ಧ ಟೆಸ್ಟ್ ಮ್ಯಾಚ್ ನಡೆದಿತ್ತು, ಭಾರತ ... ವಿಕೆಟ್ ಕಳೆದುಕೊಂಡು ತೀರಾ ಸಂಕಷ್ಟದ ಸಂದರ್ಭದಲ್ಲಿ ... ಪಟೌಡಿ ಬ್ಯಾಟಿಂಗ್‌ಗೆ ಇಳಿದಿದ್ದರು. ದುರದೃಷ್ಟವಶ... ಟೈಗರ್‌ಗೆ ಏಟಾದ ಪರಿಣಾಮ ಅವರಿಗೆ ಕ್ರೀಜ್‌ನಲ್ಲಿ ಓ... ಬಲು ಪ್ರಯಾಸವೆನಿಸುತ್ತಿತ್ತು. ಬೇರೆ ದಾರಿಯಿ... ವಾಡೇಕರ್‌ರನ್ನು ರನ್ನರ್ ಆಗಿ ತೆಗೆದುಕೊಂಡಿದ್ದರು. ... ಓವರ್ ನಡುವೆ ವಿರಾಮ ಸಿಕ್ಕಾಗ 'ನೀನು ಮುಂಬೈ... ಯವನು. ಮುಂಬೈಯವರೆಂದರೆ ಸೊಗಸಾದ ಕ್ರಿ... ಆಟಗಾರರು. ಅಫ್‌ಕೋರ್ಸ್ ನೀನು ಸಹಾ ಅದ್ಭುತ ಕ್ರಿ... ಪಟುವೆ' ಎಂದೆಲ್ಲಾ ಹಿಗ್ಗಾಮುಗ್ಗಾ ಹೊಗಳ... ಶುರುಮಾಡಿದರು. ವಾಡೇಕರ್‌ಗೆ ವಿಪರೀತ ಅಚ್ಚರಿ ಜೊ... ಒಂದಷ್ಟು ಖುಷಿಯೂ ಆಗುತ್ತಿತ್ತಂತೆ. ಮಾತು ಮು... ವರಿಸಿದ ಪಟೌಡಿ 'ನಾನು ಹೀಗೆಲ್ಲಾ ಹೊಗಳುತ್ತಿರು... ಏತಕ್ಕೆ ಗೊತ್ತಾ? ನೀನು ಸುಖಾಸುಮ್ಮನೆ ರನ... ಮಾಡದಿರಲೆಂದು' ಅಂತ ತಮಾಷೆ ಮಾಡಿದ್ದೆ ತಡ ಮೈದಾ... ಮಧ್ಯೆಯೇ ತಮಗಾದ ಆತ್ಮೀಯ ಲೇವಡಿಗೆ ವಾಡೇ... ಸಂಕೋಚದ ಮುದ್ದೆಯಾಗಿದ್ದರಂತೆ.

ಸಂಗ್ರಹ: ಗಿರೀಶ್ ತಾಳೀ...



ಪೋಕರಿ ಪಾತ್ರಕ್ಕೆ ವಿಷ್ಣು ಹೆಸರು!

ಕೆಲಸಕಾರ್ಯವಿಲ್ಲದ ಪೋರ್ಕಿಯೊಬ್ಬನ ಪಾತ್ರಕ್ಕೆ, ...ಮಿನಲ್‌ಗಳನ್ನೂ ಬ್ಲಾಕ್‌ಮೇಲ್ ಮಾಡುವ ಪ್ರಳಯಾಂತಕನ ...ೂೀಲ್‌ಗೆ 'ವಿಷ್ಣುವರ್ಧನ' ಎಂಬ ಹೆಸರಾ?

- ಇತ್ತ ಶೀರ್ಷಿಕೆ ವಿವಾದ ಬಗೆಹರಿಯುತ್ತಲೇ ...ಂಧಿನಗರದಲ್ಲಿ ಹೀಗೊಂದು ಆಘಾತಕಾರಿ ಸುದ್ದಿ ...ಹೊರಬಿದ್ದಿದೆ.

"ಸ್ವತಃ ವಿಷ್ಣು ಕಳ್ಳನಾಗಿ, ಬೀಡಾಡಿ ಹೀರೋ ಆಗಿ ...ನಿಸಿಕೊಂಡಿರಬಹುದು. ಆದರೆ ದ್ವಾರಕೀಶ್ ...ಂಡಾಡಿಗುಂಡನ ಪಾತ್ರವೊಂದನ್ನು ಸೃಷ್ಟಿಸಿ ಅದಕ್ಕೆ ...ಷ್ಣುವರ್ಧನ ಎಂಬ ಹೆಸರಿಟ್ಟಿದ್ದಾರೆ" ಎಂಬ ...ಾತೊಂದು ಕೇಳಿಬರುತ್ತಿದೆ...

ಅದು ನಿಜ!

'ವಿಷ್ಣುವರ್ಧನ' ಚಿತ್ರದ ಥ್ರೆಡ್ಡು ...ಗಿದೆ ನೋಡಿ:

ಸುದೀಪ್ ಪಾತ್ರಕ್ಕೆ ಈ ಚಿತ್ರಕತೆ ...ಷ್ಣುವರ್ಧನ್ ಎಂಬ ಹೆಸರು. ಈತ ...ಹಸಸಿಂಹ ವಿಷ್ಣು ಅವರ ದೊಡ್ಡ ...ನು. ಈತನ ತಂದೆ ಕೂಡಾ ವಿಷ್ಣು ...ಭಿಮಾನಿಯಾಗಿರುತ್ತಾರೆ. ಹೀಗಾಗಿ ...ಗನಿಗೆ ವಿಷ್ಣು ಹೆಸರನ್ನೇ ...ಟ್ಟಿರುತ್ತಾರೆ. ವಿಷ್ಣುವರ್ಧನ್ ...ಮಾ ಬಿಡುಗಡೆಯಾದರೆ ...ಯೇಟರ್ ಮುಂದೆ ಕಟೌಟು ...ಟ್ಟುವುದು, ಸಿಕ್ಕಸಿಕ್ಕ ರಸ್ತೆ ...ಲ್ಲುಗಳಿಗೆ ವಿಷ್ಣು ...ಸರನ್ನಿಡುವುದು ನಾಯಕನ ...ವ್ಯಾಸ.



ಇಷ್ಟೇ ಬದುಕು ಎಂದು ತಿರು...ತ್ತಾ ಸಿಕ್ಕಸಿಕ್ಕವರನ್ನು ಯಾಮಾರಿಸುತ್ತಾ ಜೀವನ ಸಾಗಿಸುವ ...ತನ ಕೈಗೆ ಆಚಾನಕ್ಕಾಗಿ ಮಾಫಿಯಾ ಡಾನ್ ಒಬ್ಬನ ...ಬೈಲ್ ಸಿಕ್ಕಿಬಿಡುತ್ತದೆ. ಆತ ಮೊಬೈಲ್ ಬಳಸಿ ಇಡೀ ...ಗತಲೋಕವನ್ನು ಆಳುತ್ತಿರುತ್ತಾನೆ. ಸಿಕ್ಕಿರುವ ಮೊಬೈಲ್ ...ರೀಮಂತ ವಂಚಕನದ್ದು ಎಂದು ಗೊತ್ತಾಗಿದ್ದೇ ಸುದೀಪ್ ...ತನನ್ನು ಬ್ಲಾಕ್‌ಮೇಲ್ ಮಾಡಲು ಶುರು ಮಾಡುತ್ತಾನಂತೆ. ...ದೇ ಡಾನ್‌ಗೆ ಬೆದರಿಸಿ, ಮೈಂಡ್ ಗೇಮ್ ನಡೆಸಿ ತನಗೆ ...ಕಾದ್ದನ್ನೆಲ್ಲಾ ಪಡೆಯುತ್ತಾನಂತೆ. ಇದೇ ಸುದೀಪ್‌ನನ್ನು ...ಳಸಿಕೊಂಡು ನಾಯಕಿ ಪ್ರಿಯಾಮಣಿ ತನ್ನ ಹಳೇ ಪ್ರಿಯಕರ ...ನ್ನ ಮಣಿಸುವ ಸಂಚು ರೂಪಿಸುತ್ತಾಳಂತೆ. ಹೀಗೆ ಯಾರೋ ...ವನನ್ನು ಬ್ಲಾಕ್‌ಮೇಲ್ ಮಾಡಿ ಬೆದರಿಸುವ, ನಾಯಕಿಯ ...ಡು ತೀರಿಸಲು ಹೊರಡುವ ಹೀರೋ ಒಬ್ಬನ ಪಾತ್ರಕ್ಕೆ ...ಷ್ಣುವರ್ಧನ ಅನ್ನೋ ಹೆಸರಿಟ್ಟರೆ ನಿಜಕ್ಕೂ ವಿಷ್ಣು ಅಭಿ...ಮಾನಿಗಳು ಮೆಚ್ಚುತ್ತಾರಾ?

ಅಭಿಮಾನಿಗಳಿಂದ ಸಾಹಸಸಿಂಹ ಎಂದೆನಿಸಿಕೊಂಡ ವಿಷ್ಣು ಅವರ ವೈಯಕ್ತಿಕ ವಿಚಾರಕ್ಕೂ ಈ ಚಿತ್ರದ ಪಾತ್ರಕ್ಕೂ ಸಂಬಂಧವಿಲ್ಲ ನಿಜ. ಆದರೆ ಹೆಜ್ಜೆಜ್ಜೆಗೂ ಈ ಚಿತ್ರದಲ್ಲಿ ವಿಷ್ಣು ಅವರ ಪ್ರಸ್ತಾಪವಾಗುತ್ತದೆ. ಅವರ ಚಿತ್ರಗಳ ಬಿಟ್‌ಗಳನ್ನು ಬಳಸಿಕೊಳ್ಳಲಾಗಿದೆ. ಅವರ ಭಾವಚಿತ್ರ ಕೂಡಾ ಹೇರಳವಾಗಿ ಬಳಕೆಯಾಗಿದೆ.


ಒಂದು ಸಭ್ಯ ಸಾತ್ವಿಕ ಪಾತ್ರವೊಂದಕ್ಕೆ ವಿಷ್ಣು ಹೆಸರಿಟ್ಟಿದ್ದರೆ ನಿಜಕ್ಕೂ ಅದನ್ನು ಮೆಚ್ಚಬಹುದಿತ್ತು. ಆದರೆ ಒಬ್ಬ ಬ್ಲಾಕ್‌ಮೇಲರ್‌ನ ಪಾತ್ರಕ್ಕೆ ವಿಷ್ಣು ಹೆಸರಿಟ್ಟಿರುವುದು ಮುಂದೆ ಭುಗಿಲೇಳುವ ಮತ್ತೊಂದು ವಿವಾದದ ಮುನ್ಸೂಚನೆಯಾಗಿದೆ.

ವಿಷ್ಣು ವ್ಯಾಪಾರದ ಸರಕಾ?

'ಆಪ್ತಮಿತ್ರ' ಚಿತ್ರ ರಿಲೀಜಾದ ಮೇಲೆ ಇನ್ನು ಸಿನಿಮಾಗಳ ಸಹವಾಸವೇ ಬೇಡ ಎಂದು ಚಿತ್ರರಂಗದಿಂದ ದೂರವಿದ್ದು, ಕರೆದವರ ಸಮಾರಂಭಗಳಿಗೆಲ್ಲಾ ಹೋಗಿ ಸಿಕ್ಕಸಿಕ್ಕವರ ತಲೆಗೆ ಹುಳಾ ಬಿಡುತ್ತಿದ್ದ ದ್ವಾರಕೀಶ್‌ಗೆ ವಿಷ್ಣು ಸತ್ತ ಕೂಡಲೇ ದಿಢೀರನೆ ಸಿನಿಮಾ ನಿರ್ಮಿಸುವ ಬಯಕೆ ಹುಟ್ಟಿದ್ದೇಕೆ? ಹಾಗೆ ಚಿತ್ರವೊಂದನ್ನು ತಯಾರಿಸುವ ಬಯಕೆ ದ್ವಾರಕೀಶ್ ಮನಸ್ಸಿನಲ್ಲಿ ಉದ್ಭವಿಸಿದ್ದರೆ ಪರವಾಗಿರಲಿಲ್ಲ, ಆದರೆ ತಾನು ನಿರ್ಮಿಸುತ್ತಿರುವ ಸಿನಿಮಾಕ್ಕೆ ದ್ವಾರಕೀಶ್ 'ವಿಷ್ಣುವರ್ಧನ್' ಅಂತಲೇ ಯಾಕೆ ಹೆಸರಿಡಬೇಕಿತ್ತು? ಕಥೆಗೆ ಅಗತ್ಯವಿಲ್ಲದಿದ್ದರೂ ಅನವಶ್ಯವಾಗಿ ವಿಷ್ಣು ಹೆಸರನ್ನು ದ್ವಾರ್ಕಿ ಬಳಸಿರುವುದರ ಹಿಂದಿನ ಉದ್ದೇಶವಾದರೂ ಏನು? ಮೊದಲೇ ಹೇಳಿದಂತೆ ನಾಯಕ ಮತ್ತು ಆತನ ತಂದೆ ವಿಷ್ಣು ಅವರ ಅಭಿಮಾನಿಗಳಷ್ಟೇ. ಇಷ್ಟು ಸಣ್ಣ ವಿಷಯವನ್ನಾಧರಿಸಿ ತಮ್ಮ ಚಿತ್ರಕ್ಕೆ ವಿಷ್ಣುವರ್ಧನ್ ಅವರ ಹೆಸರನ್ನು ಇಡಲೇಬೇಕು ಎಂಬ ಅನಿವಾರ್ಯತೆಯೇನಿತ್ತು? ಅದೂ ಒಂದು ಕಾಲದಲ್ಲಿ ಪ್ರಾಣಸ್ನೇಹಿತನಂತಿದ್ದ ವಿಷ್ಣುವನ್ನು ಇದೇ ದ್ವಾರ್ಕೀಶ್ ಎಲ್ಲೆಂದರಲ್ಲಿ ಜರಿದು ಅಪಪ್ರಚಾರ ಮಾಡುತ್ತಿದ್ದರು. ಇಂಥ ದ್ವಾರ್ಕೀಶ್ ಈಗ "ವಿಷ್ಣು ಮೇಲಿನ ಮಮತೆ ಮತ್ತು ಆತನಿಗೆ ಗೌರವ ನೀಡುವ ಉದ್ದೇಶದಿಂದ ಈ ಹೆಸರನ್ನು ಬಳಸಿಕೊಂಡಿದ್ದೇನೆ" ಎಂದು ಆರಂಭದಿಂದಲೇ ಓಳು ಬಿಡುತ್ತಾ ಬಂದರು. ವಿಷ್ಣು ಮೇಲೆ ದ್ವಾರಕೀಶ್‌ಗೆ ನಿಜಕ್ಕೂ ಗೌರವವಿದ್ದರೆ ಪೋರ್ಕಿಯೊಬ್ಬನ ಪಾತ್ರಕ್ಕೆ ಈ ಹೆಸರಿಡುತ್ತಿದ್ದರೇ?

ದ್ವಾರಕೀಶ್ ಸಿನಿಮಾದ ಕ್ರಿಯೇಟಿವ್ ವಿಭಾಗದಲ್ಲಿ ಮಾತ್ರವಲ್ಲ ಸುಮಾರು ಐವತ್ತು ಚಿತ್ರಗಳನ್ನು ನಿರ್ಮಿಸಿದ ಪ್ರಚಂಡ ವ್ಯಾಪಾರಸ್ಥ, ವಿಷ್ಣು ಹೆಸರನ್ನು ಹೇಗಾದರೂ ಮಾಡಿ ಎನ್‌ಕ್ಯಾಷ್ ಮಾಡಿಕೊಳ್ಳಬೇಕು ಅನ್ನೋದು ಕೂಡಾ ಕುಳ್ಳನ ವ್ಯಾವಹಾರಿಕ ಜಾಣ್ಮೆಯಷ್ಟೇ. ವಿಷ್ಣು ನಿಧನದ ನಂತರ ಬಿಡುಗಡೆಗೊಂಡು ಕೇವಲ ವಿಷ್ಣು ಮೇಲಿನ ಸಿಂಪತಿಯಿಂದಲ್ಲೇ ಓಡಿದ ಚಿತ್ರ 'ಆಪ್ತರಕ್ಷಕ'. ನೂರು ದಿನ ದಾಟಿದರೂ 'ರಕ್ಷಕ' ಸಖತ್ ಕಲೆಕ್ಷನ್ ಮಾಡಿತ್ತು. ವಿಷ್ಣುವರ್ಧನ್ ನಟಿಸಿದ ಬೇರೆ ಚಿತ್ರಗಳೂ ಉಳಿದಿರಲಿಲ್ಲ. ಹೀಗಿರುವಾಗ ಅಂತಿಮವಾಗಿ ಬೇರೊಂದು ಸಿನಿಮಾ ಸುತ್ತಿ ಅದಕ್ಕೆ 'ವಿಷ್ಣು' ಹೆಸರನ್ನು ವ್ಯಾಪಾರಕ್ಕಿಟ್ಟರೆ ಭರ್ತಿ ಜೇಬು ತುಂಬಿಸಿಕೊಳ್ಳಬಹುದು ಎಂಬ ಕೆಟ್ಟ ಬಯಕೆ ಕುಳ್ಳ ದ್ವಾರಕೀಶರದ್ದಾಗಿತ್ತು.

ವಿಷ್ಣು ಹೆಸರನ್ನು ತನ್ನ ಚಿತ್ರಕ್ಕೆ ಇಟ್ಟ ಮಾತ್ರಕ್ಕೆ ಕನ್ನಡದ ಕಲಾಭಿಮಾನಿಗಳು ಸೇರಿದಂತೆ ವಿಷ್ಣು ಕುಟುಂಬದವರು ಸಂಭ್ರಮಿಸಿಬಿಡುತ್ತಾರೆ ಎಂಬ ಲೆಕ್ಕಾಚಾರ ಕುಳ್ಳನದ್ದಾಗಿತ್ತು. ಆದರೆ ಮೊದಲು ಪ್ರತಿರೋಧ ವ್ಯಕ್ತವಾಗಿದ್ದೇ ವಿಷ್ಣು ಮನೆಯಲ್ಲಿ. ಕುಳ್ಳ ಇಂಥ ಕೇಡಿ ಕೆಲಸ ಮಾಡಿ ವಿಷ್ಣು ಹೆಸರಿಗೆ ಮಸಿ ಬಳಿಯುತ್ತಾರೆ ಎಂಬ ಕಾರಣಕ್ಕೆ ಮೇಡಂ ಭಾರತಿಯವರು "ನೀವು ನಮ್ಮ ಯಜಮಾನರ ಹೆಸರಿನಲ್ಲಿ ಸಿನಿಮಾ ಮಾಡುವುದಿದ್ದರೆ ಮೊದಲು ಆ ಚಿತ್ರದ ಕಥೆಯನ್ನು ನಮಗೆ ಹೇಳಬೇಕು" ಎಂದು ಹಠ ಹಿಡಿದರು. ಖುದ್ದು ವಿಷ್ಣು ಪುತ್ರಿ ಕೀರ್ತಿ ವರ್ಧನ್ ಈ ಚಿತ್ರದ ಕಥೆ ಕೇಳಲು ಕುಳ್ಳನ ಬಳಿ ಹೋಗಿದ್ದರು. ಆದರೆ ದ್ವಾರಕೀಶ್ ಮಾತ್ರ ಯಾವ ಕಾರಣಕ್ಕೂ ಕಥೆಯ ಗೌಪ್ಯತೆಯನ್ನು ಬಿಟ್ಟುಕೊಟ್ಟಿರಲಿಲ್ಲ.



ಕಳೆದ ಒಂದೂವರೆ ವರ್ಷಗಳಿಂದ ವಿಷ್ಣು ಕುಟುಂಬದಿಂದ ವಿರೋಧ ವ್ಯಕ್ತವಾಗುತ್ತಲೇ ಬಂತು. ಈ ವಿವಾದ ಕೇಂದ್ರ ಸಚಿವೆ ಅಂಬಿಕಾ ಸೋನಿ ತನಕ ಹೋಗಿ ಬಂದರೂ ಭಾರತಿ ಅಂಡ್ ಫ್ಯಾಮಿಲಿ ಮಾತ್ರ ಶೀರ್ಷಿಕೆಗೆ ಅನುಮತಿ ನೀಡಲು ಒಪ್ಪಿರಲೇ ಇಲ್ಲ. "ಚೇಂಬರ್ ಮತ್ತು ಭಾರತಿ ನನ್ನ ಚಿತ್ರಕ್ಕೆ ವಿಷ್ಣುವರ್ಧನ್ ಹೆಸರಿಡಲು ಅನುಮತಿ ನೀಡದಿದ್ದರೆ ನಾನು 'ರಾಜಾ ವಿಷ್ಣುವರ್ಧನ್' ಅಥವಾ 'ವೀರ ವಿಷ್ಣುವರ್ಧನ್' ಎಂಬ ಹೆಸರಿಡುತ್ತೇನೆ" ಎಂದು ದ್ವಾರಕಿ ಎಗರಾಡಿದ್ದರು. ಆದರೆ, ತಿಂಗಳಿಗೆ ಮುನ್ನವಷ್ಟೇ ನಿರ್ಮಾಪಕರ ಸಂಘದ ಮುನಿರತ್ನ, ಸೂರಪ್ಪ ಬಾಬು ಸೇರಿ "ವಿಷ್ಣು ಹೆಸರನ್ನು, ಅವರ ಮ್ಯಾನರಿಸಂ ಅನ್ನು ಚಿತ್ರದಲ್ಲಿ ಎಲ್ಲೂ ಬಳಸಬಾರದು" ಎಂಬ ಷರತ್ತಿನ ಮೇಲೆ ಹೆಸರಿಡಲು ಅನುಮತಿ ಕೊಡಿಸಿದ್ದರು.

ಆದರೆ ಒಳಗೆ ಮತ್ತು ಹೊರಗೆ ವಿಷ್ಣು ಹೆಸರನ್ನು ಬಳಸಿರುವುದು ಮಾತ್ರವಲ್ಲ, ಅವರ ಹೆಸರಿಗೆ ಇನ್‌ಡೈರೆಕ್ಟ್ ಆಗಿ ಅಪಮಾನವೆಸಗುವ ಕೆಲಸವನ್ನು ದ್ವಾರಕೀಶ್ ಸದ್ದಿಲ್ಲದೇ ಮಾಡಿಮುಗಿಸಿದ್ದಾರೆ ಅನ್ನೋದು ಯಾರ ಗಮನಕ್ಕೂ ಬಂದಂತಿಲ್ಲ.

ವಿಷ್ಣುಗೆ ನಿರಂತರ ಅವಮಾನ!

ಇಷ್ಟಕ್ಕೂ ವಿಷ್ಣು ಮತ್ತು ದ್ವಾರಕೀಶ್ ಒಟ್ಟೊಟ್ಟಿಗೇ ಸಿನಿಮಾದಲ್ಲಿ ನಟಿಸಿದರೂ ಅಂತರ್ಯದಲ್ಲಿ ಆಪ್ತತೆಯನ್ನು ಹೊಂದಿರಲಿಲ್ಲ. ಹಾಗೇ ನೋಡಿದರೆ 'ಆಪ್ತಮಿತ್ರ' ಚಿತ್ರ ಬಾಕ್ಸಾಫೀಸ್‌ನಲ್ಲಿ ಗೆಲ್ಲುತ್ತಿದ್ದಂತೆ ವಿಷ್ಣು ಮತ್ತು ದ್ವಾರಕೀಶ್ ಮಧ್ಯೆ ಮನಸ್ತಾಪ ಉಂಟಾಗಿತ್ತು, ಎಷ್ಟರಮಟ್ಟಿಗೆ ಅಂದರೆ 'ಆಪ್ತಮಿತ್ರ'ದ ಶತದಿನೋತ್ಸವ ಸಮಾರಂಭವನ್ನು ದ್ವಾರಕೀಶ್ ಆಚರಿಸಿದಾಗ ಅದಕ್ಕೆ ಚಿತ್ರದ ನಾಯಕ ವಿಷ್ಣುಗೆ ಆಹ್ವಾನವನ್ನೂ ನೀಡದೆ ಅವಮಾನಿಸಿದ್ದರು. ಆಗ ವಿಷ್ಣುವರ್ಧನ್ ಖುದ್ದು ತಾವೇ ಮತ್ತೊಂದು ಪರ್ಯಾಯ ಶತದಿನೋತ್ಸವ ಸಮಾರಂಭವನ್ನು ಆಚರಿಸಿ ದ್ವಾರಕೀಶ್‌ಗೆ ಸೆಡ್ಡು ಹೊಡೆದಿದ್ದರು.

ಈ ಮಧ್ಯೆ 'ಆಪ್ತರಕ್ಷಕ' ಚಿತ್ರ ಆರಂಭವಾದಾಗ "ಇದು 'ಆಪ್ತಮಿತ್ರ'ದ ಮುಂದುವರೆದ ಭಾಗ. ಅದಕ್ಕೆ ಕೋರ್ಟ್‌ನಿಂದ ತಡೆಯಾಜ್ಞೆ ತರುತ್ತೇನೆ" ಎಂದು ಈ ಕುಳ್ಳ ಮಾಧ್ಯಮಗಳ ಮುಂದೆ ಅಬ್ಬರಿಸಿದ್ದರು. ವಿಷ್ಣುಗೆ ಫಾಸಿಮಾಡಿದ್ದರು. "ಈ ಚಿತ್ರವನ್ನು ಯಾವುದೇ ಕಾರಣಕ್ಕೆ ಬೇರೆಯವರು ಮಾಡಲು ಸಾಧ್ಯವಿಲ್ಲ. ಒಂದು ವೇಳೆ ಮಾಡುವುದಾದರೆ ನಾನೇ ಮಾಡಬೇಕು" ಎಂದು ಹೇಳಿ ವಿಷ್ಣುವರ್ಧನ್‌ರ ಕಾಲ್‌ಶೀಟ್ ಪಡೆಯಲು ಬ್ಲಾಕ್‌ಮೇಲ್ ಮಾಡಿದ್ದರು. ದ್ವಾರಕೀಶ್‌ರ ಯಾವ ಗೊಡ್ಡು ಬೆದರಿಕೆಗೂ ಹೆದರದೆ ಸಿನಿಮಾ ಶುರು ಮಾಡಿದರು ವಿಷ್ಣು. ಚಿತ್ರೀಕರಣದ ಸಂದರ್ಭದಲ್ಲಿ ವಿಷ್ಣು ಕುದುರೆಯಿಂದ ಬಿದ್ದು ಕಾಲು ಮುರಿದುಕೊಂಡಿದ್ದೇ ತಡ "ಆತನಿಗೆ ಕುದುರೆ ಸವಾರಿ ಕೂಡಾ ಬರಲ್ಲ" ಎಂದು ದ್ವಾರ್ಕಿ ಲೇವಡಿ ಮಾಡಿಕೊಂಡು ತಿರುಗಿದ್ದರು.

ಯಾವುದೋ ಕಾಲದಲ್ಲಿ ದ್ವಾರಕೀಶ್ ಮತ್ತು ವಿಷ್ಣುವರ್ಧನ್ ಹತ್ತಿರದ ಮಿತ್ರರಾಗಿದ್ದರು ಅನ್ನೋದು ನಿಜ. ಡಾ. ರಾಜ್‌ಕುಮಾರ್ ಚಿತ್ರಗಳ ಮೇಲೆ ಇದೇ ಜೋಡಿ ಸ್ಪರ್ಧೆಗೆ ನಿಂತಿತ್ತು ಅನ್ನೋದೂ ಸತ್ಯದ ಮಾತು. ಆದರೆ ಸ್ವತಃ ಇವರೇ ಯಶಸ್ಸು ಕಂಡ ಮೇಲೆ 'ಗೆಲುವು ನನ್ನಿಂದ' ಎಂಬ ಒಳಜಗಳ ಇಬ್ಬರಲ್ಲೂ ಮೂಡಿತ್ತು, ಅದು ಯಾವ ಮಟ್ಟಕ್ಕೆಂದರೆ, ದ್ವಾರಕೀಶ್ ವಿಷ್ಣು ಅವರನ್ನು ಮನಸ್ಸಿನಲ್ಲಿಟ್ಟುಕೊಂಡು 'ದ್ರೋಹಿ' ಎಂಬ ಚಿತ್ರದ ಜಾಹೀರಾತನ್ನು ಪತ್ರಿಕೆಗಳಲ್ಲಿ ನೀಡಿದ್ದರು. ಆ ಜಾಹೀರಾತಿನಲ್ಲಿ ವಿಷ್ಣು ಚಿತ್ರವನ್ನು ಹೋಲುವ ರೀತಿ ಚಿತ್ರಗಳನ್ನು ಪ್ರಿಂಟು ಮಾಡಿಸಿದ್ದರು. ಅಷ್ಟೇ ಅಲ್ಲ, ಆ ಚಿತ್ರದ ಕತೆ ವಿಷ್ಣು ಜೀವನದ ಸುತ್ತಮುತ್ತ ಹೆಣೆದದ್ದು ಎಂಬ ಅರ್ಥ ಬರುವ ರೀತಿಯಲ್ಲಿ ಜಾಹೀರಾತು ನೀಡಿದ್ದರು. ಇಬ್ಬರ ನಡುವಿನ ವೈಯಕ್ತಿಕ ದ್ವೇಷ ಮತ್ತು ಅಸೂಯೆ ಸಿನಿಮಾ ಪರದೆಯ ಮೇಲೆ ಮೂಡಿಬರುವಷ್ಟು ಮಟ್ಟಿಗೆ ಬೆಳೆದುದನ್ನು ನೋಡಿ ಇಡೀ ಗಾಂಧಿನಗರವೆಂಬ ಗಾಂಧಿನಗರವೇ ಬೆಚ್ಚಿಬಿದ್ದಿತ್ತು. ಕೊನೆಗೆ ಅಭಿಮಾನಿಗಳ ಬೆದರಿಕೆಗೆ ಮತ್ತು ಉದ್ಯಮದವರ ಪ್ರತಿರೋಧಕ್ಕೆ ಹೆದರಿ ದ್ವಾರಕೀಶ್ ಆ ಚಿತ್ರವನ್ನು ಕೈಬಿಟ್ಟಿದ್ದರು. 'ದ್ರೋಹಿ' ಚಿತ್ರ ಸೆಟ್ಟೇರುವ ಮೊದಲೇ ಮುಂಡಾಮೋಚಿಕೊಂಡಿದ್ದರಿಂದ ಅವಮಾನಗೊಂಡ ದ್ವಾರಕೀಶ್ ಇನ್ನೊಬ್ಬ ವಿಷ್ಣುವರ್ಧನ್‌ನನ್ನು ಹುಟ್ಟುಹಾಕುತ್ತೇನೆಂದು ಅಬ್ಬರಿಸಿದರು. ಅದ್ಯಾವುದೋ ತಲೆಮಾಸಿದವನನ್ನು ಕರೆತಂದು ಆತನಿಗೆ ರಾಜವರ್ಧನ್ ಎಂಬ ಹೆಸರಿಟ್ಟು ಸಿನಿಮಾವನ್ನೂ ಮಾಡಿದರು. ನಟ ಶಶಿಕುಮಾರ್ ಲೈಮ್ ಲೈಟ್‌ನಲ್ಲಿದ್ದಾಗ 'ಹೊಸ ಕಳ್ಳ, ಹಳೇ ಕುಳ್ಳ' ಎಂದು ಹೆಸರಿಟ್ಟು ವಿಷ್ಣು ವಿರುದ್ಧ ಗೆಲ್ಲಲು ಹೋಗಿ ಮೈಕೈ ಪರಚಿಕೊಂಡಿದ್ದರು. ಆದರೆ ಅದ್ಯಾವುದೂ ಬರಕತ್ತಾಗಲಿಲ್ಲ.

ಕರುಣಾಮಯಿಗೆ ಅನ್ಯಾಯ

ಬಹುಶಃ ಬೇರೆ ಯಾರೇ ವ್ಯಕ್ತಿ ಇಷ್ಟೆಲ್ಲ ಕಾಟ ಕೊಟ್ಟಿದ್ದರೆ ಯಾವ ನಟನೇ ಆಗಿದ್ದರೂ ಮತ್ತೊಮ್ಮೆ ಅವರನ್ನು ಹತ್ತಿರಕ್ಕೆ ಬಿಟ್ಟುಕೊಳ್ಳುತ್ತಿರಲಿಲ್ಲವೇನೋ? ಆದರೆ ವಿಷ್ಣುವನ್ನು ವಿರೋಧಿಸಲೆಂದೇ ಸಿನಿಮಾ ಮಾಡಲು ಹೋಗಿ ಬರ್ಬಾದಾದ ದ್ವಾರಕೀಶ್‌ರನ್ನು ಹಿಡಿದು ಮೇಲಕ್ಕೆತ್ತಿ ಜೀವಕಳೆ ತಂದುಕೊಟ್ಟಿದ್ದು ಇದೇ ದ್ವಾರಕೀಶರಿಂದ ಅವಮಾನ, ಮನೋವೇದನೆಗೆ ಗುರಿಯಾದ ಕರುಣಾಮಯಿ ವಿಷ್ಣು. ಆರ್ಥಿಕವಾಗಿ ಹೀನಸ್ಥಿತಿ ತಲುಪಿದ್ದ ದ್ವಾರಕೀಶ್ ಅವರನ್ನು ಕರೆದು ವಿಷ್ಣು 'ಆಪ್ತಮಿತ್ರ' ಚಿತ್ರಕ್ಕೆ ಕಾಲ್‌ಶೀಟ್ ನೀಡಿದರು. ಆದರೆ ಸಿನಿಮಾ ಬಿಡುಗಡೆಯಾಗಿ ಹಿಟ್ ಆಗುತ್ತಿದ್ದಂತೇ ಕುಳ್ಳ ಮತ್ತೆ ಹಳೇ ವರಸೆಗೆ ಜಾರಿದ್ದರು.

ಸರಸ-ವಿರಸ, ಬದುಕು ಸಾವು ಎಲ್ಲವನ್ನೂ ವ್ಯಾಪಾರೀ ಮನೋಭಾವನೆಯಿಂದ ನೋಡುವ ದ್ವಾರಕೀಶ್ ಈಗ ವಿಷ್ಣು ಸತ್ತಮೇಲೂ ಅವರನ್ನು ಹರಾಜಿಗಿಟ್ಟಿದ್ದಾರೆ. ಅದೂ ಮತ್ತೊಮ್ಮೆ ಅವಮಾನಿಸುವ ಮೂಲಕ!

• ಅರುಣ್ ಕುಮಾರ್.ಜಿ

ಬಿಟಿಎಂ ಲೇಔಟ್

ಕಾಂಗ್ರೆಸ್ ಕಾರ್ಪೊರೇಟರ್ ಬಾಬು ಬೋಗಸ್ ಆಸ್ತಿಪತ್ರ ಖರಾಬು

ಎಂತೆಂಥಾ ವಂಚನೆಗಳನ್ನು ನಡೆಸಿ ಹೇಗೇಗೆ ದಕ್ಕಿಸಿ ಕೊಳ್ಳಬಹುದೆಂಬುದಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯೆಂಬುದು ಆಕರ ಗ್ರಂಥವಿದ್ದಂತೆ. ಸದ್ಯ ಇದರದ್ದೇ ಒಂದು ಅಧ್ಯಾಯ ದಾಖಲೆಗಳ ಸಹಿತ ಜಾಹೀರಾಗಿದೆ. ಅದು ಬಿಟಿಎಂ ಲೇಔಟ್ ವಾರ್ಡ್ ನಂ. 176ರ ಕಾಂಗ್ರೆಸ್ ಕಾರ್ಪೊರೇಟರ್ ಜಿ.ಎನ್.ಆರ್. ಬಾಬು ಅಲಿಯಾಸ್ ಎನ್.ಎಸ್. ಬಾಬು ಉರ್ಫ್ ಬಾಬು ರೆಡ್ಡಿಗೆ ಸಂಬಂಧಿಸಿದ್ದು!

ಆಯಕಟ್ಟಿನ ಅಧಿಕಾರಿಗಳು ಅಮೇಧ್ಯ ಚಪ್ಪರಿಸದಿದ್ದರೆ ಜಿಎನ್ನಾರ್ ಬಾಬು ಮನೆ ಸೇರಿ ಈ ಹೊತ್ತಿಗೆ ವರ್ಷ ಕಳೆದಿರುತ್ತಿತ್ತು. ಈತ ಹುಟ್ಟು ಶ್ರೀಮಂತ ಮತ್ತು ವಂಚಕ. ಪತ್ರಿಕೆಗೆ ಲಭಿಸಿರುವ ದಂಡಿದಂಡಿ ದಾಖಲೆಗಳು ಅದನ್ನು ಪುಷ್ಟೀಕರಿಸುವಂತಿವೆ. ಈತನ ಒರಿಜಿನಲ್ ಹೆಸರು ಜಿ.ಎನ್. ಬಾಬು. ಆದರೆ ರಾಜಕೀಯದ ತೆವಲಿಗೆ ಬಿದ್ದು ಬಿಬಿಎಂಪಿ ಚುನಾವಣೆಗೆ ಸ್ಪರ್ಧಿಸಿದ್ದನಲ್ಲಾ? ಆಗ ಇದ್ದಕ್ಕಿದ್ದಂತೆ ಜಿ.ಎನ್.ಆರ್. ಬಾಬು ಅಂತ ಹೆಸರು ಬದಲಿಸಿಕೊಂಡ. ಚುನಾವಣೆಗೆ ಮುನ್ನ ಹಾಗೂ ನಂತರ ಸಲ್ಲಿಸಿದ ಆಸ್ತಿ ಪತ್ರದಲ್ಲಿ ಅಕ್ಷರಶಃ ಸುಳ್ಳು ದಾಖಲೆ ನೀಡಿದ. ತಮಾಷೆಯೆಂದರೆ ಒಂದೇ ದಾಖಲೆಯಲ್ಲಿ ಎರಡೆರಡು ರೀತಿಯ ಸಹಿ ಗೀಚಿ ತಾನೇ ತಾನಾಗಿ ತಗುಲಿಕೊಂಡಿದ್ದಾನೆ. ಅಸಲಿ ಆಸ್ತಿಗೂ ಅಧಿಕೃತವಾಗಿ ಸಲ್ಲಿಸಿದ ದಾಖಲೆಗಳಲ್ಲಿನ ಆಸ್ತಿಮೊತ್ತಕ್ಕೂ ಯಾವ ಕೋನದಿಂದಲೂ ತಾಳೆಯಾಗುವುದಿಲ್ಲ.

ಬಿಟಿಎಂ ಲೇಔಟ್‌ನ ಜಿ. ನಾರಾಯಣರೆಡ್ಡಿ ಸಾವಿರಾರು ಕೋಟಿಗೆ ತೂಗುವ ಆಸ್ತಿವಂತನಾಗಿದ್ದಾತ. ಆತನ ನಾಲ್ವರು ಮಕ್ಕಳ ಪೈಕಿ ಮೂರನೆಯವನಾದ ಎಸ್ಸೆನ್ ಬಾಬುಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿಯೇ ಹತ್ತಿರಹತ್ತಿರ ಸಾವಿರ ಕೋಟಿ ಮೊತ್ತದ್ದಿದೆ. ಇಷ್ಟೆಲ್ಲ ಆಸ್ತಿ ಇಟ್ಟುಕೊಂಡೂ ರಿಯಲ್ ಎಸ್ಟೇಟ್ ದಂಧೆಗಿಳಿದ ಬಾಬು ಆ ಮೂಲಕವೇ ಬೇನಾಮಿ ಆಸ್ತಿ ಮಾಡಿಕೊಂಡಿದ್ದಾನೆ. ಇದನ್ನೆಲ್ಲ ಪಿತ್ರಾರ್ಜಿತ ಆಸ್ತಿಗೇ ಪೋಣಿಸಿ ಗೋಜಲು ಸೃಷ್ಟಿಸಿಕೊಂಡಿದ್ದಾನೆ. ಹೀಗೆ ರಿಯಲ್ ಎಸ್ಟೇಟ್, ಶಾಪಿಂಗ್ ಕಾಂಪ್ಲೆಕ್ಸ್, ಕಲ್ಯಾಣಮಂಟಪ ಅಂತೆಲ್ಲಾ ಭರ್ಜರಿ ಬ್ಯುಸಿನೆಸ್ ನಡೆಸುತ್ತಿದ್ದ ಬಾಬುವಿಗೆ ಅದ್ಯಾರು ಐಡಿಯಾ ಕೊಟ್ಟರೋ, ಅಂತೂ ಕಳೆದ ಬಿಬಿಎಂಪಿ ಚುನಾವಣೆಗೆ ಮುನ್ನ ಜನಸೇವಕನ ಪೋಸು ಕೊಡಲಾರಂಭಿಸಿದ. ಅಕ್ರಮಗಳನ್ನು ಮುಚ್ಚುವ ಉದ್ದೇಶದಿಂದಲೇ ಹೆಸರು ಬದಲಿಸಿಕೊಂಡ. ತದನಂತರ ಆತ ಜಿಎನ್ನಾರ್ ಬಾಬು ಅಂತ ಚಾಲ್ತಿಗೆ ಬಂದ.

ಎಸ್.ಟಿ. ಸೋಮಶೇಖರ್ ಮೂಲಕ ಲಾಬಿ ನಡೆಸಿ ಕಾಂಗ್ರೆಸ್ ಟಿಕೆಟು ದಕ್ಕಿಸಿಕೊಂಡ ಬಾಬು ಚುನಾವಣಾ ಆಯೋಗಕ್ಕೆ ಸಲ್ಲಿಸಿದ ಆಸ್ತಿಪತ್ರ ಕಂಡು ಬಿಟಿಎಂ ಲೇಔಟ್‌ನ ಮಂದಿ ಬೇಸ್ತು ಬಿದ್ದಿದ್ದರು. ಸಾವಿರಾರು ಕೋಟಿಗಳ ಒಡೆಯ ಬಾಬು ಆಸ್ತಿ ಪತ್ರದಲ್ಲಿ ಕೇವಲ ಎಂಟು ಕೋಟಿ ಅಂತ ದಾಖಲಿಸಿದ್ದ. ಇಂಥಾ ಖೋಟಿ ದಾಖಲೆ ಸಲ್ಲಿಸಿದ ಬಾಬು ಗೆದ್ದು ಕಾರ್ಪೊರೇಟರನಾಗಿ ಅವತರಿಸಿದ. ಇದಾದಬಳಿಕ ಮೇಯರ್ ಎಸ್.ಕೆ. ನಟರಾಜ್‌ಗೆ ಆಸ್ತಿ ಪತ್ರ ಸಲ್ಲಿಸಬೇಕಾಗಿ ಬಂತಲ್ಲಾ? ಆಗಲೂ ಸಹ ಅದೇ ಬೋಗಸ್ ದಾಖಲೆ ಸಲ್ಲಿಸಿ ಸುಮ್ಮನಾದ.

ಬಾಬುವಿನ ಅಖಂಡ ಆಸ್ತಿಗಳ ಪರಿಚಯವಿರುವ ಸ್ಥಳೀಯರೊಬ್ಬರು ಕಳೆದ ವರ್ಷ ಈ ಅಕ್ರಮದ ವಿರುದ್ಧ ಚುನಾವಣಾ ಆಯೋಗಕ್ಕೊಂದು ದೂರು ನೀಡಿದರು. ಆದರೆ ಅಲ್ಲಿನ ಆಯಕಟ್ಟಿನ ಅಧಿಕಾರಿ ವೆಂಕಟಾಚಲಯ್ಯ ಎಂಬಾತ ಬಾಬು ಮರ್ಜಿಗೆ ಬಿದ್ದು ಎಲ್ಲವನ್ನು ತಿರುಚಿ ಹಾಕಿ ಋಣ ತೀರಿಸಿದ. ಈ ವಿಚಾರ ರಾಜ್ಯ ಚುನಾವಣಾ ಆಯೋಗದ ಅಧೀನ ಕಾರ್ಯದರ್ಶಿ ಸಿ.ಆರ್. ರೇವಣ್ಣನವರಿಗೆ ತಿಳಿದದ್ದೇ ನೋಟಿಸೊಂದನ್ನು ನೀಡಿ ವೆಂಕಟಾಚಲಯ್ಯನಿಗೆ ಚಳಿ ಬಿಡಿಸಿದ್ದರು. ಆದರೂ ಕೂಡ ಸದರಿ ವಿಚಾರಣೆ ಹಳ್ಳ ಹಿಡಿದಿದೆ. ಆದರೆ ಬಾಬುವಿನ ಅಕ್ರಮಗಳು ಮಾತ್ರ ಆತನ ಕಾರ್ಪೊರೇಟರ್‌ಗಿರಿಯನ್ನೇ ಆಪೋಶನ ತೆಗೆದುಕೊಳ್ಳುವಷ್ಟು ನಿಚ್ಚಳವಾಗಿವೆ.


ಮೇಲ್ನೋಟಕ್ಕೇ ಗೋಚರಿಸುವ ಪ್ರಕಾರ ಬಾಬು ಹದಿನೆಂಟು ಪ್ರಾಪರ್ಟಿಗಳ ಬಗ್ಗೆ ಚುನಾವಣಾ ಆಯೋಗಕ್ಕೆ ದಾಖಲೆ ಒದಗಿಸದೆ ತಪ್ಪಿಸಿಕೊಂಡಿದ್ದಾನೆ. ಆ ಪ್ರಾಪರ್ಟಿಗಳ ಮೊತ್ತವನ್ನು ಲೆಕ್ಕ ಹಾಕುತ್ತಾ ಹೋದರೆ ನಿಜಕ್ಕೂ ಗಾಬರಿಯಾಗುತ್ತದೆ.

ಜೆ.ಪಿ. ನಗರ 2 ನೇ ಹಂತದ ಎಸ್‌ಎಲ್‌ವಿ ಹೋಟೆಲ್ ಎದುರಿಗಿರುವ ಕಟ್ಟಡವೊಂದೇ ಹದಿನೈದು ಕೋಟಿಗೆ ತೂಗುತ್ತದೆ. ಹೊಸೂರು ರಸ್ತೆಯಲ್ಲಿರುವ ಬೃಹತ್ ಕಾಂಪ್ಲೆಕ್ಸ್‌ನಲ್ಲೀಗ ಸಾಫ್ಟ್‌ವೇರ್ ಕಂಪನಿಯೊಂದು ಕಾರ್ಯನಿರ್ವಹಿಸುತ್ತಿದೆ. ಈ ಕಾಂಪ್ಲೆಕ್ಸ್‌ನ ಇಂದಿನ ಮೌಲ್ಯ ಮುನ್ನೂರು ಕೋಟಿ ದಾಟುತ್ತದೆ. ಸಾರಕ್ಕಿ ಇಂಡಸ್ಟ್ರಿಯಲ್ ಏರಿಯಾದ ನಂ. 47 ರಲ್ಲಿ 120x150 ಅಳತೆಯ ಜಾಗದಲ್ಲಿರುವ ಶಾಪಿಂಗ್ ಕಾಂಪ್ಲೆಕ್ಸ್, ಜೆಪಿ ನಗರ 6ನೇ ಹಂತದಲ್ಲಿರುವ ವಾಣಿಜ್ಯ ಸಂಕಿರಣದಲ್ಲಿ 18 ಅಂಗಡಿಗಳು ಕಾರ್ಯನಿರ್ವಹಿಸುತ್ತಿವೆ. ಇನ್ನು ಗಾರ್ವೆಬಾವಿಪಾಳ್ಯದ ಸೈಟ್ ನಂ. 46/4 ರಲ್ಲಿ ಮೂರು ಎಕರೆ ಏಳು ಗುಂಟೆ ಜಮೀನಿದೆ.

ಇವಿಷ್ಟು ಸದ್ಯ ಜಿಎನ್ನಾರ್ ಬಾಬುವಿನ ಮಾಲೀಕತ್ವದಲ್ಲಿರುವ ಆಸ್ತಿಗಳ ವಿವರ. ಗಮನೀಯ ಸಂಗತಿಯೆಂದರೆ ಇಷ್ಟೆಲ್ಲಾ ಆಸ್ತಿಯೂ ಎನ್.ಆರ್. ಬಾಬು ಎಂಬ ಹೆಸರಲ್ಲಿದೆ. ಇದಲ್ಲದೆ ಬಿಟಿಎಂ ಲೇಔಟ್‌ನ ಎನ್‌ಎಸ್ ಪಾಳ್ಯ 5 ನೇ ಹಂತದಲ್ಲಿರುವ ಅಖಂಡ ಒಂದೂವರೆ ಎಕರೆ ಜಾಗದಲ್ಲಿ ಬೃಹತ್ ಬಂಗಲೆಯೊಂದಿದೆ. ಅದು ಕೂಡಾ ಬಾಬುವಿನ ಹೆಸರಲ್ಲಿದೆಯಾದರೂ ಆತನ ಅಣ್ಣ ವಾಸವಾಗಿದ್ದಾನೆ. ಸದ್ಯ ದೊರಕಿರುವ ಇವಿಷ್ಟು ಆಸ್ತಿಗಳ ಒಟ್ಟು ಮೌಲ್ಯವೇ ಸಾವಿರ ಕೋಟಿಗಳ ಹತ್ತಿರ ಸುಳಿಯುತ್ತದೆ.

ಇಂಥಾ ಬಾಬು ತನ್ನ ಆಸ್ತಿ ಕೇವಲ 8 ಕೋಟಿ ಮೊತ್ತದ್ದೆಂದು ಆಸ್ತಿ ಪತ್ರ ಸಲ್ಲಿಸುತ್ತಾನೆ. ಅದನ್ನು ಚುನಾವಣಾ ಆಯೋಗವೇ ಕಣ್ಮುಚ್ಚಿ ಒಪ್ಪಿಕೊಳ್ಳುತ್ತದೆ. ಅಂದಿನ ಮೇಯರ್ ಎಸ್.ಕೆ. ನಟರಾಜ್ ಕೂಡಾ ಅದ್ಯಾವುದೋ ಮುಲಾಜಿಗೆ ಬಿದ್ದವರಂತೆ ಬಾಬುವಿನ ವಂಚನೆಯನ್ನು ಸಹಿಸಿಕೊಳ್ಳುತ್ತಾರೆ. ದುರಂತವೆಂದರೆ, ಚುನಾವಣಾ ಆಯೋಗಕ್ಕೆ ಎಲ್ಲಾ ದಾಖಲೆಗಳು ತಲುಪಿದ್ದರೂ ಬಾಬು ಇಂದಿಗೂ ಕಾರ್ಪೊರೇಟನಾಗಿ ಮುಂದುವರೆಯುತ್ತಿದ್ದಾನೆ. ಇಂಥಾ ವ್ಯವಸ್ಥೆಯಲ್ಲಿ ಕಳ್ಳಕಾರರು ವಿಜೃಂಭಿಸದೆ ಮತ್ತಿನ್ನೇನಾದೀತು?

ಈ ಬಗ್ಗೆ ಒಂದೇ ಒಂದು ತನಿಖೆ ನಡೆದರೂ ಬಾಬುವಿನ ಅಕ್ರಮ ಸಾಮ್ರಾಜ್ಯ ಪೂರ್ತಿಯಾಗಿ ಬೆತ್ತಲಾಗುತ್ತದೆ. ಗಮನಿಸಲೇಬೇಕಾದ ಸಂಗತಿಯೆಂದರೆ, ಬಾಬು ಎಂಟು ಕೋಟಿ ಆಸ್ತಿಯನ್ನು ತೋರಿಸಿ ಕೇವಲ ಅದರ ಆಸ್ತಿತೆರಿಗೆ ಮತ್ತಿತರ ದಾಖಲೆಗಳನ್ನು ಸಲ್ಲಿಸಿದ್ದಾನೆ. ಇದರರ್ಥ ಇನ್ನುಳಿದ ನೂರಾರು ಕೋಟಿ ಮೌಲ್ಯದ ಆಸ್ತಿಪಾಸ್ತಿಗೆ ತೆರಿಗೆಯ[...] ಕಟ್ಟದೆ ಯಾಮಾರಿಸುತ್ತಿದ್ದಾನೆ. ಚುನಾವಣೆಗೆ ಮುನ್ನ ಹೆ[...] ಬದಲಿಸಿಕೊಂಡ ಎನ್.ಎಸ್. ಬಾಬು ಜಿಎನ್ನಾರ್ ಬ[...] ಅಂತ ಗೆಟಪ್ಪು ಬದಲಿಸಿದನಲ್ಲಾ? ಆ ನಂತರವೂ [...] ಪ್ರಮುಖ ಅರ್ಜಿಗಳಲ್ಲಿ ಎರಡೆರಡು ರೀತಿಯ [...] ಗೀಚಿದ್ದಾನೆ. ಆಸ್ತಿ ಪತ್ರದಲ್ಲೂ ಇಂಥಾ ತೊಡಕುಗಳಿವೆ.



ಇದಲ್ಲದೆ ಅನೇಕಾನೇಕ ಕಲ್ಯಾಣಮಂಟಪಗಳೂ ಬ[...] ಹೆಸರಲ್ಲಿವೆ. ರಿಯಲ್ ಎಸ್ಟೇಟ್ ದಂಧೆಯೊಂದರಿಂ[...] ಪಿತ್ರಾರ್ಜಿತ ಆಸ್ತಿಗೆ ಬೇನಾಮಿ ಆಸ್ತಿಗಳೂ ಜಮೆಯಾ[...] ಇನ್ನೊಂದು ಮೂಲದ ಪ್ರಕಾರ ಜಿಎನ್ನಾರ್ ಬಾಬು ಬ[...] ರೆಡ್ಡಿ ಎಂಬ ಹೆಸರಲ್ಲೂ ಆಸ್ತಿ ಹೊಂದಿರುವ ಗುಮಾನಿಗ[...] ಇದಲ್ಲದೆ ಈತನ ಹೆಂಡತಿ ಅನಿತಾರ ಹೆಸರಲ್ಲೂ ಕೆ[...] ಮೊತ್ತದ ಆಸ್ತಿಗಳಿವೆ.

ಈ ಅಕ್ರಮಗಳ ಬಗ್ಗೆ ಏನೇ ದೂರುಗಳು ಹೋ[...] ಹಣ ಬಲವೊಂದರಿಂದಲೇ ಬಾಬು ಎಲ್ಲವ[...] ದಕ್ಕಿಸಿಕೊಳ್ಳುತ್ತಾ ಮುಂದುವರೆಯುತ್ತಿದ್ದಾನೆ. ಸದ್ಯ ಈ[...] ಸ್ಥಳೀಯರೊಬ್ಬರು ನೀಡಿರುವ ದೂರಿದನ್ವಯ ಮು[...] ತಿಂಗಳು ಚುನಾವಣಾ ಆಯೋಗದಿಂದ ವಿಚಾ[...] ನಡೆಯುವುದರಲ್ಲಿದೆ. ಅದು ನಿಷ್ಠುರವಾಗಿ ನಡೆದರೆ ಖ[...] ಖದೀಮ ಬಾಬುವಿನ ವಂಚನೆಗಳೆಲ್ಲ ಬಯ[...] ಕಾರ್ಪೊರೇಟರ್‌ಗಿರಿಗೆ ಕುತ್ತು ಬರುತ್ತದೆ. ಒಂದಷ್ಟು [...] ಮುದ್ದೆ ಮುರಿಯುವ ಯೋಗ ಕೂಡಿಬಂದರೂ ಆಶ್ಚ[...] ವಿಲ್ಲ.

ಬೇನಾಮಿ ಬಾಬುಗೆ ಅಂತಹುದೊಂದು ಶಿಕ್ಷೆಯ[...] ಅದು ಬಿಬಿಎಂಪಿಯಲ್ಲಿ ಹಾಲಿ ಇರುವ, ಹೊಸ[...] ತೂರಿಕೊಳ್ಳಲು ಹವಣಿಸುತ್ತಿರುವ ಇತರೇ ಖದೀಮ[...] ದೊಡ್ಡ ಪಾಠವಾಗುತ್ತದೆ.

ಬೋಗಸ್ ಬಾಬುವಿನ ಖಯಾಲಿಗಳು

ವಂಚನೆಯ ಸರಮಾಲೆಗಳ ಮೂಲಕವೇ ಬಿಬಿಎಂಪಿಗೆ ತೂರಿಕೊಂಡಿರುವ ಬಾಬು ಕಾರ್ಪೊರೇಟರ್ ಆಗಿ ಜನಸ್ನೇಹಿ ಕೆಲಸಗಳನ್ನಾದರೂ ಮಾಡುತ್ತಿದ್ದಾನಾ ಅಂತ ನೋಡಹೋದರೆ ಅಲ್ಲೂ ಕೂಡಾ ಭಾನಗಡಿಗಳೇ ಬಿಚ್ಚಿಕೊಳ್ಳಲಾರಂಭಿಸುತ್ತವೆ.

ಬಾಬು ಇದುವರೆಗೂ ಜನರಿಗೆ ಉಪಯೋಗವಾಗುವಂಥ ನಯಾಪೈಸೆಯ ಕೆಲಸವನ್ನೂ ಮಾಡಿಲ್ಲ. ಬಿಬಿಎಂಪಿ ಕಚೇರಿಗೆ ಅಡಿಯಿರಿಸಿದ ಉದಾಹರಣೆಗಳೂ ಸಿಗುವುದಿಲ್ಲ. ಬಿಟಿಎಂ ಲೇಔಟ್‌ನಲ್ಲಿರುವ ಖಾಸಗಿ ಕಚೇರಿಯಲ್ಲೇ ಎಲ್ಲಾ ಕೆಲಸಗಳನ್ನೂ ಮಾಡಿ ಮುಗಿಸುವ ಬಾಬುಗೆ ಇಲ್ಲಿನ ಸಾರ್ವಜನಿಕ ಪಾರ್ಕ್ ಕಾಯಂ ವಿಶ್ರಾಂತಿ ಸ್ಥಳ. ಪಾರ್ಕ್‌ಗೆ ಬಂದುಹೋಗುವ ನಾಗರಿಕರನ್ನು ಮಾತಾಡಿಸಿ ಕುಂದುಕೊರತೆ ಪರಿಹರಿಸುತ್ತಾನೇನೋ, ಒಳ್ಳೆಮನುಷ್ಯ ಅಂದುಕೊಂಡರದು ಪರಮ ಮೂರ್ಖತನ. ಯಾಕೆಂದರೆ ಪಾರ್ಕ್ ವಾಸ್ತವ್ಯದ ಹಿಂದಿನ ಅಸಲಿಯತ್ತೇ ಬೇರೆಯದಿದೆ!


ವೆಂಕಟೇಶ್ ಪ್ರಸಾದ್, ಕೋತಿ ಪ್ರವೀಣ ಹಾಗೂ ಟೆಂಪೋ ನಾಗನೆಂಬ ನಟೋರಿಯಸ್‌ಗಳು ಬಾಬುವಿನ ಬಲಗೈ ಭಂಟರು. ಬಡಪಾಯಿಗಳೇನಾದರೂ ಕಾರ್ಪೊರೇಟರ್ ಬಾಬುವನ್ನು ಭೇಟಿಯಾಗಬೇಕೆಂದರೆ ಈ ಮೂವರು ಕಮಂಗಿಗಳ ಬಳಿ ಕಡ್ಡಾಯವಾಗಿ ಅಪಾಯಿಂಟ್‌ಮೆಂಟ್ ತೆಗೆದುಕೊಳ್ಳಲೇಬೇಕು. ಈ ಮೂವರನ್ನು ಜೊತೆಗಿಟ್ಟುಕೊಂಡೇ ಪಾರ್ಕ್‌ನಲ್ಲಿ ಠಳಾಯಿಸುವ ಬಾಬು ಅಲ್ಲಿ ಅಡ್ಡಾಡುವ ಹುಡುಗೀರನ್ನು ಚುಡಾಯಿಸುವಂಥ ದುಷ್ಟ ಕೆಲಸವನ್ನು ಎಗ್ಗಿಲ್ಲದೆ ನಡೆಸುತ್ತಿದ್ದಾನೆ. ಕಾರ್ಪೊರೇಟರ್ ಒಬ್ಬ ಇಂಥಾ ಹೀನಕೆಲಸಕ್ಕೆ ಕೈ ಹಾಕಬಹುದೇ ಅಂತೊಂದು ಗುಮಾನಿ ಹುಟ್ಟುವುದು ಸಹಜ. ಆದರೆ ಬಾಬುನ ಖಯಾಲಿಗಳ ಅರಿವಿರುವವರ್‍ಯಾರೂ ಇದನ್ನು ತಳ್ಳಿ ಹಾಕುವುದಿಲ್ಲ.

ಇನ್ನುಳಿದಂತೆ ವಾರದ ನಾಲ್ಕೈದು ದಿನವೂ ಬಾಬು ಇಂದ್ರಾನಗರ ಕ್ಲಬ್‌ನಲ್ಲಿ ಉಳ್ದಾಡುತ್ತಾನೆ. ಆತನ ಭಂಟರಾದ ಟೆಂಪೋ ನಾಗ, ಕೋತಿ ಪ್ರವೀಣ ಹಾಗೂ ವೆಂಕಟೇಶ್ ಪ್ರಸಾದ್ ಖುದ್ದಾಗಿ ಎಲ್ಲಾ 'ವ್ಯವಸ್ಥೆ'ಗಳನ್ನು ಮಾಡಿ ಮುಗಿಸುತ್ತಾರೆ.

ಇಂಥಾ ಹೀನ ಸುಳಿಯ ಬಾಬುವಿನ ಖಾತೆಯಲ್ಲಿ ಅಕ್ರಮ, ಅಡ್ಡಾಡಿತನಗಳ ಬಾಬತ್ತು ವಿಪರೀತವಿದೆ. ಆತನನ್ನು ಆರಿಸಿಕಳಿಸಿದ ಮಂದಿಯೇ ಈಗ ಕಿಡಿ ಕಾರುತ್ತಿದ್ದಾರೆ. ಇಂಥವನಿಗೆ ಜನಪ್ರತಿನಿಧಿಯಾಗುವ ಕನಿಷ್ಠ ಯೋಗ್ಯತೆಯಾದರೂ ಇದೆಯೇ?

ಭೂ ಲೂಟಿಗಾಗಿ ರೈತನನ್ನೇ ಅಪಹರಿಸಿದ ಶಿವಕುಮಾರ ಉದಾಸಿ


ಅಪ್ಪ ಊರು ಹಾಳು ಮಾಡಿದರೆ ಮಗ ದೇಶವನ್ನೇ ಹಾಳು ಮಾಡಲು ಹೊರಟಿದ್ದಾನೆ. ಮುದಿ ಮಂತ್ರಿ ಚನ್ನಬಸಪ್ಪ ಉದಾಸಿಯ ಉರವಣಿಗೆಯಿಂದ ಕಂಗೆಟ್ಟುಹೋಗಿದ್ದ ಹಾವೇರಿ ಜಿಲ್ಲೆ ಇಂದು ಆತನ ಮಗ ಸಂಸದ ಶಿವಕುಮಾರ ಉದಾಸಿಯ ಭೂದಾಹದಿಂದಾಗಿ ಪ್ರಾಣಬಿಡುವಂಥಾ ಸ್ಥಿತಿ ತಲುಪಿದೆ. ಕಳೆದ ಮೂವತ್ತು ವರ್ಷದ ರಾಜಕಾರಣದಲ್ಲಿ ಕೇವಲ ಹಣ ಲೂಟಿಯೊಂದನ್ನೆ ಧ್ಯೇಯವಾಗಿಸಿಕೊಂಡವನು ಉದಾಸಿ. ಇಂಥವನ ಮಗ ಶಿವಕುಮಾರ ಹಾವೇರಿ ಜಿಲ್ಲೆಯ ಬಡ ರೈತರ ಭೂಕಬಳಿಸಲು ಶುರು ಹಚ್ಚಿದ್ದಾನೆ. ಆ ನಿಟ್ಟನಲ್ಲಿ ಜೂನಿಯರ್ ಉದಾಸಿ ಏನನ್ನಾದರೂ ಮಾಡಲು ಹೇಸಲಾರ ಎಂಬುದಕ್ಕೆ ಹಾನಗಲ್ ತಾಲೂಕಿನ ಬೆಳಗಾಲಪೇಟೆಯ ವಯೋವೃದ್ಧ ರೈತ ಬಸವಣ್ಣೆಪ್ಪ ಕಮಡೊಳ್ಳಿಯ ಘೋರ ಕಥೆಯೇ ಸಾಕ್ಷಿ.



ಪ್ರಮುಖ ರಸ್ತೆಗೆ ಹೊಂದಿಕೊಂಡಂತಿರುವ ಯಾವುದೇ ಜಮೀನಿಗೆ ಬಡಪಾಯಿ ರೈತ ಮಾಲೀಕನಾಗಿದ್ದರೆ ಅವನ ಕಥೆ ಮುಗೀತು ಅಂತಾನೇ ಅರ್ಥ. ಯಾಕೆಂದರೆ ಬೇನಾಮಿ ಹೆಸರಲ್ಲಿ ಅದನ್ನು ಖರೀದಿಸಲು ಸಂಸದ ಶಿವಕುಮಾರ ತನ್ನ ಚೇಲಾ ಶಿಷ್ಯರನ್ನು ನೇಮಿಸುತ್ತಾನೆ. ಜಮೀನು ಅಥವಾ ಪ್ಲಾಟುಗಳನ್ನು ಮಾರುವ ಮನಸ್ಸು ಮಾಲೀಕನಿಗಿಲ್ಲದಿದ್ದರೂ ಅದನ್ನು ಮಾರುವಂತೆ ಅವನನ್ನು ತಯಾರು ಮಾಡುವುದನ್ನು ಈ ದುಷ್ಟ ಪಡೆ ಕರಗತ ಮಾಡಿಕೊಂಡಿದೆ. ಇವರ ಕಾಟ ತಾಳಲಾರದೆ ಭೂಮಿ ಹೋದರೂ ಪರವಾಗಿಲ್ಲ ಬದುಕಿದರೆ ಸಾಕು ಎಂದು ತಮ್ಮ ಜಮೀನು ಮಾರಿ ಕೈ ತೊಳೆದುಕೊಂಡವರ ಸಂಖ್ಯೆ ದೊಡ್ಡದಿದೆ.

ಭೂಮಿ ನುಂಗುವ ಸ್ಕೆಚ್

ಕಳೆದ ಎರಡು ತಿಂಗಳಿಂದ ಜೂನಿಯರ್ ಉದಾಸಿ ಬೆಳಗಾಲಪೇಟೆಯ ಬಸವಣ್ಣೆಪ್ಪ ಗುರುಪಾದಪ್ಪ ಕಮಡೊಳ್ಳಿಯ ಜಮೀನು ಹೊಡೆಯಲು ವಿಪರೀತ ಕಾಟ ಕೊಟ್ಟ. ಇದ್ಯಾವುದಕ್ಕೂ ಬಗ್ಗದೆ ಪಟ್ಟು ಹಿಡಿದ ಬಸವಣ್ಣೆಪ್ಪನವರಿಗೆ ಉದಾಸಿ ಕೊಡದ ಕಷ್ಟಗಳೇ ಉಳಿದಿಲ್ಲ. ಆ ರೀತಿ ಟಾರ್ಚರ್ ಕೊಟ್ಟು ಅವರಿಗೆ ಸೇರಿದ 31 ಎಕರೆ ಜಮೀನನ್ನು ಕಬಳಿಸಲು ಯತ್ನಿಸಿದ ಉದಾಸಿ ಸನ್ 81 ವರ್ಷದ ಬಸವಣ್ಣೆಪ್ಪನನ್ನು ಬರೋಬ್ಬರಿ 10 ದಿನ ಅಪಹರಿಸಿ ಅಜ್ಞಾತಸ್ಥಳವೊಂದರಲ್ಲಿ ಕೂಡಿಟ್ಟಿದ್ದನಂತೆ. ಆದರೂ ರೈತ ಜಗ್ಗದಿದ್ದಾಗ ಪಕ್ಕಾ ಬಿಹಾರಿ ಸ್ಟೈಲ್‌ನಲ್ಲಿ ಫೀಲ್ಡಿಗಿಳಿದ ಉದಾಸಿ ಪಕ್ಕದ ಧರ್ಮಾ ನದಿಯ ಕೆನಾಲ್‌ನಲ್ಲಿ ಆತನನ್ನು ನೂಕಿ ಸಾಯಿಸುವ ಬೆದರಿಕೆ ಹಾಕಿದ್ದರಂತೆ. ಅಂದರೆ, ಉದಾಸಿಗೆ ಅದ್ಯಾವ ಮಟ್ಟದ ಭೂದಾಹವಿರಬೇಕು ಊಹಿಸಿ!




ಯಾರು ಈ ಬಸವಣ್ಣೆಪ್ಪ

ಬಂಕಾಪುರ ಹಾನಗಲ್ ಮಧ್ಯದ ಹೆಚ್ಚಾಗಿ ಕೃಷಿಕರೇ ಇರುವ [...] ಗ್ರಾಮವಾದ ಬೆಳಗಾಲಪೇಟೆಯ ಮಧ್ಯಮ ವ[...] ಕಮಡೊಳ್ಳಿ ಕುಟುಂಬದ ಮುಖ್ಯಸ್ಥ ಬಸವ[...] ಕಮಡೊಳ್ಳಿ. ಈತನಿಗೆ ಪಿತ್ರಾರ್ಜಿತವಾಗಿ ಹೇಳಿಕೆ[...] ವಷ್ಟು ಜಮೀನು ಬಂದಿರಲಿಲ್ಲ. ತನ್ನ [...] ದುಡಿಮೆಯಿಂದಲೇ ಜಮೀನು ಖರೀದಿಸುತ್ತಾ ಹೆ[...] ಇಂದು ಸುಮಾರು 30-35 ಎಕರೆ ಜಮಿ[...] ಮಾಲೀಕನಾಗಿದ್ದಾನೆ. 1963ರಲ್ಲೇ ತಂದೆ ಗುರುಪಾ[...] ಸಾವಿನ ನಂತರ ಸೋದರರಾದ ದೊಡ್ಡಪ್ಪ ಶಿವರಾ[...] ರುದ್ರಪ್ಪ, ಉಳವಪ್ಪ, ಸೋದರಿ ಚೆಂಗಳಮ್ಮ[...] ಹಿರಿಯನಾಗಿ ನೋಡಿಕೊಂಡಿದ್ದಾನೆ. ಇದ[...] ಶಿವರಾಮಪ್ಪ ಚನ್ನಪ್ಪ ಕಮಡೊಳ್ಳಿ ಎಂಬುವರಿಗೆ ಮ[...] ದತ್ತಕ್ಕೆ ಹೋಗಿದ್ದಾನೆ.

ಬಸವಣ್ಣೆಪ್ಪನ ಮಗ ಟಾಕಪ್ಪ ಏದ[...] ಗುತ್ತಿಗೆದಾರನಾಗಿ ಹಾನಗಲ್ ತಾಲೂಕಿನಲ್ಲಿ ಒಳ್ಳೆಯ ಹೆಸರಿಟ್ಟುಕೊಂಡಂತಹ[...] ತಂದೆಯ ಕೃಷಿ ಕೆಲಸಕ್ಕೆ ಸಾಕಷ್ಟು ಹಣವನ್ನು ತನ್ನ ದುಡಿಮೆಯಿಂದ ಈತ [...]

ಕಂಬಾರರ ಹಾಡು ದಳವಾಯಿಯ ಕುಣಿತ!



ಇತ್ತ ಕಂಬಾರರ ಹಾಡು ಮುಂದುವರಿದಿತ್ತು. ಹೊರಗಿನ ಹಾಲಿನಲ್ಲಿ ಕಂಬಾರರ ಪರಮಶಿಷ್ಯ ಬಿಜಾಪುರದ ದಳವಾಯಿ ಡ್ಯಾನ್ಸ್ ಮಾಡುತ್ತಿದ್ದ. ಈ ದಳವಾಯಿಯನ್ನು ನೀವೊಮ್ಮೆ ನೋಡಿದರೆ ಸಾಕು, ಎಂದೂ ಮರೆಯುತ್ತಿರಲಿಲ್ಲ. ಏಕೆಂದರೆ ಈತನ ದನಿ ಮಂದ್ರರದಲ್ಲಿನ ಕೋಗಿಲೆ ದನಿಯಂತಿತ್ತು. ನಾಯಿ ಹೊಡೆಯುವ ಕೋಲಿನಂತಿದ್ದ ಈತನ ಹೆಸರು ದಳವಾಯಿ.

ಚಂದ್ರಶೇಖರ ಕಂಬಾರರಿಗೆ ಜ್ಞಾನಪೀಠ ಪ್ರಶಸ್ತಿ ಬಂದಿ...ರುವ ಈ ಸಮಯದಲ್ಲಿ ಇಡೀ ನಾಡಿನ ಜನಪದೀಯರು ...ರ್ಷಗೊಂಡಿದ್ದಾರೆ. ಭೈರಪ್ಪನವರಿಗೆ ಬರುತ್ತದೆಂದು ...ದಿದ್ದವರು ಬಾಯಿಬಿಡದಂತಾಗಿದ್ದಾರೆ. ಈ ಪೈಕಿ ದಡ್ಡರಾದ ...ಟೀಲ ಪುಟ್ಟಪ್ಪ ಬಾಯಿಬಿಟ್ಟು ತನ್ನ ಛದ್ಮವೇಶವನ್ನು ಕಳಚಿ ...ಕೊಂಡಿದ್ದಾರೆ. ಕನ್ನಡನಾಡಿನ ವಿಸ್ತಾರ ಮತ್ತು ನಮ್ಮ ಭಾಷೆಯ ...ಸ್ಥಿತಿಯ ಬಗ್ಗೆ ಪುಟ್ಟಪ್ಪ ಗಂಟೆಗಟ್ಟಲೆ ಮಾತನಾಡುವುದನ್ನು ...ಲಿ ಅವರ ಬಗ್ಗೆ ಬಹಳ ಗೌರವ ಬೆಳೆಸಿಕೊಂಡಿದ್ದೆ. ಆದರೆ ...ಬ್ಬರನ್ನು ಹೊಗಳಲೋಸ್ಕರ ಇನ್ನೊಬ್ಬರನ್ನು ಟೀಕಿಸುವ ...ಳಿಯನ್ನು ಅವರು ಕಡೆಗಾಲದಲ್ಲಾದರೂ ಬಿಟ್ಟಿಲ್ಲವಲ್ಲ ...ದು ಬೇಸರವಾಯ್ತು. ಸಮಗ್ರ ಕರ್ನಾಟಕ ಮತ್ತು ಕನ್ನಡಿಗರ ...ಗ್ಗೆ ಇವರು ಬರೀ ಭಾಷಣ ಮಾಡುತ್ತಾರೆಂದು ಗೊತ್ತಿರಲಿಲ್ಲ.

ಇನ್ನು ಕೆಲವರು ಜ್ಞಾನಪೀಠ ಪ್ರಶಸ್ತಿಯ ಎತ್ತರಕ್ಕೆ ಕಂಬಾರರ ...ಕ್ತಿತ್ವವಿಲ್ಲ ಎಂದು ಕುಹಕವಾಡುತ್ತಿದ್ದಾರೆ. ಹಾಗಾದರೆ ...ಶಸ್ತಿಯವರಿಗಿತ್ತೆ? ಅಹಂಕಾರಿಗಳಾದರೆ ನಾಶವಾಗುತ್ತೀರಿ ...ದು ಬ್ರಾಹ್ಮಣರಿಗೆ ಕರೆ ಕೊಡುತ್ತಿದ್ದ ಮಾಸ್ತಿಯವರ ಮಾತು ...ಹ್ಮಣರು ಒಗ್ಗಟ್ಟಾಗಬೇಕೆಂದು ನಾಟಕದ ಸ್ಟೇಜಿನ ಮೇಲೆ ... ಕೊಡುತ್ತಿದ್ದ ಮಾಸ್ಟರ್ ಹಿರಣ್ಣಯ್ಯನ ಮಾತಿನಂತೆ ...ದ್ದಿದೆ. ಅಷ್ಟಕ್ಕೂ ಮನುಷ್ಯ ಮಾತ್ರದವರಾಗಿ ನಡೆದು ...ಂದು ಹೋಗಿರುವ ಜ್ಞಾನಪೀಠಿಗಳ ವ್ಯಕ್ತಿತ್ವ ತೆಗೆದುಕೊಂಡು ...ಡುವುದೇನಿದೆ? ಕಂಬಾರರ ವ್ಯಕ್ತಿತ್ವದ ಬಗ್ಗೆ ಮಾತನಾಡುವ ... ಮೂರ್ಖರ ಬಳಿಯಿರುವ ಸಾಮಗ್ರಿಗೂ ಕಂಬಾರರ ...ತ್ವಕ್ಕೂ ಯಾವ ಸಂಬಂಧವೂ ಇಲ್ಲ. ಇದು ಕನ್ನಡದ ...ನ್ನ ಪ್ರತಿಭೆಗೆ ಸಿಕ್ಕಿರುವ ಜ್ಞಾನಪೀಠ. ಇಡೀ ನಾಡು ಜಾನಪದ ...ಶದೊಂದಿಗೆ ಮೆರೆಯುವ ಸಂದರ್ಭ. ನಮ್ಮ ಭಾಷೆಯ ...ತ್ವವನ್ನು ಮತ್ತೊಮ್ಮೆ ಸಾರಿಕೊಂಡು ತಿರುಗುವ ಸಮಯ. ...ಗೆಯೇ ಅನ್ಯ ಭಾಷೆಗಳೊಡನೆ ಕನ್ನಡದಲ್ಲಿ ಮಾತನಾಡುತ್ತ ...ಡ ಕಲಿಸುವ ಸಂಕಲ್ಪ ತೆಗೆದುಕೊಳ್ಳುವ ಸಂಭ್ರಮದ ...ವೊಂದು ನಮಗೆದುರಾಗಿದೆ. ಇಂತಲ್ಲಿ ಪಾಪು ತರದ ...ಯಾಪರರನ್ನು ಕ್ಷಮಿಸುವುದು ಒಳ್ಳೆಯದು.

ಎಪ್ಪತ್ತರ ದಶಕದಲ್ಲಿ ಹವ್ಯಾಸಿ ನಾಟಕ ತಂಡಗಳು ...ಶೋಕುಮಾರಸ್ವಾಮಿ' 'ಸಂಗ್ಯಾಬಾಳ್ಯ' 'ಸಾಯಿಕತೆ' ...ಟಕಗಳನ್ನು ಈ ನಾಡಿನ ತುಂಬಾ ಆಡುತ್ತಿದ್ದರು. ಆಗ ...ತ್ರಾವತಿಯ ವಿ.ಐ.ಎಸ್.ಎಲ್ ತಂಡ ಎಂ.ಪಿ.ಎಂ ...ಡಗಳು ಪೈಪೋಟಿಯಿಂದ ಕಂಬಾರರ ನಾಟಕ ...ಡುತ್ತಿದ್ದರು. ಅವರೆಷ್ಟು ಅದ್ಭುತವಾಗಿ ಆಡುತ್ತಿದ್ದರೆಂದರೆ, ...ರ್ನಾಟಕದಲ್ಲಿ ನಡೆಯುವ ನಾಟಕದ ಸ್ಪರ್ಧೆಗಳಿಗೆಲ್ಲಾ ಈ ...ಡಗಳು ಹೋಗಿಬರುತ್ತಿದ್ದವು. ಮತ್ತು ಪ್ರಶಸ್ತಿಗಳನ್ನು ...ಯುತ್ತಿದ್ದವು. ಉಡುಪಿ ರಂಗಭೂಮಿಯವರು ಆಡುತ್ತಿದ್ದ ...ಯಿಕತೆ' ನಾಟಕ ಅತ್ಯಂತ ವೈಭವವಾಗಿತ್ತು. ಆಗ ...ಳ್ಗೋಡಿನಲ್ಲಿ ಆಡುತ್ತಿದ್ದ ಹುಚ್ಚಪ್ಪ ಮಾಸ್ತರು ಕಂಬಾರರ ...ತ್ತವನ್ನು ಅದ್ಭುತವಾಗಿ ಹಾಡುತಿದ್ದರು. ಅವರಿಗೆ ಜಾನಪದದ ...ಟಲು ಇರುವುದರಿಂದ ಎಷ್ಟು ಕೇಳಿದರೂ ಮತ್ತೆ ಮತ್ತೆ ...ಬೇಕೆನಿಸುತಿತ್ತು. ಅವರು 'ಹ್ಯಾಂಗಾರ ಬಾರೋ ಹುಡುಗ ...ಲಾಗೇವಲ್ಲೋ' ಎಂದಕೂಡಲೇ ಎದ್ದು ಓಡು ...ಬೇಕಾಗುತ್ತಿತ್ತು. "ನಾ ಕುಣಿಬೇಕ ಮೈ ಮಣಿಬೇಕ" ಎಂಬ ...ಕ್ಕೆ ತರುಣರ ಮೈಯಲ್ಲಿ ಕಾವೇರಿಸುತಿತ್ತು. ಹೀಗೆ ...ಮನಸ್ಸನ್ನೆಲ್ಲಾ ಹೊಕ್ಕು ಓದುಗರ ಮನಸೂರೆಗೊಂಡ ಕವಿ ...ಗಳಲ್ಲಿ ಕಂಬಾರ ಒಬ್ಬರೆ.

...ಕಂಬಾರರನ್ನ ಪತ್ರಿಕೆ ಆಫೀಸಿನಲ್ಲಿ ನಾನು ನೋಡಿದ್ದು ...ಕೇ ಬಾರಿ. ಒಮ್ಮೆ ಲಂಕೇಶರಿಂದ ತೆಗೆದುಕೊಂಡಿದ್ದ ಹಣ ...ಸಲು ಬಂದಿದ್ದರು. ಆಗ ಒಂದು ಅದ್ಭುತವಾದ ಜಾನಪದ ...ಯನ್ನು ಲಂಕೇಶರಿಗೆ ಹೇಳಿದ್ದರು. ಲಂಕೇಶ್ ಬಹಳ ...ತ್ಸಾಹದಿಂದ ಕೇಳುತ್ತ ಕುಳಿತಿದ್ದರು. ನಂತರ ಕಂಬಾರರು ...ಗೊಳ್ಳಿ ಸಾರ್" ಎಂದು ಪಡೆದಿದ್ದ ಸಾಲ ಮರಳಿ ಕೊಟ್ಟು ...ಟೀದರು. ಅದನ್ನು ವಾಪಸ್ಸು ತೆಗೆದುಕೊಳ್ಳುವ ಸ್ಥಿತಿಯಲ್ಲಿ ಲಂಕೇಶ್ ಇರಲಿಲ್ಲ. ಆದರೂ ತೆಗೆದುಕೊಂಡಿದ್ದು ನನಗೆ ಆಶ್ಚರ್ಯವಾಗಿ ಪಕ್ಕದಲ್ಲಿ ಕುಳಿತಿದ್ದ ಲಂಕೇಶ್ ಗೆಳತಿಗೆ ಹೇಳಿದೆ. ಆಕೆ "ಹಾಗೆಲ್ಲ ಕೊಟ್ಟ ದುಡ್ಡು ಬಿಡಬಾರ್ದು. ಕಂಬಾರರಿಗೆ ಏನು ಕಡಿಮೆಯಾಗಿದೆ?" ಎಂದಳು. ಲಂಕೇಶರ ಮುಂದಿದ್ದ ಹಣದ ಕಡೆ ಆಕೆಯ ದೃಷ್ಟಿಯಿತ್ತು. ಇಂತಹ ದೃಷ್ಟಿಯನ್ನು ಗ್ರಹಿಸುತ್ತಿದ್ದ ಲಂಕೇಶರು "ತಗೊ ಅತ್ತಗೆ" ಎಂದರು.

ಪತ್ರಿಕೆಯ ಹೊಸ ಆಫೀಸಿನಲ್ಲಿ ಲಂಕೇಶರ ಹುಟ್ಟು ಹಬ್ಬವಿತ್ತು. ಇದು ಮಾತ್ರ ಎಂದೂ ಮರೆಯಲಾಗದ ಪ್ರಸಂಗ. ಹೊಸ ಆಫೀಸಿಗೆ ಹೊಸ ಕಳೆಬಂದಂತೆ ಅಂದು ಲಂಕೇಶರ ಗೆಳೆಯರೆಲ್ಲಾ ಬಂದಿದ್ದರು. ಎರಡು ಅಂತಸ್ತಿನಲ್ಲೂ ತಮ ತಮಗೆ ಇಷ್ಟವಾದ ಗೆಳೆಯರೊಂದಿಗೆ ಎಲ್ಲರೂ ಸ್ವತಂತ್ರವಾಗಿ ಹರಟುತಿದ್ದರು. ಲಂಕೇಶರ ಎದುರು ಕಂಬಾರ, ಡಿ.ಆರ್. ನಾಗರಾಜ್, ರಾಮದಾಸ್, ಶೂದ್ರ, ಸೀತಾರಾಂ, ಇತ್ಯಾದಿ ಕೂಟವೇ ನೆರೆದಿತ್ತು, ಆಗ ಕಂಬಾರರು ಹಾಡೇಳು ತಿದ್ದರೆ ಡಿ.ಆರ್ ತಾಳ ಹಾಕುತಿದ್ದರು. ಅಲ್ಲಿಗೆ ಬಂದ ನಜೀರ್ ಎಂಬ ಪತ್ರಿಕೆ ವರದಿಗಾರ ಕಂಬಾರರನ್ನು ನೋಡಿ "ಈ ಕಂಬಾರ ಕಾಂಗ್ರೆ ಏಜೆಂಟ್. ಇಲ್ಲಿ ಏಕೆ ಬಂದಿದ್ದು?" ಎಂದುಬಿಟ್ಟ. ಕೂಡಲೇ ಕಂಬಾರರು "ಹೋಗಲೇ ಚೋದಿ ಮಗನ" ಎಂದರು. ಲಂಕೇಶರು ನಜೀರನಿಗೆ ಗದರಿ ಕಳಿಸಿದ್ದರಿಂದ ಆತ ಯಾರ ಜೊತೆಗೂ ಸೇರದಂತೆ ಒಂದು ಮೂಲೆಯಲ್ಲಿ, ತನ್ನ ಹಾರಗಳನ್ನು ಇಟ್ಟುಕೊಂಡು ಹಿಂದೀ ಹಾಡೇಳುತ್ತ ಒಬ್ಬನೇ ಸುಖಿಸುತಿದ್ದ.

ಇತ್ತ ಕಂಬಾರರ ಹಾಡು ಮುಂದುವರಿದಿತ್ತು. ಹೊರಗಿನ ಹಾಲಿನಲ್ಲಿ ಕಂಬಾರರ ಪರಮಶಿಷ್ಯ ಬಿಜಾಪುರದ ದಳವಾಯಿ ಡ್ಯಾನ್ಸ್ ಮಾಡುತಿದ್ದ. ಈ ದಳವಾಯಿಯನ್ನು ನೀವೊಮ್ಮೆ ನೋಡಿದರೆ ಸಾಕು, ಎಂದೂ ಮರೆಯುತ್ತಿರಲಿಲ್ಲ. ಏಕೆಂದರೆ ಈತನ ದನಿ ಮಂದ್ರರದಲ್ಲಿನ ಕೋಗಿಲೆ ದನಿಯಂತಿತ್ತು. ನಾಯಿ ಹೊಡೆಯುವ ಕೋಲಿನಂತಿದ್ದ ಈತನ ಹೆಸರು ದಳವಾಯಿ.

ಲಂಕೇಶರೊಮ್ಮೆ ಮನೆಯಿಂದ ಗಡಿಬಿಡಿಯಲ್ಲಿ "ದಳವಾಯಿ ಬಂದವುನೆ ಕಣಯ್ಯ" ಎಂದು ಹೊರಟರು. ಪತ್ರಿಕೆ ಆಫೀಸಿಗೆ ಬಂದರೆ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಹಮೀರನನ್ನು ನೋಡಿದಂತಾಯ್ತು.

ಪಕಾರೆಂದು ನಗಾಡಿದ ನಾನು "ಇವನನ್ನು ನೋಡಕ್ಕೆ ಅಂಗೆ ಓಡಿಬಂದ್ರಾ" ಎಂದೆ. "ಏ ಶಪರ್ಡ್ ಕಣಯ್ಯ ಅವುನು. ನಾನು ಅಂದ್ರೆ ಜೀವ" ಎಂದರು. ದಳವಾಯಿಯಂತವನಿಗೆ ಲಂಕೇಶ್ ತೋರುತ್ತಿದ್ದ ಪ್ರೀತಿ ನೋಡಿ ನಾನು ದಂಗು ಬಡಿದೆ.

ದಳವಾಯಿ ಕಂಬಾರರನ್ನು ಲಂಕೇಶರಷ್ಟೇ ಪ್ರೀತಿಸುತಿದ್ದ. ಕಾರಣ ಜನಪದ ಹಾಡು. ಇನ್ನು ಕಂಬಾರರೇ ಹಾಡುತಿದ್ದಾರೆಂದರೆ ಕೇಳಬೇಕೇ. ಜ್ಯೋತಿಲಕ್ಷ್ಮಿಯಂತೆ ಕುಣಿಯುತ್ತಾ ಕಿಟಕಿಯ ಮೇಲೆ ಬಿದ್ದ. ಕಿಟಕಿಯ ದೊಡ್ಡ ಗಾಜು ಕಿತ್ತುಕೊಂಡು ಎರಡನೇ ಮಹಡಿಯಿಂದ ಕೆಳಗೆ ಬಿತ್ತು, ಕೆಳಗಿನ ಮನೆಯ ಗೃಹಸ್ಥರು ಬಂದು ಕೂಗಿದರು. ಲಂಕೇಶರ ಛೇಂಬರಿನಿಂದಲೂ ಗದರಿಕೆಯ ದನಿ ಬಂತು. ಆ ಕೂಡಲೇ ದಳವಾಯಿ ಸುಚ್ಚಾ ಸಾದ ಶಿಳ್ಳೆ ಕ್ಯಾತನಂತಾಗಿ ಅಲ್ಲೇ ಟೇಬಲ್ ಮೇಲಿದ್ದ ಊಟಕ್ಕೆ ಕುಳಿತುಕೊಂಡ. ಆ ಊಟ ಈಗಾಗಲೇ ಬೇರೆಯವರಿಂದ ಉಣಿಸಿಕೊಂಡಿತ್ತು, ಕಲಸಿದ ಅನ್ನ, ಕಬಾಬ್, ಚೀಪಿಸಿಕೊಂಡಿದ್ದ ಮೂಳೆ ಮತ್ತು ನುಚ್ಚಾದ ಮೂಳೆಯಲ್ಲ ಆ ತಟ್ಟೆಯಲ್ಲಿದ್ದವು.

ಸ್ವಾಮಿ ಆನಂದ ಎಂಬ ಘಟೋದ್ಗಜ ಉಂಡು ಬಿಟ್ಟು ಎದ್ದುಹೋಗಿದ್ದ ಆ ತಟ್ಟೆಯ ಮುಂದೆ ಕುಳಿತ ದಳವಾಯಿ, ಸ್ವಾಮಿ ಆನಂದ ಅಗಿದು ಚೀಪಿದ್ದ ಮೂಳೆಯನ್ನು ಮತ್ತೆ ಬಾಯ್ಗಿಟ್ಟು, ಬಡಕಲು ನಾಯಿಯಂತೆ ಕಟರ್ ಕಟರ್ ಎಂದು ಸದ್ದು ಮಾಡಿದ. ಮೂಳೆ ಕಡಿಯಲು ದಳವಾಯಿ ಕಷ್ಟಪಡುವಂತಿರಲಿಲ್ಲ, ಏಕೆಂದರೆ ಸ್ವಾಮಿ ಆನಂದ ಆ ಕೆಲಸವನ್ನು ಸುಲಭಗೊಳಿಸಿದ್ದ.

ಕಂಬಾರರು ಹೊರಟರು. ದಳವಾಯಿ ಕೋಗಿಲೆ ದನಿಯಲ್ಲಿ "ನಮಸ್ಕಾರಿ ಸರ" ಎಂದು ನೋಣಗಿಕೊಂಡು ಊಟದಲ್ಲಿ ತನ್ಮಯಗೊಂಡ. ನಂತರ ಲಂಕೇಶರು ಎಲ್ಲರಿಗೂ ಗಲಾಟೆ ಮಾಡದಂತೆ ಎಚ್ಚರಿಕೆ ಹೇಳಿ ಹೊರಡುವ ಮುನ್ನ ನಜೀರನಿಗೂ "ಜಾಸ್ತಿ ಕುಡಿಬೇಡ" ಎಂದು ಹೇಳಿಹೋದರು.

ಆದರೆ ನಜೀರನಾಗಲೇ ಔಟಾಗಿದ್ದ. ಯಾರ ಮಾತನ್ನು ಕೇಳಿಸಿಕೊಳ್ಳುತ್ತಿರಲಿಲ್ಲ, ವಿನಾಕಾರಣ ಸತ್ಯಮೂರ್ತಿ ಆನಂದೂರ್ ಕಡೆ ತಿರುಗಿ ಟೀಕಿಸುತ್ತಿದ್ದ. ಆಗ ತೇಜಸ್ವಿಯವರ ಬಗ್ಗೆಯೂ ಏನೋ ಅಂದ. ಕೂಡಲೇ ನಾನು ಎತ್ತಿ ಮುಖದ ಮೇಲೆ ಹೊಡೆದೆ. ಚೇರಿನಿಂದ ಕೆಳಗೆ ಬಿದ್ದುಹೋದ. ಮತ್ತೆ ಆತ ಎದ್ದು ನನಗೆ ಹೊಡೆಯಲು ಬಂದಾಗ ದಿವಾಕರ ಹೆಗಡೆ ಸರಿಯಾಗಿ ಬಾರಿಸಿಬಿಟ್ಟ.

ಅಲ್ಲಿಗೆ ಲಂಕೇಶರ ಹುಟ್ಟುಹಬ್ಬದ ಸಂತೋಷಕೂಟದ ಪಾನಗೋಷ್ಠಿ ಹೊಡೆದಾಟದಲ್ಲಿ ಕೊನೆಯಾಯ್ತು.

ನಮ್ಮ ವರ್ತನೆ ಬಗ್ಗೆ ಹೇಸಿಗೆಯಾಗಿತ್ತು, ಎಂತಹ ಪಾರ್ಟಿಯಾಗಲಿ ಜಾಸ್ತಿ ಕುಡಿದವನಿಂದ ಹಾಳಾಗಿಹೋಗುತ್ತದೆ. ಆದ್ದರಿಂದ ನಾವು ನಮ್ಮಷ್ಟಕ್ಕೆ ಕುಡಿಯುವ ಬದಲು ಸುತ್ತಲವರು ಹುಯ್ದುಕೊಳ್ಳುವುದನ್ನು ಗಮನಿಸಬೇಕೆಂಬ ಜ್ಞಾನೋದಯ ಅಂದಿನ ಅನುಭವ ಕಲಿಸಿತು. ಬೆಳಿಗ್ಗೆ ನಜೀರನಲ್ಲಿ ಕ್ಷಮೆ ಕೇಳಿದೆವು. "ನಮ್ಮವರು ನನಗೆ ಹೊಡೆದರಲ್ಲಾ ಛೇ" ಎಂಬ ಆತನ ಉದ್ಗಾರ ನಮ್ಮಲ್ಲಿ ಬೇಸರ ತರಿಸಿತು.


ನಮ್ಮ ಹೊಡೆದಾಟ ಅದು ಹೇಗೋ ಲಂಕೇಶರಿಗೂ ತಲುಪಿತ್ತು, ಮರುದಿನ ನಾನು ಹೋಗಿ ಅವರೆದುರು ಕುಳಿತು "ನಿನ್ನೆ ಏನಾಯ್ತಂದ್ರೆ ಸಾರ್...." ಎನ್ನುತಿದ್ದಂತೆಯೇ "ನಿನ್ನೆದೇನೂ ಬೇಡ. ಇವತ್ತಿಂದೇನಾರ ಇದ್ರೇಳು" ಎಂದರು. ಅಲ್ಲಿಗೆ ಎಲ್ಲ ಮುಗಿಯಿತು.

ಆದರೆ ದಿವಾಕರ ಹೆಗಡೆಗೆ ಪತ್ರ ಬರೆದ ತೇಜಸ್ವಿ "ಏನಯ್ಯಾ ನೀವು ಕುಡುದು ಹೊಡೆದಾಟ ಮಾಡ್ತಿರಂತೆ. ನಿಮಗೇನು ಬುದ್ಧಿ ಭಾಷೆ ಇದೆಯಾ. ಯಾಕೀತರ ಹಾಳಾಗೊದ್ರಿ. ಆದ್ಯಂಗ್ರಯ್ಯ ಬೇರೆಯವರ ಮೇಲೆ ಕೈ ಎತ್ತಿ ಹೊಡಿತಿರಿ" ಎಂದು ಬೈದಿದ್ದರು. ಆದರೆ ಒಮ್ಮೆ ನಜೀರನೇ ತೇಜಸ್ವಿಯವರ ತೋಟಕ್ಕೆ ಹೋಗಿದ್ದಾಗ ಈತ ಗೂಸಾ ತಿನ್ನಲು ಯೋಗ್ಯ ಅನ್ನಿಸಿತಂತೆ!

• ಬಿ. ಚಂದ್ರೇಗೌಡ

...ದ್ದ, ಹೀಗಾಗೇ ಬೆಳಗಾಲಪೇಟೆಯಿಂದ ಹಾನಗಲ್‌ಗೆ ಹೋಗುವ ಮುಖ್ಯ ... ಹೊಂದಿ ಕೊಂಡಂತೆ 15 ಎಕರೆ ನೀರಾವರಿ, ಇನ್ನು 16 ಎಕರೆ ಒಣ ಬೇಸಾಯ ...ಮಿಯ ಒಟ್ಟು 31 ಎಕರೆಯ ಮಾಲೀಕನಾಗಿರುವ ಬಸವಣ್ಣೆಪ್ಪನಿಗೆ ಕಾಟ ...ಶುವಾಗಿದ್ದ ಮಗನ ಸಾವಿನ ನಂತರ.

...ಟಾಕಪ್ಪ 2006ರಲ್ಲಿ ತೀರಿಕೊಂಡ. ಈತ ಮಾಡುತ್ತಿದ್ದ ವಿದ್ಯುತ್ ಗುತ್ತಿಗೆ ...ನನ್ನು ಚಿಕ್ಕಪ್ಪ ಶಿವರಾಯಪ್ಪನ ಮಕ್ಕಳಾದ ಗದಿಗೆಪ್ಪ ...ತ್ತು ಶಿವಪ್ಪ ಎಂಬುವರು ಮುಂದುವರಿಸಿದರು. ...ಪ್ಪ ಬದುಕಿದ್ದ ಸಮಯದಲ್ಲಿ ಇನ್ನೊಬ್ಬ ಸಹೋದರ ...ಭುಲಿಂಗಪ್ಪನ ಹೆಸರಿನಲ್ಲಿ ಎರಡು ಟ್ರಾಕ್ಟರ್, ಒಂದು ...ಟಾ ಸುಮೋ ಹಾಗೂ ಒಂದು ಇಂಡಿಕಾ ಕಾರನ್ನು ...ರೀದಿಸಿದ್ದ ಅವೆಲ್ಲಾ ಈಗ ಶಂಭುಲಿಂಗಪ್ಪನ ಕಬ್ಜಾದಲ್ಲಿ .... ದಿನಕಳೆದಂತೆ ಕಾಮಗಾರಿಗಳ ಗುತ್ತಿಗೆ ಸೇರಿದಂತೆ ...ತರ ಅನುಕೂಲಕ್ಕಾಗಿ ಮಂತ್ರಿ ಉದಾಸಿ ಪುತ್ರನ ... ಶಿವಕುಮಾರನ ಗೆಳತನ ಬೆಳೆಸಿಕೊಂಡ ಶಿವರಾಮ... ಮೂವರು ಮಕ್ಕಳು ಈಗ ಉದಾಸಿಯ ಋಣ ...ಸಲು ಆತ ಕಣ್ಣು ಹಾಕಿದ 31 ಎಕರೆ ಜಮೀನನ್ನು ...ವಣ್ಣೆಪ್ಪನಿಂದ ಕಿತ್ತುಕೊಳ್ಳಲು ಮುಂದಾಗಿದ್ದಾರೆ. ಸದ್ಯ ...ವಣ್ಣೆಪ್ಪನ ಹೆಂಡತಿ ಮಲ್ಲಮ್ಮ, ಸೊಸೆ ಸುವರ್ಣ, ...ಪ್ಪನ ಮಕ್ಕಳಾದ ವಿಜಯ, ದೀಪಕ್, ಪ್ರಸನ್ನ, ಅಭಿಷೇಕ್ ಎಂಬುವರು ...ವಣ್ಣೆಪ್ಪನಿಂದ ದೂರಾಗಿ ಶಂಭುಲಿಂಗಪ್ಪನೊಂದಿಗೆ ಹುಬ್ಬಳ್ಳಿಯಲ್ಲಿ ವಾಸವಾಗಿ ...ರೆ.


ಬಸವಣ್ಣೆಪ್ಪ

ಮೊದಲೇ ಕ್ರಿಮಿನಲ್ ಬ್ರೇನಿನ ಉದಾಸಿ ಈ ಕುಟುಂಬದ ಆಸ್ತಿ ಕಿತ್ತಾಟವನ್ನೇ ಬಂಡವಾಳವನ್ನಾಗಿಸಿಕೊಂಡು ಭೂಮಿ ಕಿತ್ತುಕೊಳ್ಳಲು ಹೊಂಚು ಹಾಕಿದ್ದ ಎಂಬುದರಲ್ಲಿ ಸಂಶಯವೇ ಇಲ್ಲ.


ಬಸವಣ್ಣೆಪ್ಪನ ಆಸ್ತಿ ವಿಚಾರ ಈ ಹಿಂದೆಯೇ ನ್ಯಾಯಾಲಯದ ಮೆಟ್ಟಿಲೇರಿತ್ತು. ಬೇರೊಂದು ಕುಟುಂಬಕ್ಕೆ ದತ್ತಕಕ್ಕೆ ಹೋಗಿರುವ ಶಿವರಾಮಪ್ಪನನ್ನು ಹೊರತುಪಡಿಸಿ, ಉಳಿದ ನಾಲ್ಕು ಜನ ಸಹೋದರರಿಗೆ ತಲಾ 8 ಎಕರೆಯಂತೆ ಹಂಚಿಕೆಯಾಗಬೇಕೆಂದು ಎರಡು ವರ್ಷದ ಹಿಂದೆ ಹಾನಗಲ್ ಕೂಡಲಮಠದ ಗುರುನಂಜೇಶ್ವರ ಸ್ವಾಮಿಗಳ ನೇತೃತ್ವದಲ್ಲಿ ನಡೆದಿದ್ದ ಸಭೆಯಲ್ಲಿ ತೀರ್ಮಾನಿಸಲಾಗಿತ್ತಂತೆ. ಅಲ್ಲದೆ, 2008ರಲ್ಲಿ ಹಾನಗಲ್ಲ ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ಸಿವಿಲ್ ದಾವೆಯನ್ನೂ ಬಸವಣ್ಣೆಪ್ಪನ ಸಹೋದರನೊಬ್ಬ ಹೂಡಿದ್ದಾನೆ. ಈಗ್ಗೆ ಒಂದು ವರ್ಷದ ಹಿಂದೆ ಈ ಪ್ರಕರಣ ಪೊಲೀಸ್ ಠಾಣೆಯ ಮೆಟ್ಟಿಲೇರಿ ಆಗಿನ ಎಸ್.ಪಿ ಸಮ್ಮುಖದಲ್ಲಿ ಸಹೋದರರಿಂದ ಪ್ರಕರಣ ಕುರಿತು ವಿಚಾರಿಸಿ ರಾಜಿ ಪತ್ರ ಕೂಡ ಬರೆಸಿಕೊಂಡಿದ್ದರಂತೆ. ಇದೆಲ್ಲಾ ಬೆಳವಣಿಗೆ ಮೇಲಿಂದ ಮೇಲೆ ಹೆಚ್ಚಾಗುತ್ತಿರುವುದಕ್ಕೆ ಉದಾಸಿಯ ಮಸಲತ್ತುಗಳೇ ಮೂಲ ಕಾರಣ.

ಇದೆಲ್ಲಾ ವರ್ಕೌಟ್ ಆಗದಿದ್ದಾಗ ಅಪಹರಣದ ಪ್ಲಾನ್ ರೆಡಿಯಾಗಿತ್ತು, ಕಳೆದ ತಿಂಗಳು ಮನೆಯಿಂದಲೇ ಬಸವಣ್ಣೆಪ್ಪನನ್ನು ಎತ್ತೊಯ್ದು ಉದಾಸಿಯ ದುಷ್ಟ ಕೂಟ ಹೊರವಲಯದ ರೂಮೊಂದರಲ್ಲಿ ಕೂಡಿಹಾಕಿ ಹತ್ತು ದಿನಗಳ ಕಾಲ ಹಿಂಸೆ ನೀಡಿತ್ತು, ಇದ್ಯಾವುದಕ್ಕೂ ಬಸವಣ್ಣೆಪ್ಪ ಬಗ್ಗದಿದ್ದಾಗ ಬೆದರಿಕೆಯೊಂದಿಗೇ ಬಿಟ್ಟು ಕಳಿಸಿತ್ತು. ಅಲ್ಲಿಂದ ಸೀದಾ ಸ್ಥಳೀಯ ಪೊಲೀಸ್ ಠಾಣೆಗೆ ಹೋದ ಬಸವಣ್ಣೆಪ್ಪ ಶಿವಕುಮಾರ ಉದಾಸಿಯ ಮೇಲೊಂದು ದೂರು ನೀಡಿದರು. ಆದರೆ ಉದಾಸಿಗಳ ಎಂಜಲ ಋಣದಲ್ಲಿರುವ ಖಾಕಿಧಾರಿಗಳು ಜಪ್ಪಯ್ಯ ಅಂದರೂ ದೂರು ದಾಖಲಿಸಿಕೊಳ್ಳಲಿಲ್ಲ. ಉದಾಸಿಯ ಚೇಲಾಗಳು ಬಸವಣ್ಣೆಪ್ಪನವರಿಗೆ ಸೇರಿದ ಇಂಡಿಕಾ ಕಾರು, ಟ್ರಾಕ್ಟರ್ ಮುಂತಾದವುಗಳನ್ನ ವಶಪಡಿಸಿಕೊಂಡರು. ಆದರೆ ಈ ಬಗ್ಗೆ ಯಾರೂ ನೆರವಿಗೆ ಬಂದಿಲ್ಲ.

ಹಾವೇರಿ ಹತ್ತಿರದ ಅಗಡಿ ಗ್ರಾಮದ ಹತ್ತಿರ ಸುಮಾರು 2500 ಎಕರೆ ಫಲವತ್ತಾದ ಭೂಮಿಯನ್ನು ಟಾಟಾ ಸ್ಟೀಲ್ ಕಂಪನಿಗಾಗಿ ರೈತರಿಂದ ಕಿತ್ತುಕೊಳ್ಳಲು ಏನೆಲ್ಲಾ ತಂತ್ರ ರೂಪಿಸುತ್ತಿರುವ ಮಂತ್ರಿ ಉದಾಸಿ ತನ್ನ ಚೇಲಾ ಶಾಸಕ ಶಿವರಾಜ ಸಜ್ಜನನ ಫಾರ್ಚೂನ್ ಆಗ್ರೋ ಕಂಪನಿಗೆ ಗೋಮಾಳದ ಜಾಗೆಯನ್ನು ವರಭಾರೆ ಮಾಡಿಸಿದ್ದ. ಅಖಂಡ ಧಾರವಾಡ ಜಿಲ್ಲೆಯ ಕಬ್ಬು ಬೆಳೆಗಾರರ ಆಶಾಕಿರಣವಾಗಿರುವ ಸಂಗೂರಿನ ವರದಾ ಶುಗರ್ಸ್‌ನ್ನು ಸಂಪೂರ್ಣ ದಿವಾಳಿಗೆ ಹಚ್ಚಿ ಖಾಸಗಿಯವರಿಗೆ ಲೀಸ್ ಹಾಕಿದ ಕೀರ್ತಿ ಇದೇ ಮುದಿಮಂತ್ರಿ ಉದಾಸಿಯದ್ದು. ಈಗ ಭೂದಾಹಿ ಮಗನನ್ನು ರಾಜಕೀಯಕ್ಕಿಳಿಸಿ ಅವನೊಂದಿಗೆ ಸೇರಿಕೊಂಡು ಮುಗ್ಧ ರೈತರ ಭೂಮಿ ಕಸಿದುಕೊಳ್ಳುವುದರ ಜೊತೆಗೆ ಅವರ ಪ್ರಾಣ ಹಿಂಡುತ್ತಿದ್ದಾರೆ. ಇನ್ನಾದರೂ ಈ ಅಪ್ಪ ಮಕ್ಕಳ ನಿಜ ಚಾರಿತ್ರ್ಯವನ್ನು ಈ ಭಾಗದ ಅನ್ನದಾತ ಅರಿತು ಎಚ್ಚೆತ್ತುಕೊಳ್ಳಬೇಕಿದೆ. ರೈತರಿಗೆ ಇವರು ನೀಡುತ್ತಿರುವ ಕಷ್ಟದ ವಿರುದ್ಧ ರೈತ, ಪ್ರಗತಿಪರ ಸಂಘಟನೆಗಳು ಹೋರಾಟಕ್ಕಿಳಿಯಬೇಕಿದೆ. ಅಂದಾಗ ಮಾತ್ರ ಈ ಪೀಡೆ ತೊಲಗಲು ಸಾಧ್ಯ.

• ಹುರಳಿಕುಪ್ಪಿ ವಿನಯ


ಉತ್ತರ ಕನ್ನಡ ಗಣಿ ಸಗಣಿ ಯಾರ್‍ಯಾರು ಎಷ್ಟೆಷ್ಟು ಮುಕ್ಕಿದ್ದಾರೆ?



ಆಕ್ರಮ ಅದಿರು ಮಾಫಿಯಾದಲ್ಲಿದ್ದ ಉತ್ತರ ಕನ್ನಡದ ಎಂಜಲು ಬುರುಕ ಅಧಿಕಾರಿಗಳು ಮತ್ತು ಜನ ಪ್ರತಿನಿಧಿಗಳೀಗ ಕ್ಷಣ-ಕ್ಷಣವೂ ಬೆಚ್ಚಿಬೀಳುತ್ತಿದ್ದಾರೆ! ಜೈಲು ಪಾಲಾಗುವ ಭಯದಿಂದ ನಿದ್ದೆಯಲ್ಲೂ ಹಾಸಿಗೆ ಒದ್ದೆ ಮಾಡುತ್ತಿದ್ದಾರೆ. ಅತ್ತ ಬಳ್ಳಾರಿಯಲ್ಲಿ ಗಣಿ ಸಗಣಿ ತಿಂದು ಲೋಕಾಯುಕ್ತ ವರದಿಯಲ್ಲಿ ಸಿಕ್ಕಿಬಿದ್ದಿರುವ 29 ಅರಣ್ಯಾಧಿಕಾರಿಗಳನ್ನು ಅನಿವಾರ್ಯವಾಗಿ ಡಿವಿಎಸ್‌ರ ಚೆಡ್ಡಿ ಸರ್ಕಾರ ಸಸ್ಪೆಂಡ್ ಮಾಡುತ್ತಿದ್ದಂತೆಯೇ, ಇತ್ತ ಉತ್ತರ ಕನ್ನಡದಲ್ಲಿ ಅದಿರು ಕಳ್ಳಸಾಗಾಣಿಕೆಗೆ ಸಂಪೂರ್ಣ ಸಹಕಾರ ಕೊಟ್ಟು ಹಫ್ತಾ-ಮಂತ್ಲಿ-ಮಾಮೂಲಿ ಪಡೆದಿರುವ ವಿವಿಧ ಇಲಾಖೆಯ ಚೋರ ಸಾಹೇಬರು ಮತ್ತು ಖದೀಮ ಸಂಸದ-ಶಾಸಕರು ಕಂಗಾಲಾಗಿ ಕೂತಿದ್ದಾರೆ....

ಉತ್ತರ ಕನ್ನಡದ ರಿಮೋಟ್ ಬೇಲೇಕೇರಿ ಬಂದರು ಇದೆಯಲ್ಲ ಅದೇ ಲೋಕಾಯುಕ್ತ ನ್ಯಾಯಮೂರ್ತಿಯಾಗಿದ್ದ ಸಂತೋಷ್ ಹೆಗ್ಡೆ ತಯಾರಿಸಿರುವ 2ನೇ ಗಣಿ ಅಕ್ರಮ, ಅವಾಂತರದ ತನಿಖಾ ವರದಿಗೆ ಕೇಂದ್ರ. ಈ ಬೇಲೇಕೇರಿ ಬಂದರಿನಿಂದಲೇ ಕೋಟಿಕೋಟಿ ರೂ.ಗಳ ಅದಿರು ಅಕ್ರಮವಾಗಿ ವಿದೇಶಕ್ಕೆ ಹೋಗಿದೆ ಎಂದು ಈ ವರದಿಯಲ್ಲಿ ನಿರೂಪಿತವಾಗಿದೆ. ದಕ್ಷ, ಧೀರ ಅರಣ್ಯಾಧಿಕಾರಿ ಡಾ.ಯು.ವಿ.ಸಿಂಗ್ ತುಂಬಾ ಚಾಣಾಕ್ಷತೆಯಿಂದ ಬೇಲೇಕೇರಿ ಬಂದರಿನ ಅದಿರು ಕಳ್ಳಸಾಗಾಣಿಕೆದಾರರ ಅಡ್ಡೆಗಳ ರೇಡು ಬಿದ್ದಾಗ ಹಲವು ಮಹತ್ವದ ದಾಖಲೆ ಸಿಕ್ಕಿತ್ತು.


ಬಳ್ಳಾರಿ-ಹೊಸಪೇಟೆ ಮುಂತಾದೆಡೆ ಎಲ್ಲ ಕಾನೂನು ಕಡೆಗಣಿಸಿ ಗೆಬರಿ ಬೇಲೇಕೇರಿ ಮತ್ತು ಕಾರವಾರ ಬಂದರಿಗೆ ಸಾಗಿಸಲಾಗುತ್ತಿದ್ದ ಅದಿರನ್ನು ಸತೀಶ್ ಸೈಲ್ ಎಂಬ ಸೋಗಲಾಡಿಯ ಮಲ್ಲಿಕಾರ್ಜುನ ಶಿಪ್ಪಿಂಗ್, ಗುಜರಾತಿನ ಮಾರ್ವಾಡಿ ಆದಾನಿಯ ಕಂಪನಿ, ಗೋವಾದ ಸಾಲಗಾಂವ್ಕರ್ ಮುಂತಾದ ರಫ್ತು ಕಂಪನಿಗಳು ಹಡಗಿಗೇರಿಸಿ ಚೀನಾಕ್ಕೆ ಕಳ್ಳ ಸಾಗಾಣಿಕೆ ಮಾಡುತ್ತಿದ್ದವು. ಈ ಕಂಪನಿ ಖಳರಿಗೆ ದಾಳಿ ಮಾಡುವ ಸಣ್ಣ ಸುಳಿವೂ ಸಿಗದಂತೆ ಎಚ್ಚರ ವಹಿಸಿದ್ದ ಡಾ|| ಸಿಂಗ್ ತುಂಬ ರಿಸ್ಕ್ ತೆಗೆದುಕೊಂಡಿದ್ದರು. ಜನಾರ್ದನ ರೆಡ್ಡಿಯ ಖಾರಾಪುಡಿ ಮಹೇಶ್, ಸ್ವಸ್ತಿಕ್ ನಾಗರಾಜ್‌ರಂಥವರ ಗೂಂಡಾ ಪಡೆಯ ಬೆಂಗಾವಲಿನಲ್ಲಿದ್ದ ಈ ರಫ್ತುದಾರ ಸೈತಾನರು ಯಾವುದಕ್ಕೂ ಹೇಸದವರು.



ಹೀಗಾಗಿ ಯು.ವಿ.ಸಿಂಗ್‌ರ ತನಿಖಾ ತಂಡ ವೇಷ ಮರೆಸಿಕೊಂಡು ಬೇಲೇಕೇರಿ ಬಂದರಿನ ಮೇಲೆ ದಾಳಿ ಮಾಡಿತ್ತು, ಅಂಕೋಲೆ ಕಡೆಯ ಮೀನುಗಾರರು -ಹಿಂದುಳಿದವರು ತೀರ್ಥಯಾತ್ರೆಗೆ ವಾಹನ ಮಾಡಿಕೊಂಡು ಹೋಗುವ ರಿವಾಜಿನಂತೆ ಬೇಲೇಕೇರಿ ಎಂಟ್ರಿ ಪಡೆದಿತ್ತು, ಸಿಂಗ್ ತಂಡ ವಾಹನಕ್ಕೊಂದು 'ಧಾರ್ಮಿಕ ಧ್ವಜ' ಹಾಕಿಕೊಂಡಿತ್ತು, ಹೀಗಾಗಿ ಇದೊಂದು ಲೋಕಾಯುಕ್ತ ತನಿಖಾ ತಂಡವೆಂಬ ಅನುಮಾನ ಯಾರಿಗೂ ಬರಲೇ ಇಲ್ಲ, ಸಲೀಸಾಗಿ ಅದಿರು ಕಳ್ಳ ಸಾಗಾಣಿಕೆದಾರರ ಗುಹೆಯೊಳಗೆ ಸಿಂಗ್ ಪಡೆ ಪ್ರವೇಶಿಸಿಬಿಟ್ಟಿತ್ತು!

ಗೂಂಡಾಗರ್ದಿಯ ರಫ್ತುದಾರರ ಗ್ಯಾಂಗಿಗೆ ಏನಾಗುತ್ತಿದೆ ಎಂದು ಅರ್ಥವಾಗುವ ಮೊದಲೇ ಲೋಕಾಯುಕ್ತ ತಂಡ ಕಳ್ಳ ಕಂಪನಿಗಳ ಕಂಪ್ಯೂಟರ್, ಸಿಡಿ, ಫೈಲ್ ಎತ್ತಿಕೊಂಡು ಬಿಟ್ಟಿತ್ತು! ಎಲ್ಲ ದಾಖಲೆ ವಶಪಡಿಸಿಕೊಂಡು ಬಿಟ್ಟಿತ್ತು! ಹೀಗಾಗಿ ಹರಾಮಿ ಅದಿರು ಸಾಗಾಟಗಾರರಿಗೆ ದಾಖಲೆಗಳನ್ನು ಅಡಗಿಸಿಡಲು ಅಥವಾ ನಾಪತ್ತೆ ಮಾಡಲು ಚಾನ್ಸೇ ಸಿಗಲಿಲ್ಲ, ಈ ಬೇಲೇಕೇರಿ ಬಂದರಲ್ಲಿ ಸಿಕ್ಕಿದ ದಾಖಲೆಗಳೇ ಅಷ್ಟೂ ಗಣಿ ಕರ್ಮಕಾಂಡದ ಕೋಟೆಯ ಬಾಗಿಲ ಬೀಗ ತೆರೆಯಲು ಲೋಕಾಯುಕ್ತಕ್ಕೆ ಕೀಲಿಕೈ ಅಂತಾಗಿತ್ತು!! ಕಂಪ್ಯೂಟರ್-ಸಿಡಿಗಳು ಅನೇಕ ರೋಚಕ ಲೂಟಿ ಪುರಾಣ ಬಿಚ್ಚಿಟ್ಟಿತ್ತು....

ಬೇಲೇಕೇರಿ ಬಂದರಿನಲ್ಲಿ ಯು.ವಿ.ಸಿಂಗ್ ಸೀಜ್ ಮಾಡಿರುವ ದಾಖಲೆಗಳ ಆಧಾರದಲ್ಲೇ ಲೋಕಾಯುಕ್ತರ ಗಣಿ ವರದಿ ಹೆಣೆಯಲ್ಪಟ್ಟಿದೆ. ಈ ದಾಖಲೆಗಳು ಬಳ್ಳಾರಿಯಿಂದ ಬೇಲೇಕೇರಿ ಮತ್ತು ಕಾರವಾರಕ್ಕೆ ಕದ್ದ ಅದಿರು ಬರಲು ಉತ್ತರ ಕನ್ನಡದ ಯಾವ್ಯಾವ ಇಲಾಖೆಯ ಭ್ರಷ್ಟ ಅಧಿಕಾರಿಗಳು-ಜನಪ್ರತಿನಿಧಿಗಳು ನೆರವಾಗಿದ್ದಾರೆ. ಆ ಬಂದರುಗಳಿಂದ ಅದಿರನ್ನು ಹಡಗುಗಳಿಗೆ ತುಂಬಿ ವಿದೇಶಕ್ಕೆ ರವಾನೆ ಮಾಡಲು ಮತ್ಯಾರ್‍ಯಾರು ಸಹಕರಿಸಿದ್ದಿರೆಂಬುದನ್ನು ಲೋಕಾಯುಕ್ತದ ವರದಿಗೆ ನಿಸ್ಸಂಶಯವಾಗಿ ವಿವರಿಸಿದೆ. ಅಷ್ಟೇ ಅಲ್ಲ, ಈ 'ಪಾತಕ ಉಪಕಾರ'ಕ್ಕಾಗಿ ಅಧಿಕಾರಿ-ಸಂಸದ-ಶಾಸಕರು ಎಷ್ಟು ಪ್ರಮಾಣದಲ್ಲಿ ಲಂಚದ ಅಮೇಧ್ಯ ತಿಂದಿದ್ದಾರೆ ಎಂಬುದೂ ಈ ಕಂಪ್ಯೂಟರ್-ಸಿಡಿಗಳು ಸ್ಪಷ್ಟವಾಗಿ ಹೇಳಿವೆ!!



ಕೋಟ್ಯಂತರ ರೂಗಳ ಅದಿರು ಲೂಟಿಗೆ ಬೆಂಗಾವಲಾಗಿದ್ದ ಉತ್ತರ ಕನ್ನಡದ ಬೇರೆ-ಬೇರೆ ಇಲಾಖೆಯ ಅಧಿಕಾರಿ ಗಣಕ್ಕೆ ಮತ್ತು ಜನ ಪ್ರತಿನಿಧಿಗಳಿಗೆ ಪ್ರತಿ ಹಡಗಿಗೆ ಅಥವಾ ರಫ್ತಾಗುತ್ತಿದ್ದ ಅದಿರಿನ ಪ್ರತಿ ಮೆಟ್ರಿಕ್ ಟನ್‌ಗೊಂದರಂತೆ ತಿಂಗಳೊಂದಕ್ಕೆ ಅಥವಾ ಮೂರ್‍ನಾಲ್ಕು ತಿಂಗಳ ಅವಧಿಯೊಂದಕ್ಕೆ ಹಫ್ತಾ-ಮಂತ್ಲಿ-ಮಾಮೂಲನ್ನು ಅದಿರು ಮಾಫಿಯಾ ಫಿಕ್ಸ್ ಮಾಡಿತ್ತು, ಅದಿರು ರಫ್ತುದಾರರೊಂದಿಗೆ ಸೇರಿ ಆಗಾಗ ಈ 'ಲಂಚ' ನಿಗದಿಪಡಿಸುವ ಕೆಲಸ ಈಗ ಜೈಲು ಪಾಲಾಗಿರುವ ಗಣಿ ಕರ್ಮಕಾಂಡದ ಕಿಂಗ್‌ಪಿನ್ ಜನಾರ್ದನ ರೆಡ್ಡಿಯ ಚೇಲಾಗಳಾದ ಖಾರಾಪುಡಿ ಮಹೇಶ್ ಮತ್ತು ಸ್ವಸ್ತಿಕ್ ನಾಗರಾಜ್ ಮಾಡುತ್ತಿದ್ದರು. ಖಾರಾಪುಡಿ ಮಹೇಶ್ ಅಥವಾ ರಫ್ತುದಾರ ಗ್ಯಾಂಗಿನವರ ನಂಬಿಗಸ್ಥ ಬಂಟರ್‍ಯಾರಾದರೂ ಅನೂಚಾನಾಗಿ ಸಂಬಂಧಿಸಿದ ಅಧಿಕಾರಿ-ಜನಪ್ರತಿನಿಧಿಗೆ ಮುಟ್ಟಿಸಿ ಬರುತ್ತಿದ್ದರು.


ಈಗ ಕಾರವಾರ-ಅಂಕೋಲೆಯ ಕಾಂಗ್ರೆಸ್ ಶಾಸಕನಾಗಲು ಹಣ ಹರಿಸುತ್ತಾ ತರಹೇವಾರಿ ಕಸರತ್ತು ಮಾಡುತ್ತಿರುವ ಸತೀಶ್ ಸೈಲ್ ಎಂಬ ಜನಾರ್ದನ ರೆಡ್ಡಿಯ ಆಪ್ತಮಿತ್ರನ ಮಲ್ಲಿಕಾರ್ಜುನ ಶಿಪ್ಪಿಂಗ್ ಪ್ರೈ.ಲಿ. ಮತ್ತು ಗುಜರಾತ್ ಆದಾನಿಯ ಮೇ ಆದಾನಿ ಎಂಟರ್‌ಪ್ರೈಸಸ್ ಮೇಲೆ ಲೋಕಾಯುಕ್ತದವರು 2010 ಫೆಬ್ರವರಿ 20ರಂದು ದಾಳಿ ಮಾಡಿದಾಗ ಸಿಕ್ಕಿದ ಕಂಪ್ಯೂಟರ್ ಮತ್ತು ಇತರ ದಾಖಲೆಗಳು ಇಲಾಖಾವಾರು ಲಂಚ ಬಟವಾಡೆ ಕತೆ ತೆರೆದಿಟ್ಟಿದೆ! ಕಂಪ್ಯೂಟರ್‌ಗಳ ಹಾರ್ಡ್‌ಡಿಸ್ಕ್ ನಲ್ಲಿದ್ದ ಕ್ಯಾಶ್ ಅಕೌಂಟ್ ಎಂಬ ಇ-ಮೇಲ್ ಫೈಲ್ ತೆರೆದಾಗ ಭ್ರಷ್ಟಾಚಾರದ ಭಯಾನಕ ಲೋಕವೇ ಅನಾವರಣಗೊಂಡಿದೆ. 2008ರ ಮಾರ್ಚ್ 28ರಂದು ಆದಾನಿ ಎಂಟರ್‌ಪ್ರೈಸಸ್‌ನ ಅಕೌಂಟ್ಸ್ ವಿಭಾಗದಿಂದ ಈ ಮೇಲ್ ಹಾಕಲಾಗಿದೆ. ಆದಾನಿ ಕಂಪನಿಯ ಬೇಲೇಕೇರಿ ಅಡ್ಡೆ ಉಸ್ತುವಾರಿ ಪ್ರವೀಣ ಬಾಜಪೇಯಿ ಅಧಿಕೃತವಾಗಿ ಲೆಕ್ಕದ ಬಾಬ್ತಿಗೆ ಬರದ ಹಣ ವ್ಯಯಕ್ಕೆ ಅನುಮತಿ ಕೋರಿ ಕಂಪನಿಯ ಮೇಲಧಿಕಾರಿಗಳಾದ ಸಾಮ್ಯುಯಲ್ ಡೇವಿಡ್, ಮನೋಜ್ ಝಾ ಮತ್ತು ಮಿತ್ತಲ್ ಎಂಬವವರಿಗೆ ಕಳಿಸಿದ ಇ-ಮೇಲ್‌ನಲ್ಲಿ ಈ ಅವ್ಯವಹಾರದ ರಹಸ್ಯ ಅಡಕವಾಗಿದೆ!!



ಈ ದಗಲ್ಬಾಜಿ ವ್ಯವಹಾರದ ಇ-ಮೇಲ್ ಬಂದರು ಅಧಿಕಾರಿಗಳಿಗೆ, ಕಸ್ಟಮ್ಸ್ ಅಧಿಕಾರಿಗಳಿಗೆ, ಪೊಲೀಸ್ ಪಡೆಗೆ, ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ಅದಿರು ಕಳ್ಳ ಸಾಗಾಣಿಕೆಗೆ ಅವಕಾಶ ಕೊಟ್ಟಿದ್ದಕ್ಕಾಗಿ ಎಷ್ಟೆಷ್ಟು 'ಪಾಲು' ರಫ್ತು ಕಂಪನಿಗಳು ನಿರಂತರ-ನಿಯಮಿತವಾಗಿ ಸಂದಾಯ ಮಾಡುತ್ತಿದ್ದವೆಂಬುದನ್ನು ಬಹಿರಂಗ ಮಾಡಿದೆ! ಬಂದರು ಇಲಾಖೆಯ ವಿವಿಧ ಸ್ತರದ ಅಧಿಕಾರಿ-ನೌಕರರಿಗೆ ಬೇರೆ ಬೇರೆ ತೂಕದ ಬಕ್ಷೀಸ್ ಫಿಕ್ಸ್ ಮಾಡಿ ಕೊಡುತ್ತಾ ಬಂದಿತ್ತು,ಅದಿರು ಮಾಫಿಯಾ. ಅಕ್ರಮ ಅದಿರು ಹಡಗೇರಿ ವಿದೇಶಕ್ಕೆ ಹೋಗುವ ಹಂತದಲ್ಲಿ ಬಂದರು ಮತ್ತು ಕಸ್ಟಮ್ಸ್ ಇಲಾಖೆಯ ಪಾತ್ರ ಮಹತ್ವದ್ದಾಗಿರುತ್ತದೆ. ಹೀಗಾಗಿ ಈ ಎರಡು ಇಲಾಖೆಗಳನ್ನು ಅದಿರುಕಳ್ಳ ಸಾಗಾಟದಾರರು ತುಂಬ ಮುತುವರ್ಜಿಯಿಂದ ನಿಭಾಯಿಸಿಕೊಂಡು ಹೋಗಿದ್ದರು. ಈ ಎರಡೂ ಇಲಾಖೆಯ ಬಂದರು ನಿರ್ದೇಶಕರು ಮತ್ತು ಕಸ್ಟಮ್ಸ್ ಅಸಿಸ್ಟೆಂಟ್ ಕಮೀಷನರ್ ಅಲ್ಲಿಂದಿಲ್ಲಿಗೂ ತಮಗೆ ಅನ್ನ ಕೊಡುವ ಸರ್ಕಾರಕ್ಕೇ ದ್ರೋಹ-ವಂಚನೆ-ಮೋಸ ಮಾಡುತ್ತಲೇ ಇದ್ದರು.

ಅದಿರು ಮಾಫಿಯಾ ಅದ್ಯಾವ ಪರಿ ಬಂದರು ಇಲಾಖಾಧಿಕಾರಿಗಳನ್ನು ಪಳಗಿಸಿತ್ತೆಂದರೆ ಹಣ ಕಂಡಾಗ ಈ ಅಧಿಕಾರಿಗಳು ಎಲ್ಲ ಕಾನೂನು ಕಟ್ಟಳೆ ಕಡೆಗಣಿಸಿ ದೋಖಾ ದಂಧೆಗೆ ನಿರಾತಂಕ ಅವಕಾಶವನ್ನೇ ನೀಡಿದ್ದರು! ಕಳ್ಳ ಅದಿರು ಹೊತ್ತ ಹಡಗೊಂದು ವಿದೇಶಕ್ಕೆ ಸಂಚಾರ ಶುರುಮಾಡಬೇಕೆಂದಿದ್ದರೆ ಬಂದರು ನಿರ್ದೇಶಕನಿಗೆ 50 ಸಾವಿರ, ಬಂದರು ಅಧಿಕಾರಿಗೆ 25 ಸಾವಿರ, ಉಪಬಂದರು ಸಂರಕ್ಷಕನಿಗೆ 5 ಸಾವಿರ ಮತ್ತು ಕಚೇರಿ ಕರ್ಮಚಾರಿಗಳಿಗೆ 5500 ರೂಪಾಯಿ ನೀಡಲಾಗುತ್ತಿತ್ತು, ಇದಕ್ಕೆ ಶಿಪ್‌ಮೆಂಟ್ ಮಾಮೂಲಿ ಎಂದು ಹೆಸರು.

ಕಸ್ಟಮ್ಸ್ ಅಧಿಕಾರಿಗಳಿಗೆ ಶಿಪ್‌ಮೆಂಟ್ ಸಂಖ್ಯೆ ಮತ್ತು ಅಕ್ರಮ ಅದಿರು ರಫ್ತು ಪ್ರಮಾಣದ ಮೇಲೆ ಲಂಚ ನಿಗದಿಪಡಿಸಲಾಗಿತ್ತು, ಪ್ರತಿ ಹಡಗಿಗೆ 2006ರ ಮೇ 26ರ ಮೊದಲು ಬರೋಬ್ಬರಿ 12 ಸಾವಿರ ರೂ. ಆ ನಂತರ 2008ರ ಜನವರಿ 11ರ ತನಕ ಹಡಗೊಂದಕ್ಕೆ 6 ಸಾವಿರ ರೂ. ಮತ್ತು ಪ್ರತಿ ಮೆಟ್ರಿಕ್ ಟನ್‌ಗೆ 50 ಪೈಸೆ ಕಾಣಿಕೆ ಕಸ್ಟಮ್ಸ್ ಅಧಿಕಾರಿಗಳ ಹುಂಡಿಗೆ ಅದಿರು ಕಳ್ಳಸಾಗಾಣಿಕೆ ಮಾಡುವ ಶಿಪ್ಪಿಂಗ್ ಕಂಪನಿಗಳು ಹಾಕುತ್ತಿದ್ದವು. 11-1-2008ರ ನಂತರ ಪ್ರತಿ ಟನ್‌ಗೆ ಕೊಡುವ 50 ಪೈಸೆ ಜತೆಗೆ ಮೂರು ತಿಂಗಳಿಗೊಮ್ಮೆ ಮತ್ತೆ 1 ಲಕ್ಷ ರೂ. ಕಸ್ಟಮ್ಸ್ ಎಸಿಗೆ 'ಪ್ರೋತ್ಸಾಹ ಧನ' ಕೊಡಲಾಗುತ್ತಿತ್ತು.



ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿ (ಎಸ್ಪಿ)ಗೆ ಎರಡು ತಿಂಗಳಿಗೊಮ್ಮೆ 1 ಲಕ್ಷ ರೂ., ಅಡಿಷನಲ್ ಎಸ್ಪಿಗೆ ಪ್ರತಿತಿಂಗಳಿಗೆ 25 ಸಾವಿರದಂತೆ ಅದಿರು ಮಾಫಿಯಾ 'ಸಗಣಿ' ಮೊತ್ತ ನಿಗದಿಪಡಿಸಿತ್ತು, ಹಾಗೆಯೇ ಅದಿರು ರಫ್ತು ಏರಿಯಾದ ಡಿವೈಎಸ್ಪಿಗೆ ಪ್ರತಿ ತಿಂಗಳು 10 ಸಾವಿರ ಸಿಕ್ಕರೆ ಕಳ್ಳಾಟಕ್ಕೆ ಹೆಚ್ಚು ರಕ್ಷಣೆ ಒದಗಿಸಬೇಕಾದ ಸಿಪಿಐ 14 ಸಾವಿರ ಮತ್ತು ಪೊಲೀಸ್ ಬೀಟ್ ಫೋರ್ಸ್‌ಗಳಿಗೆ ತಿಂಗಳೊಂದಕ್ಕೆ 2 ಸಾವಿರ 'ಕೂಲಿ' ಕೊಡಲಾಗುತ್ತಿತ್ತು! ಜಿಲ್ಲಾಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳು ನಿಗದಿತ ಅವಧಿಗೆ ಲಂಪ್‌ಸಮ್ (ಏಕಗಂಟಲ್ಲಿ) ದೊಡ್ಡ ಮೊತ್ತ ಪಡೆಯುತ್ತಿದ್ದರು. ಆದರೆ ಖಾರಾಪುಡಿ ಮಹೇಶ್ ಉತ್ತರ ಕನ್ನಡದ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಉಪನಿರ್ದೇಶಕನಿಗೆ ಪ್ರತಿತಿಂಗಳು ಎರಡೆರಡು ಲಕ್ಷ ಕೊಡುತ್ತಿದ್ದೆ ಎಂದು ಕೊಚ್ಚಿಕೊಂಡದ್ದೂ ಇದೆ!

ಇದಲ್ಲದೆ ಸಿಆರ್‌ಝಡ್, ತೂಕ ಮತ್ತು ಅಳತೆ ಇಲಾಖೆ ಹಾಗೂ ಕದ್ದು ಅದಿರು ಸಾಗಿರುವ ವ್ಯಾಪ್ತಿಗೆ ಬರುವ ಇನ್ನಿತರ ಸಣ್ಣ-ಪುಟ್ಟ ಇಲಾಖೆಯವರಿಗೂ ಸಣ್ಣ-ಸಣ್ಣ ಮೊತ್ತ ಹಂಚಲಾಗುತ್ತಿತ್ತೆಂದು ಲೋಕಾಯುಕ್ತ ವರದಿಯಲ್ಲಿ ಹೇಳಲಾಗಿದೆ. ಕಾರವಾರ ಜಿಲ್ಲೆಯ ಸಂಸದ-ಸ್ವಯಂ ಘೋಷಿತ ದೇಶಭಕ್ತ ಅನಂತ್ಮಾಣಿ ಮತ್ತು ಅಕ್ರಮ ಅದಿರು ಸಾಗಾಟದ ದಾರಿಯಲ್ಲಿ ಬರುವ ಯಲ್ಲಾಪುರ ಮತ್ತು ಕಾರವಾರದ ಶಾಸಕ ಆನಂದ ಅಸ್ನೋಟಿಕರ್, ವಿ.ಎಸ್. ಪಾಟೀಲ್ ಎಂ ಬಿಜೆಪಿ ಭೂಪರಿಗೂ ನಿಯಮಿತವಾಗಿ ಹಣದ ಪ್ಯಾಕೆಟ್ ಹೋಗುತ್ತಿತ್ತು, ಆದರೆ ಈ ಜನಪ್ರತಿನಿಧಿಗಳಿಗೆ ಎಷ್ಟೆಷ್ಟು ಪಾಪದ ಪೈಸಾ ಸಿಗುತ್ತಿತ್ತೆಂಬ ನಿಖರ ಮಾಹಿತಿ ವರದಿಯಲ್ಲಿಲ್ಲ, 2006ರಿಂದ 2010ರವರೆಗೆ ಬಂದರು, ಕಸ್ಟಮ್ಸ್, ಪೊಲೀಸ್, ಗಣಿ-ಭೂ-ವಿಜ್ಞಾನ, ಸಿಆರ್‌ಝಡ್, ತೂಕ-ಅಳತೆ ಮತ್ತಿತರ ಇಲಾಖೆಯ ಅಧಿಕಾರಿಗಳೆಲ್ಲ ತಂತಮ್ಮ ಅವಧಿಯಲ್ಲಿ ಮಾನ-ಮರ್ಯಾದೆ ಬಿಟ್ಟು ಅದಿರು ಮಾಫಿಯಾ ಕೊಟ್ಟಷ್ಟು ಮಾಮೂಲಿ ಕಿಸೆಗಿಳಿಸಿ ಕರ್ತವ್ಯ ಭ್ರಷ್ಟತೆ, ಸಮಾಜ ದ್ರೋಹ, ಕ್ರಿಮಿನಲ್ ಪಾತಕ ಒಟ್ಟೊಟ್ಟಿಗೆ ಮಾಡಿದ್ದಾರೆ.

ಅದಿರು ಮಾಫಿಯಾ-ರಫ್ತುದಾರ ದುಷ್ಟರು 2004-05ರಿಂದ 2007-08ರವರೆಗೆ ವರ್ಷದಿಂದ ವರ್ಷಕ್ಕೆ ಅಕ್ರಮ ಸಂಭಾವನೆ ಮೊತ್ತ ಏರಿಸಿ ಅಧಿಕಾರಿಗಳನ್ನು ಖರೀದಿಸಿದ್ದಾರೆ. 2004-05ರಲ್ಲಿ 22,62,924 ರೂ. 2005-06ರಲ್ಲಿ 48,36, 920 ರೂ. 2006-07ರಲ್ಲಿ 66,31,144 ರೂ. ಮತ್ತು 2007-08ರಲ್ಲಿ 1,28,37,242 ರೂ. ದೋನಂಬರ್ ದುಡ್ಡು ಅಧಿಕಾರಿಗಳ ಪಳಗಿಸಲೆಂದೇ ಅದಿರು ರಫ್ತುದಾರರು ಮತ್ತು ಬಳ್ಳಾರಿ ಕಳ್ಳರು ಖರ್ಚು ಮಾಡಿದ್ದಾರೆ! ಇದೆಲ್ಲ ಕೃಷ್ಣನ ಲೆಕ್ಕವಾದ್ದರಿಂದ ಕಂಪನಿಯ ಬ್ಯಾಲೆನ್ಸ್‌ಶೀಟ್‌ನಲ್ಲಿ ಕಾಣಿಸಿಲ್ಲ, ಆದರೆ ರಹಸ್ಯ ಸಿಡಿ-ಫೈಲ್-ಕಂಪ್ಯೂಟರ್‌ನಲ್ಲಿ ದಾಖ[ಲಿಸ]ಲಾಗಿತ್ತು!

ಲೋಕಾಯುಕ್ತ ವರದಿಯಲ್ಲಿ ಉತ್ತರ ಕನ್ನಡದ ಅ[...] ಅಧಿಕಾರಿ ಹೆಸರು ಇಲ್ಲ, ಆದರೆ ಜಿಲ್ಲೆಯ ಕೆಲವೇ ಕೆಲ[...] ಅರಣ್ಯ ಅಧಿಕಾರಿಗಳು ಈ ಅದಿರು ಅವ್ಯವಹಾರ[...] ಶಾಮೀಲಾಗಿ ಕಳ್ಳ ಕುಬೇರರಾಗಿದ್ದಾರೆ. ಅಂಕೋಲಾ-ಕಾರ[...] - ಯಲ್ಲಾಪುರ ಭಾಗದ ಅರಣ್ಯ ತಪಾಸಣಾ ಜಾಗಗ[...] ದೊಡ್ಡ ಲೇವಾದೇವಿಯೇ ನಡೆಯುತ್ತಿತ್ತು, ಹಿತ್ತಲಮಕ್ಕಿಯ[...] ಎಸಿಎಫ್‌ಗಳು ಅರಣ್ಯ ಇಲಾಖೆಯ ಜಾಗದಲ್ಲಿ ಅಥ[...] ಲೋಡ್ ಲಾರಿಗಳ ತಂಗಲು ಮತ್ತು ಅಕ್ರಮ ಅದಿರು ಡಂ[...] ಮಾಡಲು ಅವಕಾಶಕೊಟ್ಟು ಸುಲಿಗೆ ಮಾಡಿದ್ದಾರೆ. ಸರಿಯ[...] ತನಿಖೆಯಾದರೆ ಕಾರವಾರ-ಯಲ್ಲಾಪುರ ಫಾರೆಸ್ಟ್ ಡಿವಿಜನ[...] ಹಲವು ಅಧಿಕಾರಿಗಳು ಮನೆಗೆ ಹೋಗುವುದು ಗ್ಯಾರಂ[...]

ಮಾತೆತ್ತಿದರೆ ದೇಶ ಭಕ್ತಿ-ಪಾರದರ್ಶಕತೆ-ಪ್ರಾಮಾಣಿ[...] ಎನ್ನುವ ಕೆನರಾದ ಬಿಜೆಪಿ ಸಂಸದ ಅನಂತಕುಮಾರ್ ಹೆ[...] ಯಾನೆ ಅನಂತ್ಮಾಣಿಯೂ ಅಕ್ರಮ ಅದಿರು ಮಹಿಮಾ[...] ಪ್ರಮುಖ ಫಲಾನುಭವಿಯೇ! ಈತನಿಗೆ ಪ್ರತಿತಿಂಗಳು ಎ[...] ಹಣ ಅದಿರು ಚೋರರು ಕೊಡುತ್ತಿದ್ದರೆಂಬುದು ನಿಖರವ[...] ಲೋಕಾಯುಕ್ತ ವರದಿಯಲ್ಲಿ ಹೇಳಿಲ್ಲ, ಆದರೆ ಈತನ ಆ[...] ಚೇಲ- ಜಿಲ್ಲಾ ಯುವ ಬಿಜೆಪಿ ಮಾಜಿ ಅಧ[...] ಅರುಣಕುಮಾರ್ ನಾಯ್ಕ ಎಂಬ ಉಂಡಾಡಿ ಪು[...] ಸಾಹೇಬರಿಗೆಂದು ಅದಿರು ಮಾಫಿಯಾದಿಂದ ಪ್ರತಿತಿಂಗ[...] ಒಂದು ಲಕ್ಷ ಹಣ ಪಡೆದು ಕೊಡುತ್ತಿದ್ದನೆಂಬುದು ಇವತ್ತ[...] ಜಿಲ್ಲಾ ಬಿಜೆಪಿಯಲ್ಲಿ ಪಿಸು ಮಾತಿದೆ! ಕಾರವಾರ ಶಾಸಕ[...] ಮಂತ್ರಿ ಆನಂದ್ ಅಸ್ನೋಟಿಕರ್ ಎಂಬ ಅಡ್ಡಕಸುಬಿ ಇ[...] ದುಡ್ಡು ಬಿಡುವ ಪೈಕಿ ಅಲ್ಲಬಿಡಿ. ಆತನಿಗೂ ಅನಂತ[...] ಯಷ್ಟೇ ಕಾಸು ಅದಿರು ಕಳ್ಳರ ಗ್ಯಾ[...] ಕೊಡುತ್ತಿತ್ತು.

ಲೋಕಾಯುಕ್ತ ವರದಿ ಆಧ[...] ಡಿವಿಎಸ್ ಗೌಡರ ಸರ್ಕಾರ ನಿಷ್ಠುರ ಕ[...] ವೇನಾದರೂ ಕೈಗೊಂಡರೆ ಬಂದ[...] ಕಸ್ಟಮ್ಸ್, ಗಣಿ-ಭೂವಿಜ್ಞಾನ, ಪೊಲಿ[...] ಸಿಆರ್‌ಝಡ್, ತೂಕ-ಅಳತೆ ಇನ್ನಿ[...] ಇಲಾಖೆಯ ಲಂಚಬಡುಕ ಅಧಿಕಾರಿ[...] ಜತೆಯೇ ಕಾಂಗ್ರೆಸ್ ಮುಂಚೂ[...] ಮುಖಂಡ ಸತೀಶ್ ಸೈಲ್ ಎಂಬ ಸೋ[...] ಲಾಡಿ ಅದಿರು ರಫ್ತುದಾರ, ಆತನ ಪಾ[...] ನರ್ ಮಂಗಲಾದಾಸ್ ಕಾಮತ್ ಎ[...] ಖದೀಮ, ಅಧಿಕ ಪ್ರಸಂಗಿ ಸಂ[...] ಅನಂತ್ಮಾಣಿ, ಮಂತ್ರಿ ಆನಂದ್ ಅಸ್ನೋಟಿಕರ್, ದೀ[...] ಲಾಜಿಸ್ಟಿಕ್‌ನ ದಗಾಕೋರ ಅದಿರು ಸಾಗಾಟಗಾರ ಶಿವರಾ[...] ಹೆಬ್ಬಾರ್ ಎಂಬ ಯಲ್ಲಾಪುರದ ಕಾಂಗ್ರೆಸ್ ಕಿಂಗ್... ಕಿ[...] ಜಿಲ್ಲೆಯ ಅನಾಹುತಕಾರಿ ಸೆಲೆಬ್ರಿಟಿಗಳು ಸಾಲುಸಾ[...] ಜೈಲು ಪಾಲಾಗುವುದು ಖಂಡಿತ.

ಅದಿರು ಲಾರಿಗಳ ಹಾವಳಿಯಿಂದ ಜಿಲ್ಲೆಯಲ್ಲಿ ನೂರ[...] ಸಾವು, ಅದಕ್ಕಿಂತ ಹೆಚ್ಚು ಹಾಫ್ ಮರ್ಡರ್, ಆಗಾಗ ಅ[...] ಮಾಫಿಯಾದ ಪಾಪದ ಹಣಕ್ಕೆ ಮಾರಾಟವಾ[...] ಶಾಸಕ-ಸಂಸದ-ಮಂತ್ರಿಗಳ್ಯಾರೂ ಅತ್ತ ಲಕ್ಷ್ಯ ಹರಿಸ[...] ಬೇಲೇಕೇರಿ ಎಂಬ ಬೆಸ್ತರ ಹಳ್ಳಿಯಂತೂ ಅ[...] ಧೂಳಿನಿಂದ ಸಾಕ್ಷಾತ್ ನರಕವಾಗಿತ್ತು, ಮನೆ-ಮನೆಗಳೂ, [...] ಕುಡಿಯುವ ನೀರಿನ ಬಾವಿ, ಮೀನುಗಾರ ಜೆಟ್ಟಿ-ಸ್ಮ[...] ಉಸಿರಾಡುವ ಗಾಳಿ ಪರಿಸರ... ಎಲ್ಲ ಕಲುಷಿತವಾಗಿತ್ತು, [...] ಅಸ್ತಮಾ-ಕ್ಯಾನ್ಸರ್-ಲಗ್ಸ್ ತೊಂದರೆಗೆ ಒಳಗಾಗಿದ್ದರು. [...] ಹಾಹಾಕಾರ ಎದ್ದಿತ್ತು, ಆದರೂ ಸಂಸದ-ಮಂತ್ರಿ-ಶ[...] ಯಾರೂ ತಲೆಕೆಡಿಸಿಕೊಂಡಿರಲಿಲ್ಲ, ಇದಕ್ಕೆಲ್ಲ ಮ[...] ಕಾರಣ-ಅದಿರು ಮಾಫಿಯಾದಿಂದ ಪ್ರತಿತಿಂಗಳು ಬರು[...] ಅಮೇಧ್ಯ! ಇಂಥ ಜನದ್ರೋಹಿಗಳು ಎಂದು ಜೈ[...] ಪಾಲಾಗುತ್ತಾರೆಂದು ಉತ್ತರ ಕನ್ನಡ ಜನ ಕಾಯುತ್ತಿದ್ದಾ[...]

ಅಂದಹಾಗೆ ಜಿಲ್ಲಾ ಉಸ್ತುವಾರಿ ಮಂತ್ರಿ ವಿಶ್ವೇಶ್ವರ ಹೆಗಡೆ ಕಾಗೇರಿ ಎಂಬ ನಾಜೂಕಯ್ಯನಿಗೂ ಅದಿರು ಮಾಫಿಯಾದ ಪ್ರಸಾದ ಪ್ರತಿತಿಂಗಳೂ ಬರುತ್ತಿತ್ತೆಂಬ ಗಂಭೀರ ಗುಲ್ಲು ಅಂದು ಇತ್ತು, ಇಂದೂ ಇದೆ. ಮಂತ್ರಿ ಕಾಗೇರಿಗಿಂತ ಕಡಿಮೆ ಪ್ರೊಫೈಲಿನವರಿಗೆಲ್ಲ ರಕ್ಷಣೆ ಸಿಗುತ್ತಿರುವಾಗ ಆತನಿಗೆ ಬರದಿರಲು ಸಾಧ್ಯವಾ? ಇದು ಸಹಜ ಅನುಮಾ[...] ಕಾಗೇರಿ ಜಿಲ್ಲಾ ಮಂತ್ರಿಯಾಗಿ ಅದಿ[...] ಮಾಫಿಯಾ- ಅದಿರು ಕಳ್ಳ ಸಾಗಾಣಿಕೆದಾರರ ಬಗ್ಗೆ ಮೃದು ಧೋರಣೆ ತಳೆದಿದ್ದು ಜಗತ್ತಿಗೇ ಗೊ[...] ಅದಿರು ಮಾಫಿಯಾದ ಹಾವಳಿ ಜೋರಾದಾಗ ಕಾಗೇರಿ ತೋರಿಸುತ್ತ[...] ಮೋಗಮ್ ನಡೆ-ನುಡಿ ಅನೇಕ ಸಂಶಯ ಸೃಷ್ಟಿಸಿದೆ.



ಚೆಡ್ಡಿ ಗುಳ್ಳೇನರಿ ಕಾಗೇರಿಯ[...] ತನಿಖೆಗೊಳಪಡಿಸುವ ತಾಕತ್ತು ಸಿಎಂ ಡಿವಿಎಸ್‌ಗೆ ಇದೆ[...] ಹಾಗಂತ ಉತ್ತರ ಕನ್ನಡಿಗರು ಮಾತಾಡಿಕೊಳ್ಳುತ್ತಿದ್ದಾರೆ[...]


• ನಹ[...]

ಮುಖ್ಯಮಂತ್ರಿ ಕೊಟ್ಟಿದ್ದು ಲಂಚವೋ ಭಿಕ್ಷೆಯೋ?

ಶಾಂತಾರಾಮನ ಸೈಟು ಯಾತ್ರೆ

ತಮ್ಮ ಹಿತ ಕಾಯ್ದ ಚೆಡ್ಡಿ ಪತ್ರಕರ್ತರಿಗೆಲ್ಲ ಲಕ್ಷ-ಕೋಟಿಯ ಲೆಕ್ಕದಲ್ಲಿ ಗಣಿ ರೆಡ್ಡಿಗಳು ರೊಕ್ಕ ತಿನ್ನಿಸಿದ ಸುದ್ದಿ ಪತ್ರಿಕೆಗಳ ಮೂಲಕ ಬಯಲಾಯಿತಲ್ಲ-

ಇನ್ನು ಅನಭಿಷಕ್ತ ಮು.ಮಂ. ಯಡ್ಡಿ ತನ್ನ ಭಟ್ಟಂಗಿ ಪತ್ರಕರ್ತರಿಗೆ ಏನಾದರೂ ಮಾಡಲೇಬೇಕಲ್ಲವೆ?




ಗಣಿ ರೆಡ್ಡಿಗಳಿಂದ ರೊಕ್ಕ ತಿಂದವರು, ಲೋಕಾಯುಕ್ತರ ಪಟ್ಟಿಯಲ್ಲಿರುವ ಭ್ರಷ್ಟ ಪತ್ರಕರ್ತರು, ಬಂದಬಂದ ಮುಖ್ಯಮಂತ್ರಿಗಳಿಗೆ ಮಸ್ಕಾ ಹೊಡೆದು ಸೈಟು ಗಿಟ್ಟಿಸಿದವರು; ಇತ್ಯಾದಿಗಳ ಸಾಲಿಗೀಗ ಹೊಸ ಹೆಸರೊಂದು ಸೇರ್ಪಡೆಯಾಗಿದೆ. ಅದು ಹೊಸದಿಗಂತದ ಸ್ಥಾನೀಯ ಸಂಪಾದಕ ಎಸ್. ಶಾಂತಾರಾಮ್!

ಬೆಂಗಳೂರಿನ ಪತ್ರಕರ್ತರ ವಲಯದಲ್ಲಿ ಆರೆಸ್ಸೆಸ್ ಹಿಂಡಿನ ಪ್ರಮುಖ ಪತ್ರಕರ್ತನೆಂದೇ ಚಾಲ್ತಿಯಲ್ಲಿರುವ ಹೊಸದಿಗಂತದ ರೆಸಿಡೆನ್ಷಿಯಲ್ ಎಡಿಟರ್ ಶಾಂತಾರಾಮ್‌ಗೆ ಅನಧಿಕೃತ ಸಿ.ಎಂ. ಯಡಿಯೂರಪ್ಪ ಹೆಚ್ಚೂಕಮ್ಮಿ 35 ಲಕ್ಷದ ಹೌಸಿಂಗ್ ಬೋರ್ಡ್ ಮನೆಯೊಂದನ್ನು ಉಚಿತವಾಗಿ ಕಾಣಿಕೆ ಕೊಟ್ಟಿದ್ದಾರೆ. ಇದನ್ನು ಲಂಚ ಅಥವಾ ಭಿಕ್ಷೆ ಎಂದರೆ ಶಾಂತಾರಾಮ್ ಮನಸ್ಸಿಗೆ ನೋವಾಗಬಹುದು. ಹಿಡಿದ ರೋಲ್‌ಕಾಲ್ ಎಂದರೂ ಪುಣ್ಯಾತ್ಮ ನೊಂದುಕೊಳ್ಳಬಹುದು. ಪತ್ರಕರ್ತನೊಬ್ಬನ ಭ್ರಷ್ಟಾಚಾರ, ಆತ್ಮವಂಚನೆಯಂಥ ಪದ ಒತ್ತಟ್ಟಿಗಿರಲಿ ಶಾಂತಾರಾಮ್ ಮಾಜಿ ಸಿ.ಎಂ. ಯಡ್ಡಿಗೆ ಮಾಡಿದ ಸೇವೆಗೆ ಸಂದ ಪ್ರತಿಫಲವೆಂದೇ ಇಟ್ಟುಕೊಳ್ಳೋಣ.

ಪ್ರಶ್ನೆಯೆಂದರೆ ಶಾಂತಾರಾಮ್‌ಗೆ ಹೊಸೂರು ರಸ್ತೆಯ ಸೂರ್ಯನಗರದಲ್ಲಿ ಮಂಜೂರಾದ 34,58,400 ರೂಪಾಯಿ ಬೆಲೆಬಾಳುವ ಹೌಸಿಂಗ್ ಬೋರ್ಡ್ ಮನೆಗೆ ಯಡ್ಡಿ ಪಾವತಿಸಿದ ಅಪಾಟಿ ದುಡ್ಡು ಸರ್ಕಾರದ್ದಾ ಅಥವಾ ಬಾಚಿದ ಬಾಬತ್ತಾ? ಮುಖ್ಯಮಂತ್ರಿಯೊಬ್ಬ ಪತ್ರಕರ್ತನೊಬ್ಬನಿಗೆ ಈ ಪಾಟಿ ದುಡ್ಡು ಏಕೆ ಕೊಡುತ್ತಾನೆ? ಯಾವ ಮೂಲದಿಂದ ಕೊಟ್ಟಿದ್ದಾನೆ? ಎಲ್ಲಾ ಪತ್ರಕರ್ತರನ್ನು ಬಿಟ್ಟು ಈತನೊಬ್ಬನಿಗೇ ಏಕೆ ಮನೆ ಖರೀದಿಸಿ ಕಾಣಿಕೆ ಸಲ್ಲಿಸುತ್ತಾನೆ?

ಇತ್ಯಾದಿ ಅನೇಕಾನೇಕ ಪ್ರಶ್ನೆಗಳ ಹಿಂದೊಂದು ಅಸಹ್ಯದ ಕತೆಯಿದೆ. ಅದು ಅಕ್ಷರ ಹಾದರದ ಆರೆಸ್ಸೆಸ್ ಶೈಲಿ. ಶಾಂತಾರಾಮ್ ಎಸ್. ಪತ್ರಕರ್ತನ ವೇಷದಲ್ಲಿರುವ ಆರೆಸ್ಸೆಸ್ ಕ್ರಿಮಿ. ಇಡೀ ಪತ್ರಿಕೋದ್ಯಮದ ಮಟ್ಟಿಗೆ ವಿಷ ದಿಗಂತವೆಂದೇ ಕುಖ್ಯಾತ.... ದಿಗಂತ ದಿನಪತ್ರಿಕೆ ಸತ್ತು ಎಷ್ಟೋ ವರ್ಷಗಳಾಗಿತ್ತು, ಅದಕ್ಕೆ ಮತ್ತೆ ಜೀವ ಕೊಟ್ಟಿದ್ದು ಯಡ್ಡಿ. ಕಳ್ಳ ದಾಖಲೆ ಸೃಷ್ಟಿಸಿ, ಪ್ರಜಾವಾಣಿಗಿಂತಲೂ ಅಧಿಕ ಪ್ರಸಾರ ಸಂಖ್ಯೆ ತೋರಿಸಿ, ಅದಕ್ಕೆ ಬಿಜೆಪಿ ಸರ್ಕಾರದಿಂದ 20 ಕೋಟಿಗೂ ಅಧಿಕ ಮೊತ್ತದ ಜಾಹೀರಾತು ಕಲ್ಪಿಸಿದ ಯಡಿಯೂರಪ್ಪ ಧರ್ಮಾನ್ಯಗಳಿಗೆ ದುಡ್ಡು ಕೊಟ್ಟಂತೆ... ದಿಗಂತಕ್ಕೂ ಒಂದು ಪಾಲು ಕಾಣಿಸಿದರು. ಏಕೆಂದರೆ ಇದು ಆರೆಸ್ಸೆಸ್ ಮಾಲೀಕತ್ವದ ದಿನಪತ್ರಿಕೆ. ಮುಸ್ಲಿಂ ಹುಡುಗ ಹಿಂದೂ ಹುಡುಗಿಯನ್ನು ಓಡಾಯಿಸಿದ, ಯಾರೋ ಚರ್ಚ್ ಪಾದ್ರಿ ಮತಾಂತರಕ್ಕೆ ದುಡ್ಡು ಕೊಟ್ಟ; ಇತ್ಯಾದಿ ವಿಕೃತ ವರದಿಗಳೇ ಹೊಸದಿಗಂತದ ಜೀವಾಳ.



ಹೀಗಾಗಿ ಮನುಷ್ಯರ್‍ಯಾರೂ ಇದನ್ನು ಓದ ಸಾಧ್ಯ. ಇಂಥ ದಿವಂಗತ ಪತ್ರಿಕೆಗೆ ಸ್ಥಾನೀಯ ಸಂಪಾದಕನಾದ ಶಾಂತಾರಾಮ್‌ಗೆ ಈಗಾಗಲೇ ಕೆಂಗೇರಿ ಉಪನಗರದ ಬಂಡೆಮಠದಲ್ಲೊಂದು ಹೌಸಿಂಗ್ ಬೋರ್ಡ್ ಸೈಟಿದೆ. ಈತನ ಪತ್ನಿಗೆ ಜೀವವಿಮಾ ನಿಗಮ ಅಂದರೆ ಎಲ್‌ಐಸಿಯಲ್ಲಿ ನೌಕರಿಯಿದೆ. ಕಾನೂನು ರೀತ್ಯ ಈಗಾಗಲೇ ಹೌಸಿಂಗ್ ಬೋರ್ಡ್ ನಿವೇಶನ ಮಂಜೂರಾದವರಿಗೆ ಮತ್ತೆ ಸೈಟು ಕೊಡುವಂತಿಲ್ಲ. ಹೌಸಿಂಗ್ ಬೋರ್ಡ್ ಮನೆಗೆಂದು ಯಾರೇ ಅರ್ಜಿ ಹಾಕಿದರೂ ತಮಗೆ ಮತ್ತೊಂದು ಮನೆಯಿಲ್ಲ ಎಂದು ಲಿಖಿತ ಪ್ರಮಾಣಪತ್ರ ಸಲ್ಲಿಸಬೇಕು. ಈಗಾಗಲೇ ಮನೆ ಇದ್ದೂ ನಿವೇಶನ ಮಂಜೂರಾಗಿಯೂ ಇದ್ದರೂ 'ಇಲ್ಲ' ಎಂದು ಪ್ರಮಾಣಪತ್ರ ಸಲ್ಲಿಸಿದರೆ ಅದು ಶಿಕ್ಷಾರ್ಹ ಅಪರಾಧ!

ಹೀಗಿದ್ದೂ ಶಾಂತಾರಾಮ್ ತನಗೆ ನಿವೇಶನವಾಗಲಿ, ಮನೆಯಾಗಲಿ ಇಲ್ಲ ಎಂದು ಗೃಹಮಂಡಳಿಗೆ ಅರ್ಜಿ ಸಲ್ಲಿಸುತ್ತಾನೆ. ಅದನ್ನು ಯಡ್ಡಿ ಶಿಷ್ಯ ಸಿದ್ಧಲಿಂಗಸ್ವಾಮಿಯೇ ಖುದ್ದು ನಿಂತು ವಸತಿ ಇಲಾಖೆಗೆ ರವಾನಿಸುತ್ತಾನೆ. ಅಲ್ಲಿಂದ ಅದು ಗೃಹ ಆಯುಕ್ತರ ಕಚೇರಿಗೆ ರವಾನೆಯಾಗಿದೆ. ಆರಂಭಿಕ ಠೇವಣಿಯಾಗಿ ಶಾಂತಾರಾಮ್ 70,000 ರೂಪಾಯಿ ಪಾವತಿಸುತ್ತಾನೆ. ಹೀಗೆ ಮನೆಗೆಂದು ಅರ್ಜಿ ಹಾಕುವಾಗ ತನ್ನ ಶ್ರೀನಿವಾಸ್ ನಗರದ ಮನೆಯ ವಿಳಾಸ ನೀಡದೇ ಮಲ್ಲೇಶ್ವರದ ಬಿಜೆಪಿ ಪಕ್ಷದ ಕಚೇರಿಯನ್ನು ತನ್ನ ಅಧಿಕೃತ ವಾಸದ ಮನೆಯೆಂದು ಶಾಂತಾರಾಮ್ ದಾಖಲಿಸಿದ್ದಾನೆ. ವರ್ಷಾಂಪರಗಳಿಂದ ಗೃಹ ಮಂಡಳಿಯ ಮನೆಗಾಗಿ ಅರ್ಜಿ ಹಾಕಿ, ದುಡ್ಡು ಕಟ್ಟಿ ಕಾಯ್ದು ಕೂತ ಸಾವಿರಾರು ಮಂದಿಗೆ ಈತನಕ ಮನೆಯಿರಲಿ ಗೃಹಮಂಡಳಿಯಿಂದ ಯಃಕಶ್ಚಿತ್ ನೋಟಿಸು ಕೂಡ ಬರುವುದು ಕಷ್ಟ. ಅಂಥಾದ್ದರಲ್ಲಿ ಅರ್ಜಿ ಹಾಕಿದ ಒಂದೇ ತಿಂಗಳಿಗೆ ಶಾಂತಾರಾಮ್‌ರ ಬಿಜೆಪಿ ಕಚೇರಿಯ ವಿಳಾಸಕ್ಕೆ ಹೌಸಿಂಗ್ ಕಮೀಷನರ್‌ರಿಂದಲೇ ಮನೆ ಮಂಜೂರಾತಿ ಆದೇಶ ಬರುತ್ತದೆ.

ಆದೇಶ ಸಂಖ್ಯೆ **SW/MIG/House/MIG/291, TYPEA/2009-10** ರ ರಿಜಿಸ್ಟ್ರೇಷನ್ ನಂ: **MIG00023733** ರಂತೆ ಪೂರ್ಣ ಬೆಲೆ ಆಧಾರದ ಮೇಲೆ ಸ್ವತ್ತಿನ ಸಂಖ್ಯೆ 291 TYPEA ರಲ್ಲಿ 243 ಚದುರ ಮೀಟರ್ ವಿಸ್ತೀರ್ಣದ 13.5x18 ಅಳತೆಯ ಮನೆಯನ್ನು ಶಾಂತಾರಾಮ್‌ಗೆ ಮಂಜೂರು ಮಾಡಿರುತ್ತಾರೆ.


ಇಂಥದೊಂದು ಆದೇಶವನ್ನು ಹೌಸಿಂಗ್ ಕಮಿಷನರ್ ನೀಡಿದ್ದು 2010 ರ ಜನವರಿ 12 ರಂದು!

ಈ ಹೊತ್ತಿಗಾಗಲೇ ಶಾಂತಾರಾಮ್ ಕೇವಲ 70 ಸಾವಿರ ರೂಪಾಯಿಗಳನ್ನಷ್ಟೇ ಪಾವತಿಸಿದ್ದ. ಉಳಿಕೆ 33,88,400 ರೂಪಾಯಿಗಳನ್ನಾತ ನಾಲ್ಕು ಕಂತುಗಳಲ್ಲಿ ತಲಾ 8,47,100 ರೂಪಾಯಿಗಳಂತೆ 2010 ರ ಮೇ 12 ರ ಒಳಗೆ ಪಾವತಿಸಬೇಕು. ಆ ರೀತಿ ಪೂರ್ತಿ ನಾಲ್ಕು ತಿಂಗಳೊಳಗೆ ಪೂರ್ತಿ ಪಾವತಿಸಿದರಷ್ಟೇ ಮನೆ ಶಾಂತಾರಾಮನ ಸೊತ್ತಾಗಲು ಸಾಧ್ಯ. ಈ ಹಂತದಲ್ಲೇ ಶಾಂತಾರಾಮ್ ಅಸಹ್ಯವೊಂದಕ್ಕೆ ಕೈಹಾಕಿದ್ದು. ಅದು ಮುಖ್ಯಮಂತ್ರಿಗೆ ಬರೆದ ಭಿಕ್ಷಾ ಪತ್ರ!


ಶ್ರೀ ಬಿ.ಎಸ್. ಯಡಿಯೂರಪ್ಪನವರು ಸನ್ಮಾನ್ಯ ಮುಖ್ಯಮಂತ್ರಿಗಳು ಕರ್ನಾಟಕ ಸರ್ಕಾರ... ಎಂಬ ಉಪಮೇಯದಿಂದ ಶುರುವಾಗುವ ಸ್ಥಾನೀಯ ಸಂಪಾದಕ ಶಾಂತಾರಾಮ್‌ರ ಯಾಚನೆಯ ಮುಂದಿನ ಸಾಲುಗಳು ಈ ರೀತಿ ಇವೆ. '..... ತಾವು ನನಗೆ ಬೆಂಗಳೂರಿನಲ್ಲಿ ವಾಸಿಸಲು ಮನೆ ಇಲ್ಲದಿರುವುದನ್ನು ಗುರುತಿಸಿ ತಮ್ಮ ವಿವೇಚನಾ ಕೋಟಾದಿಂದ ಗೃಹಮಂಡಳಿ ವತಿಯಿಂದ ಮನೆ ಹಂಚಿಕೆ ಮಾಡಿರುವುದಕ್ಕೆ ತಮಗೆ ಅತ್ಯಂತ ಕೃತಜ್ಞನಾಗಿದ್ದೇನೆ. ತಮ್ಮಿಂದ ನನಗೆ ಜೀವನದಲ್ಲಿ ಎಂದೂ ನೆನಪಿಡಬೇಕಾದ ಸಹಾಯ ಸಿಕ್ಕಿರುವುದು ನನಗೆ ಬಹಳ ಉಪಕಾರವಾದಂತಾಗಿದೆ. ಈಗ ಗೃ.ಮಂ. ವತಿಯಿಂದ ಸೂರ್ಯನಗರದಲ್ಲಿ ಹಂಚಿಕೆಯಾಗಿರುವ ಮನೆಗೆ ಒಟ್ಟು 34,88,400 (ಮೂವತ್ನಾಲ್ಕು ಲಕ್ಷ ಎಂಭತ್ತೆಂಟು ಸಾವಿರದ ನಾನೂರು) ರೂಪಾಯಿಗಳನ್ನು ಪಾವತಿಸಬೇಕಾಗಿದೆ. ಈ ಮೊತ್ತದಲ್ಲಿ ಈಗಾಗಲೇ 71,000 ರೂಪಾಯಿಗಳನ್ನು ಪಾವತಿಸಿದ್ದೇನೆ. ಸದ್ಯದ ನನ್ನ ಆರ್ಥಿಕ ಪರಿಸ್ಥಿತಿಯಲ್ಲಿ ಇಷ್ಟು ಭಾರೀ ಮೊತ್ತವನ್ನು ಹೊಂದಿಸುವುದು ನನಗೆ ಕಷ್ಟವಾಗಿದೆ. ಆದ್ದರಿಂದ ತಾವು ದಯ ಮಾಡಿ ಈ ಮೊತ್ತ ಪಾವತಿಗೆ ನೆರವು ನೀಡಬೇಕಾಗಿ ಕಳಕಳಿಯಿಂದ ಬೇಡಿಕೊಳ್ಳುತ್ತೇನೆ....!

ತಮ್ಮ ವಿಶ್ವಾಸಿ, ಶಾಂತಾರಾಮ್, ಎಸ್. ಸ್ಥಾನೀಯ ಸಂಪಾದಕ ಹೊಸದಿಗಂತ ಎಂಬ ಹಸ್ತಾಕ್ಷರದ ಮೂಲಕ ಅಂತ್ಯಗೊಳ್ಳುವ ಸದರಿ ಸೈಟು ಯಾಚನೆಯ ಭಿಕ್ಷಾ ಪತ್ರ 2010 ರ ಜನವರಿ 22 ರಂದು ಮುಖ್ಯಮಂತ್ರಿ ಯಡ್ಡಿಯ ಸನ್ನಿಧಿಗೆ ರವಾನೆಯಾಗಿದೆ. ಅಂದರೆ ಮನೆ ಮಂಜೂರಾತಿ ಆದೇಶ ಹೊರಬಿದ್ದ ಕೇವಲ 10 ನೇ ದಿನಕ್ಕೆ!

ಇದಿಷ್ಟೂ ಶಾಂತಾರಾಮನ ಸೈಟು ಯಾತ್ರೆಯ ಅಧಿಕೃತ ದಾಖಲೆಗಳಾದರೆ ಗೃಹಮಂಡಳಿಯ ಮೂಲಗಳು ಹೇಳುವ ಕತೆಯೇ ಮತ್ತೊಂದು. ಯಾರೂ ಓದದ, ಬದುಕಿದ್ದೂ ಸತ್ತ ವಿಷ ದಿಗಂತಕ್ಕೆ ಹೇಗೆ ಯಡ್ಡಿ ಸರ್ಕಾರಿ ಬೊಕ್ಕಸದ ದುರ್ಬಳಕೆಗೆ ಕೈಯಿಟ್ಟರೋ ಹಾಗೇ ಅದರ ಸ್ಥಾನೀಯ ಸಂಪಾದಕನ ಗೃಹಭಾಗ್ಯಕ್ಕೂ 33,88,400 ರೂಪಾಯಿಗಳ ವ್ಯವಸ್ಥೆ ಮಾಡಿಕೊಟ್ಟರು. ಆದರಿದು ಯಡ್ಡಿ ತಮ್ಮ ಜೇಬಿನಿಂದ ಕೊಟ್ಟ ದುಡ್ಡು. ಸ್ವಂತ ದುಡಿದ ದುಡ್ಡಂತೂ ಆಗಿರಲಿಕ್ಕಿಲ್ಲ. ಸ್ವಂತ ದುಡಿಮೆಯ ದುಡ್ಡಾಗಿದ್ದರೆ ಈ ರೀತಿಯ ಔದಾರ್ಯ ತೋರಿಸುತ್ತಲೂ ಇರಲಿಲ್ಲ. ತನ್ನ ಛೇಲಾ ಸಿದ್ಧಲಿಂಗಸ್ವಾಮಿಗೆ ಹೇಳಿ ಪೂರ್ತಿ ಬಾಕಿ ಮೊತ್ತವನ್ನು ಒಂದೇ ಕಂತಿನಲ್ಲಿ ಕಟ್ಟಿಸಿದರಂತೆ ಸಿ.ಎಂ. ಯಡ್ಡಿ.



ಇಲ್ಲಿ ಪ್ರಶ್ನೆಯೆಂದರೆ; ಈ ಪಾಟಿ ದುಡ್ಡನ್ನು ಮುಖ್ಯಮಂತ್ರಿಯಾಗಿದ್ದ ಯಡ್ಡಿ ಅದೆಲ್ಲಿಂದ ತಂದು ಕೊಟ್ಟರು? ಛೇಲಾ ಸಿದ್ಧಲಿಂಗಸ್ವಾಮಿ ಮೂಲಕ ಹೌಸಿಂಗ್ ಬೋರ್ಡಿಗೆ ಪಾವತಿಯಾದ ಈ ಮೊತ್ತ ಸರ್ಕಾರಿ ಬೊಕ್ಕಸದ್ದಾ ಅಥವಾ ಭ್ರಷ್ಟಾಚಾರದಿಂದ ಬಂದಿದ್ದಾ? ಯಡ್ಡಿ ಅದಕ್ಕೆ ಏನೆಂದು ಲೆಕ್ಕ ಕೊಡುತ್ತಾರೆ? ತನಗೆ ಈಗಾಗಲೇ ಗೃಹ ಮಂಡಳಿಯಿಂದ ಕೆಂಗೇರಿಯಲ್ಲಿ ನಿವೇಶನ ಮಂಜೂರಾಗಿದ್ದರೂ ಅದನ್ನು ಮುಚ್ಚಿಟ್ಟು ಮತ್ತೆ ಸೂರ್ಯನಗರದಲ್ಲಿ ಮನೆ ಗಿಟ್ಟಿಸಿದ ಶಾಂತಾರಾಮನಿಗೆ ಮುಖ್ಯಮಂತ್ರಿ ಯಡ್ಡಿ ನೆರವಾಗಿದ್ದು ತಪ್ಪಲ್ಲವೆ? ವಿವೇಚನಾ ಕೋಟಾದಿಂದಲೇ ಕೊಟ್ಟಿದ್ದರೂ ಅದು ಅಕ್ರಮ ತಾನೆ? ಸರ್ಕಾರಕ್ಕೆ ಸುಳ್ಳು ದಾಖಲೆ ಸಲ್ಲಿಸಿದ ಶಾಂತಾರಾಮನಿಗೇನು ಶಿಕ್ಷೆ? ಅವ್ಯವಹಾರ ಎಸಗಿದ ಯಡ್ಡಿಗೆ ಏನು ಶಿಕ್ಷೆ?


KARNATAKA HOUSING BOARD


Registration No./ ನೋಂದಣಿ ಸಂಖ್ಯೆ : MIG00023733

ALLOTTEE NAME : SHANTHARAM S

• Extension of Time NOT Allowed

For HOUSING COMMISSIONER

ಹೌಸಿಂಗ್ ಕಮೀಷನರ್ ಕಚೇರಿಯ ಮಂಜೂರಾತಿ ಆದೇಶ


22.01.2010

ಶ್ರೀ ಬಿ.ಎಸ್. ಯಡಿಯೂರಪ್ಪನವರು

ಸನ್ಮಾನ್ಯ ಮುಖ್ಯಮಂತ್ರಿಗಳು,

ಕರ್ನಾಟಕ ಸರ್ಕಾರ

ಬೆಂಗಳೂರು

ವಂದನೆಗಳೊಂದಿಗೆ,


ಮು.ಮಂ.ಗೆ ಶಾಂತಾರಾಮನ ಭಿಕ್ಷಾ ಪತ್ರ

ಯಾರೋ ಗುಮಾಸ್ತ ಐನೂರೋ ಸಾವಿರವೋ ಲಂಚ ಕಿತ್ತು ಸಿಕ್ಕಿಬಿದ್ದರೆ ಇದೇ ಹೊಸದಿಗಂತ ಕಾಲಮ್ಮುಗಟ್ಟಲೆ ವರದಿ ಪ್ರಕಟಿಸುತ್ತದೆ. ಅದರ ಸ್ಥಾನೀಯ ಸಂಪಾದಕ ಮುಖ್ಯಮಂತ್ರಿಯಿಂದಲೇ ಲಂಚಕ್ಕೆ ಕೈಚಾಚಬಹುದಾ? ಹೊಸ ದಿಗಂತಕ್ಕಾಗಲಿ, ಅದರ ಆರೆಸ್ಸೆಸ್ ಪತ್ರಕರ್ತರಿಗಾಗಲಿ ಯಾವ ನೈತಿಕತೆಯಿದೆ?

• ರಾ. ಸೋಮನಾಥ್

ಚೆಡ್ಡಿ ಪತ್ರಕರ್ತರ ಹಾವಳಿ ಮತ್ತು ಯಡ್ಡಿ ಕೊಡಿಸಿದ ವ್ಯಾಗನ್ ಆರ್!

ಇಡೀ ಪತ್ರಿಕೋದ್ಯಮವನ್ನೇ ಆರೆಸ್ಸೆಸ್ ಕಪಿಮುಷ್ಟಿಯಲ್ಲಿ ಹಿಡಿತ ಸಾಧಿಸುವ ವೈದಿಕಶಾಹಿಯ ಷಡ್ಯಂತ್ರಕ್ಕೆ ತಕ್ಕಂತೆ ಚೆಡ್ಡಿ ಪತ್ರಕರ್ತರ ವಿಷವರ್ತುಲವೊಂದು ಇವತ್ತು ಕನ್ನಡ ಮಾಧ್ಯಮಗಳನ್ನು ಆವರಿಸಿಕೊಂಡಿದೆ. ಈ ಪೈಕಿ ಒಂದು ಹಿಂಡು ಬ್ರಾಹ್ಮಣ ಪತ್ರಕರ್ತರ ಗುಂಪಿಗೆ ಈ ಶಾಂತಾರಾಮನೇ ಲೀಡರ್. ಬರೆಯಲು ಗೊತ್ತಿಲ್ಲ. ನಾಲ್ಕು ಮಂದಿ ಓದಿ ಭೇಷ್ ಎನ್ನಿಸಿಕೊಳ್ಳಬಲ್ಲ ಒಂದೇ ಒಂದು ವರದಿಯನ್ನೂ ಈತನಿಂದ ಬರೆಯಲಾಗಿಲ್ಲ. ಶುರುವಿನಲ್ಲಿ ಸಂಯುಕ್ತ ಕರ್ನಾಟಕಕ್ಕೆ ಜಾತಿ ಆಧಾರದ ಮೇಲೇ ವರದಿಗಾರನಾಗಿ ನೇಮಕಗೊಂಡ. ಅಲ್ಲಿ ಪ್ರೆಸ್‌ಮೀಟ್‌ಗಳಲ್ಲಿ ಸಿಗುತ್ತಿದ್ದ 'ಗಿಫ್ಟ್'ಗಳ ಹಂಚಿಕೆ ವಿಷಯದಲ್ಲಿ ಹುಣಸವಾಡಿ ರಾಜನ ಜೊತೆ ಕಿತ್ತಾಡಿಕೊಂಡ.



ಹುಣಸವಾಡಿ ರಾಜ ಸಂಪಾದಕ ಶಾಮರಾಯರಿಗೆ ಅದೇನೆಂದು ಬತ್ತಿ ಇಟ್ಟನೋ, ಆರೇ ತಿಂಗಳಿಗೆ ಶಾಂತಾರಾಮನನ್ನೆತ್ತಿ ಹುಬ್ಬಳ್ಳಿಗೆ ಝಾಡಿಸಿಬಿಟ್ಟರು ಶಾಮರಾವ್. ಪಕ್ಕಾ ಬಿಜೆಪಿಯಾದರೂ ಆಗ ಕಾಂಗ್ರೆಸ್ ಸಂಸದರಾಗಿದ್ದ ಕನಕಪುರದ ಚಂದ್ರಶೇಖರಮೂರ್ತಿಯವರಿಗೆ ಮಸ್ಕಾ ಹೊಡೆದು ಬೆಂಗಳೂರಿನಿಂದ ಎತ್ತಂಗಡಿಯಾಗಿದ್ದ ತನ್ನ ಪತ್ನಿಯ ಎಲ್‌ಐಸಿ ಹುದ್ದೆಯ ವರ್ಗಾವಣೆಯನ್ನು ಶಾಂತಾರಾಮ್ ರದ್ದು ಮಾಡಿಕೊಂಡಿದ್ದ!

ನೆಟ್ಟಗೆ ಒಂದು ತಿಂಗಳು ಕೂಡ ಹುಬ್ಬಳ್ಳಿಯಲ್ಲಿ ಹೆಣಗಲಾಗದೇ ಬೆಂಗಳೂರಿನಲ್ಲಿ ಓಡಾಡಿಕೊಂಡಿದ್ದನ್ನು ಗಮನಿಸಿದ ಶಾಮರಾವ್ ಕೆಲಸದಿಂದಲೇ ಕಿತ್ತೆಸೆದರು. ಅದೇ ಹೊತ್ತಿಗೆ ಹೊಸದಿಗಂತ ಬೆಂಗಳೂರು ಆವೃತ್ತಿ ಶುರುವಾಗಿತ್ತಲ್ಲ ಅಲ್ಲಿ ಶಾಂತಾರಾಮ್ ಪುಡಿ ಸಂಬಳಕ್ಕೆ ಸೇರಿಕೊಂಡ. ಕೆಲಸ ಗೊತ್ತಿಲ್ಲ, ಬರೆಯಲು ಬರುವುದಿಲ್ಲ, ಜೊತೆಗೆ ಆರೆಸ್ಸೆಸ್-ಬಿಜೆಪಿಯಲ್ಲಿ ಸಕ್ರಿಯನಾಗಿದ್ದರಿಂದ ಬೇರೆ ಪತ್ರಿಕೆಗಳಲ್ಲಿ ಕೆಲಸ ಸಿಗುವುದು ಕಷ್ಟ. ಹೇಗೆ ಹೊಸದಿಗಂತಕ್ಕೆ ಮಾನವಂತ ಪತ್ರಕರ್ತರ್‍ಯಾರೂ ಸೇರುವುದಿಲ್ಲವೋ ಹಾಗೇ ಇಂಥವರನ್ನು ಬಿಟ್ಟರೆ ಹೊಸದಿಗಂತಕ್ಕೆ ಗತಿಯಿಲ್ಲ.



ಆಗ ಹೊಸದಿಗಂತಕ್ಕೆ ಸಂಪಾದಕನಾಗಿದ್ದು ಕಟ್ಟರ್ ಆರೆಸ್ಸೆಸ್ ದು.ಗು. ಲಕ್ಷ್ಮಣ್. ಜೊತೆಗೆ ಎಂ.ಎಚ್. ಶ್ರೀಧರ ಉರ್ಫ್ ಗಡ್ಡದ ಶ್ರೀಧರನೆಂಬ ಪಕ್ಕಾ ಚೆಡ್ಡಿ ಕೂಡ ಪತ್ರಕರ್ತನ ಸೋಗಿನಲ್ಲಿ... ದಿಗಂತಕ್ಕೆ ಸೇರಿಕೊಂಡಿದ್ದ. ಕಾಲಕ್ರಮೇಣ ಇವರಿಬ್ಬರನ್ನೂ ಮೀರಿಸಿ ಚೀಫ್ ರಿಪೋರ್ಟರ್ ಕಂ ಸ್ಥಾನೀಯ ಸಂಪಾದಕನ ಹುದ್ದೆಗೇರಿದ್ದು ಶಾಂತಾರಾಮ. ವಿಪರ್‍ಯಾಸವೆಂದರೆ ಹೆಸರಿಗೆ ಪತ್ರಕರ್ತನಾದರೂ ಪಾರ್ಟ್‌ಟೈಮ್ ಉಪಕಸುಬಾಗಿ ಬಿಜೆಪಿ ಪಕ್ಷದ ಕಚೇರಿ ಸಹಾಯಕನಾಗಿಯೂ ಚಾಲ್ತಿಯಲ್ಲಿದ್ದ.

ಆದರೆ ಇದೆಲ್ಲಕ್ಕೂ ಮಿಗಿಲಾಗಿ ಶಾಂತಾರಾಮ್ ಬಿಜೆಪಿ ನಾಯಕ ಯಡಿಯೂರಪ್ಪನವರ ನಂಬಿಕಸ್ತ ಬಂಟ. ಯಡ್ಡಿ ವಿರೋಧ ಪಕ್ಷದ ನಾಯಕನಾಗಿದ್ದಾಗ ಸಿದ್ಧಲಿಂಗಸ್ವಾಮಿ ಬಿಟ್ಟರೆ ಈತನೇ ಅನಧಿಕೃತ ಪೀಎ. ಚೆಡ್ಡಿ ಪತ್ರಕರ್ತರ ಪೈಕಿ ಅನಂತ್ ಕುಮಾರ್ ವಿರೋಧಿ ಬಣಕ್ಕೆ ಈತ ಕೂಡ ಪ್ರಮುಖನಾದ್ದರಿಂದ ಯಡ್ಡಿ ಮುಖ್ಯಮಂತ್ರಿಯಾಗಿದ್ದೇ ಹೊಚ್ಚ ಹೊಸದೊಂದು ವ್ಯಾಗನ್ ಆರ್ ಕಾರು ಕೊಡಿಸಿಕೊಟ್ಟರು. ಅದರ ಪೆಟ್ರೋಲ್ ಖರ್ಚಿಗೆಂದು 'ಮಂತ್ಲಿ' ಮೇಲ್ಖಾಸಿನ ವ್ಯವಸ್ಥೆಯನ್ನೂ ಕಲ್ಪಿಸಿಕೊಟ್ಟರು. ಈ ರೀತಿ ಯಡ್ಡಿ ಹಾಕಿದ ಬಿಟ್ಟೀಕೂಳಿನ ಪರಮಾವಧಿಯೇ ಈಗ ಸಿಕ್ಕಿರುವ ಬಿಟ್ಟಿ ಹೌಸಿಂಗ್ ಬೋರ್ಡ್ ಮನೆ!

ಪತ್ರಿಕೋದ್ಯಮವೆಂದರೆ ಇದೇನಾ? ಪತ್ರಕರ್ತರ ಮಾನ ಕಳೆಯುವುದೆಂದರೆ ಹೀಗೇನಾ?

ಸಿಬಿಐ ಬಲೆಗೆ ರೆಡ್ಡಿ ಪತ್ನಿ

ಲಕ್ಷ್ಮಿ ಅರುಣಾಗೂ ಜೈಲು?



ದೇವಾನುದೇವತೆಗಳಿಗೆ ಮಾಡಿಸಿಕೊಟ್ಟ ಚಿನ್ನದ ಕಿರೀಟಗಳಾಗಲಿ, ಜನಾರ್ದನ ರೆಡ್ಡಿ ಜೈಲಿನಲ್ಲಿ ಮಾಡುವ ಶಿವ ಪೂಜೆಯಾಗಲಿ ಈಗ ಸಹಾಯಕ್ಕೆ ಬರುವುದಿಲ್ಲ. ಅಷ್ಟೇ ಏಕೆ ರೆಡ್ಡಿ ಅರೆಸ್ಟಾದ ನಂತರ ವಾಸ್ತು ದೋಷ ಎಂದು ಯಾವನೋ ಮುಠ್ಠಾಳ ಹೇಳಿದ ಮಾತು ಕೇಳಿ ಮನೆಯ ಮುಖ್ಯ ದ್ವಾರವನ್ನೇ ಕಿತ್ತು ಬದಲಾಯಿಸಿದ್ದಾರೆ.

ಉಹುಂ, ಅದು ಈಗ ಯಾವುದೇ ಪರಿಣಾಮ ಬೀರಲಾರದು. ಕರ್ನಾಟಕದ ಜನತೆಗೆ ಮುಂದಿನ ದೀಪಾವಳಿಗೆ ಒಂದೊಳ್ಳೆ ಸಿಹಿ ಸುದ್ದಿ ಸಿಗುವ ಸಾಧ್ಯತೆಯಿದೆ.

ಅದು ಗಾಲಿ ಲಕ್ಷ್ಮಿ ಅರುಣಾಳ ಬಂಧನ!



ಗಣಿಕಳ್ಳ ಗಾಲಿ ಜನಾರ್ದನ ರೆಡ್ಡಿಯ ಅರ್ಧಾಂಗಿನಿಯಾಗಿರುವ ಲಕ್ಷ್ಮೀ ಅರುಣಾ ಬರೀ ರೆಡ್ಡಿಯ ಜೀವನದಲ್ಲಿ ಮಾತ್ರವಲ್ಲ ಅವನ ಕಾಳದಂಧೆಗಳಲ್ಲೂ ಅರ್ಧಾಂಗಿನಿಯೇ ಆಗಿದ್ದಾಳೆ.

ಈ ಖದೀಮ ದಂಪತಿಗಳು ಕರ್ನಾಟಕದಲ್ಲಿ ಅಸೋಸಿಯೇಟೆಡ್ ಮೈನಿಂಗ್ ಕಂಪನಿಯ ಹೆಸರಿನಲ್ಲಿ ನಡೆಸಿರುವ ಅಕ್ರಮ ಅದಿರು ದಂಧೆಯ ಬಗ್ಗೆ ಸುಪ್ರೀಂ ಕೋರ್ಟ್ ಒಂದು ಪ್ರತ್ಯೇಕ ಸಿಬಿಐ ತನಿಖೆಗೆ ಆದೇಶಿಸಿದೆ.

ಕೋರ್ಟಿನ ಆದೇಶದಂತೆ ಸಿಬಿಐ ಈಗತಾನೆ ಒಂದು ದೂರು ದಾಖಲಿಸಿಕೊಂಡು ತನಿಖೆಯ ಅಖಾಡಕ್ಕಿಳಿದಿದೆ. ಈ ತನಿಖೆಯ ಮೊದಲ ಹೆಜ್ಜೆಯಲ್ಲೇ ಸಿಬಿಐನ ಕಾನೂನಿನ ಕೈಗೆ ಸಿಗುವುದು ಲಕ್ಷ್ಮೀ ಅರುಣಾಳೇ.

ಯಾಕೆಂದರೆ ಆಕೆ ಅಸೋಸಿಯೇಟೆಡ್ ಮೈನಿಂಗ್ ಕಂಪನಿಯ ಪಾರ್ಟನರ್ ಆಗಿದ್ದಾಳೆ. ರೆಡ್ಡಿಯನ್ನು ಜಾಮೀನಿನ ಮೇಲೆ ಬಿಡಿಸಲು ದೆಹಲಿಗೆ ಹೋಗಿ ಲಾಯರ್‌ಗಳ ಎದುರೇ ಕೂತಿರುವ ರಾಮುಲು, ಶಾಸಕರಾದ ಸುರೇಶ್ ಬಾಬು, ನಾಗೇಂದ್ರಗೆ ಈಗ ಡಬಲ್ ಗಾಬರಿ. ಈಗಾಗಲೇ ಜೈಲು ಪಾಲಾಗಿರುವ ರೆಡ್ಡಿಯನ್ನೇ ಬಿಡಿಸಿ ಆಚೆ ತರಲು ಆಗದಿರುವಾಗ ಲಕ್ಷ್ಮೀ ಅರುಣಾಳೂ ಜೈಲು ಪಾಲಾದರೆ ಬಿಡಿಸುವುದು ಹೇಗೆ ಎಂಬ ಚಿಂತೆ ಅವರಿಗೆ.

ಎಎಂಸಿ ಹೆಸರಲ್ಲಿ ದರೋಡೆ

ಬಳ್ಳಾರಿಯ ಪಾರ್ವತಿನಗರದ ಪಾರ್ವತಮ್ಮ ಮತ್ತಾಕೆಯ ಮಗ ವಿಶ್ವನಾಥ ಮಾಲೀಕತ್ವದ ಎಎಂಸಿ ಅರ್ಥಾತ್ ಅಸೋಸಿಯೇಟೆಡ್ ಮೈನಿಂಗ್ ಕಂಪನಿಯು ರೆಡ್ಡಿ ವಶಕ್ಕೆ ಹೋದ ಕತೆ ಇಂಟರೆಸ್ಟಿಂಗಾಗಿದೆ.

ಈ ಪಾರ್ವತಮ್ಮನ ಗಂಡ ಕೋಳೂರು ಮಠದ ರುದ್ರಯ್ಯ ಎಂಬುವನೇ ಎಎಂಸಿಯ ಮೂಲ ಮಾಲೀಕ. ಈತನಿಗೆ ಆಗಿನ ಸರ್ಕಾರ 1966ರ ಮಾರ್ಚ್ 2ರಿಂದ 30 ವರ್ಷಗಳ ಗಣಿ ಗುತ್ತಿಗೆಯೊಂದನ್ನು ಕೊಟ್ಟಿತ್ತು. ಸಂಡೂರು ತಾಲ್ಲೂಕಿನ ಜೈಸಿಂಗಪುರದ 16.19 ಹೆಕ್ಟೇರ್ ಪ್ರದೇಶದಲ್ಲಿ ರುದ್ರಯ್ಯ ಗಣಿಗಾರಿಕೆ ನಡೆಸಬೇಕಿತ್ತು. ಆದರೆ ಆ ಕಾಲದಲ್ಲಿ ಕಬ್ಬಿಣದ ಅದಿರಿಗೆ ಈ ಮಟ್ಟದ ಬೇಡಿಕೆಯಾಗಲಿ ದುಡ್ಡಾಗಲಿ ಇರಲಿಲ್ಲ. ಈ ರುದ್ರಯ್ಯ ಬೇಕುಬೇಡ ಎಂಬಂತೆ ಗಣಿಜಗತ್ತಿನಲ್ಲಿ ಕೆಲದಿನ ಕಾಣಿಸಿಕೊಂಡರು. ಕೊನೆಗೆ ತೀರಿಕೊಂಡರು.

ಇವರಿಗೆ ಪ್ರಭು ವಿಶ್ವನಾಥ್ ಹಾಗೂ ಬಸವರಾಜ ಎಂಬ ಮೂವರು ಮಕ್ಕಳು. ಇವರ ಪೈಕಿ ಕೆ.ಎಂ.ಪ್ರಭು ಈಗ್ಗೆ 20 ವರ್ಷಗಳ ಹಿಂದೆಯೇ ಬೆಂಗಳೂರಿನ ಹೆಂಡತಿ ಮನೆಯಲ್ಲಿ ತೀರಿಕೊಂಡ. ನಂತರ ಮಾಡಿಕೊಂಡ ಆಸ್ತಿ ಹಂಚಿಕೆಯಲ್ಲಿ ರುದ್ರಯ್ಯನ ಎಎಂಸಿ ಕಂಪನಿಯು ಆತನ ಪತ್ನಿ ಪಾರ್ವತಮ್ಮ ಹಾಗೂ ಮಗ ವಿಶ್ವನಾಥ್ ಕೈಗೆ ಬಂತು.

ಈ ವಿಶ್ವನಾಥ್ ಬಗ್ಗೆ ಬಳ್ಳಾರಿಯಲ್ಲಿ ಮೆಚ್ಚುಗೆ ಹಾಗೂ ಟೀಕೆಯ ಎರಡು ಮಾತುಗಳಿವೆ. ಇತ್ತೀಚೆಗೆ ತಾನೇ ವೀರಶೈವ ವಿದ್ಯಾವರ್ಧಕ ಸಂಘದ ಕಾರ್ಯಕಾರಿ ಸಮಿತಿಗೆ ಸದಸ್ಯನಾಗಿ ಆಯ್ಕೆಯಾಗಿರುವ ವಿಶ್ವನಾಥ ಶಿಕ್ಷಣ ಪ್ರೇಮಿ, ಸರಳ ಮನುಷ್ಯ ನಿಜ. ಆದರೆ ಹರಕು ಕಚ್ಚೆಯವ. ಒಂದು ಸಾರಿ ಸಿನಿಮಾ ನಿರ್ಮಾಪಕನಾದದ್ದೂ ಉಂಟು. ಇದೆಲ್ಲಕ್ಕಿಂತಾ ಮುಖ್ಯ ವಿಚಾರ ಏನೆಂದರೆ ಇವರ ಜೈಸಿಂಗ್‌ಪುರದಲ್ಲಿ ಗಣಿ ಲೈಸೆನ್ಸ್ ಅವಧಿ 1996ರ ಮಾರ್ಚ್ 1ರಂದು ಮುಗಿದಿತ್ತು. ಆದರ ಆಗಿನ ಮಾಲೀಕರು ಲೈಸೆನ್ಸ್ ನವೀಕರಣ ಮಾಡಿಸದೆ ಹಾಗೆ ಸುಮ್ಮನಾಗಿಬಿಟ್ಟರು.

ಜನಾರ್ದನ ರೆಡ್ಡಿ 2009ರಲ್ಲಿ ಇದನ್ನು ಗಮನಿಸಿದ ಪಾರ್ವತಮ್ಮ ಮತ್ತು ವಿಶ್ವನಾಥರಿಗೆ ಒಂದು ಕೋಟಿ ರೂ. ಕೊಟ್ಟು ಎಎಂಸಿ ಕಂಪನಿಗೆ ಪಾರ್ಟನರ್ ಆಗಿ ತೂರಿಕೊಂಡ. ಜೊತೆಯಲ್ಲಿ ಈ ಲಕ್ಷ್ಮಿ ಅರುಣಾ ಕೂಡ ಎಎಂಸಿ ಪಾರ್ಟನರ್ ಆಗಿ ಕಾಲಿಟ್ಟಳು.

ಇದು ನಡೆದದ್ದು 31-7-2009ರಂದು. ಆಶ್ಚರ್ಯ ಅಂದರೆ ಇದರ ಮಾರನೆಯ ದಿನವೇ ಅಂದರೆ 1-8-2009 ರಂದು ಎಎಂಸಿಯ ಮೂಲ ಮಾಲೀಕರಾಗಿದ್ದ ಪಾರ್ವತಮ್ಮ ಹಾಗೂ ವಿಶ್ವನಾಥ್ ಪಾಲುದಾರಿಕೆಯಿಂದ ನಿವೃತ್ತರಾಗಿ ಬಿಡುತ್ತಾರೆ.

ಇದರರ್ಥ ಇಷ್ಟೆ. ರೆಡ್ಡಿ ದಂಪತಿಗಳೇ ಎಎಂಸಿಗೆ ಪೂರ್ಣ ಮಾಲೀಕರಾಗಿ ಬಿಡುತ್ತಾರೆ.

ರೆಡ್ಡಿಗೆ ಕರ್ನಾಟಕದಲ್ಲೂ ಒಂದು ಮೈನಿಂಗ್ ಕಂಪನಿಯ ಮಾಲೀಕತ್ವ ಬೇಕಿತ್ತು. ಓಬಳಾಪುರಂ ಮೈನಿಂಗ್ ಕಂಪನಿಗೆ ಆಂಧ್ರದ ರಾಮದುರ್ಗ ತಾಲ್ಲೂಕಿನಲ್ಲಿದ್ದ ಲೀಸ್ ಏರಿಯಾದಲ್ಲಿ ಒಳ್ಳೆಯ ಗ್ರೇಡ್‌ನ ಅದಿರು ಸಿಗುತ್ತಿರಲಿಲ್ಲ. ಇತ್ತ ಬಳ್ಳಾರಿಯನ್ನು ಕೇಂದ್ರ ಸ್ಥಾನ ಮಾಡಿಕೊಂಡಿದ್ದ ರೆಡ್ಡಿಗಳು ಬೇರೆ ಗಣಿ ಮಾಲೀಕರಿಂದ ಲಕ್ಷಾಂತರ ಟನ್ ಅದಿರನ್ನು ಹಫ್ತಾ ವಸೂಲಿ ರೂಪದಲ್ಲಿ ಪಡೆಯುತ್ತಿದ್ದರಲ್ಲ, ಅದನ್ನು ವಿದೇಶಕ್ಕೆ ಸಾಗಿಸಲು ಅವರಿಗೊಂದು ನೆಪಮಾತ್ರದ ಗಣಿ ಕಂಪನಿ ಲೈಸೆನ್ಸ್ ಬೇಕಿತ್ತು. ಇವೆರಡೂ ಇದ್ದರೆ ಅದಿರು ಸಾಗಿಸಲು ಪರ್ಮಿಟ್ ಗಿಟ್ಟಿಸುವುದು ಅವರಿಗೇನೂ ಕಷ್ಟವಾಗಿರಲಿಲ್ಲ.

ಸಿಇಸಿ ವರದಿ

ಸುಪ್ರೀಂ ಕೋರ್ಟ್ ನೇಮಿಸಿರುವ ಸೆಂಟ್ರಲ್ ಎಂಪವರ್ಡ್ ಕಮಿಟಿಯು ಈ ಅಸೋಸಿಯೇಟೆಡ್ ಮೈನಿಂಗ್ ಕಂಪನಿಯು 1-8-2009ರಿಂದಲೂ ನಡೆಸಿರುವ ಸಾವಿರಾರು ಕೋಟಿ ರೂಪಾಯಿಗಳ ಅಕ್ರಮ ದಂಧೆಯನ್ನು ಪತ್ತೆಹಚ್ಚಿದೆ.

ಮೊದಲನೆಯದಾಗಿ ಎಎಂಸಿಯ ಲೀಸ್ ಅವಧಿಯು 1-3-1996ಕ್ಕೆ ಮುಗಿದಿದ್ದರೂ ರೆಡ್ಡಿ ದಂಪತಿಗಳು ತಮ್ಮ ರಾಜಕೀಯ ಪ್ರಭಾವ ಬಳಸಿಕೊಂಡು 24-3-2000ದಿಂದಲೇ 10 ವರ್ಷಗಳ ಗಣಿ ಗುತ್ತಿಗೆ ನವೀಕರಣವಾದಂತೆ ಅಕ್ರಮವಾಗಿ ಸರ್ಕಾರಿ ಆದೇಶ ಪಡೆದಿದ್ದಾರೆ. ಗಣಿ ಇಲಾಖೆಯ ನಿಯಮಾನುಸಾರ ಒಮ್ಮೆ ಲ್ಯಾಪ್ಸ್ ಆದ ಗುತ್ತಿಗೆಯ ನವೀಕರಣ ಸಾಧ್ಯವಿಲ್ಲ. ಬದಲಾಗಿ ಅದೇ ಪ್ರದೇಶದಲ್ಲಿ ಹೊಸ ಗುತ್ತಿಗೆ ಪಡೆಯಲಷ್ಟೇ ಅವಕಾಶವಿತ್ತು. ಆ ಲೆಕ್ಕದಲ್ಲಿ ಎಎಂಸಿಗೆ 2-3-1996ರಿಂದ 23-3-2000ದವರೆಗೆ ಗಣಿ ಗುತ್ತಿಗೆಯೇ ಇರಲಿಲ್ಲ.

ಈ ನಡುವೆ ಜನಾರ್ದನ ರೆಡ್ಡಿ-ಲಕ್ಷ್ಮಿ ಅರುಣಾ ದಂಪತಿ 2009-10 ನೇ ಸಾಲಿನಲ್ಲಿ ಈ 10.12 ಹೆಕ್ಟೇರ್ ಗಣಿ ಪ್ರದೇಶದಲ್ಲಿ ಹತ್ತು ಲಕ್ಷ ಟನ್ ಅದಿರನ್ನು ತೆಗೆದು ಮಾರಾಟ ಮಾಡಿರುವ ಬಗ್ಗೆ ದಾಖಲೆಗಳನ್ನು ಸೃಷ್ಟಿಸಲಾಯಿತು. ಸಿಇಸಿ ತಂಡ ಸ್ಥಳ ಪರಿಶೀಲನೆ ನಡೆಸಿದಾಗ ಜೈಸಿಂಗ್‌ಪುರದಲ್ಲಿದ್ದ ಗಣಿ ಪ್ರದೇಶದಲ್ಲಿ ಹತ್ತು ಲಕ್ಷ ಟನ್ ಅದಿರು ತೆಗೆದ ಭೌತಿಕ ಸಾಕ್ಷ್ಯಗಳೇ ಸಿಗಲಿಲ್ಲ.



ಅದು ಹೇಗೆ ತಾನೇ ಸಿಗಬೇಕು ಹೇಳಿ? ಬೇರೆ ಗಣಿ ಮಾಲೀಕರನ್ನು ಬೆದರಿಸಿ ಕಸಿದುಕೊಂಡಿದ್ದ ಹತ್ತು ಲಕ್ಷ ಟನ್ ಅದಿರನ್ನೇ ರೆಡ್ಡಿ ದಂಪತಿಗಳು ತಮ್ಮ ಎಎಂಸಿ ಗಣಿಯ ಅದಿರೆಂದು ಬಿಂಬಿಸಿ ಹೊರ ದೇಶಗಳಿಗೆ ಸಾಗಿಸಿದ್ದರು. ಖಾರಾಪುಡಿ ಮಹೇಶ್ ಹಾಗೂ ಸ್ವಸ್ತಿಕ್ ನಾಗರಾಜ್ ಇದರಲ್ಲಿ ಅದಿರು ಸಾಗಾಣಿಕೆದಾರರಾಗಿ ಶಾಮೀಲಾಗಿದ್ದರು.



ಸ್ಥಳ ಪರಿಶೀಲನೆ ಮಾಡಿದ ಸಿಇಸಿಗೆ ಲೀಸ್ ಏರಿಯಾದ ಗಡಿ ಗುರುತುಗಳೂ ಪದೇಪದೇ ಸ್ಥಾನಪಲ್ಲಟವಾಗಿರುವುದು ಕಾಣಿಸಿದೆ. ಎಎಂಸಿಯು ಹೀಗೆ ತನ್ನ ಲೀಸ್ ಏರಿಯಾದ ಗಡಿಗಳನ್ನು ಬದಲಿಸುತ್ತಿದ್ದ ಕಾರಣದಿಂದ ಅಕ್ಕಪಕ್ಕದ ಮೆಸರ್ಸ್ ಕನ್ನಯಲಾಲ್ ಮದೇರಿಯಾ ಹಾಗೂ ಲಕ್ಷ್ಮಿ ಮೈನ್ಸ್‌ಗಳ ಗಡಿಗಳೂ ಬದಲಾಗಿರುವುದನ್ನು ಸಿಇಸಿ ಪತ್ತೆ ಹಚ್ಚಿದೆ.

ಕರ್ನಾಟಕದ ಅರಣ್ಯ ಇಲಾಖೆಯ ಬಳ್ಳಾರಿಯ ಅಧಿಕಾರಿಗಳೂ ಅದೆಷ್ಟು ಕಾನೂನು ಉಲ್ಲಂಘನೆ ನಡೆಸಿದ್ದಾರೆಂದರೆ ರೆಡ್ಡಿ ದಂಪತಿಗಳು 1.92 ಕೋಟಿ ರೂಪಾಯಿ ರಾಯಲ್ಟಿ ತರಬೇಕಾದ ಬಾಕಿ ಇದ್ದಾಗಲೂ ಹಣ ವಸೂಲಿ ಮಾಡದೆ ಅದಿರು ಸಾಗಿಸಲು ರೆಡ್ಡಿಗೆ ಫಾರಂ ನಂ 27 ಇಷ್ಯೂ ಮಾಡಿದ್ದಾರೆ.

ಸುಪ್ರೀಂಕೋರ್ಟ್‌ನ ಸಮಿತಿಯು ರೆಡ್ಡಿ ದಂಪತಿಗಳ ಈ ಅವ್ಯವಹಾರಗಳನ್ನೆಲ್ಲಾ ಇಂಚಿಂಚಾಗಿ ದಾಖಲಿಸಿ ವರದಿ ನೀಡಿದೆ. ಅದೇ ವರದಿಯಲ್ಲೇ ಎಎಂಸಿ ಬಗ್ಗೆ ಸಿಬಿಐ ತನಿಖೆ ಆಗಲೇಬೇಕು ಅಂತಲೂ ಶಿಫಾರಸ್ಸು ಮಾಡಲಾಗಿತ್ತು.

ಅದರಂತೆ ಕೋರ್ಟ್ ಈಗ ಸಿಬಿಐ ತನಿಖೆಗೆ ಆದೇಶಿಸಿದೆ. ಪ್ರಕರಣವೂ ದಾಖಲಾಗಿದೆ.

ಮುಂದೇನು.....?

ಮತ್ತೇನಿಲ್ಲ, ಸಿಬಿಐ ಈಗ ಮಂಚನೆ ಪ್ರಕರಣದ ಎಫ್‌ಐಆರ್ ಹಾಕಲು ಸಿದ್ಧತೆ ನಡೆಸಿದೆ. ಜನಾರ್ದನ ರೆಡ್ಡಿ ಈಗಾಗಲೇ ಜೈಲಿನಲ್ಲಿರುವುದರಿಂದ ಅವನನ್ನು ಅಲ್ಲೇ ವಿಚಾರಣೆಗೆ ಒಳಪಡಿಸಬಹುದು ಅಥವಾ ಈ ಪ್ರಕರಣದ ತನಿಖೆಗಾಗಿ ತನ್ನ ವಶಕ್ಕೆ ಒಪ್ಪಿಸುವಂತೆಯೂ ಸಿಬಿಐ ಕೇಳಬಹುದು. ಆದರೆ ಅದಕ್ಕಿಂತ ಮುಖ್ಯವಾಗಿ ಎಎಂಸಿ ಕಂಪನಿಯ ಪಾರ್ಟ್‌ನರ್ ಗಾಲಿ ಲಕ್ಷ್ಮೀ ಅರುಣಾ ಇನ್ನು ಬಳ್ಳಾರಿಯಲ್ಲೇ ಇದ್ದಾಳೆ. ಅವಳನ್ನು ಅರೆಸ್ಟ್ ಮಾಡಿದರೆ ಮಾತ್ರ ಈ ಪ್ರಕರಣದ ತನಿಖೆ ಮುಂದುವರೆಯಲು ಸಾಧ್ಯ.


ಹಫ್ತಾ ವಸೂಲಿ ಪ್ರವೀಣೆ

ಲಕ್ಷ್ಮೀ ಅರುಣಾ ಬಳ್ಳಾರಿ ಗಣಿ ಮಾಫಿಯಾದ ರಾಣಿಯಂತೆಯೇ ಇದ್ದವಳು. ಗಂಡ ಅದಿರು ಕಳ್ಳತನ ಮಾಡುತ್ತಿದ್ದಾಗ ಈಕೆ ತನ್ನಪ್ಪ ಪರಮೇಶ್ವರ ರೆಡ್ಡಿಯನ್ನು ಮುಂದಿಟ್ಟುಕೊಂಡು ಲಾರಿಗಳಿಂದ ಹಫ್ತಾ ಕಲೆಕ್ಟ್ ಮಾಡುತ್ತಿದ್ದಳು. ಟನ್‌ಗೆ 10 ರೂಪಾಯಿಯಂತೆ ಈ ಅಪ್ಪ-ಮಗಳ ಜೋಡಿ ಬಳ್ಳಾರಿಯಿಂದ ಹೊರಡುವ ಪ್ರತಿ ಲಾರಿಯಿಂದಲೂ ವಸೂಲಿ ಮಾಡುತ್ತಿತ್ತು. ಆಗ ಪ್ರತಿ ದಿನ 60 ಸಾವಿರ ಟನ್ ಅದಿರು ಸಾಗಾಣಿಕೆಯಾಗುತ್ತಿತ್ತು. ಅಂದರೆ ದಿನಕ್ಕೆ ಆರು ಲಕ್ಷ, ಇದು ತಿಂಗಳಿಗೆ 2 ಕೋಟಿ ರೂಪಾಯಿಯಷ್ಟಾಗುತ್ತದೆ. ಹೀಗೆ ಗಣಿ ದಂಧೆಯಲ್ಲಿ ತಾನೂ ನೇರವಾಗಿ ಡೀಲು ಕುದುರಿಸುತ್ತಿದ್ದ ಲಕ್ಷ್ಮಿ ಅರುಣಾ ಎಎಂಸಿ ಕಂಪನಿಗೂ ಪಾರ್ಟ್‌ನರ್ ಆಗಿದ್ದರಲ್ಲಿ ಏನೂ ಆಶ್ಚರ್ಯವಿಲ್ಲ.

ಈ ನಡುವೆ ದೆಹಲಿಯಲ್ಲಿ ರೆಡ್ಡಿಯ ಜಾಮೀನಿಗಾಗಿ ಓಡಾಡುತ್ತಿರುವ ರಾಮುಲು ಮೂವತ್ತು ಕೋಟಿ ರೂಪಾಯಿ ಲಾಸು ಮಾಡಿಕೊಂಡ ಸುದ್ದಿ ಕೇಳಿಬರುತ್ತಿದೆ. ದೆಹಲಿಯ ರಾಜಕೀಯ ಲಾಬಿಯ ಯಾರೋ ಒಬ್ಬ "ನಾನು ಕಾನೂನು ಮಂತ್ರಿ ಸಲ್ಮಾನ್ ಖುರ್ಷಿದ್ ಹತ್ತಿರ ಡೀಲು ಕುದುರಿಸಿ ರೆಡ್ಡಿಗೆ ಜಾಮೀನು ಸಿಗುವ ಹಾಗೆ ನೋಡಿಕೊಳ್ಳುತ್ತೇನೆ' ಎಂದು ನಂಬಿಸಿ ಮೂವತ್ತು ಕೋಟಿ ರೂಪಾಯಿ ತಗೊಂಡು ಹೋದವನು ನಾಪತ್ತೆಯಾಗಿದ್ದಾನೆ.

ಎಷ್ಟೇ ಆಗಲಿ ಪಾಪಿ ಸೊತ್ತು ಪರರ ಪಾಲೇ ಅಲ್ಲವೆ

• ಪಾರ್ವತೀ



ರೆಡ್ಡಿಗೆ ಸಿಬಿಐ ಇಟ್ಟ ಅಡ್ಡ ಹೆಸರು 'ಗಜನಿ'

ಹೈದರಾಬಾದಿನ ಸಿಬಿಐ ಕಚೇರಿಯಲ್ಲಿ ಜನಾರ್ದನ ರೆಡ್ಡಿಗೆ 'ಗಜನಿ' ಅಂತ ಅಡ್ಡ ಹೆಸರಿಟ್ಟಿದ್ದಾರೆ!

ಗಜನಿ ಸಿನಿಮಾದಲ್ಲಿ ಹೀರೋ ತಲೆಗೆ ಏಟು ಬಿದ್ದು ಹಿಂದಿನದು ಎಲ್ಲಾ ಮರೆತುಹೋಗಿರುತ್ತಲ್ಲಾ ಅದೇ ರೀತಿ ಜನಾರ್ದನ ರೆಡ್ಡಿಯೂ ಆಡುತ್ತಿದ್ದಾನಂತೆ.

ಸಿಬಿಐನವರು ಅಕ್ರಮ ಗಣಿಗಾರಿಕೆ ಬಗ್ಗೆ ಏನು ಕೇಳಿದರೂ ಈ ರೆಡ್ಡಿ 'ನಾಕ್ ತೆಲೀದು 'I don't remember' ಎನ್ನುತ್ತಿದ್ದಾನೆ. ರೆಡ್ಡಿಯ ಈ ಹೊಸ ನಟನೆ ನೋಡಿ ಸಿಬಿಐ ಆಫೀಸರ್‌ಗಳು ಅವನಿಗೆ 'ಗಜನಿ' ಅಂತ ನಾಮಕರಣ ಮಾಡಿದ್ದಾರೆ. ಆದರೆ ರೆಡ್ಡಿ ತರದ ಅದೆಷ್ಟು ಪಾಕಡಾಗಳನ್ನು ಸಿಬಿಐ ಪಳಗಿಸಿಲ್ಲ ಹೇಳಿ? ರೆಡ್ಡಿಗೆ ಯಾವ ಮದ್ದು ಅರೆಯಬೇಕೆಂಬುದು ಸಿಬಿಐಗೆ ಗೊತ್ತಿಲ್ಲವೆಂದಲ್ಲ. ಈ ಮಧ್ಯೆ ಸಿಬಿಐನವರ ಹತ್ತಿರ ರೆಡ್ಡಿ 'ನನಗೇನೂ ನೆನಪಿಲ್ಲ' ಎಂಬ ರಾಗ ಹಾಡಿದರೂ ಅವನಿಗೂ ಒಳಗೇ ವಿಪರೀತ ಭಯ ಶುರುವಾಗಿದೆ.

ಏಕೆಂದರೆ ಕಳೆದ ಬಾರಿ ಕೋರ್ಟ್‌ಗೆ ಬಂದಿದ್ದಾಗ ರೆಡ್ಡಿ ಜನ ನೋಡುತ್ತಿದ್ದಾಗಲೇ ತನ್ನ ಲಾಯರ್ ಕಾಲಿಗೆ ಅಡ್ಡಬಿದ್ದು 'ನನ್ನ ಕೇಸ್ ಚೆನ್ನಾಗಿ ನಡೆಸಿ ನನಗೆ ಬೇಲ್ ಕೊಡಿಸಿ ಸಾರ್' ಅಂತ ಅಂಗಲಾಚಿದ್ದಾನೆ. ಬೇರೆಲ್ಲಾ 'ಮರೆತು' ಹೋಗಿದ್ದರೂ ಲಾಯರ್ ಮುಖ ಕಂಡಾಕ್ಷಣ ಜನಾರ್ದನ ರೆಡ್ಡಿಗೆ ತನ್ನ ಕಳ್ಳತನಗಳೆಲ್ಲಾ ನೆನಪಾಗುವುದು ಆಶ್ಚರ್ಯ ಅಲ್ಲವೇ?



ಬಾಲಕೃಷ್ಣ ಗೌಡ ಅಕ್ರಮಗಳ ಪರಾಕ್ರಮ

• ಸಂತೋಷ್ ಬಾಗಿಲಗದ್ದೆ

ಕರ್ನಾಟಕದ ಹೆಸರಾಂತ ಮಣ್ಣಿನ ಮಗ ದೇವೇಗೌಡರ ಬಲಿಗೆ ಇದ್ದ ಮಣ್ಣು ಕಂಟಕವಾಗಿ ಬೆನ್ನು ಬಿದ್ದಿದೆ. ವಿಶ್ರಾಂತ ಯುಳ್ಳಿದ್ದುಕೊಂಡೇ ವಿರೋಧಿಗಳಿಗೆ ಕುಣಿಕೆ ತಯಾರು ಸುವುದರಲ್ಲಿ ಬ್ಯೂಸಿಯಾಗಿರುವವರು ದೇವೇಗೌಡ. ಯುತರು ಸದರಿ ಕೆಲಸದಲ್ಲಿ ತನ್ಮಯರಾಗಿರುವಾಗಲೇ ದ್ದೇ ಹಿರಿಮಗ ಬಾಲಕೃಷ್ಣಗೌಡ ಕಂಗಾಲಾಗಿದ್ದಾರೆ. ಸದ್ಯ ದ ಭೂ ಅಕ್ರಮಗಳ ಕುಣಿಕೆ ಬಾಲಕೃಷ್ಣಗೌಡರ ನೆಯ ಸುತ್ತ ಸರಿದಾಡುಲಾರಂಭಿಸಿದೆ.

'ಲಂಕೇಶ್' 2006 ರಲ್ಲೇ ಗೌಡರ ಕುಟುಂಬದ ಮಗಳ ಬಗ್ಗೆ, ಅದರಲ್ಲೂ ವಿಶೇಷವಾಗಿ ಅದಾಗಲೇ ಸ್ ಮಾಜಿ ಅಧಿಕಾರಿಯಾಗಿದ್ದ ಬಾಲಕೃಷ್ಣಗೌಡರ ಖರೀದಿ ವಹಿವಾಟುಗಳ ಬಗ್ಗೆ ಸರಣಿ ತನಿಖಾ ವರದಿ ಸಿತ್ತು. ಇದೆಲ್ಲದಕ್ಕೂ ದಾಖಲೆಗಳು ನಿಚ್ಚಳವಾಗಿದ್ದರೂ ಕೃಷ್ಣಗೌಡ ಬಚಾವಾಗಿದ್ದರು. ಇದಕ್ಕೆ ಆ ಹೊತ್ತಿಗಾಗಲೇ ಮಂತ್ರಿಯಾಗಿದ್ದ ಬಾಲು ತಮ್ಮ ಕುಮಾರಸ್ವಾಮಿಯ ಪ್ರೇಮ ಸಾಥ್ ನೀಡಿದ್ದು ಸುಳ್ಳಲ್ಲ. ಆದರೀಗ ಅಕ್ರಮ ಸಂಬಂಧ ಬಾಲಕೃಷ್ಣಗೌಡರ ವಿರುದ್ಧ ತನಿಖೆ ಲೋಕಾಯುಕ್ತ ವಿಶೇಷ ನ್ಯಾಯಾಲಯ ಆದೇಶ ದೆ.

ಭದ್ರಾವತಿಯ ವಿಶ್ವೇಶ್ವರಯ್ಯ ಉಕ್ಕು ಮತ್ತು ಕಬ್ಬಿಣ ಕಾರ್ಖಾನೆಯ ನಿವೃತ್ತ ಮೆಕ್ಯಾನಿಕಲ್ ಇಂಜಿನಿಯರ್ ಎಸ್. ಬಾಲಕೃಷ್ಣ ಎಂಬುವವರು ಬಾಲಕೃಷ್ಣಗೌಡರ ದ್ಧ ದೂರು ಸಲ್ಲಿಸಿದ್ದರು. ಇದರೊಂದಿಗೆ ಒಟ್ಟಾರೆ ಪಗಳಿಗೆ ಪೂರಕವಾಗಿ ಸಾವಿರ ಪುಟಕ್ಕೂ ಹೆಚ್ಚಿರುವ ಲೆಗಳನ್ನೂ ಸಲ್ಲಿಸಿದ್ದರು. 1984 ರಲ್ಲಿ ಕೆಎಎಸ್ ಯಾದ ಬಾಲಕೃಷ್ಣಗೌಡ 2005 ರಲ್ಲಿ ಸ್ವಯಂ ನಿವೃತ್ತಿ ದಿದ್ದರಲ್ಲಾ? ಈ ಅವಧಿಯಲ್ಲಿನ ಅವರ ಒಟ್ಟು ಮ ಮೂವತ್ತು ಲಕ್ಷ ರೂಪಾಯಿ ಮಾತ್ರ. ಆದರೆ ಲೇ ಬಾಲಕೃಷ್ಣಗೌಡ 77 ಕೋಟಿ ಮೌಲ್ಯದ ಆಸ್ತಿ ಮಾಡಿದ್ದರೆಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಗ್ಗೆ ಕೆದಕುತ್ತಾ ಸಾಗಿದರೆ ಬಾಲಕೃಷ್ಣಗೌಡರ ಅಕ್ರಮ ವ್ಯವಹಾರ ನೂರಾರು ಕೋಟಿಯಷ್ಟಿರುವ ಅಂಶ ಗಿ ಬಯಲಾಗುತ್ತದೆ.

2005 ರಲ್ಲಿ ತರಾತುರಿಯಿಂದ ನಿವೃತ್ತರಾದ ಬಾಲ ಡ ಅದೇ ಆತುರದಲ್ಲಿ ಕೈಯಿಟ್ಟದ್ದು ಲ್ಯಾಂಡ್ ಗ್ ದಂಧೆಗೆ. ಈ ಹೊತ್ತಿಗಾಗಲೇ ಬೆಂಗಳೂರು-ರು ನಡುವಿನ ಚತುಷ್ಪಥ ಹೆದ್ದಾರಿಯ ಕೆಲಸ ಕಾರ್ಯ ವಾಗಿತ್ತು. ಬಿಎಂಐಸಿ ಯೋಜನೆಗೂ ನ್ಯಾಯಾಲಯದ ಹೊರಬರುವುದು ನಿಚ್ಚಳವಾಗಿತ್ತು. ಇದರ ಮುಂಚಲ್ಲೇ ಹೆದ್ದಾರಿ ಹಾದು ಹೋಗುವ ಗಳಲ್ಲಿನ ಅಕ್ಕಪಕ್ಕದ ಜಮೀನಿಗೆ ಚಿನ್ನದ ದುಬಿಟ್ಟಿತ್ತು. ಇಂಥಾ ಪರ್ವಕಾಲದಲ್ಲೇ ರ ಸಮೇತರಾಗಿ ಶ್ರೀರಂಗಪಟ್ಟಣಕ್ಕೆ ರಿಸಿದ ಬಾಲಕೃಷ್ಣಗೌಡ ಅಸಲಿ ಕೆಲಸ ಹಚ್ಚಿಕೊಂಡರು.

2006 ರ ಸುಮಾರಿಗೆ ಕುಮಾರಸ್ವಾಮಿ ನೆ ಮುಖ್ಯಮಂತ್ರಿಯಾದದ್ದೇ ಕೃಷ್ಣಗೌಡರ ಲ್ಯಾಂಡು ದಂಧೆ ರಿತ್ತು. ತದನಂತರ ಹೆಂಡತಿ ಎಚ್. ಹೆಸರಲ್ಲಿ 2006 ರ ಜೂನ್ 8 ಗಣಂಗೂರು ಗ್ರಾಮದಲ್ಲೊಂದು ನು ಖರೀದಿಸಿದರು. ಇದರಲ್ಲಿ ವನ್ನೂ ಕೂಡ ಚೆಂದಗೆ ರಿಸಿದರು. ಅದರ ತಿಜೋರಿಗೂ ಕನ್ನ ದು.

ದನಂತರ ಕೃಷ್ಣೇಗೌಡ ಹೆಂಡತಿಯ ಶ್ರೀರಂಗಪಟ್ಟಣದ ಆಜೂಬಾಜಲ್ಲಿ ಪಿಟ್ಟ ಜಮೀನು ಖರೀದಿಗೆ ನಿಂತರು. ಜಮೀನು ಖರೀದಿಸಿದ ಜೂನ್ ಲ್ಲೇ ಕವಿತಾರ ತಂದೆ ಹೊನ್ನಪ್ಪನ ಮತ್ತೆ 12 ಎಕರೆ ಜಮೀನು ದಿಸಲಾಯ್ತು. ಇದನ್ನು ಕೇವಲ 18 ಲಕ್ಷಕ್ಕೆ ಖರೀದಿಸಲಾಗಿದೆಯೆಂದು ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ನೋಂದಣಿಯಾಗುವಂತೆ ಬಾಲು ನೋಡಿಕೊಂಡರಾದರೂ ಆ ಹೊತ್ತಿಗೆ ಅದರ ನಿಜ ಬೆಲೆ 2 ಕೋಟಿ ನಲವತ್ತು ಲಕ್ಷದಷ್ಟಿತ್ತು!




ಇನ್ನುಳಿದಂತೆ 2005 ರ ಡಿಸೆಂಬರ್ ತಿಂಗಳಲ್ಲಿ ಕವಿತಾ ಬಿನ್ ಹೊನ್ನಪ್ಪ ಹೆಸರಲ್ಲಿ ಶ್ರೀರಂಗಪಟ್ಟಣ ತಾಲ್ಲೂಕು ಕಸಬಾ ಹೋಬಳಿಯ ಬೊಮ್ಮೂರು ಅಗ್ರಹಾರದಲ್ಲಿ 8 ಎಕರೆ ಖರೀದಿಸಲಾಯಿತು. ಇದರ ಮಾರುಕಟ್ಟೆ ಮೌಲ್ಯ ಎರಡು ಕೋಟಿ ಇಪ್ಪತ್ನಾಲ್ಕು ಲಕ್ಷ. ಆದರೆ ಎಕರೆಗೆ ಕೇವಲ 5 ಲಕ್ಷ ಅಂತ ತೋರಿಸಿ ಸ್ಟ್ಯಾಂಪ್ ಡ್ಯೂಟಿಗೂ ನಾಮ ತೀಡಲಾಯಿತು. ಇದಲ್ಲದೆ ಬೊಮ್ಮಲೂರು ಅಗ್ರಹಾರದ ಸಮೀಪವಿರುವ ಬ್ರಹ್ಮಪುರದ ಸರ್ವೆ ನಂ. 224 ಮತ್ತು 226 ರಲ್ಲಿ ಬಿ. ನಾರಾಯಣ್ ಎಂಬಾತನಿಂದ ಕವಿತಾ ಹೆಸರಲ್ಲಿ 4 ಎಕರೆ ಖರೀದಿಸಲಾಯಿತು. ಇದು ಕೇವಲ ಒಂದು ಹಂತದಲ್ಲಿ ಬಿಬಿಎಂಪಿಸಿ ಯೋಜನೆಯನ್ನು ಗುರಿಯಾಗಿಸಿಕೊಂಡು ಬಾಲಕೃಷ್ಣಗೌಡರು ನಡೆಸಿದ ಅಕ್ರಮಗಳ ವೃತ್ತಾಂತ.

ಗಮನೀಯ ಸಂಗತಿಯೆಂದರೆ ಬಾಲಕೃಷ್ಣಗೌಡ ಕೋಟ್ಯಂತರ ರೂಪಾಯಿಗಳ ಅಕ್ರಮ ಭೂಮಿ ಖರೀದಿ ವಹಿವಾಟನ್ನೆಲ್ಲ ಹೆಂಡತಿ ಕವಿತಾರ ಹೆಸರಲ್ಲೇ ಮಾಡಿ ಮುಗಿಸಿದ್ದಾರೆ. ಇನ್ನೂ ವಿಶೇಷವೆಂದರೆ, ಕವಿತಾ ಇಷ್ಟೆಲ್ಲಾ ವ್ಯವಹಾರವನ್ನು ಕವಿತ ಎಚ್. ಬಿನ್ ಕೆ.ಎಂ. ಹೊನ್ನಪ್ಪ ಎಂಬ ಹೆಸರಲ್ಲಿ ನಡೆಸಿದ್ದಾರೆ. ಒಂದೇ ಒಂದು ಖರೀದಿ ವ್ಯವಹಾರದ ಹೊರತಾಗಿ ಮತ್ತೆಲ್ಲೂ ಈಕೆ ತಾನು ಬಾಲಕೃಷ್ಣಗೌಡರ ಹೆಂಡತಿಯೆಂಬುದನ್ನು ತೋರಿಸಿಕೊಂಡಿಲ್ಲ. ಕಂದಾಯ ಇಲಾಖೆಯ ಪಹಣಿ, ಮ್ಯೂಟೇಷನ್, ರಿಜಿಸ್ಟರ್, ಸೇಲ್ ಡೀಡ್‌ಗಳಲ್ಲೆಲ್ಲಾ ಕವಿತಾ ಕೆ.ಎಂ. ಹೊನ್ನಪ್ಪನ ಮಗಳಷ್ಟೇ. ಇದು ಬಾಲಕೃಷ್ಣಗೌಡರ ಮೂರ್ಖತನದ್ದ ಜಾಣ್ಮೆ!

ಈ ಬಾಲಕೃಷ್ಣ ಹೆಂಡತಿ ಕವಿತಾ ಹೆಸರಲ್ಲಿ 2005 ರ ವರ್ಷವೊಂದರಲ್ಲೇ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ನಡೆಸಿರುವ ಜಮೀನು ಖರೀದಿ ವ್ಯವಹಾರ ನಿಜಕ್ಕೂ ದಂಗುಬಡಿಸುವಂತಿದೆ. ಒಂದೇ ಒಂದು ತಿಂಗಳಲ್ಲಿ ಅಖಂಡ 200 ಎಕರೆಯಷ್ಟು ಚಿನ್ನದ ಬೆಲೆಯ ಜಮೀನು ಖರೀದಿಸಿದ್ದಾರೆ! 2005 ರ ಜುಲೈ ತಿಂಗಳಿಂದ 2006 ರ ಅವಧಿಯಲ್ಲಿ ಕವಿತಾರ ಹೆಸರಲ್ಲಿ ಖರೀದಿಸಲಾದ ಒಟ್ಟು ಆಸ್ತಿ ಹತ್ತಿರತ್ತಿರ 300 ಎಕರೆ! ಇದು ನಡೆದ ಬಿರುಸು, ಅಕ್ರಮಗಳನ್ನು ದಕ್ಕಿಸಿಕೊಂಡ ರೀತಿಗಳೆಲ್ಲ ಗೌಡರ ಕುಟುಂಬದ ಪ್ರಭಾವ, ಕಸುಬುದಾರಿಕೆಗೆ ಪಕ್ಕಾ ಉದಾಹರಣೆ.

25.7.2005 ಈ ಒಂದೇ ದಿನ ಬೆಂಗಳೂರು ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿ-ಚಿಕ್ಕಗುಬ್ಬಿ ಗ್ರಾಮದ ಸರ್ವೆ ನಂಬರ್ 43 ರ 85 ಎಕರೆ ಕೃಷಿಭೂಮಿ ಕವಿತಾರ ಸುಪರ್ದಿಗೆ ಬಂದಿದೆ. ಇದಕ್ಕೆ ಒಂದೆರಡು ದಿನ ಮುಂಚೆ ನಲವತ್ನಾಲ್ಕು ಎಕರೆಯಷ್ಟು ಭೂಮಿ ಕವಿತಾ ಪಾಲಾಗಿದೆ. ಇದೇ ವ್ಯಾಪ್ತಿಯ ಸರ್ವೆ ನಂ. 45 ರ 90 ಎಕರೆ ಕೃಷಿ ಭೂಮಿ ಇದೇ ತಿಂಗಳಲ್ಲಿ ಕವಿತಾರಿಂದ ಖರೀದಿಸಲ್ಪಟ್ಟಿದೆ. ಈ ಎಲ್ಲಾ ಆಸ್ತಿಯನ್ನು ಕೆ.ಟಿ. ನಾರಾಯಣಸ್ವಾಮಿ, ಚೌಡಪ್ಪ ಬಿನ್ ಲೇ ಮೋಟಪ್ಪ ಶಾಂತಮ್ಮ, ಮಂಜುನಾಥ, ವೆಂಕಟೇಶಮೂರ್ತಿ ಮತ್ತಿತರರಿಂದ ಖರೀದಿಸಲಾಗಿದೆ.



ಇನ್ನು ಬಿದರಹಳ್ಳಿ ಹೋಬಳಿ ಕಣ್ಣೂರು ಗ್ರಾಮದ ಸರ್ವೆ ನಂ. 16 ರಲ್ಲೂ 2005 ರಲ್ಲೇ ಕವಿತಾ ಹೆಸರಲ್ಲಿ ಐದು ಎಕರೆ ಖರೀದಿ ವ್ಯವಹಾರಗಳು ನಡೆದಿವೆ. ಇದೇ ಅವಧಿಯಲ್ಲಿ ಇಲ್ಲಿನ ಸರ್ವೆ ನಂ. 157 ರಲ್ಲಿ 8 ಎಕರೆ ಕೃಷಿ ಭೂಮಿ ಬಾಲಕೃಷ್ಣರ ಹೆಂಡತಿಯ ಸುಪರ್ದಿಗೊಳಪಟ್ಟಿದೆ.

ಇಷ್ಟೆಲ್ಲಾ ಆಸ್ತಿಯನ್ನು ಖರೀದಿಸುವಾಗಲೂ ಕವಿತಾ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣದ ನಿವಾಸಿ ಕೆ.ಎಂ. ಹೊನ್ನಪ್ಪನ ಮಗಳೆಂದೇ ದಾಖಲೆ ನೀಡಿದ್ದಾರೆ. ಆದರೆ 2004 ರ ಆಗಸ್ಟ್ 31 ರಂದು ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಂಗೇರಿ ಹೋಬಳಿಯ ಸರ್ವೆ ನಂ. 15 ರಲ್ಲಿ ಖರೀದಿಸಿದ್ದ 5.37 ಎಕರೆ ಜಮೀನು ಖರೀದಿಯಲ್ಲಿ ಮಾತ್ರ ಕವಿತಾ ಬಾಲಕೃಷ್ಣಗೌಡರ ಹೆಂಡತಿಯೆಂಬುದನ್ನು ತೋರಿಸಿಕೊಂಡಿದ್ದಾರಷ್ಟೇ!

ಬಾಲಕೃಷ್ಣ ಆರೇಳು ವರ್ಷಗಳ ಕಾಲ ಭೂಸ್ವಾಧೀನ ಇಲಾಖೆಯ ಸ್ಪೆಷಲ್ ಡಿಸಿಯಾಗಿದ್ದವರು. ಆ ಮೂಲಕ ಭೂ ಅಕ್ರಮಗಳನ್ನು ದಕ್ಕಿಸಿಕೊಳ್ಳುವ ಕಲೆ ಕಲಿತಂತಿರುವ ಆತ ಕರ್ನಾಟಕ ಭೂ ಸ್ವಾಧೀನ ಕಾಯ್ದೆ ಕರ್ನಾಟಕ ಭೂಸುಧಾರಣಾ ಕಾಯ್ದೆ ಮುಂತಾದ ಸಕಲ ಕಟ್ಟುಪಾಡುಗಳನ್ನೂ ನಾಜೂಕಿನಿಂದ ನಿರ್ವಹಿಸಿದ್ದಾರೆ. ವಾಸ್ತವವೆಂದರೆ ಇದೀಗ ಅದೆಲ್ಲವೂ ಕುಣಿಕೆಯನ್ನು ಮತ್ತಷ್ಟು ಬಿಗಿಗೊಳಿಸುತ್ತಿವೆ.

ಬಾಲಕೃಷ್ಣಗೌಡ ಹೆಂಡತಿ ಕವಿತಾರ ಹೆಸರಲ್ಲಿ ಖರೀದಿಸಿರುವ ಬಹುತೇಕ ಭೂಮಿ ಫಲವತ್ತಾದದ್ದು. ಅದೆಲ್ಲ ಅಂದಿನ ಮಾರುಕಟ್ಟೆ ಬೆಲೆಯ ಆಧಾರದಲ್ಲಿಯೇ ಎಕರೆಗೆ ಮೂರರಿಂದ ನಾಲ್ಕು ಕೋಟಿಗೆ ತೂಗುತ್ತವೆ. ಇಂಥಾ ಅಖಂಡ 235 ಎಕರೆ ಭೂಮಿ ಬೆಂಗಳೂರೊಂದರಲ್ಲೇ ಕವಿತಾರಿಂದ ಖರೀದಿಸಲ್ಪಟ್ಟಿದೆ. ಅಂದಿನ ಬೆಲೆಯನ್ವಯ ನೋಡಿದರೂ ಅದರ ಒಟ್ಟು ಬೆಲೆ ಐನೂರು ಕೋಟಿ ದಾಟುತ್ತದೆ!

ಸದ್ಯ ಬಾಲಕೃಷ್ಣಗೌಡರ ವಿರುದ್ಧ ದೂರು ನೀಡಿರುವವರು ಅಕ್ರಮ ಆಸ್ತಿಗಳ ಮೊತ್ತವನ್ನು 77 ಕೋಟಿ ಅಂ ಅಂದಾಜಿಸಿದ್ದಾರೆ. ಆದರೆ 1984 ರಿಂದ 200 ಅವಧಿಯಲ್ಲೇ ಐನೂರು ಕೋಟಿಗೂ ಅಧಿಕ ಆಸ್ತಿಗೆ ಬಾಲು ತಮ್ಮ ಹೆಂಡತಿ ಕವಿತಾರ ಮೂಲಕ ವಾರಸುದಾರರಾಗಿದ್ದಾರೆ.

ಇದೀಗ ಬಾಲಕೃಷ್ಣಗೌಡರ ಆಸ್ತಿ ವಿವರದ ತನಿಖೆಗಾಗಿ ಲೋಕಾಯುಕ್ತ ವಿಶೇಷ ನ್ಯಾಯಾಲಯ ಆದೇಶ ನೀಡುತ್ತಿದ್ದಂತೆಯೇ ಗೌಡರ ಫ್ಯಾಮಿಲಿಗೆ ನಡುಕ ಹುಟ್ಟಿದೆ. ಇದು ಸಹಜ. ಯಾಕೆಂದರೆ ಬಾಲಕೃಷ್ಣ ನಡೆಸಿರುವುದು ಬ್ರಹ್ಮಾಂಡ ವಂಚನೆ. ಇದನ್ನು ಕೆದಕುತ್ತಾ ಹೋದರೆ ಬಂಡಿಗಟ್ಟಲೆ ಬಗ್ಗಡ ಅನಾಯಾಸವಾಗಿ ಹೊರಬರುತ್ತದೆ. ತನಿಖೆಯೆಂಬುದು ನಿಷ್ಠುರವಾಗಿ ನಡೆದರೆ ಅದರಲ್ಲಿ ಅನೇಕ ಅಧಿಕಾರಿಗಳೂ ಹೂತುಹೋಗುತ್ತಾರೆ. ಬಾಲಕೃಷ್ಣಗೌಡ ದಂಪತಿಗಳಿರಲಿ, ಗೌಡರ ಫ್ಯಾಮಿಲಿಯ ಇತರರೂ ಬಚಾವಾಗುವುದು ಕಷ್ಟವಿದೆ.

ಒಟ್ಟಾರೆಯಾಗಿ ಮಾರ್ಬಲ್ಲು ನೆಲದಲ್ಲಿ ಕಾಲು ಚಾಚಿ ಕುಳಿತಿರುವ ಮಣ್ಣಿನ ಮಗ ದೇವೇಗೌಡರಿಗಿದು ಅಗ್ನಿ ಪರೀಕ್ಷೆಯ ಕಾಲ. ಅದರಲ್ಲಿ ಈ ಬಾರಿ ೨ ಗೆದ್ದರೆ ಸತ್ಯವೆಂಬುದು ಸಾಯುತ್ತದೆ. ಅದಾಗದಿರಲೆಂಬುದು ಪ್ರಜ್ಞಾವಂತರ ಹಾರೈಕೆ.

ಬಾಲಕೃಷ್ಣನ ಮೈನಿಂಗ್ ಮಸಲತ್ತು!

ಮಣ್ಣು ಗೆಬರಿ ಕಾಸು ಹೊಡೆಯುವ ಮೈನಿಂಗ್ ದಂಧೆಯ ವಿರುದ್ಧ ಹೊತ್ತು ಸಿಕ್ಕಾಗಲೆಲ್ಲ ಹುಯಿಲಿಡುತ್ತಾ ಬಂದವರು ದೇವೇಗೌಡರು. ಜೊತೆಗೆ ಇಡೀ ಕುಟುಂಬ ಸದಸ್ಯರೂ ತಾರಕ ಸ್ವರದಲ್ಲಿ ಅಕ್ರಮ ಗಣಿಗಾರಿಕೆಯನ್ನು ವಿರೋಧಿಸಿದ್ದೂ ಇದೆ. ಆದರೆ ಖುದ್ದು ಗೌಡರ ಫ್ಯಾಮಿಲಿಯೇ ಮೈನಿಂಗ್ ಕಂಪನಿಯೊಂದನ್ನು ನಡೆಸುತ್ತಿತ್ತು, ಅದೂ ಕೂಡಾ ಶುದ್ಧ ಅಕ್ರಮಗಳನ್ನೇ ನಡೆಸುತ್ತಿತ್ತು. ಇಂಥಾ ಕಂಪನಿಗೆ ಡೈರೆಕ್ಟರ್ ಆಗಿದ್ದಾತ ದೇವೇಗೌಡರ ಹಿರಿಯ ಪುತ್ರ ಬಾಲಕೃಷ್ಣಗೌಡ.

ಸದರಿ ಬಿಎಸ್‌ಕೆ ಕಂಪನಿ ಆ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಅಕ್ರಮ ಗಣಿ ದಂಧೆಯನ್ನೆಲ್ಲಾ ತನ್ನದೇ ಆದ ರೀತಿಯಲ್ಲಿ ನಿಯಂತ್ರಿಸುತ್ತಿತ್ತು. ಬೇರೆ ಬೇರೆಡೆ ವಶಪಡಿಸಿಕೊಂಡ ಕಳ್ಳ ಅದಿರು ಬಿಎಸ್‌ಕೆ ಕಂಪನಿಗೆ ಸಾಗಾಟವಾದ ಭಾಗಗಡಿಗಳೂ ನಡೆದಿವೆ. ಜೊತೆಗೆ ದೊಡ್ಡ ಮೊತ್ತದ ಹಣ ಬ್ಯಾಂಕ್ ಚೆಕ್‌ಗಳ ಮೂಲಕ ಬಾಲಕೃಷ್ಣಗೌಡ ಹಾಗೂ ರಾಕೇಶ್ ದಂಪತಿಗಳ ಹೆಸರಿಗೆ ಹಾಗೂ ಬಿಎಸ್‌ಕೆ ಮೈನಿಂಗ್ ಕಂಪನಿಗೆ ಜಮಾ ಆದ ಬಗ್ಗೆಯೂ ಮಾಹಿತಿಗಳಿವೆ.


ಈ ಬಿಎಸ್‌ಕೆ ಟ್ರೇಡಿಂಗ್ ಕಂಪನಿ ಕೆಮ್ಮಣ್ಣುಗುಂಡಿಯ ರಾಷ್ಟ್ರೀಯ ರಕ್ಷಿತಾರಣ್ಯ, ಚಿಕ್ಕನಾಯಕನಹಳ್ಳಿ, ಹೊಸದುರ್ಗ, ಸಂಡೂರು, ಹೊಸಪೇಟೆ, ಬಳ್ಳಾರಿ ಮುಂತಾದೆಡೆಗಳಲ್ಲಿ ಅಕ್ಷರಶಃ ಅದಿರುಗಳ್ಳತನಕ್ಕೆ ಕೈಹಾಕಿತ್ತು.

ಈ ಸಂದರ್ಭಕ್ಕೆ ಸರಿಯಾಗಿ ಗಂಗಾರಾಮ್ ಬಡೇರಿಯಾ ಎಂಬಾತ ಗಣಿ ಖಾತೆಯ ನಿರ್ದೇಶಕನಾಗಿ ಬಂದಿದ್ದ. ಧರಂಸಿಂಗ್‌ಗೆ ಆಪ್ತನಾಗಿದ್ದ ಈತನನ್ನು ತನ್ನ ಪಾಳೆಯಕ್ಕೆ ಸೇರಿಸಿಕೊಂಡ ಬಾಲಕೃಷ್ಣಗೌಡ ಆತನ ಮೂಲಕವೇ ಎತ್ತುವಳಿ ದಂಧೆ ನಡೆಸಿದ್ದು ಆಗಲೇ ಬಹಿರಂಗವಾಗಿತ್ತು. ಕುಮಾರಸ್ವಾಮಿ ಮುಖ್ಯಮಂತ್ರಿಯಾದ ಬಳಿಕ ಬಳ್ಳಾರಿಯಿಂದ ಸಾಗಿಸಲ್ಪಡುವ ಪ್ರತೀ ಟನ್ ಅದಿರಿಗೆ 100 ರೂಪಾಯಿ ಅಂತ ಬಿಎಸ್‌ಕೆ ಕಂಪನಿ ವಸೂಲಿ ಪಟ್ಟಿ ನಿಗದಿಗೊಳಿಸಿತ್ತು. ಆ ಮೊತ್ತವನ್ನು ಬಾಲಕೃಷ್ಣನಿಗೆ ಸರಿಯಾಗಿ ವಸೂಲಿ ಮಾಡಿ ತಲುಪಿಸುತ್ತಿದ್ದವನು ಬಡೇರಿಯಾ!

ಇದೇ ರೀತಿಯಲ್ಲಿ ಬಿಎಸ್‌ಕೆ ಮೈನಿಂಗ್ ಕಂಪನಿ ಪ್ರತೀ ಅಕ್ರಮ ಗಣಿಗಳಿಗೂ ಬಾಯಿಟ್ಟು ಮೇಯ್ದಿದೆ. ಇದನ್ನಿಲ್ಲಿ ಯಾಕೆ ಉಲ್ಲೇಖಿಸಬೇಕಾಗಿದೆಯೆಂದರೆ, ಬಾಲಕೃಷ್ಣಗೌಡ ಹೆಂಡತಿ ಹೆಸರಲ್ಲಿ ಕೋಟ್ಯಂತರ ರೂಗಳ ಆಸ್ತಿ ಖರೀದಿಸಲು ಕಳ್ಳ ಗಣಿಯ ದುಡ್ಡು ಮೂಲವಾಗಿರಬಹುದು. ಈ ಬಗೆಗೂ ಲೋಕಾಯುಕ್ತರು ತನಿಖೆ ಮಾಡಿದರೆ ಅಕ್ರಮ ಗಣಿ ಜಗತ್ತಿನಲ್ಲಿ ಮಹಾ ಸ್ಫೋಟ ಸಂಭವಿಸಿ ಗೌಡರ ಫ್ಯಾಮಿಲಿಯ ರಾಜಕೀಯ ಬದುಕು ಕರಕಲಾಗುವುದಂತೂ ಖರೇ!

ಸಿಟಿ ರವಿ ಕ್ಷೇತ್ರದ ನಗರಸಭೆಯಲ್ಲಿ ಅಧ್ವಾನಗಳ ರುದ್ರನರ್ತನ

ಚಿಕ್ಕಮಗಳೂರು ನಗರಸಭೆ ಎಕ್ಕುಟ್ಟಿ ಹೋಗಿದೆ. ಇಲ್ಲಿಗೆ ಸಂಬಂಧಿಸಿದ ದೂರಿನ ಕಡತಗಳು ಲೋಕಾಯುಕ್ತ ಅಧಿಕಾರಿಗಳ ಟೇಬಲ್ಲಿನ ಮೇಲೆ ಧೂಳು ಹಿಡಿದು ಬಿದ್ದಿವೆ. ಕಳೆದ ಹತ್ತು ವರ್ಷಗಳ ಇಲ್ಲಿನ ಆಡಳಿತದಲ್ಲಿ ಬ್ರಹ್ಮಾಂಡ ಭ್ರಷ್ಟಾಚಾರ ನಡೆದಿದೆ. ಆಯುಕ್ತ ಕೃಷ್ಣಮೂರ್ತಿಯ ಪಾಪದ ಕೊಡವಂತೂ ತುಂಬಿ ಬಿಟ್ಟಿದೆ. ಬಿಜೆಪಿ ಶಾಸಕ ಸಿಟಿ ರವಿಯ ದರ್ಬಾರಿನಲ್ಲಿ ಕ್ಷೇತ್ರ ವ್ಯಾಪ್ತಿಯ ಇಲಾಖೆಗಳೆಲ್ಲಾ ಗಬ್ಬೆದ್ದಿವೆ ಅನ್ನುವುದಕ್ಕೆ ಸಾಕ್ಷಿ ಇದು.


ಸಿಟಿ ರವಿ

ಪಕ್ಕಾ ಖದೀಮ ಆಯುಕ್ತ ಕೃಷ್ಣಮೂರ್ತಿಯನ್ನು ವರ್ಷದ ಹಿಂದೆ ಹಠಕ್ಕೆ ಬಿದ್ದು ಕರೆ ತಂದವನು ಸಿಟಿ ರವಿ. ಆದರೆ ವರ್ಷ ಮುಗಿಯುವ ಹೊತ್ತಿಗೆ ಹಣಕಾಸಿನ ಚೌಕಾಸಿಯಲ್ಲಿ ರಾಂಗಾದ ರವಿ ಈಗ ಕೃಷ್ಣಮೂರ್ತಿ ವಿರುದ್ಧ ಎಗರಾಡುತ್ತಿದ್ದಾನೆ.

ತಮಾಷೆಯ ಸಂಗತಿ ಎಂದರೆ ಚಿಕ್ಕಮಗಳೂರು ನಗರ ಸಭೆಯಲ್ಲಿ ಕಮಲ ಪಾಳೆಯದ ಪಾರುಪತ್ಯವಿದೆ. ಮೊದಲಿಗೆ ಕೋಟೆ ಕೃಷ್ಣ ಬಳಿಕ ಕೋಟೆ ರಂಗನಾಥ್, ಈಗಿನ ಅಧ್ಯಕ್ಷನ ಹೆಸರು ನಿಂಗೇಗೌಡ. ಈ ಮನುಷ್ಯನ ಮಕ್ಕಳಲ್ಲಿ ನವೀನ ಮತ್ತು ವಿನಯ ರೌಡಿ ಪಟ್ಟಿಯಲ್ಲಿದ್ದಾರೆ. ಕರ್ನಾಟಕ ಕ್ರಿಮಿನಲ್ ಕ್ರೈಂ ಡಾಟ್ ಕಾಂನಲ್ಲಿ ಇವರಿಬ್ಬರ ಜನ್ಮಕುಂಡಲಿ ದಾಖಲಾಗಿದೆ. ನವೀನ್ ಹತ್ತು ವರ್ಷಗಳ ಹಿಂದೆಯೇ ಜಿಲ್ಲೆಯಿಂದ ಗಡಿಪಾರಾಗಿದ್ದಾನೆ. ಇವತ್ತಿಗೆ ಬೆಂಗಳೂರಿನಲ್ಲಿ ಇದ್ದುಕೊಂಡು ಚಿಕ್ಕಮಗಳೂರನ್ನು ನಿಯಂತ್ರಿಸುವ ಮಟ್ಟಿಗೆ ಬೆಳೆದಿದ್ದಾನೆ.


ನಗರಸಭೆ ಅಧ್ಯಕ್ಷ ಗಾದಿಗೆ ಆರು ತಿಂಗಳಿಗೆ ಒಬ್ಬನನ್ನು ಬದಲಿಸಿ ಮಗುಮ್ಮಾಗಿ ಮೇಯಲು ಬಿಡುತ್ತಿರುವ ಪಕ್ಷದ ಹೆಸರು ಬಿಜೆಪಿ. ಶಾಸಕ ಸಿಟಿ ರವಿಯ ಪಟಾಲಂಗಳು ಇಲ್ಲಿ ನಡೆಸುತ್ತಿರುವ ಅಂಧಾದರ್ಬಾರಿಗೆ ಕೊನೆಮೊದಲು ಎಂಬುದಿಲ್ಲ, ಬಕಾಸುರ ಬಿಜೆಪಿ ಕೌನ್ಸಿಲರ್‌ಗಳಲ್ಲಿ ಬಹು ತೇಕರು ಅಧಿಕಾರಿಗಳ ಮೇಲೆ ಸವಾರಿ ಮಾಡುತ್ತಾ ಗುಂಜಿಕೊಳ್ಳುತ್ತಿದ್ದಾರೆ. ಕೆಲವರು ಬೇನಾಮಿ ಗುತ್ತಿಗೆ ಕಾಮಗಾರಿಯಲ್ಲಿ ಬ್ಯುಸಿಯಾಗಿದ್ದಾರೆ. ಕಂಡಕಂಡ ಕಂಪನಿಗಳಿಗೆ ಅನ್ನದಾತರಾಗಿದ್ದಾರೆ. ಹೀಗಾಗಿ ಅಧಿಕಾರಿ ವರ್ಗ ನಕಲಿ ಬಿಲ್ಲುಗಳ ಸರದಾರಿಕೆಯ ಹೊಣೆ ಹೊತ್ತುಕೊಂಡಿದೆ.

ಚಿಕ್ಕಮಗಳೂರು ನಗರಸಭೆಯಲ್ಲಿ ಅಧಿಕಾರಿಗಳು, ನೌಕರರು, ಗುತ್ತಿಗೆದಾರರು, ಕಂಪನಿಗಳು, ಜನಪ್ರತಿನಿಧಿಗಳು ಸೇರಿ ಕೋಟ್ಯಂತರ ರೂಗಳ ಹಗಲುದರೋಡೆ ನಡೆಸಿದ್ದಾರೆ. ನಗರಸಭೆಯ ನಕಲಿ ಬಿಲ್ಲುಗಳ ಪರಾಕಾಷ್ಠೆಗೆ ಆದಿ ಅಂತ್ಯ ಎಂಬುದಿಲ್ಲ.

ಇಲ್ಲಿನ ನಾಲ್ಕು ವರ್ಷಗಳ ಸಾಮಾನ್ಯ ಖರ್ಚುಗಳ ಒಟ್ಟು ಮೊತ್ತವೇ ಬರೋಬ್ಬರಿ ಎಪ್ಪತ್ತು ಲಕ್ಷ. ದುರಸ್ತಿ ಮತ್ತು ನಿರ್ವಹಣೆಗೆ ಹತ್ತತ್ತಿರ ಮೂರು ಕೋಟಿ. ಶಾಸಕರು, ಸಂಸದರು, ಸಚಿವರಿಗೆ ತೊಡಿಸಿದ ಮೈಸೂರು ಪೇಟಾ, ಕಾರ್ಯಕ್ರಮಗಳ ಹೆಸರಿನಲ್ಲಿ ಹಾಕಿಸಿದ ಬಾಡೂಟ, ಹಲ್ಕಿರಿಯುತ್ತಾ ನಿಂತವರು ತೆಗೆಸಿಕೊಂಡ ಫೋಟೋ, ಶಾಮಿಯಾನ, ಮೈಕ್, ಶಂಕುಸ್ಥಾಪನೆ ಕಲ್ಲುಗಳಿಗೆ ಕೊಟ್ಟ ರಸೀದಿ, ಕಸಾಯಿಖಾನೆಗಳಿಗೆ ದಾಳಿ, ರಾಷ್ಟ್ರೀಯ ಹಬ್ಬ ಪೂರ್ವಭಾವಿ ಸಭೆ, ಕ್ಯಾಂಟೀನ್, ಹುತಾತ್ಮರ ದಿನ, ವಾಜಪೇಯಿ ವಸತಿ ಯೋಜನೆ, ಪೌರ ಕಾರ್ಮಿಕರ ದಿನ, ಕಟ್ಟ ಕಡೆಗೆ ಅಂಬೇಡ್ಕರ್ ಜಯಂತಿಯಲ್ಲೂ ಅಧ್ವಾನ, ವಂಚನೆಯ ಪರಾಕಾಷ್ಠೆ ಮುಗಿಲೆತ್ತರಕ್ಕೆ ಚಾಚಿ ನಿಂತಿದೆ.

ನ್ಯೂ ರಾಜಾ ಸ್ಟುಡಿಯೋ ಹಾಗೂ ರಾಜಾ ಸ್ಟೋನ್‌ಗೆ ಕೇವಲ ಆರು ತಿಂಗಳಲ್ಲಿ ಅನಾಮತ್ತು ತೊಂಬತ್ತೊಂಬತ್ತು ಸಾವಿರದ ಬಿಲ್ಲು ಪಾವತಿಯಾಗಿದೆ. ಇವೆರಡು ಕಂಪನಿಗಳು ಛಾಯಾಗ್ರಾಹಕ ಸಹೋದರರಿಗೆ ಸೇರಿದ್ದು. ಜಿಲ್ಲಾ ಕೇಂದ್ರದ ರಸ್ತೆಬದಿಗಳ ಮರ್ಕ್ಯೂರಿ ದೀಪದಲ್ಲಿ ದೊಡ್ಡ ಪ್ರಮಾಣದ ಗೋಲ್‌ಮಾಲ್ ನಡೆದಿದೆ. ಈ ಸಂಬಂಧ ಕೆ.ಕೆ.ಎಲೆಕ್ಟ್ರಿಕ್‌ಗೆ ಕೋಟ್ಯಂತರ ರೂಗಳು ಪಾವತಿಯಾಗಿದೆ. ವಿದ್ಯುತ್ ನಿರ್ವಹಣೆ ಗುತ್ತಿಗೆ ಪಡೆದ ಕೆ.ಕೆ.ಎಲೆಕ್ಟ್ರಿಕ್ ಮಾಲೀಕನ ಹೆಸರು ಕೋಟೆ ಅನಿಲ್. ಇಡೀ ಚಿಕ್ಕಮಗಳೂರನ್ನು ಜಾಲಾಡಿದರೂ ಇಂಥದ್ದೊಂದು ಕಂಪನಿ ಇರುವ ಕುರುಹು ಕಾಣಿಸುವುದಿಲ್ಲ. ಅನೀಲ್ ಶಾಸಕ ರವಿಯ ಪರಮಾಪ್ತ, ಐದು ವರ್ಷಗಳ ಹಿಂದೆ ನಾಲ್ಕು ಹಸು ಸಾಕಿ ಹಾಲು ಮಾರಿ ಬದುಕುತ್ತಿದ್ದ ಈ ಮನುಷ್ಯ ಇವತ್ತಿಗೆ ಏನಿಲ್ಲವೆಂದರೂ ಇಪ್ಪತ್ತೈದು ಕೋಟಿಗೆ ಒಡೆಯನಾಗಿ ಮೆರೆಯುತ್ತಿದ್ದಾನೆ. ಸ್ಕಾರ್ಪಿಯೋ, ಬೊಲೇರೋದಂಥ ಐಷಾರಾಮಿ ವಾಹನಗಳು ಅನಿಲನ ಬಳಿಯಿವೆ. ಈ ಸೌಭಾಗ್ಯ ಕರುಣಿಸಿದ್ದು ಶಾಸಕ ರವಿ. ಸದ್ಯಕ್ಕೆ ಕಪ್ಪು ಪಟ್ಟಿ ಅನಿಲ್‌ನ ಹಣೆಗೆ ಸುತ್ತಲಾಗಿದೆ. ಉಳಿದಂತೆ ಶಕುನಗಿರಿ ಫ್ಲವರ್ಸ್ ಹೆಸರಿಗೆ ಹಾರ ತುರಾಯಿ ಹೆಸರಿನಲ್ಲಿ ಲಕ್ಷಾಂತರ ಹಣದ ರಸೀದಿ ಬಿದ್ದಿದೆ.


ನಿಂಗೇಗೌಡ


ಕೃಷ್ಣಮೂರ್ತಿ

ನಗರಸಭೆಯ ಕರುಣಾಳುಗಳು ಬಾಡೂಟದ ಹೆಸರಿನಲ್ಲಿ ಶ್ರೀ ಕ್ಯಾಂಟೀನ್, ಗಣೇಶ್, ಬಾಬುರೈ ಕ್ಯಾಟರರ್ಸ್, ಆದೀಶ್ ಕುಮಾರ್‌ಗೆ ೧.೭೫ ಲಕ್ಷ ದಯಪಾಲಿಸಿದ್ದಾರೆ.

ರಸ್ತೆ ಡಾಂಬರೀಕರಣ, ರಸ್ತೆ ಅಗಲೀಕರಣ, ಚರಂಡಿ, ಫುಟ್‌ಪಾತ್, ಮೋರಿ, ಸೇತುವೆಗಳಲ್ಲಿ ಗೋಲ್‌ಮಾಲ್ ನಡೆದಿದೆ. ಕೋಟ್ಯಂತರ ರೂಗಳ ದ್ವಿಪಥ ರಸ್ತೆ ಕಾಮಗಾರಿಯಲ್ಲಿ ಅಧ್ವಾನ ನಡೆದಿದೆ. ವಸತಿ ಯೋಜನೆಗಳು ಉಳ್ಳವರ ಮತ್ತು ಪ್ರಭಾವಿ ಗಳ ಪಾಲಾಗಿವೆ. ನಗರಸಭೆ ಸದಸ್ಯರ, ಬಂಧುಗಳ, ಆಪ್ತರ, ಹಿಂಬಾಲಕರ ಹೆಸರಿನಲ್ಲಿ ನಿವೇಶನಗಳನ್ನು ನೀಡಲಾಗಿದೆ. ನಗರಸಭೆಯಲ್ಲಿ ಹಲವು ಕಾಮಗಾರಿಗಳು ನಡೆಯದಿದ್ದರೂ ಖೊಟ್ಟಿ ಬಿಲ್ಲುಗಳನ್ನು ತಯಾರಿಸಲಾಗಿದೆ. ಟೆಂಡರುಗಳನ್ನು ಕರೆಯದೇ ಬಿಜೆಪಿ ಹಿಂಬಾಲಕರಿಗೆ ಮಾತ್ರ ಗುತ್ತಿಗೆ ನೀಡಲಾಗಿದೆ. ಯಾರೋ ಗುತ್ತಿಗೆ ದಾರ ನಡೆಸಿದ ಕಾಮಗಾರಿಯ ಬಿಲ್ಲನ್ನು ಮತ್ಯಾರಿಗೋ ನೀಡಿ ವಂಚಿಸುವುದು ನಡೆಯುತ್ತಿದೆ. ಈ ಹಿನ್ನೆಲೆಯಲ್ಲಿ ಚಿಡ್ಡಿಧಾರಿ ಪುಷ್ಪರಾಜ್ ಎಂಬಾತ ಗೂಂಡಾಗಿರಿ ನಡೆಸಿದನೆಂದು ಗುತ್ತಿಗೆದಾರರೆಲ್ಲಾ ಒಟ್ಟಾಗಿ ಪ್ರತಿಭಟಿಸಿದ್ದರು. ಆಯುಕ್ತ ಕೃಷ್ಣಮೂರ್ತಿಯ ವಿರುದ್ಧ ಎರಡು ದಿನ ಮುಷ್ಕರ ನಡೆಸಿದ್ದರು.


ರವಿಯ ವರಸೆ ಇವತ್ತಿಗೆ ಕೃಷ್ಣಮೂರ್ತಿಯ ಸುತ್ತಮುತ್ತ ಪ್ರಭಾವ ಬೀರುತ್ತಿದೆ. ಆದರೆ ಕೃಷ್ಣಮೂರ್ತಿ ಕೆಸರಿಗೆ ಧುಮುಕಲು ಕಮಲದ ಶಾಸಕ ಸಿಟಿ ರವಿ ಮತ್ತು ಅ... ಪಟಾಲಂ ಕಾರಣ ಅನ್ನುವುದು ರಹಸ್ಯವಲ್ಲ. ವಿಶೇಷ ಎಂ... ನಗರಸಭೆಯ ಅಧ್ಯಕ್ಷ ನಿಂಗೇಗೌಡನಿಗೆ ಗೆಬರುವ ... ಕರಗತವಾಗಿದೆ. ಕೃಷ್ಣಮೂರ್ತಿಯ ರಾದ್ಧಾಂತದ... ನಿಂಗೇಗೌಡನಿಗಿಂತಲೂ ಸಿಟಿ.ರವಿಯ ಪಾತ್ರ ದೊಡ್ಡದು.



ಸಂಗತಿಗಳೆಲ್ಲವೂ ಲೋಕಾಯುಕ್ತದ ಕದ ತಟ್ಟಿದೆ. ಇದೇ ... ಕೃಷ್ಣಮೂರ್ತಿಯನ್ನು ರವಿ ಒತ್ತಡ ಹ... ವರ್ಗಾವಣೆಗೊಳಿಸಿದ. ಹೈಕೋರ್ಟ್ ನಿರ್ದೇಶನದಡಿ ಕೆ... ಕೆಎಎಸ್ ಗ್ರೇಡ್ ಹೊಂದಿರುವ ಕೃಷ್ಣಮೂರ್ತಿ ಒ... ವಾರದಲ್ಲಿ ತಡೆಯಾಜ್ಞೆ ತಂದು ಮತ್ತದೇ ಸ್ಥಾನದಲ್ಲಿ ಕುಕ್ಕರಿ...

ಈ ಹೊತ್ತಿಗೆ ರವಿ ರಾಜಕೀಯ ಪ್ರಭಾವ ಬ... ಪ್ರಭಾಕರನೆಂಬ ಸಮಾಜ ಕಲ್ಯಾಣ ಅಧಿಕಾರಿಯನ್ನು ಆಯ... ಸ್ಥಾನಕ್ಕೆ ತಂದು ಕುಳ್ಳಿರಿಸಿದ್ದ. ಇದನ್ನು ಕಂಡ ಕೃಷ್ಣಮೂ... ಕಚೇರಿಯೊಳಗೆ ಮತ್ತೊಂದು ಮಗ್ಗುಲಲ್ಲಿ ಚೇರ್ ಹ... ಕುಳಿತಿದ್ದ. ಈ ಹೈಡ್ರಾಮಕ್ಕೆ ಇತಿಶ್ರೀ ಹಾಡುವ ಬದ... ಜಿಲ್ಲಾಧಿಕಾರಿ ಡಿ.ಕೆ.ರಂಗಸ್ವಾಮಿ ಕೃಷ್ಣಮೂರ್ತಿಗೆ ನೋಟ... ಜಾರಿಗೊಳಿಸಿ ಪೇಚಿಗೆ ಸಿಲುಕಿದ್ದಾರೆ. ಆಯುಕ್ತ ಕೃಷ್ಣಮೂ... ಜಿಲ್ಲಾಧಿಕಾರಿ ರಂಗಸ್ವಾಮಿ ವಿರುದ್ಧ ರಾಜ್ಯ ಎಸ್‌ಸಿ, ... ಆಯೋಗಕ್ಕೆ ದಲಿತ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕ... ದಾಖಲಿಸುವಂತೆ ದೂರು ಸಲ್ಲಿಸಿದ್ದ. ಒಟ್ಟಾರೆ ಬೆಳವ... ಯನ್ನು ಕಂಡರೆ ರವಿಯ ರಾಜಕೀಯ ರಾದ್ಧಾಂತದಲ್ಲಿ ಅಧಿ... ವರ್ಗ ಬಡವಾಗುತ್ತಿದೆ.

• ಅಜೀಜ್ ಕಿರುಗು...



ಕಾಗೇರಿ ಟೀಮಿನ ಎಡವಟ್ಟು

ತಿರುಗುಬಾಣವಾದ ತುರ್ತು ನೇಮಕಾತಿ

ಶಿಕ್ಷಣ ಇಲಾಖೆಗೆ ಭರ್ಜರಿ ಮುಖಭಂಗವಾಗುವಂತಹ ಪ್ರಸಂಗವಿದು. ಶೈಕ್ಷಣಿಕ ವ್ಯವಸ್ಥೆಯನ್ನು ಇನ್ನಿಲ್ಲದಂತೆ ಬದಲಾಯಿಸಿಬಿಡುತ್ತೇವೆ, ಶಿಕ್ಷಕರ ಕೊರತೆಯನ್ನು ನೀಗಿಸಿಬಿಡುತ್ತೇವೆ, ಹಾಗೆ, ಹೀಗೆ ಅಂತ ಏನೇನೋ ಕನವರಿಸುವ ಕಾಗೇರಿ, ಮೊನ್ನೆ ಪಾಠ ಹೇಳುವ ಕೆಲಸವನ್ನೂ ತರಾತುರಿಯಲ್ಲಿ ಔಟ್‌ಸೋರ್ಸಿಂಗ್ ಮಾಡಿ ಖಾಸಗಿಯವರಿಗೆ ಗುತ್ತಿಗೆ ನೀಡಿದ್ದ ಬಲು ದೊಡ್ಡ ಕರ್ಮಕಾಂಡದ ಅವ್ಯವಸ್ಥೆ ಇದೀಗ ಹೊಸದಾದ ತಿರುವಿನಲ್ಲಿ ತಗುಲಿಕೊಂಡು ಕುಯ್ಯೊ ಮರ್ರೊ ಎಂದು ನರಳುತ್ತಿರುವುದು ಬಹುಶಃ ನಿರುದ್ಯೋಗಿಗಳ ಹಿಡಿ ಶಾಪದ ಎಫೆಕ್ಟಿರಬಹುದು. ಆಗಸ್ಟ್ ಆರಂಭದಲ್ಲಿ ಮೇಷ್ಟ್ರಾಗಲು ಕಾದು ಕುಳಿತಿದ್ದವರಿಗೆ ಇಲಾಖೆ ಬಲು ದೊಡ್ಡ ಆಘಾತ ನೀಡಿತ್ತು, ರಾಜ್ಯಾದ್ಯಂತದ ಆದರ್ಶ ಶಾಲೆ ಮತ್ತು ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇದ್ದ 2268 ಶಿಕ್ಷಕ ಹುದ್ದೆಗಳ ನೇಮಕಾತಿಯನ್ನು ಒಳಗೊಳಗೇ ಆಕ್ಟ್ರಿಕ್ಸ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ ಎಂಬ ಖಾಸಗಿ ಕಂಪನಿಗೆ ವಹಿಸಿ, ಏಳೇ ದಿನದ ಅಂತರದಲ್ಲಿ ನೇಮಕಾತಿ ಪ್ರಕ್ರಿಯೆಯ ಮುಗಿದುಹೋಗುವಂತೆ ಎಲ್ಲವನ್ನೂ 'ಅಡ್ಜಸ್ಟ್' ಮಾಡಿಕೊಳ್ಳಲಾಗಿತ್ತು, ಕಳೆದ ನಾಲ್ಕು ವರ್ಷಗಳಿಂದ ಶಿಕ್ಷಕರ ಆಯ್ಕೆ ಅಧಿಸೂಚನೆಯ ನಿರೀಕ್ಷೆಯಲ್ಲಿದ್ದವರಿಗೆ ಭಾರಿ ಮೋಸವನ್ನು ಹುಂಬಾ ಸಲೀಸಾಗಿ ಮಾಡುವ ಹುನ್ನಾರ ಅದಾಗಿತ್ತಾದರೂ, ತೀವ್ರ ಪ್ರತಿರೋಧ ಎದುರಾದ್ದರಿಂದ ಕೊನೆಯ ದಿನಾಂಕವನ್ನು ಎರಡು ದಿನ ಮುಂದಕ್ಕಾಕುವ ನಾಟಕ ಮಾಡಿ ಕೊನೆಗೂ ತಾವಂದುಕೊಂಡಂತೆಯೇ ಗುತ್ತಿಗೆ ವ್ಯವಹಾರವನ್ನು ಶಿಕ್ಷಣಕ್ಕೂ ಹೇರಿ ಕುಳಿತಿದ್ದರು.

ಇದೇನಿದು ಯುವಕರ ಉದ್ಯೋಗವನ್ನೂ ಈ ಪರಿ ಮಾರಿಕೊಂಡಿದ್ದು ಸರಿಯೇ ಅನ್ನೋ ಸಾರ್ವಜನಿಕರ ಪ್ರಶ್ನೆಗೆ 'ಪ್ರಸಕ್ತ ಶೈಕ್ಷಣಿಕ ವರ್ಷಕ್ಕೆ ಹಿನ್ನಡೆಯುಂಟಾಗಬಾರದು, ಈಗ ನೇರ ನೇಮಕಾತಿ ಅಂತಾ ಕೂತರೆ ಟೈಮ್ ಆಗಿ ಬಿಡುತ್ತೆ, ಪಾಪ ಮಕ್ಕಳಿಗೆ ಬಲು ತೊಂದರೆಯಾಗುತ್ತೆ, ಇದೇನಿದ್ದರು ತಾತ್ಕಾಲಿಕವಷ್ಟೆ ಮುಂದಿನ ವರ್ಷ ಶಾಲೆಗಳು ಪ್ರಾರಂಭವಾಗುವುದಕ್ಕೂ ಮುನ್ನವೇ ಅಡ್ವಾನ್ಸಾಗಿ ಕಾಯಂ ನೇಮಕಾತಿ ಮಾಡ್ತೋತೀವಿ' ಎಂಬ ತೂಕದ ಸಬೂಬೊಂದನ್ನು ಎಸೆದು ಹೊಲಸು ಸಾರಿಸುವ ಪ್ರಯತ್ನವನ್ನು ಇಲಾಖೆ ಮಾಡಿತ್ತು. ಕೋಟಿ ಕೋಟಿ ಲೂಟಿಗಳನ್ನೇ ಅರಗಿಸಿಕೊಂಡ ಜನರೂ ಸಹ ಸುಮ್ಮನಾಗಿಬಿಟ್ಟಿದ್ದರು. ಆದರೀಗ ಆ ಕ್ರಮ ಕೇವಲ ಅಕ್ರಮ ಮಾತ್ರವಲ್ಲ, ಅವ್ಯವಸ್ಥೆಯಿಂದಲೂ ಕೂಡಿದೆ ಎಂಬುದಕ್ಕೆ ಎರಡು ತಿಂಗಳು ಕಳೆದರೂ ನೇಮಕಾತಿ ಪೂರ್ಣವಾಗದೆ ಇಲಾಖೆಯ ಮಕ್ಕಳ 'ಹಿತ'ದೃಷ್ಟಿ ನೆಪ ಈಡೇರದಿರುವುದೇ ಸಾಕ್ಷಿ.

ಮೊದಲನೆಯದಾಗಿ ಸರ್ಕಾರದ ಕೆಲಸವನ್ನು ಗುಮಾನಿ ಮೂಡುವಂತೆ ಖಾಸಗಿಯವರ ಹೆಗಲಿಗೇರಿಸಿ ತಮ್ಮ ಜವಾಬ್ದಾರಿಯಿಂದ ಪಲಾಯನ ಮಾಡಿದ್ದೇ ದೊಡ್ಡ ತಪ್ಪು, ಇನ್ನು ಆ ಉಸ್ತುವಾರಿ ವಹಿಸಿಕೊಂಡ ಹ್ಯೂಮನ್ ರಿಸೋರ್ಸ್ ಕಂಪನಿಯಾದರೂ ಒಂದು ಶಿಸ್ತುಬದ್ಧ ಕ್ರಮವಿಲ್ಲದಂತೆ ಕೆಟ್ಟದೊಂದು ಆನ್‌ಲೈನ್ ಪ್ರೊಫಾರ್ಮಾದಲ್ಲಿ ಮಾಹಿತಿ ಭರ್ತಿ ಮಾಡಿ ಸಬ್‌ಮಿಟ್ ಮಾಡಿ ಮುಂದಿನ ಕೆಲಸವನ್ನು ಮೂರೇ ದಿನದಲ್ಲಿ ಪೂರೈಸಿ ಅಪಾಯಿಂಟ್‌ಮೆಂಟ್ ಲೆಟರ್ ಕೊಡ್ತೀವಿ ಅಂತ ಅನೌನ್ಸ್ ಮಾಡಿದಾಗಲೇ ಎರಡನೇ 'ಎಡವಟ್ಟು ಶುರುವಾಗಿದೆ. ಹೇಗೂ ಇದು ತರಾತುರಿಯ ನೇಮಕಾತಿ, ಅದೂಅಲ್ಲದೆ ಇದರ ಲೈಫ್ ಒಂದೇ ವರ್ಷ ಅಂತಾರೆ, ಮೇಲ್ನೋಟಕ್ಕೆ ಸರ್ಕಾರದ ಖಾಸಗೀಕರಣದ ಹಗರಣದಂತೆ ಬೇರೆ ಕಾಣುತ್ತೆ ಅನ್ನೊ ಸಮೀಕ್ಷೆ ನಡೆಸಿದ ಅರ್ಜಿ ಸಲ್ಲಿಸುವವರು ಸಣ್ಣದೊಂದು ಗೇಮ್ ಆಡಲು ಮುಂದಾದರು. ಸದ್ಯ ಕರ್ನಾಟಕದ ಮಟ್ಟಿಗೆ ಖುದ್ದು ಸರ್ಕಾರದ ಮಂತ್ರಿಗಳೆ ಅನ್ಯಾಯ, ಅಕ್ರಮದಲ್ಲಿ ಭಾಗಿಯಾದ ನಿದರ್ಶನ ಕಣ್ಣ ಮುಂದೇ ಇತ್ತಲ್ಲ, ಅದರಿಂದಲೇ ಪ್ರೇರಣೆ ಪಡೆದ ಅಭ್ಯರ್ಥಿಗಳು ಮೆರಿಟ್‌ಲಿಸ್ಟ್‌ನಲ್ಲಿ ಮುಂಚೂಣಿಯಲ್ಲಿ ಬರುವ ಹುನ್ನಾರದಿಂದ ಮನಸ್ಸಿಗೆ ಬಂದಷ್ಟು ಅಂಕಗಳನ್ನು ಅರ್ಜಿಯಲ್ಲಿ ಭರ್ತಿ ಮಾಡಿ ಕಂಪ್ಯೂಟರ್‌ನ ಬಟನ್ ಒತ್ತಿದ್ದಾರೆ. ಮುಂದೆ ಪರಿಶೀಲನೆಗೆ ಕರೆದಾಗ ಒಂದಷ್ಟು ದುಡ್ಡು ಪೀಕಿಯೊ, ಪ್ರಭಾವಿ ಇನ್‌ಫ್ಲುಯೆನ್ಸ್ ಮಾಡಿಸಿಯೊ ಸರಿಮಾಡಿಕೊಂಡರಾಯಿತು ಎಂಬ ಭಂಡ ಧೈರ್ಯ ಮಾಡಿದವರಿಂದಾಗಿ ಈಗ ಇಲಾಖೆ ಮತ್ತು ಖಾಸಗಿ ಕಂಪನಿ ಒಟ್ಟೊಟ್ಟಿಗೆ ಫಜೀತಿಗೆ ಸಿಲುಕಿಕೊಂಡಿವೆ.

ಎಲ್ಲಾ ಕಣ್ಣಾಮುಚ್ಚಾಲೆಯಂತೆ ನಡೆಸಲಾಗಿತ್ತಾದರೂ ಬರೋಬ್ಬರಿ 65,000 ಅರ್ಜಿಗಳು ಬಂದು ಬಿದ್ದಿದ್ದವಂತೆ, ಹಿಂದೆ-ಮುಂದೆ ಒಂದೂ ಗೊತ್ತಿರದ ಕಂಪನಿ ಮೂರೇ ದಿನದಲ್ಲಿ ವೆರಿಫಿಕೇಷನ್ ಮುಗಿಸಿ ಶಾಲೆಗೆ ಪೋಸ್ಟಿಂಗ್ ಮಾಡಿಬಿಡ್ತೀನಿ ಅನ್ನೊ ಭ್ರಮೆಯಲ್ಲಿ ದಾಖಲಾತಿ ಪರಿಶೀಲನೆಗೆ ಕುಳಿತಾಗಲೆ ಅಸಲಿಯತ್ತು ಅನಾವರಣಗೊಂಡಿದೆ. ಆನ್‌ಲೈನ್‌ನಲ್ಲಿ ರಿಜಿಸ್ಟಾರ್ ಆದ ಅರ್ಜಿಯ ಮಾಹಿತಿಗೂ ಈಗ ಎದುರಿಗಿರುವ ಮಾರ್ಕ್ಸ್‌ಕಾರ್ಡ್ ಹೇಳುವ ಮಾಹಿತಿಗೂ ತಾಳೆಯೇ ಸಿಗುತ್ತಿಲ್ಲ, ಇದೇನಿದು ಎಂದು ಕೇಳಲು ಹೋದರೆ ರಾಜಕಾರಣಿಗಳ ಸಪೋರ್ಟೋ, ಅಮೌಂಟಿನ ಆಮಿಷವೋ ಎದುರಾಗುತ್ತಿವೆ. ಅಸಲಿಗೆ ಈ ಇನ್‌ಸ್ಟಂಟ್ ನೇಮಕಾತಿಯ ಉದ್ದೇಶವೂ ಅದೇ ಆಗಿತ್ತು, ಆದರೆ ಭ್ರಷ್ಟರ ಮೇಲೆ ಸದ್ಯಕ್ಕೆ ಮುರಕೊಂಡು ಬಿದ್ದಿರುವ ಕಾನೂನಿಗೆ ಅಂಜಿ ಕಿಂಚಿತ್ತಾದರೂ ಪ್ರಾಮಾಣಿಕತೆ ಪ್ರದರ್ಶಿಸಬೇಕಿರುವ ಸಂದಿಗ್ಧತೆಯಲ್ಲಿರುವಾಗ ಒಂದಲ್ಲ ಎರಡಲ್ಲ ಬಂದ ಶೇ.೭೫ ರಷ್ಟು ಅರ್ಜಿಗಳು ಸುಳ್ಳು ಸುಳ್ಳೆ ಮಾಹಿತಿಯನ್ನು ಹೊತ್ತಿರುವುದು ಇಡೀ ಪ್ರೊಸೆಸ್ಸೆ ಡಿಲೇ ಆಗಿರುವುದಕ್ಕೆ ಕಾರಣವಾಗಿದೆ.


ಹದಿನೈದು ದಿನದಲ್ಲೆ ಶಿಕ್ಷಕರನ್ನು ನೇಮಿಸಿ ಶೈಕ್ಷಣಿಕ ಅಸಮತೋಲನವನ್ನು ಸರಿ ಮಾಡುವ ಇಲಾಖೆಯ ಘನಂದಾರಿ ಉದ್ದೇಶದ ಗತಿ ಈಗೇನಾಗಿದೆ. ಹದಿನೈದು ದಿನವಲ್ಲ ಎರಡು ತಿಂಗಳು ಕಳೆಯುತ್ತಾ ಬಂದರೂ ಕೆ... ಶೇಕಡಾ ಎಪ್ಪತ್ತರಷ್ಟು ಅರ್ಜಿಗಳ ದಾಖಲಾತಿ ಪರಿಶ... ಮಾತ್ರ ಪೂರ್ಣವಾಗಿದೆ ಅಂದಮೇಲೆ, ಅರ್ಹರಿಗೆ ವ... ತಿಯೇ ಇಲ್ಲದಂತೆ ಅಷ್ಟು ತುರ್ತಾಗಿ ನಡೆಸಿದ ನೇಮ... ಯಾದರು ಏತಕ್ಕೆ? ಅದರ ಬದಲು ಇದೇ ಸಮಯ... ಸರ್ಕಾರವೆ ಸ್ವತಃ ನೇಮಕಾತಿಗಿಳಿದಿದ್ದರೆ ಕನಿಷ್ಠ ಮಯ... ಯಾದರೂ ಉಳಿಯುತ್ತಿತ್ತು, ಇದೆಲ್ಲಾ ರಗಳೆ ಮುಗಿಯ... ಇನ್ನೂ ಏನಿಲ್ಲವೆಂದರೂ ಒಂದು ತಿಂಗಳು ಬೇಕಾ... ಆಮೇಲೆ ಇವರೆಲ್ಲ ಶಾಲೆಗೆ ಹೋಗಿ ಒಗ್ಗಿಕೊಳ್ಳುವ ಹ... ಗುತ್ತಿಗೆಯ ಅವಧಿಯೇ ಮುಗಿದು ಮತ್ತೆ ಅತ... ನಿರ್ಮಾಣವಾಗುವುದು ಇದರ ಮುಂದಿನ ಅಧ್ಯಾ... ಅದಿರಲಿ, ಈ ಪರಿ ಕಳ್ಳದಾರಿಯ ಮೊರೆ ಹೋಗಿ... ಅಭ್ಯರ್ಥಿಗಳನ್ನೆ ಶಿಕ್ಷಕರನ್ನಾಗಿಸಿ ಮಕ್ಕಳಿಗೆ ಅದ್ಯಾವ ... ಬೋಧನೆ ಮಾಡಿಸಬೇಕೆಂದಿದ್ದಾರೊ ಗೊತ್ತಿಲ್ಲ, ಒಟ... ಕಾಗೇರಿ ಕೃಪಾಪೋಷಿತ ಟೀಮ್ ಕಡುಕೆಟ್ಟ ದ... ವೊಂದನ್ನು ಬಣ್ಣ ಹಚ್ಚದೇ ಆಡಲು ನಿಂತಿರುವುದು ... ವಾಕರಿಕೆ ಹುಟ್ಟಿಸುವಂಥದ್ದು.

ಸಂಬಂಧಪಟ್ಟವರು ಸಾವಿರ ಸಬೂಬು ಕೊ... ಇಂತಹ ಪ್ರಕ್ರಿಯೆ ಪ್ರಾರಂಭವಾದಾಗಲೆ ಜನ ... ಇಲಾಖೆಯತ್ತ ಅನುಮಾನದ ನೋಟ ಬೀರಿ, ಎ... ಗೋಲ್‌ಮಾಲ್ ನಡೆದಿರಬಹುದೆಂಬಂತೆ ಕಾಗೇರಿ... ಕೆಕ್ಕರಿಸಿದ್ದರು. ಆದರೆ ಕಲಿಯುವ ಮಕ್ಕಳ ಭವಿಷ್ಯ... ಮುಂದಿರಿಸಿದ್ದರಿಂದ ಬಚಾವಾಗಿದ್ದರಷ್ಟೆ. ಆದರೀಗ ಗೊ... ಅವ್ಯವಸ್ಥೆಗಳು ಎಲ್ಲಾ ಒಳಸಂಚುಗಳನ್ನು ನೀಟಾಗಿ ಬ... ಗಿಟ್ಟಿವೆ. ಶಿಕ್ಷಣ ಸಚಿವನಾಗಿ ಕಾಗೇರಿಯ ಹ... ಎಡವಟ್ಟುಗಳ ಪಟ್ಟಿಯಲ್ಲಿ ಇದೂ ಮತ್ತೊಂದಾಗಿ ... ಪಡೆದಿದೆ. ಆದರೆ ಮುಂದಾಲೋಚನೆ ಇಲ್ಲದೆ ಸುಖಾಸು... ಸಮಯ, ಹಣ, ಆಕಾಂಕ್ಷೆಗಳನ್ನೆಲ್ಲ ಪೋಲು ಮ... ಟೀಮಿಗೆ ಗ್ರಹಚಾರ ಹತ್ತಿರದಲ್ಲೆ ಇರುವ ಎಲ್ಲಾ ಸೂಚನ... ಕಾಣಿಸುತ್ತಿವೆ...

• ಗಿರೀಶ್ ತಾಳಿ...

ಕದ್ದ ದುಡ್ಡು ಗುಜರಾತ್ ಪಾಲು
ಮೋದಿ-ರಾಮದಾಸ್ ರಹಸ್ಯ ವ್ಯವಹಾರ

ಕರ್ನಾಟಕದ ಪ್ರಸಿದ್ಧ ಮೈಸೂರು ದಸರಾಗೆ ಜರಾತ್‌ನ ನರಹಂತಕ ಮುಖ್ಯಮಂತ್ರಿ ನರೇಂದ್ರ ಮೋದಿಗೆ ಆಹ್ವಾನ ನೀಡಲಾಗಿದೆ! ಇದು ಸಾಂಪ್ರದಾಯಿಕ ಆಹ್ವಾನವಾಗಿದ್ದರೆ ಯಾವ ಅಭ್ಯಂತರವೂ ಇಲ್ಲ. ಆದರೆ ವೈದ್ಯಕೀಯ ಸಚಿವ ರಾಮದಾಸ್ ಗುಜರಾತ್‌ನ ಮೋದಿಯನ್ನ ಕರೆದಿರುವುದರಲ್ಲಿ ಹಲವಾರು ವ್ಯವಹಾರಿಕ ಕಾರಣಗಳು ಅಡಗಿವೆ.



ಸಚಿವ ರಾಮದಾಸ್ ಪಕ್ಕಾ ವ್ಯವಹಾರಿಕ ಆಸಾಮಿ. ಮೈಸೂರಿನಲ್ಲಿ ನಡೆಯುತ್ತಿರುವ ಸಣ್ಣಪುಟ್ಟ ಕಾರ್ಯಕ್ರಮಗಳನ್ನೂ ಬಿಡದೆ ತನ್ನ ವರ್ಚಸ್ಸಿಗಾಗಿ ಬಳಸಿಕೊಳ್ಳುತ್ತಿರುವ ಸಮಯಸಾಧಕ. ಇಂತಹ ರಾಮದಾಸ್ ನಾಡ ಹಬ್ಬ ಎಂದು ಬಿಂಬಿಸಿರುವ ದಸರಾವನ್ನ ಬಿಡುತ್ತಾನೆಯೇ? ಈ ಸಂದರ್ಭವನ್ನ ಬಳಸಿಕೊಂಡು ತನ್ನ ಸ್ಥಾನವನ್ನೂ ಮತ್ತು ತನ್ನ ವ್ಯವಹಾರದ ಜಾಲಗಳನ್ನ ಭದ್ರಪಡಿಸಿಕೊಳ್ಳುವ ಕುಕೃತ್ಯದಲ್ಲಿ ತೊಡಗಿದ್ದಾನೆ. ಇದಕ್ಕಾಗಿಯೇ ಗುಜರಾತಿನ ನರಹಂತಕ ಮೋದಿಯನ್ನ ಮೈಸೂರಿನ ದಸರಾಗೆ ಕರೆತರಲಾಗುತ್ತಿದೆ.

ರಾಮದಾಸ್ ಹೇಳಿಕೇಳಿ ಭೂಗಳ್ಳ. ಮೈಸೂರಿನ ರಿಯಲ್ ಎಸ್ಟೇಟ್ ದಂಧೆಯಲ್ಲಿ ರಾಮದಾಸ್ ಮತ್ತು ಆತನ ತಮ್ಮ ಶ್ರೀಕಾಂತರೇ ಪ್ರಮುಖರು. ರಾಮದಾಸ್ ಮಂಡ್ಯ ಮೂಲದ ಬ್ರಾಹ್ಮಣನಾದರೂ ಇಪ್ಪತ್ತು ವರ್ಷಗಳ ಹಿಂದೆ ಮೈಸೂರಿನ ಬೀದಿಬೀದಿಗಳಲ್ಲಿ ನಾದಬ್ರಹ್ಮ ಊದುಬತ್ತಿಯನ್ನ ಮಾರುತ್ತಿದ್ದ. ಈಗ ರಾಮದಾಸ್ ಮತ್ತು ಶ್ರೀಕಾಂತನ ಆಸ್ತಿಪಾಸ್ತಿಗಳು ಬರೋಬ್ಬರಿ ಸಾವಿರದ ಐದುನೂರು ಕೋಟಿ ಮೀರುತ್ತದೆ. ಯಾವುದೇ ವ್ಯಕ್ತಿ ಪ್ರಾಮಾಣಿಕವಾಗಿ, ಕಷ್ಟಪಟ್ಟು ದುಡಿಮೆಕವಾಗಿ ಮುಂದುವರೆದರೆ ಅಂತರವಾಗಲಿ, ಆಕ್ಷೇಪಣೆಯಾಗಲಿ ಇರಕೂಡದು. ಆದರೆ ರಾಮದಾಸ್ ಹಿಡಿದದ್ದು ಪ್ರಾಮಾಣಿಕ ಮಾರ್ಗವನ್ನಲ್ಲ.




ರಾಮದಾಸ್ ದಿಢೀರ್ ಶ್ರೀಮಂತ ಕಥೆ ಭಾರೀ ರೋಚಕವಾಗಿದೆ. ಇಂತಹ ರೋಚಕ ಪುರಾಣಗಳಲ್ಲಿ ಮೊದಲನೆಯದು ಅಬ್ಕಾರಿ ದಂಧೆಯ ಗೋವಿಂದರಾಜು ಮನೆಯಲ್ಲಿ ಆಗಿನ ಸಿಎಂ ಬಂಗಾರಪ್ಪ ಇಟ್ಟಿದ್ದ ಹಣ. ಈ ಮೇಲೆ ರೇಡಾಗುತ್ತದೆ ಎಂಬ ಭೀತಿಯಲ್ಲಿ ಬಂಗಾರಪ್ಪನ ಹಣವನ್ನ ಸಾಗಿಸುವ ಕೆಲಸವನ್ನು ಗೋವಿಂದರಾಜು, ರಾಮದಾಸ್ ಮತ್ತು ಕೆ.ಆರ್.ನಗರದ ಈಗಿನ ಹಾಲಿ ಶಾಸಕ ಸಾರಾ ಮಹೇಶ್ ಮಾಡಿದ್ದರು. ಆದರೆ ಬಚ್ಚಿಡಲು ಕೊಟ್ಟಿದ್ದ ಚೀಲಗಟ್ಟಲೆ ಹಣವನ್ನ ಇವರೇ ಬಚ್ಚಿಟ್ಟುಕೊಂಡರಂತೆ. ಈ ಹಣದೊಂದಿಗೆ ಈ ಜೋಡಿ ಎತ್ತು, ಮೈಸೂರಿನಲ್ಲಿ ಆಗತಾನೆ ಗರಿಗೆದರುತ್ತಿದ್ದ ರಿಯಲ್ ಎಸ್ಟೇಟ್ ದಂಧೆಗೆ ಇಳಿದರು. ಮೈಸೂರು ಹೊರಪ್ರದೇಶಗಳಾದ ಹಿನಕಲ್, ಬೋಗಾದಿ, ಶ್ರೀರಾಂಪುರ, ಗೋಕುಲಂ, ಹಳ್ಳಿಗಳ ಹಿಂದುಳಿದ ಮತ್ತು ದಲಿತ ರೈತರಿಗೆ ಚಿಲ್ಲರೆ ಹಣದ ರುಚಿ ತೋರಿಸಿ ನೂರಾರು ಎಕರೆ ಭೂಮಿಯನ್ನ ತಮ್ಮದಾಗಿ ಪಡೆದರು. ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಮಣ್ಣು ಮುಕ್ಕಿಸಿ ಕೃಷಿ ಭೂಮಿಯನ್ನ ಸೈಟ್‌ಗಳಾಗಿ ಪರಿವರ್ತಿಸಿ ಕೋಟಿಗಟ್ಟಲೇ ಹಣ ಬಾಚಿದರು. ಈ ಮಧ್ಯೆ ಪಾಲು ಹಂಚಿಕೆಯ ವಿವಾದದಿಂದ ದೂರವಾದ ಸಾರಾ-ರಾಮದಾಸ್ ತಮ್ಮತಮ್ಮ ನೆಟ್‌ವರ್ಕ್‌ಗಳಲ್ಲಿ ರಿಯಲ್ ಎಸ್ಟೇಟ್ ದಂಧೆಯನ್ನ ಮುಂದುವರೆಸಿದರು.

ಇಂತಹ ರಾಮದಾಸ್ ರಿಯಲ್ ಎಸ್ಟೇಟ್ ದಂಧೆಯಲ್ಲಿ ಮುಂದುವರೆದು ಸಾರ್ವಜನಿಕ ಕೆರೆಕಟ್ಟೆಗಳನ್ನು, ದರಖಾಸ್ತು ಜಮೀನುಗಳೂ ಸೇರಿದಂತೆ ಸರ್ಕಾರಿ ಜಮೀನುಗಳಿಗೆಲ್ಲಾ ಬೇಲಿಸುತ್ತಿ, ನಕಲಿ ದಾಖಲೆ ಸೃಷ್ಟಿಸಿ ಮಾರಾಟ ಮಾಡಿದ. ಈ ಬಗ್ಗೆ ತಾರಾ ವಿಜಯಭಾಸ್ಕರ್ ಎಂಬ ದಕ್ಷ ಐಎಎಸ್ ಅಧಿಕಾರಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದಾರೆ. ಭೂಗಳ್ಳ ಮಾಜಿ ಸಚಿವ ಕಟ್ಟಾ ಸುಬ್ರಮಣ್ಯ ನಾಯ್ಡು ಮತ್ತು ಗಣಿಕಳ್ಳ ಗಾಲಿ ಜನಾರ್ದನ ರೆಡ್ಡಿಗಳಿಗಿಂತ ಮೊದಲು ಜೈಲಿಗೆ ಹೋಗಬೇಕಾಗಿದ್ದ ರಾಮದಾಸ್ ಮತ್ತೆ ಮತ್ತೆ ಶಾಸಕನಾಗುತ್ತಾ, ಸಚಿವನಾಗುತ್ತಾ ಮೆರೆಯುತ್ತಿರುವುದು ಮಾತ್ರ ಪ್ರಜಾತ್ರಂತ್ರಕ್ಕೆ ಮಾಡಿದ ದ್ರೋಹ ಎನ್ನದೆ ವಿಧಿಯಿಲ್ಲ. ಈ ಬಗ್ಗೆ ಗಂಗಾಧರ್ ಮತ್ತು ಲೋಕೇಶ್ ಎಂಬ ವಕೀಲರು ಹೈಕೋರ್ಟ್‌ನಲ್ಲಿ ರಿಟ್ ಹಾಕಿದ್ದಾರೆ. ಕೆಲವೇ ದಿನಗಳಲ್ಲಿ ತೀರ್ಪು ಹೊರಬೀಳಲಿದೆ.

ರಾಮದಾಸ್ ಮತ್ತು ಶ್ರೀಕಾಂತ್ ಈಗ ಅಕ್ಷರಶಃ ಬಂಡವಾಳಶಾಹಿ ಲೂಟಿಕೋರರಾಗಿ ಪರಿವರ್ತನೆಗೊಂಡಿದ್ದಾರೆ. ಮೈಸೂರಿನಲ್ಲಿ ರೈತರು ಮತ್ತು ಮಧ್ಯಮ ವರ್ಗದ ಜನರಿಂದ ದೋಚಿದ ಕೋಟಿಗಟ್ಟಲೆ ಹಣವನ್ನು ಗುಜರಾತಿನಲ್ಲಿ ಬಂಡವಾಳ ರೂಪದಲ್ಲಿ ಹೂಡಿದ್ದಾರೆ! ಇದರಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಈಶ್ವರಪ್ಪನ ಪಾಲೂ ಇದೆಯಂತೆ! ಈ ತ್ರಿಮೂರ್ತಿಗಳ ಬಹುಕೋಟಿ ಕಪ್ಪು ಬಂಡವಾಳ ಗುಜರಾತಿನ ಕಾಂಡಲ್ ಬಂದರ್‌ನಲ್ಲಿಯೂ, ಹಡಗು ಕಾರ್ಖಾನೆಗಳ ಮೇಲೂ, ಸಾರಿಗೆ ಏಜೆನ್ಸಿಗಳ ಮೇಲೂ ಹೂಡಲಾಗಿದೆಯಂತೆ! ಇಷ್ಟೇ ಅಲ್ಲದೆ, ಗುಜರಾತ್‌ನ ಅಹಮದಾಬಾದ್‌ನಲ್ಲಿ ರಾಮದಾಸ್‌ನ ತಮ್ಮ ಶ್ರೀಕಾಂತ್ ಇನ್‌ಫ್ರಾಸ್ಟ್ರಕ್ಚರ್ ಕಂಪನಿಯನ್ನೂ ಸ್ಥಾಪಿಸಿದ್ದಾನಂತೆ. ಈ ಎಲ್ಲಾ ವ್ಯವಹಾರಗಳ ಕಾರಣದಿಂದಾಗಿಯೇ ಮುಂದಿನ ಪ್ರಧಾನಮಂತ್ರಿ ಕ್ಯಾಂಡಿಡೇಟ್ ಎಂದು ಬಿಂಬಿತವಾಗುತ್ತಿರುವ ನರೇಂದ್ರ ಮೋದಿಯನ್ನು ಮೈಸೂರಿಗೆ ಕರೆತಂದು ತನ್ನ ವ್ಯವಹಾರಗಳನ್ನ ಸುಗಮಗೊಳಿಸಿಕೊಳ್ಳುವ ಹುನ್ನಾರ ನಡೆಸಿದ್ದಾನಂತೆ!

ರಾಮದಾಸ್ ಹೊಂದಿರುವ ಕಪಟ ಇಮೇಜನ್ನ ಡ್ಯಾಮೇಜ್ ಮಾಡಲು ಬಿಜೆಪಿಯೊಳಗೆ ಯಡ್ಡಿ ಬಣ ಟೊಂಕಕಟ್ಟಿ ನಿಂತಂತಿದೆ. ಇದಕ್ಕೆ ಸಾಕ್ಷ್ಯ ಎನ್ನುವಂತೆ ಮೊನ್ನೆ ನಗರಾಭಿ ವೃದ್ಧಿ ಸಚಿವ ಸುರೇಶ್ ಕುಮಾರ್ ಮೈಸೂರಿಗೆ ಬಂದು ರಸ್ತೆಗಳನ್ನ ಪರಿಶೀಲಿಸಿದ ನಂತರ ಪತ್ರಿಕಾಗೋಷ್ಠಿಯಲ್ಲಿ ಮೈಸೂರಿನಲ್ಲಿ ನಡೆಯುತ್ತಿರುವ ರಸ್ತೆ ಕಾಮಗಾರಿಗಳು ಕಳಪೆ ಎಂದರು. ಇದನ್ನ ಮುಚ್ಚಿಕೊಳ್ಳಲು ರಾಮದಾಸ್ 'ರಸ್ತೆ ಕಾಮಗಾರಿಗಳು ಉತ್ತಮ ಗುಣಮಟ್ಟದಿಂದ ಕೂಡಿದೆ' ಎಂದು ಹೇಳಿದ. ರಾಮದಾಸ್ ದಸರಾ ಹೆಸರಿನಲ್ಲಿ ತನ್ನ ಚೇಲಾಗಳಿಗೆ ವಿವಿಧ ಕಾಮಗಾರಿಗಳ ಟೆಂಡರ್‌ಗಳನ್ನ ನೀಡಿ ಹಬ್ಬದೂಟ ಮಾಡತೊಡಗಿದ್ದಾನೆ. ತನ್ನ ಪಕ್ಷದವರೇ ಕೊಡುತ್ತಿರುವ ಹೊಡೆತಗಳನ್ನ ತಡೆದುಕೊಳ್ಳಲಾಗದ ಕಾರಣದಿಂದ ರಾಮದಾಸ್ ರಾಷ್ಟ್ರ ನಾಯಕರ ಜೊತೆ ಗುರುತಿಸಿಕೊಳ್ಳುವ ಉಮೇದಿಗೆ ಬಿದ್ದಿದ್ದಾನೆ.



ರಾಮದಾಸ್ ತನ್ನ ಮೇಲಿರುವ ಭೂಗಳ್ಳತನದ ಕಳಂಕವನ್ನು ತೊಡೆದುಕೊಳ್ಳಲು ಮತ್ತು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಮೈಸೂರಿನ ದಸರಾ ಹಬ್ಬವನ್ನು ಮತ್ತು ಜನರ ಕಂದಾಯ ಹಣವನ್ನು ದುರ್ಬಳಕೆ ಮಾಡುತ್ತಿದ್ದಾನೆ. ಮೈಸೂರಿನ ಜನ ರಾಮದಾಸ್ ನಾಟಕಗಳನ್ನು ಅರ್ಥಮಾಡಿಕೊಳ್ಳಬೇಕಿದೆ.


• ಲಕ್ಷ್ಮಣ್ ಚೀರನಹಳ್ಳಿ



ಯಾದಗಿರಿ ಕೂಳುಬಾಕ ಕಾಯಿಲೆಗೆ ಮದ್ದಾಗಿ ಬಂದರೇ ಮಾಧವಿ!

ಯಾದಗಿರಿ ಜಿಲ್ಲೆಯ ಶಹಾಪುರ ಪುರಸಭೆಗೆ ಮುಖ್ಯಾಧಿಕಾರಿಯಾಗಿ ಎನ್. ಮಾಧವಿ ಬರುತ್ತಿರುವಂತೆಯೆ ಇಲ್ಲಿನ ಪುರಸಭೆಯ ಸದಸ್ಯರು ವಿಚಿತ್ರ ತಲ್ಲಣಕ್ಕೊಳಗಾಗಿದ್ದಾರೆ. ಬಹುಶಃ ಇಷ್ಟು ವರ್ಷಗಳ ಕಾಲ ಶಹಾಪುರ ಪುರಸಭೆಗೆ ಅಧಿಕಾರಿಯಾಗಿ ಬಂದವರು ಪುರಸಭೆಯ ಸದಸ್ಯರ ಹಾಗೂ ಶಾಸಕರ ಮರ್ಜಿಯಂತೆ ಕೆಲಸ ಮಾಡಬೇಕಾಗಿತ್ತು, ಯಾವ ಯಾವ ವಾರ್ಡ್‌ಗಳಲ್ಲಿ ಏನೇನು ಕೆಲಸ ಮಾಡಬೇಕು ಎಂದು ಕ್ರಿಯಾ ಯೋಜನೆ ರೂಪಿಸುವ ಬದಲು ಆ ಹಣವನ್ನು ಹೇಗೆ ಎತ್ತುವಳಿ ಮಾಡಬೇಕು ಎಂಬ ಬಗ್ಗೆಯೆ ಹೆಚ್ಚು ಸ್ಕೆಚ್ ಹಾಕಿಕೊಳ್ಳಬೇಕಾಗಿತ್ತು.

ಹೀಗಾಗಿ ಶಹಾಪುರ ಪಟ್ಟಣದಾದ್ಯಂತ ಅನಧಿಕೃತ ಕಟ್ಟಡಗಳು ಗಿಜಿಗುಡುತ್ತಿವೆ. ಸರಕಾರದ ಎಲ್ಲಾ ಜಾಗಗಳನ್ನು ಇಲ್ಲಿನ ಜನಪ್ರತಿನಿಧಿಗಳು ತಮ್ಮವೇ ಎಂಬಂತೆ ಅಲ್ಲಿ ಅನಧಿಕೃತ ಮಳಿಗೆಗಳನ್ನು ಕಟ್ಟಿಕೊಂಡಿದ್ದಾರೆ. ಜೊತೆಗೆ ಅವುಗಳನ್ನು ಸಾರ್ವಜನಿಕರಿಗೆ 99 ವರ್ಷಗಳವರೆಗೆ ಲೀಸ್ ಮೇಲೆ ಮಾರಿಕೊಂಡಿದ್ದಾರೆ. ಪುರಸಭೆಯ ಬಹುತೇಕ ಸದಸ್ಯರಂತೂ ಪಕ್ಷಭೇದ ಮರೆತು ತಮ್ಮ ತಮ್ಮ ಶಕ್ತ್ಯಾನುಸಾರ ಗೆಬರಿಕೊಂಡಿದ್ದಾರೆ.



ಮುಕ್ಕುವುದೇ ತಮ್ಮ ಕರ್ತವ್ಯ ಎಂದು ತಿಳಿದುಕೊಂಡಿರುವ ಇಲ್ಲಿನ ಸದಸ್ಯರು ಶಾಸಕ ಶರಣಬಸಪ್ಪಗೌಡ ದರ್ಶನಾಪುರ ಅವರ ನೇತೃತ್ವದಲ್ಲಿ ಹಾಗೂ ಅವರ ಸಹೋದರ ಅಮರೇಶಗೌಡ ದರ್ಶನಾಪುರ ಅವರ ಸುಪರ್ದಿಯಲ್ಲಿ ಭಕ್ಷಣೆ ಕಾರ್ಯವನ್ನು ಎಗ್ಗಿಲ್ಲದೆ ನಡೆಸಿದ್ದಾರೆ. ಮತ್ತೊಂದು ಆಶ್ಚರ್ಯದ ಸಂಗತಿಯೆಂದರೆ ಪುರಸಭೆಗೆ ಸೇರಿದ 'ಪಬ್ಲಿಕ್ ಕ್ಲಬ್' ಎಂಬ ಕಟ್ಟಡವನ್ನೇ ಹೈಜಾಕ್ ಮಾಡಿಕೊಂಡು ಅಲ್ಲಿ ಶಾಸಕರ ತಮ್ಮ ಚಿಕ್ಕಪ್ಪ ಬಸವರಾಜಪ್ಪಗೌಡ ದರ್ಶನಾಪುರ ಮಾಲೀಕತ್ವದ ಶ್ರೀ ಚರಬಸವೇಶ್ವರ ಶಿಕ್ಷಣ ಸಂಸ್ಥೆಯ ಕಚೇರಿ ತೆರೆದಿದ್ದಾರೆ. ಬೀದರ-ಬೆಂಗಳೂರು ಮುಖ್ಯ ಹೆದ್ದಾರಿಯಲ್ಲಿರುವ ಈ ಕಟ್ಟಡದ ಮುಂದುಗಡೆ ಮೂರು ಅಂತಸ್ತಿನ ಕಮರ್ಷಿಯಲ್ ಕಟ್ಟಡಗಳನ್ನು ಕಟ್ಟಿ ಸಾರ್ವಜನಿಕರಿಗೆ ಲೀಸ್ ಮೇಲೆ ಕೊಟ್ಟಿದ್ದಾರೆ.

ಸರಕಾರದ ಆಸ್ತಿಯನ್ನು ಕಾಪಾಡಬೇಕಾದ ಪುರಸಭೆಯ ಕಾನೂನು ಸಲಹೆಗಾರ ಶ್ರೀನಿವಾಸ ಕುಲ್ಕರ್ಣಿಯಂತೂ ಹಾಲಿ ಶಾಸಕರ ಕೈಚೀಲ. ಹೀಗಾಗಿ ಇಲ್ಲಿನ ಪುರಸಭೆಯ ಕಟ್ಟಡವನ್ನು ಪ್ರವೇಶಿಸುತ್ತಿದ್ದಂತೆ ಗಬ್ಬು ವಾಸನೆ ಮೂಗಿಗೆ ಅಡರಿಕೊಳ್ಳುತ್ತದೆ. ನಗರದ ಯಾವುದೇ ವಾರ್ಡಿಗೆ ಭೇಟಿ ನೀಡಿದರೂ ನೀವು ಹೈಜಂಪ್/ ಲಾಂಗ್ ಜಂಪ್ ಮಾಡಿಕೊಂಡು ನಡೆಯಬೇಕು. ಇದು ತಪ್ಪಿ ನಡೆದರೆ ಪುರಸಭೆಯ ಬಚ್ಚಲಗುಂಡಿಯಲ್ಲಿ ಖಂಡಿತ ಬೀಳಬೇಕಾಗುತ್ತದೆ.

ಐ.ಡಿ.ಎಸ್.ಎಂ.ಟಿ. ಯೋಜನೆಯಡಿ ನಿರ್ಮಿತವಾದ ಪುರಸಭೆಯ ಮಳಿಗೆಗಳನ್ನಂತೂ ಬೇಕಾಬಿಟ್ಟಿಯಾಗಿ ಹಂಚಿಕೆ ಮಾಡಲಾಗಿದೆ. ಪ್ರತಿ ಮಾಹೆಯಾನ ಅವರಿಂದ ಸ್ಥಳೀಯ ಮಾರುಕಟ್ಟೆ ದರಕ್ಕಿಂತಲೂ ಅಗ್ಗವಾಗಿ ಬಾಡಿಗೆ ಪಡೆಯಲಾಗುತ್ತಿದೆ. ಇದಕ್ಕೆಲ್ಲ ಶಾಸಕರ ಕುಮ್ಮಕ್ಕೇ ಮುಖ್ಯ ಕಾರಣ ಎಂಬುದು ಸುಸ್ಪಷ್ಟ.

ಆದರೆ ಎನ್. ಮಾಧವಿ ಮುಖ್ಯಾಧಿಕಾರಿಯಾಗಿ ಬಂದ ಲಾಗಾಯ್ತಿನಿಂದಲಂತೂ ಇದಕ್ಕೆಲ್ಲ ಬ್ರೇಕ್ ಬಿದ್ದಿದೆ. ಅನಧಿಕೃತ ಮಳಿಗೆಗಳಿಗೆ ನೋಟಿಸ್ ನೀಡಿ ಉತ್ತರಿಸುವಂತೆ ಸೂಚಿಸಿದ್ದಾರೆ. ಹಲವಾರು ಕಳಪೆ ಕಾಮಗಾರಿಗಳನ್ನು ವೀಕ್ಷಿಸಿ ಅವುಗಳ ಬಿಲ್ ಹೆಲ್ಡಪ್ ಮಾಡಿಸಿದ್ದಾರೆ. ನೀರು ನಿಂತು ಮಲೆತುಹೋಗಿದ್ದ ಗಟಾರಗಳು ಸ್ವಚ್ಛವಾಗಿವೆ. ಸರಕಾರಿ ಜಾಗಗಳನ್ನು ಅತಿಕ್ರಮಿಸಿಕೊಂಡ ಜನಪ್ರತಿನಿಧಿಗಳೆಂಬ ಹಲಾಲುಕೋರರಿಗೆ ಇದರಿಂದ ಇರಿಸುಮುರಿಸು ಉಂಟಾಗಿ ಮಾಧವಿಯನ್ನು ಇಲ್ಲಿಂದ ಎತ್ತಂಗಡಿ ಮಾಡಬೇಕು ಎಂಬ ಪಿತೂರಿ ಜೋರಾಗಿ ನಡೆದಿದೆ. ಶಾಸಕರ ಕೈ ಮೇಲಾಗಿ ಮಾಧವಿ ಶಹಾಪುರ ಪುರಸಭೆಯಿಂದ ವರ್ಗವಾಗುತ್ತಾರೋ, ಸಾರ್ವಜನಿಕ ಹಿತಾಸಕ್ತಿಯನ್ನು ಗಮನಿಸಿ ಮುಖ್ಯಾಧಿಕಾರಿಯನ್ನು ಶಹಾಪುರದಲ್ಲಿ ಉಳಿಸುತ್ತಾರೋ ಕಾದುನೋಡಬೇಕು.

• ವಿಶ್ವಾರಾಧ್ಯ ಸತ್ಯಂಪೇಟೆ

ಬೂದಿ ಮಾತ್ರ ಬಲ್ಲದು ಬೇಯುವ ಬೇಗೆಯನ್ನು


1932 ಸೆಪ್ಟೆಂಬರ್ 25ರಂದು ಹಿಂದೂ ಮುಖಂಡರು ಹಾಗೂ ಅಂಬೇಡ್ಕರ್ ಸೇರಿದಂತೆ ಶೋಷಿತ ವರ್ಗಗಳ ಮುಖಂಡರ ನಡುವೆ ಏರ್ಪಟ್ಟ 'ಪೂನಾ ಒಪ್ಪಂದ' ಐತಿಹಾಸಿಕವೆಂದು ಪರಿಗಣಿಸಲ್ಪಟ್ಟಿದೆ. ಅದು ಐತಿಹಾಸಿಕವಾಗಿದ್ದು ಒಂದಲ್ಲ ಹಲವು ಕಾರಣಗಳಿಗೆ. ಹಿಂದೂ ಧರ್ಮದ ಅಸ್ಪೃಶ್ಯತೆ ಕಳಂಕವನ್ನು ತೊಡೆದುಹಾಕಲು ಮತ್ತು ಮೇಲ್ಜಾತಿ ಹಿಂದೂಗಳ ಧಾರ್ಮಿಕ ಪ್ರಜ್ಞೆ ಜಾಗೃತಗೊಳಿಸಬೇಕೆಂದು 1932ರ ಸೆಪ್ಟೆಂಬರ್ 20ರಂದು ಗಾಂಧಿ ಪೂನಾದ ಯರವಾಡಾ ಜೈಲಿನಲ್ಲಿ ಆಮರಣಾಂತ ಉಪವಾಸ ಶುರುಮಾಡಿದರು. ಎರಡನೆಯ ದುಂಡುಮೇಜಿನ ಪರಿಷತ್ತಿನಲ್ಲಿ ಶೋಷಿತ ಸಮುದಾಯಗಳಿಗೆ ಹಿಂದೂಗಳಿಂದ ಪ್ರತ್ಯೇಕ ಮತದಾನ ವ್ಯವಸ್ಥೆ ನೀಡಿದ್ದನ್ನು ಅವರು ಒಪ್ಪಿರಲಿಲ್ಲ. ಅದರ ರದ್ದತಿಗೆ ಅಂಬೇಡ್ಕರ್ ಮತ್ತಿತರ ನಾಯಕರ ಮನವೊಲಿಸುವುದು ಉಪವಾಸದ ಹಿಂದಿನ ಮತ್ತೊಂದು ಉದ್ದೇಶವಾಗಿತ್ತು. ಕೊನೆಗೆ ಸೆಪ್ಟೆಂಬರ್ 25ನೇ ತಾರೀಕು ಹಿಂದೂ ಮುಖಂಡರು ಮತ್ತು ಅಂಬೇಡ್ಕರ್ ಸಹವರ್ತಿಗಳ ನಡುವೆ ಒಪ್ಪಂದವೇರ್ಪಟ್ಟು ಪ್ರತ್ಯೇಕ ಮತದಾನ ವ್ಯವಸ್ಥೆಯ ಬದಲಾಗಿ ಶೋಷಿತ ಸಮುದಾಯಗಳಿಗೆ ಸ್ಥಾನ ಮೀಸಲು, ಮೀಸಲು ಕ್ಷೇತ್ರಗಳಲ್ಲಿ ಎರಡು ಹಂತದ ಚುನಾವಣೆ, ಕೆಲಕಾಲಾವಧಿಯ ನಂತರ ಪ್ರಾಥಮಿಕ ಚುನಾವಣೆ ರದ್ದತಿ, ಮೀಸಲು ಸ್ಥಾನಗಳ ಏರಿಕೆ ಮಾಡಲಾಯಿತು. ಗಾಂಧಿ ಉಪವಾಸ ಕೂತ ನಂತರ ಹಿಂದೂ ದೇವಾಲಯಗಳು ದಲಿತರಿಗೆ ಪ್ರವೇಶ ನೀಡಬೇಕೆಂಬ ಶೋಷಿತರ ಕೂಗಿಗೆ ಜೀವಬಂದು ದೇಶದ ಅಲ್ಲಲ್ಲಿ ಅಸ್ಪೃಶ್ಯತೆ ಆಚರಿಸುವುದಿಲ್ಲವೆಂದು ಪಣತೊಟ್ಟ ಸಾರ್ವಜನಿಕ ಪ್ರಕಟಣೆಗಳು ಹೊರಬಿದ್ದವು. ದೇಶಾದ್ಯಂತ ಅಸ್ಪೃಶ್ಯತೆ ಪಾಪ ಎಂದು ಸವರ್ಣೀಯ ಹಿಂದೂಗಳೆಲ್ಲ ಭಾವಿಸಿ ಅದಿನ್ನು ಮಾಯವಾಗೇ ಬಿಟ್ಟಿತೇನೋ ಎಂಬಂತಹ ವಾತಾವರಣವು ಕೆಲಕಾಲ ಮೂಡಿತು.

ಬೂದಿ ಮಾತ್ರ ಬಲ್ಲದು ಬೇಯುವ ಬೇಗೆಯನ್ನು. ಕಡತದ ಹೊಟ್ಟೆಯೊಳಗೆ ಅವಿತು ಕೂತಿದ್ದ ಕಾಗದದ ಮೇಲಿನ ಅಂಕಿಅಂಶಗಳು ರೋಚಕ ಕತೆಗಳನ್ನು ಹೇಳುತ್ತಿದ್ದರೆ, ವಾಸ್ತವ ಮಾತ್ರ ತನ್ನ ಎಂದಿನ ವಿಕೃತ ಮುಖವನ್ನೇ ಹೊದ್ದು ಕುಣಿಯುತ್ತಿತ್ತು. ಶೋಷಿತರಿಗೆ ದೇವಾಲಯ ಪ್ರವೇಶದ ಹೆಸರಿನಲ್ಲಿ ಹೆಸರೇ ಇಲ್ಲದೆ ಶಿಥಿಲಗೊಂಡ, ಕುಸಿದು ಬೀಳುತ್ತಿರುವ, ಯಾರೂ ಹೋಗದ ಪಾಳು ದೇವಾಲಯಗಳು ಮಹಾತ್ಮನಿಗೆ ಬೆಂಬಲ ತೋರಿಸುವ ನೆಪದಲ್ಲಿ ಸೇರಿಕೊಂಡಿದ್ದನ್ನು ಗುರುತಿಸಿದ ಅಂಬೇಡ್ಕರ್, ಅದರಲ್ಲಿ ಗಾಂಧೀಜಿಯ ಕ್ರಿಯಾಕ್ಷೇತ್ರವಾದ ಗುಜರಾತಿನ ಒಂದೇಒಂದು ದೇವಾಲಯವೂ ಇಲ್ಲವೆಂದು, ಅದು ಅಂದಿಗೂ ಸಾಮಾಜಿಕವಾಗಿ ಅಷ್ಟೇ ಗಡುಸಾಗಿ, ಪ್ರತಿಗಾಮಿಯಾಗಿ ಉಳಿದಿರುವುದನ್ನು ಗುರುತಿಸಿದ್ದರು. ಅಂಬೇಡ್ಕರ್‌ಗೆ ಎಂದೋ ಗೊತ್ತಾಗಿದ್ದ 'ಹಿಂದೂ ಧರ್ಮ ಮತ್ತು ಅಸ್ಪೃಶ್ಯರ ವಿಮೋಚನೆ ಒಟ್ಟೊಟ್ಟಿಗೆ ಚಲಿಸಲಾರವು' ಎಂಬ ಕಹಿ ಸತ್ಯವನ್ನು ಗಾಂಧಿ ಪಾಳಯ ಒಪ್ಪಿಕೊಳ್ಳಲು ಸಿದ್ಧವಿರಲಿಲ್ಲ. ಹಿಂದೂ ಧರ್ಮದ ಮೂಲಕವೇ ಅಸ್ಪೃಶ್ಯತೆಯನ್ನು ತೊಡೆದುಹಾಕುವೆನೆಂಬ ಹುಂಬ ವಿಶ್ವಾಸದಲ್ಲಿ ಗಾಂಧಿ ನಿಂತಿದ್ದರು. ನಂತರ ನಡೆದ ವಿದ್ಯಮಾನಗಳು 'ಪೂನಾ ಒಪ್ಪಂದಕ್ಕೆ ಸಹಿಮಾಡಿದ್ದು ನನ್ನ ಜೀವನದಲ್ಲಿ ಮಾಡಿದ ದೊಡ್ಡ ತಪ್ಪು' ಎಂದು ಅಂಬೇಡ್ಕರ್ ಪರಿತಪಿಸುವಂತೆ ಮಾಡಿದವು. ಅಂಬೇಡ್ಕರ್ ಹಾಗೆ ಭಾವಿಸಲು ಕಾರಣವಾದ ಘಟನೆಗಳನ್ನು ಒಪ್ಪಂದದ ನಂತರದ ಘಟನೆಗಳಲ್ಲಿ ಹುಡುಕಬೇಕು. ಸೆಪ್ಟೆಂಬರ್ ಕೊನೆಯಿಂದ 1933 ಏಪ್ರಿಲ್‌ವರೆಗೆ ನಡೆದಿದ್ದನ್ನು ಅವರ ಜೀವನಚರಿತ್ರೆಯಿಂದ ನೋಡಿದರೆ ಇದು ಸ್ಪಷ್ಟವಾಗುತ್ತದೆ.

1930ರಲ್ಲಿ ನಾಸಿಕದ ಕಾಳಾರಾಮ್ ದೇವಾಲಯ ಪ್ರವೇಶ, 1931ರಲ್ಲಿ ಕೇರಳದ ಕೆಳಪ್ಪನ್ ಅವರ ಗುರುವಾಯೂರು ದೇವಾಲಯ ಪ್ರವೇಶಕ್ಕೆ ನಡೆಸಿದ ಪ್ರಯತ್ನಗಳು ಕಾಂಗ್ರೆಸ್ಸಿನ ಗಮನ ಸೆಳೆಯದೇ ಹೋಗಿದ್ದವು. ಗಾಂಧಿ ಉಪವಾಸ ಶುರುಮಾಡಿದ ಮರುದಿನವೇ ಮಲಬಾರ್‌ನ ಕೆಳಪ್ಪನ್ ಅಸ್ಪೃಶ್ಯರ ದೇವಾಲಯ ಪ್ರವೇಶ ಕುರಿತು ಗುರುವಾಯೂರು ದೇವಸ್ಥಾನದೆದುರು ಉಪವಾಸ ಕುಳಿತರು. ಅವರಿಗೆ ಗಾಂಧಿ ತಾವಿಬ್ಬರೂ 1933, ಜನವರಿ ಒಂದರಿಂದ ಒಟ್ಟಿಗೇ ಉಪವಾಸ ಶುರು ಮಾಡೋಣವೆಂದು ಹೇಳಿದ್ದರಿಂದ, ದೇವಾಲಯ ಪ್ರವೇಶಕ್ಕಿಂತ ಅವರ ಜೀವವೇ ದೊಡ್ಡದೆಂದೂ, ಉಪವಾಸ ನಿಲ್ಲಿಸಬೇಕೆಂದೂ ಅಂಬೇಡ್ಕರ್ ಕೇಳಿಕೊಂಡಿದ್ದರಿಂದ ಉಪವಾಸ ನಿಲ್ಲಿಸಿದ್ದರು.

1932 ಸೆಪ್ಟೆಂಬರ್ 26: ನಾಸಿಕ್ ದೇವಾಲಯ ಪ್ರವೇಶ ಹೋರಾಟ ಮಾಡಿದ್ದರೂ ಅಂಬೇಡ್ಕರ್ ಈ ವೇಳೆಗೆ ತಮ್ಮ ನಿಲುವನ್ನು ಬದಲಿಸಿಕೊಂಡಿದ್ದರು. ತನ್ನ ಜನ ದೇವಾಲಯ ಪ್ರವೇಶಕ್ಕಿಂತ ರಾಜಕೀಯ ಅಧಿಕಾರ ಪಡೆಯಲು, ಲೌಕಿಕ ಸವಲತ್ತುಗಳನ್ನು ಪಡೆಯಲು ಮೊದಲು ಶ್ರಮಿಸಬೇಕು ಎಂದು ಭಾವಿಸಿದ್ದರು. ಮುಂಬಯಿಯ ಸಭೆಯೊಂದರಲ್ಲಿ ಮಾತನಾಡುತ್ತ 'ಕುತ್ತಿಗೆಯ ಸುತ್ತಲಿನ ತುಳಸಿಮಾಲೆ ನಿಮ್ಮನ್ನು ಸಾಲಗಾರರ ಕೈಯಿಂದ ಪಾರುಮಾಡುವುದಿಲ್ಲ, ರಾಮಭಜನೆ ಹಾಡಿದರೆ ಮನೆ ಬಾಡಿಗೆ ಕಡಿಮೆಯಾಗುವುದಿಲ್ಲ, ಪಂಢರಪುರ ಯಾತ್ರೆ ತಿಂಗಳ ಕೊನೆಗೆ ಸಂಬಳ ತರುವುದಿಲ್ಲ, ದೇವಾಲಯ ಪ್ರವೇಶ ನಿಮ್ಮ ಆಹಾರಕ್ಕೆ, ಉಡುವ ಬಟ್ಟೆಗೆ, ಶಿಕ್ಷಣಾವಕಾಶಕ್ಕೆ, ರೋಗದ ಮದ್ದಿಗೆ ಹಣ ನೀಡುವುದಿಲ್ಲ, ಬಹುಪಾಲು ಜನ ಅರ್ಥವಾಗದ ಬದುಕಿನ ನಿಗೂಢಗಳ ಕುರಿತು ಮೂಢನಂಬಿಕೆಗಳಲ್ಲಿ ಮುಳುಗಿರುವುದರಿಂದ ಕೆಲವರು ಅದೇ ಅವಕಾಶ ಬಳಸಿ ಸಮಾಜವಿರೋಧಿ ಕೆಲಸದಲ್ಲಿ ತೊಡಗಿದ್ದಾರೆ. ಆದ್ದರಿಂದ ನಿಮ್ಮ ಹೋರಾಟ ರಾಜಕೀಯ ಮತ್ತು ಆರ್ಥಿಕ ಶಕ್ತಿ ಬೆಳೆಸಿಕೊಳ್ಳುವತ್ತ ಇರಲಿ' ಎಂದು ಸ್ಪಷ್ಟವಾಗಿ ಹೇಳಿದರು.

ಅಕ್ಟೋಬರ್ 19ರಂದು ಮುಖ್ಯವಾದ ಕ್ರಿಮಿನಲ್ ಕೇಸೊಂದರ ಸಲುವಾಗಿ ಸಾವಂತವಾಡಿಯ ಕೋರ್ಟಿಗೆ ಹೊರಟಿದ್ದ ಅಂಬೇಡ್ಕರ್ ದಾರಿಯಲ್ಲಿ ಗಾಂಧೀಜಿಯನ್ನು ಯರವಾಡಾ ಜೈಲಿನಲ್ಲಿ ಭೇಟಿಯಾದರು. ಅಸ್ಪೃಶ್ಯತೆ ವಿರೋಧಿ ಸಂಘದಲ್ಲಿರಬೇಕಾದ ವ್ಯಕ್ತಿಗಳ ಕುರಿತು ಮಾತನಾಡುತ್ತಾ ಅದರ



'ಪೂನಾ ಒಪ್ಪಂದ' ... ಸಹಿ ಮಾಡುವ ಸಂದರ್ಭದಲ್ಲಿ ಅಂಬೇಡ್ಕರ್

ವಿವಿಧ ಸಮಿತಿಗಳಲ್ಲಿ ಅಸ್ಪೃಶ್ಯರೇ ಹೆಚ್ಚು ಸಂಖ್ಯೆಯಲ್ಲಿರುವಂತೆ ನೋಡಿಕೊಳ್ಳಬೇಕೆಂದು ಹೇಳಿದರು. ಗಾಂಧೀಜಿ ಬಳಿ ಶೋಷಿತ ಸಮುದಾಯಗಳ ಸಬಲೀಕರಣ ಯತ್ನಗಳು ಇತ್ತೀಚೆಗೆ ಕಡಿಮೆಯಾಗಿರುವ ಬಗ್ಗೆ, ವಿಶೇಷ ಗಣತಿಯ ಅವಶ್ಯಕತೆ ಕುರಿತು ಗಮನ ಸೆಳೆದರು. ಅಸ್ಪೃಶ್ಯತೆ ವಿರೋಧಿ ಸಂಘದ ಚಟುವಟಿಕೆಗಳು ಮುಖ್ಯವಾಗಿ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಉನ್ನತಿಗೆ ಶ್ರಮಿಸುವಂಥವಾಗಿರಬೇಕೆಂದು ಸೂಚಿಸಿದರು.

ಅಕ್ಟೋಬರ್ 28ಕ್ಕೆ ಮುಂಬಯಿಯ ಮತ್ತೊಂದು ಸಭೆಯಲ್ಲಿ ಮಾತನಾಡುತ್ತಾ 'ದೇವಾಲಯ ಪ್ರವೇಶ ಮತ್ತು ಸಹಪಂಕ್ತಿ ಭೋಜನದ ಸಂಭ್ರಮದಲ್ಲಿ ಕಳೆದುಹೋಗಬೇಡಿ. ನಿಮ್ಮ ಕಷ್ಟಗಳು ಪೂರ್ವ ಜನ್ಮದ ಕರ್ಮವೆಂದು ನೀವು ಭಾವಿಸದೇ ಇದ್ದರೆ ಒಳ್ಳೆಯದು. ನಿಮ್ಮ ಬಡತನ ಅನಿವಾರ್ಯವೆಂಬ ಭಾವನೆ ತಪ್ಪು, ನಿಮ್ಮನ್ನೇ ನೀವು ಗುಲಾಮರೆಂದು ಭಾವಿಸಿಕೊಳ್ಳುವುದನ್ನು ಮೊದಲು ನಿಲ್ಲಿಸಿ' ಎಂದರು.

ನವೆಂಬರ್ 7: ಮೂರನೆಯ ದುಂಡುಮೇಜಿನ ಪರಿಷತ್ತಿನ ಸಲುವಾಗಿ ಲಂಡನ್ನಿಗೆ ಹೊರಟರು. ಹಡಗಿನಲ್ಲಿ ಪ್ರಯಾಣಿಸುವಾಗ ಮಿತ್ರನಿಗೆ ಪತ್ರವೊಂದರಲ್ಲಿ 'ನನಗೆ ಶುಭವಿದಾಯ ಹೇಳಲು ಅಪಾರ ಜನ ಸೇರಿದ್ದರು. ನನ್ನ ಮನಸ್ಸು ಏಕಾಂತ ಮತ್ತು ಪ್ರಶಾಂತ ವಾತಾವರಣಕ್ಕಾಗಿ ಹಾತೊರೆಯುತ್ತಿದೆ. ಅಭಿಮಾನಿಗಳ ಈ ತೆರನ ಮೂರ್ತಿ ಪೂಜೆ ಉಸಿರುಕಟ್ಟಿಸುತ್ತಿದೆ' ಎಂದು ಬರೆದರು. ಆ ವೇಳೆಗೆ ಹರಿಜನ ಚಳವಳಿಯ ಕುರಿತು ಗಾಂಧೀಜಿ ನೀಡಿದ ಹೇಳಿಕೆಗಳನ್ನು ತಿಳಿದುಕೊಂಡು 'ಗಾಂಧಿ ನಮ್ಮ ದಾರಿಗೆ ಬರುತ್ತಿದ್ದಾರೆ, ಆದರೆ ಗಾಂಧೀಜಿಯ ಮನಸ್ಸು ಅಂತರ್ಜಾತಿ ವಿವಾಹ ಮತ್ತು ಸಹಭೋಜನವನ್ನು ಒಪ್ಪುವಷ್ಟು ಇನ್ನೂ ಮಾಗಿಲ್ಲ' ಎಂದು ಬರೆದರು.

ಆ ಹಡಗಿನಲ್ಲಿಯೇ ಅಂಬೇಡ್ಕರರಿಗೆ ಒಂದು ಕಹಿ ಅನುಭವವಾಯಿತು. ಸರ್ ಪಟ್ಟಾನಿ ಎನ್ನುವವರ ಭೇಟಿಯಾಯಿತು. ಆತ ಮಾತನಾಡುತ್ತಾ 'ಅಂದು ಮುಂಬಯಿ ಸಭೆಯಿಂದ ಅರ್ಧಕ್ಕೇ ಎದ್ದು ಹೋದೆ. ನಂತರ ಏನು ನಡೆಯಿತು?' ಎಂದು ಪ್ರಶ್ನಿಸಿದರು. ಅಂಬೇಡ್ಕರ್ 'ನಡುವೆ ಏಕೆ ಎದ್ದು ಹೋದಿರಿ?' ಎಂದು ಕೇಳಿದಾಗ 'ಹಿಂದೂ ಧರ್ಮಗ್ರಂಥಗಳ ಪ್ರಕಾರ ಒಳ್ಳೆಯ ವ್ಯಕ್ತಿಗೆ ದುಷ್ಟನೊಬ್ಬ ಮಾನಹಾನಿ ಆಗುವಂತೆ ಮಾತನಾಡುತ್ತಿದ್ದರೆ ಆ ಸ್ಥಳ ಬಿಟ್ಟು ಎದ್ದು ಹೋಗಬೇಕು ಅಥವಾ ದುಷ್ಟನ ನಾಲಿಗೆ ಎಳೆ[ದು] ಕತ್ತರಿಸಬೇಕು. ಅದಕ್ಕೇ ಎದ್ದು ಹೋದೆ' ಎಂದರು. ಸಿಟ್ಟಿನಿಂ[ದ] ಉರಿದುಹೋದರೂ ತೋರಗೊಡದ ಅಂಬೇಡ್ಕರ್ ವ್ಯಂಗ್ಯ ದನಿಯಲ್ಲಿ ತಣ್ಣಗೆ 'ನಿಮ್ಮ ಹಿಂದೂ ಧರ್ಮ ಗ್ರಂಥಗಳ[ು] ಹೊಗಳುಭಟ್ಟರಿಗೆ, ಸೋಗಲಾಡಿಗಳಿಗೆ ಏನು ಶಿಕ್ಷೆ ವಿಧಿಸ[ುತ್ತವೆ] ನೈಟ್ ಸಾಹೇಬರೇ?' ಎಂದು ಕೇಳಿದಾಗ ಆತ 'ನೀವು, ಯಾ[ರ] ಬಗ್ಗೆ ಏನು ಮಾತನಾಡುತ್ತಿದ್ದೀರಿ ಎಂದು ಗೊತ್ತು ತಾನೇ' ಎಂದರು. ಅಂಬೇಡ್ಕರ್ 'ನಾನು ಯಾರ ಬಗ್ಗೆ ಮಾತನಾಡು[]ತ್ತಿದ್ದೇನೆಂದು ನನಗೂ ಗೊತ್ತು, ನಿಮಗೂ ಗೊತ್ತು. ಗಾಂಧಿಯ[] ಸುತ್ತ ತುಂಬಿಹೋಗಿರುವ ಹೊಗಳುಭಟ್ಟರನ್ನು ಮೊದಲ[ು] ಆಚೆ ಸರಿಸಿ' ಎಂದು ಖಾರವಾಗಿ ಹೇಳಿದರು. ಅವರ ಕಾವೇರಿ[ದ] ಚರ್ಚೆಯನ್ನು ತಣಿಸಲು ಹಡಗಿನ ಪೊಲೀಸ್ ಆಫೀಸ[ರ್] ಬರಬೇಕಾಯಿತು.

ನವೆಂಬರ್ 14: ಅಸ್ಪೃಶ್ಯತಾ ವಿರೋಧಿ ಸಂಘದ ಅಧ[್ಯಕ್ಷ] ಠಕ್ಕರ್ ಬಾಪಾಗೆ ಅಂಬೇಡ್ಕರ್ ಒಂದು ಪತ್ರ ಬರೆದರ[ು.] ಅಸ್ಪೃಶ್ಯತೆ ನಿವಾರಣೆಗಾಗಿ ಹಿಂದೂ ಸಮಾಜ ಸುಧಾರಕರಿ[ಗೆ] ನೀಡಿದ ಅತಿಮೌಲಿಕ ಸಲಹೆ ಎಂದು ಪರಿಗಣಿಸಲಾಗಿರು[ವ] ಆ ಪತ್ರದ ಸಾರಾಂಶ ಹೀಗಿದೆ: 'ಸ್ಪೃಶ್ಯ-ಅಸ್ಪೃಶ್ಯರು ಕಾನೂ[ನಿ]ನಿಂದಾಗಲೀ, ಪ್ರತ್ಯೇಕ ಅಥವಾ ಒಂದೇ ಮತಪಟ್ಟಿಯಿಂದಾ[]ಗಲೀ ಒಂದಾಗಲು ಸಾಧ್ಯವಿಲ್ಲ. ಅವರನ್ನು ಒಟ್ಟಿಗೆ ಬಂಧಿ[ಸ]ಬಲ್ಲದ್ದು ಒಂದೇ – ಪ್ರೀತಿ. ಶೋಷಿತ ಸಮುದಾಯಗಳು ತಮ[್ಮ] ಕಷ್ಟದಿಂದ ಮುಕ್ತಿ ಹೊಂದಬೇಕಾದರೆ ಮೇಲ್ಜಾತಿ ಹಿಂದೂ[ಗಳು] ಯೋಚಿಸುವಂತೆ ಮಾಡಿ ಅತ ಬದಲಾಗುವಂತೆ ಮಾಡಬೇಕು. ಮೇಲ್ಜಾತಿ ಹಿಂದೂಗಳ ಮನಸ್ಥಿತಿಯಲ್ಲಿ ಕ್ರಾಂತಿಕಾ[ರಿ] ಬದಲಾವಣೆ ಆಗಬೇಕಿದೆ. ಅಸ್ಪೃಶ್ಯತೆ ವಿರೋಧಿ ಸಂಘ[ವು] ಶೋಷಿತ ಸಮುದಾಯಗಳಿಗೆ ನೀರು, ರಸ್ತೆ, ಶಾಲೆಗಳ[ನ್ನು] ಬಳಸುವ ಅವಕಾಶ ಮಾಡಿಕೊಡಬೇಕು. ಇದು ಹಿಂದ[ೂ] ಸಮಾಜದಲ್ಲಿ ಕ್ರಾಂತಿಯನ್ನುಂಟುಮಾಡಿದಂತೆ. ಅದಕ್ಕಾ[ಗಿ] ನಿಮ್ಮ ಸಂಘಕ್ಕೆ ಕಾರ್ಯಕರ್ತರ ಸೇನೆಯೇ ಬೇಕಾಗುತ್ತ[ದೆ.] ಅದರಲ್ಲೂ ಗ್ರಾಮೀಣ ಪ್ರದೇಶಗಳಲ್ಲಿ ಕೆಲಸ ಮಾಡುವವ[ರು] ಬೇಕಾಗಿದ್ದಾರೆ. ಇಂತಹ ಕಾರ್ಯಕ್ರಮ ಸಮಾಜದಲ್ಲಿ ಅಶಾಂ[ತಿ] ಮತ್ತು ಹಿಂಸಾತ್ಮಕ ಸನ್ನಿವೇಶ ಸೃಷ್ಟಿಸುತ್ತದೆ ಎನ್ನುವುದ[ು] ನಿಜವಾದರೂ ಅಸ್ಪೃಶ್ಯತೆ ನಿವಾರಣೆಗೆ ಕನಿಷ್ಠ ಪ್ರತಿರೋ[ಧದ] ವಿಧಾನ ಉಪಯೋಗವಾಗುವುದಿಲ್ಲ. ಸವರ್ಣೀಯ[ರ] ಸಾಂಪ್ರದಾಯಿಕ ರೂಢಿನಿಯಮಗಳ ವಿರುದ್ಧ ಪ್ರಹಾ[ರ] ಮಾಡಬೇಕು. ಆಗ ತುರ್ತುಸ್ಥಿತಿಯೊಂದು ಹುಟ್ಟುತ್ತದೆ. [ಆ] ತುರ್ತು ಹಿಂದೂವನ್ನು ಯೋಚಿಸಲು ಹಚ್ಚುತ್ತದೆ. ಆಗ [ಆತ] ಬದಲಾವಣೆಯನ್ನು ಸುಲಭವಾಗಿ ಒಪ್ಪಿಕೊಳ್ಳಬಲ್ಲ. ಕನಿ[ಷ್ಠ] ಪ್ರತಿರೋಧ ಅಥವಾ ಮೌನ ಕ್ರಾಂತಿ ಯಾವ ತುರ್ತನ[್ನೂ] ಹುಟ್ಟಿಸುವುದಿಲ್ಲ. ಕಾಳಾರಾಮ್ ದೇವಾಲಯ ಪ್ರವೇ[ಶ,] ಚೌದರ್ ಕೆರೆ, ಗುರುವಾಯೂರು ಪ್ರವೇಶ ಹೋರಾಟಗ[ಳು] ಸಮಾಜ ಸುಧಾರಕರು ವರ್ಷಗಟ್ಟಲೆ ಸಾಧಿಸಲಾಗದ್ದ[ನ್ನು] ಕೆಲವೇ ದಿನಗಳಲ್ಲಿ ಸಾಧಿಸಿವೆ.



'ನಮ್ಮ ಸಂವಿಧಾನ' ಶತ್ರುಗಳ ಪಾಳಯದಲ್ಲಿ ಕೂತು ಬರೆದ ಕೃ[ತಿ]

1932ರ ಸೆಪ್ಟೆಂಬರ್ 25ರಂದು ಜರುಗಿದ ಅಂಬೇಡ್ಕರ್ ಮತ್ತು ಗಾಂಧಿ ನಡುವೆ ಏರ್ಪಟ್ಟ 'ಪೂನಾ ಒಪ್ಪಂದ' ದಲಿತರ ಬದುಕಿನ ದಿಕ್ಕನ್ನೇ ಬದಲಾಯಿಸಿದ ಚಾರಿತ್ರಿಕ ಘಟನೆ. ದಲಿತ ವರ್ಗಗಳ ರಾಜಕೀಯ ಪ್ರಾತಿನಿಧ್ಯಕ್ಕಾಗಿ ಪ್ರತ್ಯೇಕ ಮತದಾನದ ಹಕ್ಕನ್ನು (ಎರಡು ವೋಟಿನ ಹಕ್ಕು) ಪ್ರತಿಪಾದಿಸಿದ ಅಂಬೇಡ್ಕರರ ಪ್ರಯತ್ನಗಳಿಗೆ ಆರಂಭಿಕ ಹಂತದಲ್ಲಿ ಬ್ರಿಟಿಷ್ ಸರ್ಕಾರ ಒಪ್ಪಿ ಕೋಮುವಾರು ತೀರ್ಪು (Communal Award) ನೀಡಿತು. ಬ್ರಿಟಿಷರ ಈ ನಿಲುವನ್ನು ವಿರೋಧಿಸಿ ಗಾಂಧಿ, ಪೂನಾ ಬಳಿ ಇರುವ ಯರವಾಡಾ ಜೈಲಿನಲ್ಲಿ ಆಮರಣಾಂತ ಉಪವಾಸ ಕೂತರು. ಗಾಂಧಿ ಪ್ರಾಣ ಮತ್ತು ದಲಿತರ ಹಕ್ಕುಗಳ ಆಯ್ಕೆ ನಡುವೆ ಅಂಬೇಡ್ಕರ್ ಶೋಷಿತರ ಆಶೋತ್ತರಗಳನ್ನು ಬಲಿಕೊಟ್ಟು ಅನಿವಾರ್ಯವಾಗಿ ಗಾಂಧಿ ಪ್ರಾಣ ಉಳಿಸುವ ನಿರ್ಧಾರಕ್ಕೆ ಬರಬೇಕಾಯಿತು. ದಲಿತರ ಪಾಲಿಗೆ ಸೆಪ್ಟೆಂಬರ್ 25 ಕರಾಳದಿನ ಕೂಡ. ಈ ಸಂದರ್ಭದಲ್ಲಿ ಪೂನಾ ಒಪ್ಪಂದದ ಬಗ್ಗೆ ಅಥೆಂಟಿಕ್ಕಾಗಿ ಮಾತನಾಡಬಲ್ಲ ಬಹುಜನ ಸಮಾಜ ಪಕ್ಷದ ಚಿಂತಕರ ಚಾವಡಿಯಲ್ಲಿರುವ ಎನ್.ಗೋಪಿನಾಥರನ್ನು ಪತ್ರಿಕೆ ಮಾತಿಗೆಳೆಯಿತು. ಅವರೊಂದಿಗಿನ ಸಂದರ್ಶನದ ಪೂರ್ಣಪಾಠ ಇಲ್ಲಿದೆ.



ಗೋಪಿನಾಥ್

ಪ್ರಶ್ನೆ: ಮೊನ್ನೆ ಪೂನಾ ಒಪ್ಪಂದದ ನೆನಪಿಗೆ 79 ವರ್ಷ ತುಂಬಿತು. ಒಂದು ವೇಳೆ ಅವತ್ತು ಪ್ರತ್ಯೇಕ ಮತದಾನದ ಹಕ್ಕು ದಲಿತರಿಗೆ ಸಿಕ್ಕಿದ್ದಿದ್ದರೆ ಇವತ್ತಿನ ದಲಿತ ರಾಜಕಾರಣ ಹೇಗಿರುತ್ತಿತ್ತು?

ಗೋಪಿನಾಥ್: 78 ಕ್ಷೇತ್ರಗಳಲ್ಲಿ ದಲಿತರು, ದಲಿತರನ್ನು ಮಾತ್ರ ಆಯ್ಕೆಮಾಡುವ ಹಾಗೂ ಮಿಕ್ಕ 1563 ಕ್ಷೇತ್ರಗಳಲ್ಲಿ ಉಳಿದವರನ್ನು ಆಯ್ಕೆಮಾಡುವ ಹಕ್ಕು ಅವತ್ತು ದಲಿತರಿಗೆ ದೊರೆತಿದ್ದರೆ, ದಲಿತರ ಮೇಲೆ ನಿಜವಾದ ಕಾಳಜಿ ಇರುವ, ದಲಿತರನ್ನು ಮಾತ್ರ ಆಯ್ಕೆ ಮಾಡುವ ಅಧಿಕಾರ ದಲಿತರಿಗೆ ಸಿಗುತ್ತಿತ್ತು, ಉಳಿದ ಕ್ಷೇತ್ರಗಳಲ್ಲಿ ದಲಿತರ ಮತದ ಕಾರಣಕ್ಕಾಗಿಯಾದರೂ ಮೇಲ್ಜಾತಿ ಅಭ್ಯರ್ಥಿಗಳು ಅನಿವಾರ್ಯವಾಗಿ ದಲಿತರ ಪರ ಕೆಲಸ ಮಾಡಲೇಬೇಕಾಗುತ್ತಿತ್ತು. ಇವತ್ತು ಎಲ್ಲಾ ಪಕ್ಷದ ರಾಜಕಾರಣದಲ್ಲಿ ನಾಲಿಗೆ ಕಳೆದುಕೊಂಡಿರುವ ದಲಿತ ರಾಜಕಾರಣಿಗಳಿದ್ದಾರೆ, ಆದರೆ ದಲಿತ ರಾಜಕಾರಣವೆಂಬುದಿಲ್ಲ. ಪೂನಾ ಒಪ್ಪಂದದ ಸಂದರ್ಭದಲ್ಲಿ ಅಂಬೇಡ್ಕರರ ಕೈಕಟ್ಟಿ ಹಾಕಿದಂತಹ ಪರಿಸ್ಥಿತಿ ಎದುರಾಗದಿದ್ದಿದ್ದರೆ ಇವತ್ತು National Crime Record Bureau ಕೊಡುವ ಅಂಕಿಅಂಶಗಳ ಪ್ರಕಾರ ದೇಶದಲ್ಲಿ ಪ್ರತಿದಿನ ದಲಿತರ ಮೇಲೆ 3 ಕೊಲೆ, 2 ಮಾನಭಂಗ, 104 ಹ[ಲ್ಲೆ] ಸುಲಿಗೆಯಂತಹ ಭೀಕರ ಕ್ರೌರ್ಯಗಳು ನಡೆಯುತ್ತಿರಲಿಲ್ಲ, ಜಗತ್ತೇ ನಾ[ಚಿಕೆ] ಪಟ್ಟುಕೊಂಡ 'ಚೆಂಡಿಗೇರಿ ಮಲ ತಿನ್ನಿಸಿದ ಪ್ರಕರಣ'ದಂತ ಹೇಯಕ[ೃತ್ಯ] ಎಸಗಿದವರ ಮೇಲೆ ಉಗ್ರಕ್ರಮ ಕೈಗೊಳ್ಳುವಂತೆ ಒಬ್ಬೇ ಒಬ್ಬ ದಲಿತ ಶಾಸಕ[ನೂ] ಅವತ್ತು ಈ ನಾಡಿನಲ್ಲಿ ಆಗ್ರಹಪಡಿಸಲಿಲ್ಲ.

ಪ್ರಶ್ನೆ: ಪೂನಾ ಒಪ್ಪಂದದ ಸಂದರ್ಭದಲ್ಲಿ ಅಂಬೇಡ್ಕರ್ ಕೊ[...] ಕಠಿಣವಾಗಿದ್ದರೂ ಗಾಂಧಿ ತೀರಿಕೊಳ್ಳುವ ಅಪಾಯವಿತ್ತು. ಆಗ ದಲಿ[ತರ] ಮಾರಣಹೋಮವೇ ನಡೆದುಬಿಡುತ್ತಿತ್ತಲ್ಲ...

ಗೋಪಿನಾಥ್: ನಿಜ. ಮೊದಲು ಕಾಂಗ್ರೆಸ್ ಆಮಿಷಗಳ ಮೂ[ಲಕ] ಅಂಬೇಡ್ಕರರನ್ನು ಬಗ್ಗಿಸಲು ಪ್ರಯತ್ನಿಸುತ್ತದೆ, ಅದಕ್ಕೆ ಬಗ್ಗದಿದ್ದಾಗ ಅ[ವರ] ಮೇಲೆ ಹಲ್ಲೆ ಕೊಲೆ ಬೆದರಿಕೆಗಳನ್ನು ಒಡ್ಡುತ್ತದೆ. ಇದಕ್ಕೂ ಅಂಬೇಡ[್ಕರ್] ಮಣಿಯದಿದ್ದಾಗ ಕಾಂಗ್ರೆಸ್ ಕೈಗೆತ್ತಿಕೊಂಡ ಕೊನೆಯ ಅಸ್ತ್ರ ಗಾಂಧಿ ಸಾ[ವು.] ಉಪವಾಸ ಕೂತ ಗಾಂಧಿ ಯಾವುದೇ ಕ್ಷಣದಲ್ಲಿ ಬೇಕಾದರೂ ಕೊನೆಯು[ಸಿ]ರೆಳೆಯಬಹುದೆಂಬ ಸೂಚನೆಗಳನ್ನು ಕಾಂಗ್ರೆಸ್ ಅಂಬೇಡ್ಕರ್ ಕಿವಿಗೆ ಮು[ಟ್ಟಿ]ಸುತ್ತಲೇ ಇತ್ತು, ಒಂದು ವೇಳೆ ಗಾಂಧಿ ತೀರಿಕೊಂಡರೆ ಅದರ ಕ[...]

ಶೋಷಿತ ಸಮುದಾಯಗಳ ದೀನ ಸ್ಥಿತಿಗೆ, ಬಡತನಕ್ಕೆ ...ಣಸೆ ಅವಕಾಶ ಸಿಗದಿರುವುದೇ ಮುಖ್ಯ ಕಾರಣ. ಸಂಘವು ...ಬಗ್ಗೆ ಕೆಲಸ ಮಾಡಲು ಶೋಷಿತ ಸಮುದಾಯಗಳ ...ರ್ಯಕರ್ತರನ್ನೇ ತಯಾರು ಮಾಡಬೇಕು. ಸ್ವತಃ ನೋವುಂಡ ...ಮ ಸವರ್ಣೀಯ ಕಾರ್ಯಕರ್ತರಿಗಿಂತ ಹೆಚ್ಚು ಪ್ರಾಮಾಣಿಕ ...ಗಿ, ನಿಷ್ಠೆಯಿಂದ ಕೆಲಸ ಮಾಡಬಲ್ಲರು. ಟಾಲ್‌ಸ್ಟಾಯ್ ...ಳಿದಂತೆ 'ಪ್ರೀತಿಸಬಲ್ಲವನು ಮಾತ್ರ ಸೇವೆ ಮಾಡಬಲ್ಲ.' ...ದ್ದರಿಂದ ಸಂಬಳ ಪಡೆವ ಕೆಲಸಗಾರರು ಈ ವಿಷಯದಲ್ಲಿ ...ತ್ತಮ ಆಯ್ಕೆಯಾಗಲಾರರು.

ಡಿಸೆಂಬರ್ 1932: ಅಂಬೇಡ್ಕರ್ ಲಂಡನ್ ಬಿಡುವ ...ಳಗೆ ಭಾರತದಲ್ಲಿ ದೇವಾಲಯ ಪ್ರವೇಶ ವಿಚಾರ ಬಿಸಿ ...ದ್ದಿಯಾಗಿತ್ತು. ಜನವರಿ ಒಂದರಿಂದ ಗುರುವಾಯೂರು ...ವಾಲಯ ಪ್ರವೇಶದ ಸಲುವಾಗಿ ಕೇಳಪ್ಪನ್ ಜೊತೆಗೆ ತಾನೂ ...ಪವಾಸ ಕೂರುವೆನೆಂದು ಹೇಳಿ ಗಾಂಧಿ ಸಂಚಲನ ...ಉಂಟುಮಾಡಿಸಿದ್ದರು. ಆದರೆ ಗಾಂಧಿ ಅನುಯಾಯಿಗಳಲ್ಲಿ ...ಭಿನ್ನಮತ ಶುರುವಾಯಿತ್ತು. ಪೂನಾ ಒಪ್ಪಂದದ ಮೊದಲು ...ಗಾಂಧಿ ಉಪವಾಸ ನಿಲ್ಲಿಸಲಿ ಎಂಬ ಅನುಕಂಪದಿಂದ ...ಧಾರಣೆ ಮಾಡಹೊರಟ ಕೆಲವರು ಈಗ ನಿಜ ಬಣ್ಣ ...ತೋರಿದರು. ಕೇರಳದ ಜಾಮೊರಿನ್ ದೊರೆ ಗುರುವಾ...ಯೂರು ದೇವಸ್ಥಾನಕ್ಕೆ ಅಸ್ಪೃಶ್ಯರ ಪ್ರವೇಶ ನಿರಾಕರಿಸಿದ. ಆ ...ಹಿಂದೂ ರಾಜನ ಅರಮನೆಯ ಎಷ್ಟೋ ಆಚರಣೆಗಳಲ್ಲಿ ...ಮುಸ್ಲಿಮರು ಇರುತ್ತಿದ್ದರು. ಪೊನ್ನಾನಿ ತಾಲೂಕಿನ ...ಮತದಾರರು ಆಯ್ಕೆಯನ್ನಿಟ್ಟು ಬಹುಸಂಖ್ಯಾತರು ಬಯಸಿ...ತೆ ಮಾಡಿ ಎಂದು ಗಾಂಧಿ ಒಂದು ಸಲಹೆ ಮುಂದಿಟ್ಟರು. ...ಬಹುಸಂಖ್ಯಾತರು ಅಸ್ಪೃಶ್ಯರ ದೇವಾಲಯ ಪ್ರವೇಶವನ್ನು ...ಸಮ್ಮತಿಸಿದರು. ಆದರೂ ಜಾಮೊರಿನ್ ಜಗ್ಗಲಿಲ್ಲ. ಇದೇ ...ಸಮಯಕ್ಕೆ ರಂಗಾ ಅಯ್ಯರ್ ಸೆಂಟ್ರಲ್ ಅಸೆಂಬ್ಲಿಯಲ್ಲಿ ...ದೇವಾಲಯ ಪ್ರವೇಶ ಸುಲಭಗೊಳಿಸಲು ಅಸ್ಪೃಶ್ಯತಾ ನಿಷೇಧ ...ಮಸೂದೆ ಮಂಡಿಸಿದ್ದರು. ರಾಜಾ, ಗ್ಯಾನ್ ಪ್ರಸಾದ್ ಸಿಂಗ್, ಮಿತ್ರ ...ಮುಂತಾದವರೂ ಅವರ ಜೊತೆಗಿದ್ದರು. ಆ ಸಮಯದಲ್ಲಿ ...ಗಾಂಧಿ ಗುರುವಾಯೂರು ಉಪವಾಸ ಮುಂದೂಡಿರುವು...ದಾಗಿ, ಗವರ್ನರ್ ಜನರಲ್ ಅವರ ನಿರ್ಧಾರಕ್ಕಾಗಿ ಕಾಯುವು...ದಾಗಿ ಪ್ರಕಟಿಸಿದಾಗ ಅವರ ನಡೆ ಅಂಬೇಡ್ಕರ್ ಬೆಂಬಲಿಗರಲ್ಲಿ ...ಅನುಮಾನ ಹುಟ್ಟಿಸಿತು.

ಜನವರಿ 23, 1933: ಭಾರತಕ್ಕೆ ವಾಪಸಾದ ...ಅಂಬೇಡ್ಕರ್ ಸಂದರ್ಶನವೊಂದರಲ್ಲಿ ದೇವಾಲಯ ಪ್ರವೇಶ ...ಮಸೂದೆ ಬಗ್ಗೆ ಪ್ರತಿಕ್ರಿಯಿಸುತ್ತಾ 'ವೈಸ್‌ರಾಯ್ ತಕ್ಷಣಕ್ಕೆ ...ಒಪ್ಪಿಗೆ ನೀಡುವ ಲಕ್ಷಣಗಳಿಲ್ಲ. ದೇವಾಲಯ ಪ್ರವೇಶದ ...ಸಲುವಾಗಿ ಗಾಂಧಿ ತಮ್ಮ ಜೀವ ಕೊಡುವುದು ಬೇಡ. ವೈಸ್...ರಾಯ್ ಕೂಡಾ ಶಾಸನ ಸಭೆಯಲ್ಲಿ ಈ ಚರ್ಚೆಯನ್ನು ತಡೆಹಿಡಿ...ಯದೇ ಜನಹಿತವಿದೆ ಎನಿಸಿದಲ್ಲಿ ವಿಟೊ ಬಳಸಿಯಾದರೂ ...ಮಸೂದೆ ಜಾರಿಗೊಳಿಸಬೇಕು' ಎಂದು ತಿಳಿಸಿದರು.


ಮುಂಬಯಿಯಲ್ಲಿ ಇಳಿದಕೂಡಲೇ ಗಾಂಧಿ ಯರವಾಡಾ ...ಜೈಲಿನಲ್ಲಿ ತಮ್ಮನ್ನು ಭೇಟಿಯಾಗುವಂತೆ ಟೆಲಿಗ್ರಾಂ ...ಕಳಿಸಿದರು. ದೆಹಲಿಗೆ ಹೋಗಿ ಹಿಂದಿರುಗುತ್ತಾ ಫೆಬ್ರುವರಿ ...ಮಧ್ಯಾಹ್ನ ಅಂಬೇಡ್ಕರ್ ಗಾಂಧಿ ಭೇಟಿಯಾದರು. ಎದ್ದು ...ಕುಳಿತುಕೊಳ್ಳಲು ಬರಮಾಡಿಕೊಂಡ ಗಾಂಧಿ ದೇವಾಲಯ ಪ್ರವೇಶ ...ಕುರಿತು ಮಾತು ಶುರುಮಾಡಿ ಸುಬ್ಬರಾಯನ್ ಮತ್ತು ರಂಗಾ ...ಅಯ್ಯರ್ ಮಂಡಿಸುವ ಮಸೂದೆಗೆ ಬೆಂಬಲ ನೀಡಬೇಕೆಂದು ...ಕೇಳಿದರು. ಅದನ್ನು ನೇರಾನೇರ ನಿರಾಕರಿಸಿ ಅಂಬೇಡ್ಕರ್ ...ಆಡಿದ ಮಾತುಗಳು ಮಾರ್ಮಿಕವಾಗಿವೆ:

'ಆ ಮಸೂದೆ ಅಸ್ಪೃಶ್ಯತೆ ಪಾಪ ಎನ್ನುವುದಿಲ್ಲ, ಅಸ್ಪೃಶ್ಯರನ್ನು ...ದೇವಾಲಯದೊಳಗೆ ಬಿಡಿ ಎನ್ನುತ್ತದೆಯೇ ಹೊರತು ...ದೇವಾಲಯ ಪ್ರವೇಶ ಅವರ ಹಕ್ಕು ಎನ್ನುವುದಿಲ್ಲ. ಶೋಷಿತ ...ಸಮುದಾಯಗಳು ವರ್ಣ ವ್ಯವಸ್ಥೆಯ ಶೂದ್ರರಾಗಲು ಇಚ್ಛಿಸು...ವುದಿಲ್ಲ. ನಾನು ಹಿಂದೂ ಎಂದು ಕರೆದುಕೊಳ್ಳಬಯಸುವುದಿಲ್ಲ. ಯಾವ ವ್ಯವಸ್ಥೆ ನನ್ನನ್ನು ಕೀಳಾಗಿ ಕಂಡಿದೆಯೋ ಅದರ ಬಗ್ಗೆ ನಾನೇಕೆ ಹೆಮ್ಮೆ ಪಡಲಿ? ಜಾತಿವ್ಯವಸ್ಥೆ ಹೀಗೇ ಮುಂದುವರೆಯುವುದಾದರೆ ದೇವಾಲಯ ಪ್ರವೇಶದಿಂದ ಏನೂ ಲಾಭವಿಲ್ಲ.'

ಗಾಂಧಿ ಉತ್ತರಿಸಿದರು: 'ವರ್ಣ ವ್ಯವಸ್ಥೆ ಕೆಟ್ಟ ವ್ಯವಸ್ಥೆಯಲ್ಲ. ಮೇಲ್ಜಾತಿ ಹಿಂದೂಗಳು ತಮ್ಮ ಪಾಪ ತೊಳೆದುಕೊಳ್ಳಲು, ಹಿಂದೂ ಧರ್ಮವನ್ನು ಶುದ್ಧೀಕರಣಗೊಳಿಸಿಕೊಳ್ಳಲು ಒಂದು ಅವಕಾಶ ಕೊಡಿ. ಈ ಸುಧಾರಣೆಯಾದರೆ ಅಸ್ಪೃಶ್ಯರೂ ಸಮಾಜದಲ್ಲಿ ಉನ್ನತಿ ಹೊಂದಬಹುದು. ನೀವೀಗ ದೇವಾಲಯ ಪ್ರವೇಶ ವಿರೋಧಿಸಿದರೆ ಸನಾತನಿಗಳು ಮತ್ತು ಸರ್ಕಾರ ಅದರ ದುರ್ಲಾಭ ಪಡೆಯುತ್ತಾರೆ.'

ಅಂಬೇಡ್ಕರ್ ಒಪ್ಪಲಿಲ್ಲ. ಅವರ ಅಭಿಪ್ರಾಯ ಭಿನ್ನವಾಗಿತ್ತು.

'ಅಸ್ಪೃಶ್ಯರು ಆರ್ಥಿಕ, ಶೈಕ್ಷಣಿಕ, ರಾಜಕೀಯ ಉನ್ನತಿ ಸಾಧಿಸಿದರೆ ದೇವಾಲಯ ಪ್ರವೇಶ ತಾನೇ ತಾನಾಗಿ ಸಾಧ್ಯವಾಗುತ್ತದೆ. ಬಹಿಷ್ಕೃತರು ಜಾತಿ ವ್ಯವಸ್ಥೆಯ ಉಪಉತ್ಪನ್ನಗಳು. ಜಾತಿ ವ್ಯವಸ್ಥೆ ಇರುವ ತನಕ ಅವರೂ ಇರುತ್ತಾರೆ. ಜಾತಿಪದ್ಧತಿ ನಾಶ ವಾಗದೇ ಅವರ ಉದ್ಧಾರ ಸಾಧ್ಯವೇ ಇಲ್ಲ. ಹಿಂದೂ ನಂಬಿಕೆಯಿಂದ ಜಾತಿಯೆಂಬ ಹೇಯ ಮತ್ತು ಕ್ರೂರ ತತ್ವವನ್ನು ತೆಗೆದುಹಾಕುವವರೆಗೆ ಹಿಂದೂ ಧರ್ಮ ಉಳಿಯುವುದಿಲ್ಲ' ಎಂದು ಫೆಬ್ರವರಿ 11ರಂದು ಹೊರಬಂದ 'ಹರಿಜನ' ಮೊದಲ ಸಂಚಿಕೆಯಲ್ಲಿ ಅಂಬೇಡ್ಕರ್ ಅಭಿಪ್ರಾಯ ವ್ಯಕ್ತಪಡಿಸಿದರು.



ಫೆಬ್ರವರಿ 12ರಂದು 'ಪ್ರಿಯ ಮಹಾತ್ಮಾಜೀ..' ಎಂದು ಪತ್ರ ಶುರುಮಾಡಿದ ಅಂಬೇಡ್ಕರ್ ಹೀಗೆ ಬರೆದರು: 'ಪಾಪ ಮತ್ತು ಅನೈತಿಕತೆಯನ್ನು ಬಹುಸಂಖ್ಯಾತರು ಒಪ್ಪಿಕೊಂಡಿದ್ದಾರೆಂದು ತಾಳಲಾಗುವುದಿಲ್ಲ. ಅಸ್ಪೃಶ್ಯತೆ ಪಾಪ ಮತ್ತು ಅನೈತಿಕವಾಗಿದ್ದಲ್ಲಿ ಬಹುಸಂಖ್ಯಾತರ ಮರ್ಜಿ ಹಿಡಿಯದೇ ನೀವು ಅದನ್ನು ನಾಶಗೊಳಿಸಬೇಕು. ಆದರೆ ನಿಮ್ಮ ಮಸೂದೆ ಅದನ್ನು ಹೇಳುವುದಿಲ್ಲ. ಶೋಷಿತ ವರ್ಗಗಳ ಮುಕ್ತಿ ಮಾರ್ಗ ಶಿಕ್ಷಣ, ಉದ್ಯೋಗ, ಆರ್ಥಿಕ ಉನ್ನತಿಯಲ್ಲಿದೆಯೇ ಹೊರತು ದೇವಾಲಯ ಪ್ರವೇಶದಲ್ಲಿಲ್ಲ. ದೇವಾಲಯಗಳ ಬಾಗಿಲು ತೆರೆಯಬೇಕೋ ಬಿಡಬೇಕೋ ಎನ್ನುವುದು ನೀವು ಚರ್ಚಿಸಬೇಕಾದ ವಿಚಾರ. ನಾವದಕ್ಕೆ ಹೋರಾಟ ಮಾಡುವುದಿಲ್ಲ. ಮನುಷ್ಯನನ್ನು ಕೀಳಾಗಿ ಕಾಣುವುದು ಸಭ್ಯ ನಡತೆಯಲ್ಲ ಎಂದು ನೀವು ಭಾವಿಸಿದರೆ ದೇವಾಲಯಗಳ ಬಾಗಿಲು ತೆರೆಯಿರಿ. ಸಭ್ಯತೆಗಿಂತ ಹಿಂದೂ ಆಗಿ ಉಳಿಯುವುದೇ ಮುಖ್ಯವಾದಲ್ಲಿ ನಿಮ್ಮ ದೇವಾಲಯಗಳ ಬಾಗಿಲು ಹಾಕಿಕೊಳ್ಳಿ, ನಮಗೆ ಒಳಬರಬೇಕಾದ ತುರ್ತು ಇಲ್ಲ. ಸಾಮಾಜಿಕ ಅಸಮಾನತೆಯನ್ನು ಪ್ರತಿಪಾದಿಸುವ ಧರ್ಮವನ್ನು ಸಹಿಸಲಾಗದು ಎಂದು ಅಸ್ಪೃಶ್ಯರು ನಿರ್ಧರಿಸಿದ್ದಾರೆ. ಹಿಂದೂ ಧರ್ಮ ಸಮಾನತೆಯನ್ನು ಒಪ್ಪಿಕೊಳ್ಳುವುದಾದರೆ ಅಸ್ಪೃಶ್ಯರನ್ನು ಪರದೇಶಿಗಳಂತೆ ನೋಡುವುದನ್ನು ನಿಲ್ಲಿಸಬೇಕು. ದೇವಾಲಯ ಪ್ರವೇಶ ನೀಡಿದರಷ್ಟೇ ಸಾಲದು, ಚಾತುರ್ವರ್ಣ್ಯ ತತ್ವವನ್ನೂ ಕೈಬಿಡಬೇಕು. ಅಸಮಾನತೆ, ತಾರತಮ್ಯ ಮತ್ತು ಜಾತಿ ಪದ್ಧತಿಯ ಮೂಲ ವರ್ಣಾಶ್ರಮ ಧರ್ಮದ ಬೇರುಗಳಲ್ಲಿ ಅಡಗಿ ಕೂತಿವೆ. ನಾನೀಗ ದೇವಾಲಯ ಪ್ರವೇಶ ಮಸೂದೆಗೆ ಸಹಮತ ಸೂಚಿಸಿ ನಂತರ ಚಾತುರ್ವರ್ಣ್ಯ ಮತ್ತು ಜಾತಿ ಪದ್ಧತಿಯ ನಾಶಕ್ಕೆ ಹೋರಾಡಿದರೆ ಗಾಂಧಿ ಯಾವ ಕಡೆ ನಿಲ್ಲುತ್ತಾರೆ? ಅವರು ವರ್ಣಾಶ್ರಮ ಬೆಂಬಲಿಸಿ ವಿರೋಧಿ ಪಾಳಯದಲ್ಲಿ ನಿಲ್ಲುವುದಾದರೆ ನಾನೀಗ ಅವರ ಜೊತೆ ನಿಲ್ಲಲಾರೆ.'

[illegible]

ಗಾಂಧಿ-ಅಂಬೇಡ್ಕರ್ ದಾರಿ ಸ್ಪಷ್ಟವಾಗಿ ಬೇರೆಯಾಗಿದ್ದು ಹೀಗೆ. ರಂಗಾ ಅಯ್ಯರ್ ದೇವಾಲಯ ಪ್ರವೇಶ ಮಸೂದೆಯನ್ನು ಕಟ್ಟಾ ಸನಾತನಿಗಳಷ್ಟೇ ಅಲ್ಲ, ಅರೆ ಸನಾತನಿಗಳು, ಸನಾತನ ಸಮಾಜ ಸುಧಾರಕರೂ ವಿರೋಧಿಸಿದರು. ಕಾನೂನು ಧಾರ್ಮಿಕ ವಿಷಯಗಳಲ್ಲಿ ತಲೆಹಾಕಬಾರದು ಎನ್ನುವುದು ಅವರ ವಾದವಾಗಿತ್ತು. ಪಂಡಿತ ಮದನ ಮೋಹನ ಮಾಳವೀಯ ಅವರಂತೂ ಕೋಪಾವಿಷ್ಟ ರಾಗಿ ದೇವಾಲಯ ವಿಚಾರದಲ್ಲಿ ಕಾನೂನು ಪರೋಕ್ಷವಾಗಿಯೂ ಹಸ್ತಕ್ಷೇಪ ಮಾಡಬಾರದು ಎಂದು ಗುಡುಗಿ ಪೂನಾ ಒಪ್ಪಂದ ಇದಕ್ಕೆ ಅನ್ವಯಿಸುವುದಿಲ್ಲವೆಂದು ಹೇಳಿದರು! ಹೀಗೆ ಯಾವ ಉದ್ದೇಶಕ್ಕಾಗಿ ಗಾಂಧಿ ಉಪವಾಸ ಕೂತು ಪೂನಾ ಒಪ್ಪಂದಕ್ಕೆ ಸಹಿ ಪಡೆದಿದ್ದರೋ ಅದರ ಸೋಲಿನ ಮೊದಲ ಹೆಜ್ಜೆಯಾಗಿ ಮಾರ್ಚ್ 24ರಂದು ರಂಗಾ ಅಯ್ಯರ್ ಅವರ ದೇವಾಲಯ ಪ್ರವೇಶ ಮಸೂದೆ ಬಿದ್ದುಹೋಯಿತು.

ಈ ಹೊತ್ತಿಗೆ ಪೂನಾ ಒಪ್ಪಂದದ ನಿಜಬಣ್ಣ ಬಯಲಾಗತೊಡಗಿತ್ತು. ಹೆಚ್ಚು ಕಡಿಮೆ ಪೂನಾ ಒಪ್ಪಂದ ಅಂಗೀಕರಿಸಿದ್ದ ಎಲ್ಲ ಹಿಂದೂ ರಾಜಕೀಯ ಮುಖಂಡರು ಅದನ್ನು ವಿರೋಧಿಸತೊಡಗಿದ್ದರು. ಗಾಂಧೀಜಿ ಶುರುಮಾಡಿದ ಹರಿಜನ ಚಳವಳಿಯ ಉತ್ಸಾಹ ಇಂಗಿಹೋಗತೊಡಗಿತ್ತು. ಪೂನಾಕ್ಕೆ ಗಾಂಧೀಜಿಯನ್ನು ನೋಡಲು ಬಂದು ಅವರೆದೆಯ ಮೇಲೆ ಮುಖವಿಟ್ಟು ಬಿಕ್ಕಿದ್ದ ಟ್ಯಾಗೋರ್ ಈಗ ಬೇರೆ ಹಾಡು ಶುರುಮಾಡಿದ್ದರು. ಪೂನಾ ಒಪ್ಪಂದವನ್ನು ಸೆಪ್ಟೆಂಬರ್ 26ರಂದು ದೆಹಲಿಯಲ್ಲಿ ಪ್ರತ್ಯೇಕ ಸಮ್ಮೇಳನ ಮಾಡಿ ಅಂಗೀಕರಿಸಿದ್ದ ಹಿಂದೂ ಮಹಾಸಭಾದ ಮುಖಂಡರು ಅದಕ್ಕೆ ತಿದ್ದುಪಡಿಯಾಗಬೇಕೆಂದು ಬಯಸಿದರು. ಪಂಜಾಬಿನಲ್ಲಿ ಅಸ್ಪೃಶ್ಯತೆ ಸಮಸ್ಯೆಯೇ ಇಲ್ಲದಿರುವುದರಿಂದ ಅಲ್ಲಿ ಅದನ್ನು ಅನ್ವಯಿಸಬಾರದೆಂದು ಹೇಳಿದರು. ಬಂಗಾಳ ಶಾಸನಸಭೆ ಪ್ರಸ್ತಾವವೊಂದನ್ನು ಅಂಗೀಕರಿಸಿ ಪೂನಾ ಒಪ್ಪಂದ ರದ್ದತಿಗೆ ಒತ್ತಾಯಿಸಿತು. ಬಂಗಾಳದ ಒಬ್ಬ ಹಿಂದೂ ಪ್ರತಿನಿಧಿಯೂ ಪೂನಾ ಒಪ್ಪಂದದಲ್ಲಿ ಭಾಗೀದಾರ ಆಗಿಲ್ಲದಿರುವುದರಿಂದ ಅದು ತಮಗೆ ಅನ್ವಯಿಸುವುದಿಲ್ಲ ಎನ್ನುವುದು ಅವರ ವಾದವಾಗಿತ್ತು. ಬ್ರಿಟಿಷ್ ಸರ್ಕಾರ ಈ ಬಗ್ಗೆ ಅಂಬೇಡ್ಕರರಿಗೆ ಪತ್ರ ಬರೆಯಿತು. ಅದಕ್ಕೆ ಉತ್ತರಿಸುತ್ತ ಅವರು 'ಪೂನಾ ಒಪ್ಪಂದದ ಸಮಯದಲ್ಲಿ ಸಂಧಾನಕಾರರಾಗಿ ಅನೇಕ ಬಂಗಾಳಿ ಹಿಂದೂಗಳು ಪ್ರಮುಖ ಪಾತ್ರ ವಹಿಸಿರುವಾಗ ಹೀಗೆ ಹೇಳುತ್ತಿರುವುದು ತಪ್ಪು. ಬ್ರಿಟಿಷ್ ಸರ್ಕಾರ ತೆಗೆದುಕೊಳ್ಳುವ ತೀರ್ಮಾನವು ಪೂರಾ ಬ್ರಿಟಿಷ್ ಇಂಡಿಯಾಕ್ಕೆ ಅನ್ವಯವಾಗುವಾಗ ಬಂಗಾಳವು ತಪ್ಪಿಸಿಕೊಳ್ಳಲಾರದು. ಅಷ್ಟೇ ಅಲ್ಲ, ಬಂಗಾಳದ ಶೋಷಿತ ಸಮುದಾಯಗಳ ಮುಖಂಡರು 50 ಸ್ಥಾನ ಬಯಸಿದ್ದಾಗ 30 ಸ್ಥಾನಕ್ಕೆ ಅವರನ್ನು ತೃಪ್ತಗೊಳಿಸಿ ಪೂನಾ ಒಪ್ಪಂದಕ್ಕೆ ಬದ್ಧರಾಗಿರುವಂತೆ ಒಪ್ಪಿಸಿದ್ದೇನೆ. ಅಷ್ಟೇ ಅಲ್ಲ, ಮುಂಬಯಿ, ಬಿಹಾರ್, ಪಂಜಾಬ್, ಉತ್ತರ ಪ್ರದೇಶ, ಒರಿಸ್ಸಾದ ಶೋಷಿತ ಸಮುದಾಯವೂ ಸ್ಥಾನಸಂಖ್ಯೆಯ ಕುರಿತು ಅಸಮಾಧಾನ ಹೊಂದಿವೆ' ಎಂದು ಬರೆದರು.

ಜಂಟಿ ಸಂಸದೀಯ ಸಮಿತಿಯಲ್ಲಿ ಭಾಗವಹಿಸಲು ಏಪ್ರಿಲ್‌ನಲ್ಲಿ ಮತ್ತೆ ಲಂಡನ್ನಿಗೆ ಹೊರಟ ಅಂಬೇಡ್ಕರ್‌ರನ್ನು ಗಾಂಧಿ ಯರವಾಡಾ ಜೈಲಿನಲ್ಲಿ ಭೇಟಿ ಮಾಡುವಂತೆ ಕೇಳಿದರು. ಯರವಾಡಾದಲ್ಲಿ ಗಾಂಧೀಜಿಯ ಜೊತೆ ಪ್ರಾಥಮಿಕ ಚುನಾವಣೆ ಹಾಗೂ ಅಭ್ಯರ್ಥಿಗಳ ಪಟ್ಟಿ ತಯಾರಿಯ ಕುರಿತು ಚರ್ಚೆಯಾಯಿತು. ಸಾರ್ವತ್ರಿಕ ಚುನಾವಣೆ ಎದುರಿಸುವ ಶೋಷಿತ ಸಮುದಾಯದ ಅಭ್ಯರ್ಥಿ ಪ್ರಾಥಮಿಕ ಹಂತದಲ್ಲಿ ಕನಿಷ್ಠ 25% ಮತ ಗಳಿಸಿರಬೇಕು ಎಂದು ಅಂಬೇಡ್ಕರ್ ಹೇಳಿದರು. ಆ ವಿಷಯದ ಕುರಿತು ಅಂಬೇಡ್ಕರ್ ಅವರ ಲಂಡನ್ ವಿಳಾಸಕ್ಕೆ ಪತ್ರ ಬರೆಯುವುದಾಗಿ ಹೇಳಿದ ಗಾಂಧಿ, ಅಂಬೇಡ್ಕರ್ ಕೈಗೆ ಹೂಗುಚ್ಛವನ್ನಿತ್ತು ಮಾತನ್ನು ಅಸ್ಪೃಶ್ಯತೆ ನಿವಾರಣೆ ಕಡೆಗೆ ತಿರುಗಿಸಿದರು.

****

ಒಂದು ವೇಳೆ ಪೂನಾ ಒಪ್ಪಂದದ ಸಂದರ್ಭದಲ್ಲಿ ಅಂಬೇಡ್ಕರ್ ತಮ್ಮ ನಿಲುವನ್ನು ಕೊಂಚವೂ ಬದಲಿಸದೆ ಕಠಿಣವಾಗಿ ಉಳಿದುಬಿಟ್ಟಿದ್ದಿದ್ದರೆ ಉಪವಾಸದಿಂದ ಬಳಲಿ ಮಲಗಿದ್ದ ಗಾಂಧಿ ತೀರಿಕೊಳ್ಳುವ ಸಾಧ್ಯತೆಗಳಿದ್ದವು. ಆಗ ಅಂಬೇಡ್ಕರರನ್ನು ಖಳನನ್ನಾಗಿಸಿ, ಈ ದೇಶದಲ್ಲಿ ಶೋಷಿತರ ಮಾರಣಹೋಮವೇ ನಡೆದುಹೋಗುತ್ತಿತ್ತು. ಬಹುಶಃ ಅಂಬೇಡ್ಕರರಿಗಿದ್ದ ದೂರದೃಷ್ಟಿ ಈ ದುರಂತ ಸಂಭವಿಸದಂತೆ ನೋಡಿಕೊಂಡಿತು.

ಹೀಗೆ ಪೂನಾ ಒಪ್ಪಂದವು ರಾಜಕೀಯ ಒಪ್ಪಂದವಾಗಿದ್ದರೂ ಅದಕ್ಕೆ ವಿಶಾಲ ಧಾರ್ಮಿಕ, ಸಾಮಾಜಿಕ ಆಯಾಮಗಳಿದ್ದವು. ಅದರ ಪರಿಣಾಮದ ಬಗ್ಗೆ ಒಪ್ಪಂದದ ಆರಂಭದ ದಿನಗಳಲ್ಲಿ ಉತ್ಸಾಹಿತರಾದಂತೆ ಕಂಡುಬಂದ ಅಂಬೇಡ್ಕರ್ ನಂತರ ಕ್ರಮೇಣ ಯಥಾಸ್ಥಿತಿ ಮುಂದುವರೆದಿದ್ದನ್ನು ಖಿನ್ನತೆಯಿಂದ ಗಮನಿಸುತ್ತಾರೆ. ದಿನಕಳೆದಂತೆ ಅಸ್ಪೃಶ್ಯತೆ ನಿವಾರಣೆ ಅಷ್ಟು ಸುಲಭವಲ್ಲವೆಂದೂ, ಅದರ ಬೇರು ನಾಶವಾಗದೇ ಬರಿಯ ಟೊಂಗೆಗಳನ್ನು ಕಡಿದು ಉಪಯೋಗವಿಲ್ಲವೆಂದೂ ಅವರಿಗೆ ಮನದಟ್ಟಾಗುತ್ತದೆ. ಕಲಿತ, ತಿಳಿದ, ಪ್ರಭಾವಿ ಅಧಿಕಾರಸ್ಥರಾದ ತಾವೇ ತಾರತಮ್ಯ ಎದುರಿಸುತ್ತಿರಬೇಕಾದರೆ ಹಳ್ಳಿಹಳ್ಳಿಗಳಲ್ಲಿ ಬದುಕಿರುವ ಕೋಟ್ಯಂತರ ಬಡ ಶೋಷಿತರ ಪಾಲಿಗೆ ದೇವಾಲಯ ಪ್ರವೇಶದಂತಹ ಕಣ್ಣೊರೆಸುವ ತಂತ್ರಗಳು ಶಾಶ್ವತ ಪರಿಹಾರ ಒದಗಿಸಲಾರವು ಎಂದೆನಿಸಿ ಮತಾಂತರ ನಿರ್ಧಾರಕ್ಕೆ ಸ್ಥಾನಮೀಸಲು ಹೋರಾಟಕ್ಕೆ ತಾತ್ವಿಕ ನೆಲೆ ಒದಗಿಸುತ್ತದೆ.

ಹೀಗೆ ಪೂನಾ ಒಪ್ಪಂದವು ಸ್ವಾತಂತ್ರ್ಯ ಹೋರಾಟ, ಗಾಂಧಿ-ಅಂಬೇಡ್ಕರ್ ಸಂಘರ್ಷ, ಹಿಂದೂ ಸಮಾಜ ಸುಧಾರಣೆಯ ಕಷ್ಟಗಳು, 'ಹರಿಜನ'ರಿಂದ ಆತ್ಮಾಭಿಮಾನಿ 'ದಲಿತ'ರ ಹುಟ್ಟು, ಅಂಬೇಡ್ಕರರ ಮತಾಂತರ ಒಲವಿಗೆ ಕಾರಣಗಳನ್ನು ಅನಾವರಣಗೊಳಿಸುತ್ತ ಇತಿಹಾಸದ ಪುಟಗಳನ್ನು ಏಕೆ ಮತ್ತೆಮತ್ತೆ ತಿರುವಿ ಹಾಕಬೇಕೆಂದು ಸ್ಪಷ್ಟಪಡಿಸುತ್ತದೆ.

• ಡಾ.ಎಚ್.ಎಸ್. ಅನುಪಮಾ ಮತ್ತು ಕೆ.ಎಲ್. ಚಂದ್ರಶೇಖರ್ ಐಜೂರ್

...ಅಂಬೇಡ್ಕರರಿಗೆ ತಟ್ಟಿ ದೇಶಾದ್ಯಂತ ದಲಿತರ ಮಾರಣಹೋಮವೇ ನಡೆಯಲಿದೆ ...ಎಂಬ ಕೊನೆಯ ಅಸ್ತ್ರವನ್ನು ಕಾಂಗ್ರೆಸ್ ಅಂಬೇಡ್ಕರರ ಮೇಲೆ ಪ್ರಯೋಗಿಸಿ ...ಯಶಸ್ವಿಯಾಯಿತು. ಕಣ್ಣೆದುರೇ ಜರುಗಬಹುದಾದ ದಲಿತರ ಹತ್ಯಾಕಾಂಡವನ್ನು ...ತಪ್ಪಿಸಲು ಅಂಬೇಡ್ಕರ್ ಈ ಒಪ್ಪಂದದಲ್ಲಿ ತಮಗಿಷ್ಟವಿಲ್ಲದಿದ್ದರೂ ...ಅನಿವಾರ್ಯವಾಗಿ ರಾಜಿ ಮಾಡಿಕೊಳ್ಳಬೇಕಾಯಿತು.

ಪ್ರಶ್ನೆ: ಪೂನಾ ಒಪ್ಪಂದದ ಸಂದರ್ಭದಲ್ಲಿ ಮತ್ತು ಅದರ ನಂತರ ದಲಿತರ ...ರಾಜಕೀಯ ಹಕ್ಕುಗಳು ಹೇಗಿದ್ದವು?

ಗೋಪಿನಾಥ್: ಆಗ ಈ ದೇಶದ ಶೇಕಡ 96 ರಷ್ಟು ಜನಕ್ಕೆ ಮತದಾನದ ...ಹಕ್ಕುಗಳೇ ಇರಲಿಲ್ಲ. ಭೂ ಮಾಲೀಕರು, ತೆರಿಗೆ ಕಟ್ಟುವವರು ಮತ್ತು ...ಪದವೀಧರರಿಗೆ ಮಾತ್ರ ಮತದಾನ ಮಾಡುವ ಹಕ್ಕುಗಳಿದ್ದವು. ಈ ಮೂರು ...ವರ್ಗಗಳಲ್ಲೂ ದಲಿತರು ಬರುವುದಿಲ್ಲ ಎಂಬುದನ್ನು ನಾನಿಲ್ಲಿ ಬಿಡಿಸಿ ...ಹೇಳಬೇಕಿಲ್ಲ. 1937ರಲ್ಲಿ 21 ವರ್ಷ ದಾಟಿದ ಈ ದೇಶದ ಪ್ರತಿಯೊಬ್ಬರೂ ...ಮತ ಚಲಾಯಿಸುವ ಹಕ್ಕು ಪಡೆಯುವಂತೆ ಅಂಬೇಡ್ಕರ್ ಮಾಡಿದರು. ಗಾಂಧಿ, ...ತಿಲಕ್, ಮೋತಿಲಾಲ್ ನೆಹರೂ, ಜವಹರಲಾಲ್ ನೆಹರು ಇದಕ್ಕೆ ಕೊಂಕು ...ತೆಗೆದರು. ತಿಲಕರಂತೂ ಬೆಳಗಾಂನ ಅಥಣಿಯ ಬಹಿರಂಗ ಸಭೆಯಲ್ಲಿ 'ಕಸ ...ಗುಡಿಸುವ ತಿಕುಷ, ಅಲ್ಲಿ ಇಲ್ಲಿ ಸೆಗಣಿ ಎತ್ತುವ ಸೀಪೆಲ್ಲ ಮತ ಚಲಾಯಿಸಿ ದಿಲ್ಲಿ ...ಗೆ ಹೋಗಬೇಕೆಂದುಕೊಂಡಿರುವಿರಾ?' ಎಂದು ಅಲ್ಲಿನ ಜನರನ್ನೇ ಪ್ರಶ್ನಿಸಿದ್ದರು. ...ಗಾಂಧಿ ಕೂಡ 'ನಾವು ಪೋಟಾಕಿ ಯಾವ್ ಅರ್ಹತೆ ಕಟ್ಟೋಕು ಬಿಡಿ' ಎಂದು ...ಮತದಾನದ ಹಕ್ಕಿನ ಬಗ್ಗೆಯೇ ನಿರುತ್ಸಾಹ ಹೊಂದಿದ್ದರು.

ಪ್ರಶ್ನೆ: ಪೂನಾ ಒಪ್ಪಂದಕ್ಕೂ ಮುನ್ನ ಜರುಗಿದ ರಾಜಾ-ಮೂಂಜೆ ಒಪ್ಪಂದ ದಲಿತರ ಹಿತ ಕಾಯಲಿಲ್ಲವೇ?

ಗೋಪಿನಾಥ್: ಅಂಬೇಡ್ಕರ್ ತಲೆ ಕಂಡರೆ ಕಾಂಗ್ರೆಸ್‌ಗೆ ಆಗುತ್ತಿರಲಿಲ್ಲ. ಅಂಬೇಡ್ಕರ್‌ಗೆ ಸರಿಸಮವಾಗಿ ಅವರ ಎದುರು ಮತ್ತೊಬ್ಬ ದಲಿತ ನಾಯಕನನ್ನು ಕಾಂಗ್ರೆಸ್ ಹುಟ್ಟುಹಾಕಿತ್ತು. ಅವರೇ ಎಮ್.ಸಿ.ರಾಜಾ. ಅಂಬೇಡ್ಕರ್ ಎಲ್ಲೆಲ್ಲಿ ಕಟುವಾಗಿ ನಿಷ್ಠುರವಾಗಿರುತ್ತಿದ್ದರೋ ಅಲ್ಲೆಲ್ಲ ಕಾಂಗ್ರೆಸ್ ರಾಜಾರನ್ನು ಬಿಟ್ಟು ಇಡೀ ಚರ್ಚೆಯ ಕಾವನ್ನು ತೆಳುವಾಗಿಸುತ್ತಿತ್ತು. ಎಮ್.ಸಿ.ರಾಜಾ ಎಂಬ ಕಾಂಗ್ರೆಸ್ ಕೃಪಾಪೋಷಿತ ನಾಣ್ಯ ಹೆಚ್ಚು ದಿನ ನಡೆಯಲಿಲ್ಲ. ಆಗಲೇ ಅಂಬೇಡ್ಕರರನ್ನು ಶೋಷಿತರ ನಾಯಕ ಎಂದು ಒಪ್ಪಿಕೊಂಡಿದ್ದ ಈ ದೇಶದ ದಲಿತರಿಗೆ ರಾಜಾರನ್ನು ಅಂಬೇಡ್ಕರ್ ಎದುರಿನ ಪರ್ಯಾಯ ಶಕ್ತಿ ಎಂದು ನೋಡಲು ಸಾಧ್ಯವೇ ಆಗಲಿಲ್ಲ. ಇನ್ನು ರಾಜಾ-ಮೂಂಜೆ ಒಪ್ಪಂದದಲ್ಲಿ ಮೇಲ್ಜಾತಿಗೆ ಸೇರಿದ ಮೂಂಜೆ ಎನ್ನುವವರ ಎದುರು ಕೂತು ರಾಜಾ ಕಾಂಗ್ರೆಸ್ ಮತ್ತು ಹಿಂದೂ ಧರ್ಮದೊಳಗೆ ದಲಿತರು ಹೇಗೆ ಜಾಗಮಾಡಿಕೊಂಡು ತೂರಿಕೊಳ್ಳಬೇಕು ಎಂಬ ಗಹನವಾದ ಚಿಂತನೆಯಲ್ಲಿ ತೊಡಗಿದ್ದರು. ರಾಜಾರನ್ನು ಅವರ ತವರು ನೆಲ ತಮಿಳುನಾಡಿನಲ್ಲಿಯೇ ದಲಿತರ ನಾಯಕ ಎಂದು ಯಾರೂ ಒಪ್ಪಿಕೊಳ್ಳಲಿಲ್ಲ.

ಪ್ರಶ್ನೆ: ಮುಂದೆ ಅಂಬೇಡ್ಕರ್ ಸಂವಿಧಾನ ರಚನಾ ಸಮಿತಿ ಮತ್ತು ಜಂಟಿ ಸಂಸದೀಯ ಸಮಿತಿಯಲ್ಲಿ ಸಕ್ರಿಯವಾಗಿದ್ದರು. ಅಲ್ಲೆಲ್ಲ ಯಾಕೆ ಅವರು ಈ ಪೂನಾ ಒಪ್ಪಂದದ ಸಂಗತಿಗಳನ್ನು ಮುನ್ನೆಲೆಗೆ ತರುವ ಪ್ರಯತ್ನ ಮಾಡಲಿಲ್ಲ?

ಗೋಪಿನಾಥ್: ಅಂಬೇಡ್ಕರರ ಸಂವಿಧಾನ ರಚನಾ ಸಮಿತಿಯೊಳಗಿನ ಪ್ರವೇಶದ ಕತೆಯೇ ದೊಡ್ಡ ಪುರಾಣವಾಗಬಲ್ಲದು. ಸಂವಿಧಾನ ರಚನಾ ಸಮಿತಿಯ ಒಂದು ಸಣ್ಣ ಕಿಂಡಿಯೂ ಅಂಬೇಡ್ಕರರಿಗೆ ತೆರೆದಿರಬಾರದೆಂಬ ಅತಿ ಕಟ್ಟುನಿಟ್ಟಿನ ಕ್ರಮಗಳನ್ನು ಕಾಂಗ್ರೆಸ್ ವಿಧಿಸಿತ್ತು. ಸಂವಿಧಾನ ರಚನಾ ಸಮಿತಿಯಲ್ಲಿ ಅಂಬೇಡ್ಕರ್ ಪಾಲ್ಗೊಳ್ಳುವಿಕೆ ಎಷ್ಟು ಮುಖ್ಯ ಎಂದು ಅರಿತ ಅವತ್ತಿನ ಬಾಂಗ್ಲಾದೇಶದ ಮುಸ್ಲಿಂ ನಾಯಕರ ದೂರದೃಷ್ಟಿಯಿಂದಾಗಿ ಈ ಹಿಂದೆ ಚುನಾವಣೆಯಲ್ಲಿ ಪರಾಭವಗೊಂಡಿದ್ದ ಅಂಬೇಡ್ಕರರನ್ನು ಮತ್ತೆ ಆಯ್ಕೆಮಾಡಿ ಸಂವಿಧಾನ ರಚನಾ ಸಮಿತಿಯ ಒಳಮನೆ ಪ್ರವೇಶಿಸುವಂತೆ ಮಾಡಲಾಯಿತು. ಆಗ ಕಾಂಗ್ರೆಸ್‌ನಲ್ಲಿದ್ದ ದಲಿತರ ಪ್ರಾತಿನಿಧ್ಯ 26, ಮುಸ್ಲಿಮ್ ಲೀಗ್‌ನಲ್ಲಿ ಅಂಬೇಡ್ಕರರನ್ನು ಒಳಗೊಂಡೂ ಇದ್ದ ದಲಿತರ ಪ್ರಾತಿನಿಧ್ಯ ಕೇವಲ 2. ಆಗ ಪೂನಾ ಒಪ್ಪಂದದ ಸಂಗತಿಗಳನ್ನು ಸಂವಿಧಾನ ರಚನಾ ಸಮಿತಿಯಲ್ಲಿ ಅಷ್ಟು ಸುಲಭವಾಗಿ ತರಲು ಸಾಧ್ಯವಿರಲಿಲ್ಲ. ಆ ಸಮಿತಿಯಲ್ಲಿ ಅಂಬೇಡ್ಕರರೇ ಇಲ್ಲದಿದ್ದಿದ್ದರೆ ಪರಿಸ್ಥಿತಿ ಹೇಗಿರುತ್ತಿತ್ತು ನೀವೇ ಊಹಿಸಿ. ಸಂವಿಧಾನ ರಚನೆ ಎಂಬುದು ಅಂಬೇಡ್ಕರ್ ಪಾಲಿಗೆ ಶತ್ರುಗಳ ಪಾಳಯದಲ್ಲಿ ಶೋಷಿತರ ಹಕ್ಕುಗಳಿಗೆ ಕುಂದುಂಟಾಗದಂತೆ ಕೂತು ಬರೆದ ಕೃತಿಯಷ್ಟೇ. ಇಡೀ ಸಮಿತಿಯಲ್ಲಿ ಒಬ್ಬ ಬಾಬು ರಾಜೇಂದ್ರ ಪ್ರಸಾದ್ ಹೊರತುಪಡಿಸಿ ಮತ್ಯಾರಿಗೂ ಅಂಬೇಡ್ಕರ್ ನೆರಳು ಕಂಡರೂ ಆಗುತ್ತಿರಲಿಲ್ಲ. ಅಂಥಾ ರಾಜೇಂದ್ರ ಪ್ರಸಾದರನ್ನು ನೆಹರೂ ಮತ್ತು ಆಚಾರ್ಯ ಕೃಪಲಾನಿಯಂಥವರು ನಿಯಂತ್ರಿಸುತ್ತಿದ್ದರು.

ಸಂದರ್ಶನ: ಕೆ.ಎಲ್.ಚಂದ್ರಶೇಖರ್ ಐಜೂರ್

ಕೊಂಕು ಮಾತುಗಳಿಂದ ಸಮಾಜವಾದ ಬೆಳೆಯುವುದಿಲ್ಲ


ಕೆಲವು ಸಮಾಜವಾದಿ ಗೆಳೆಯರು 'ನವ ಮಾನವ ಮಾಸಿಕ' ಎನ್ನುವ ಖಾಸಗಿ ಪ್ರಸಾರದ ಹೊಸ ಪತ್ರಿಕೆ ಶುರು ಮಾಡಿದ್ದಾರೆ. ಈ ಪುಟ್ಟ ಮಾಸಿಕದ ಸಂಪಾದಕರು ಡಿ.ಎಸ್.ನಾಗಭೂಷಣ.

ನಾನು ಕುತೂಹಲದಿಂದ ಈ ನವ ಮಾನವನ ಮೊದಲೆರಡು ಸಂಚಿಕೆಗಳನ್ನು ಓದಿದೆ. ಸಾಮಾಜಿಕ ಕಾಳಜಿಗಳಿರುವ ಬಹುತೇಕರಂತೆಯೇ ಕರ್ನಾಟಕದ ಸಮಾಜವಾದಿಗಳೂ ಸಹ ಎಂತಹ ಹತಾಶ ಪರಿಸ್ಥಿತಿಯಲ್ಲೂ ತಮ್ಮ ಕೈಲಾಗುವ ಕೆಲಸ ಮಾಡುತ್ತಲೇ ಇರುತ್ತಾರೆ. ಹೊಸ ಪತ್ರಿಕೆ, ಹೊಸ ಸಂಘಟನೆ, ಹೊಸ ಸೆಮಿನಾರು... ಹೀಗೆ.

ಇರಲಿ, ಆದರೆ ಹೊಸದನ್ನೇನಾದರೂ ಕಟ್ಟಬೇಕೆನ್ನುವ ಕಾಳಜಿ ಇರುವವರಿಗೆ ಕೊಂಚ ಸಹನೆ, ದೂರದೃಷ್ಟಿ ಬೇಕೇಬೇಕು. ಈ ನವ ಮಾನವನ ಸೆಪ್ಟೆಂಬರ್ ಸಂಚಿಕೆಯಲ್ಲಿನ ಒಂದೆರಡು ಬರಹಗಳು ಬೇಸರ ಹುಟ್ಟಿಸುವಂತಿವೆ.

ಸಂಪಾದಕ ನಾಗಭೂಷಣ್ ಅಣ್ಣಾ ಹಜಾರೆಯವರ ಹೋರಾಟದ ಯಶಸ್ಸಿನ ಬಗ್ಗೆ ಟಿಪ್ಪಣಿ ಬರೆಯುತ್ತಾ "ಇದು ಬಲಪಂಥೀಯರೆದುರು ಜನ ಸಂಘಟನೆಯ ವಿಷಯದಲ್ಲಿ ಸಂಪೂರ್ಣ ಸೋತಿರುವ ಎಡಪಂಥೀಯರೆಂದು ತಮ್ಮನ್ನು ಕರೆದುಕೊಳ್ಳುವವರು ಆಳವಾಗಿ ಯೋಚಿಸಬೇಕಾದ ಸಂದರ್ಭ" ಎಂದಿದ್ದಾರೆ.

ಆಶ್ಚರ್ಯದ ಸಂಗತಿ ಏನೆಂದರೆ ಸಮಾಜವಾದಿಗಳೂ ಈ ಜನಸಂಘಟನೆಯ ವಿಚಾರದಲ್ಲಿ ಸೋತಿದ್ದಾರೆಂಬುದನ್ನು ಹೇಳದೆ ಎಡಪಂಥೀಯರ ಬಗ್ಗೆ ಕೊಂಕು ಮಾತಾಡಿ ನಾಗಭೂಷಣ್ ತೃಪ್ತಿಪಟ್ಟುಕೊಂಡಿದ್ದಾರೆ. ಇದು ಆಕಸ್ಮಿಕ ಅಲ್ಲವೆನ್ನಲು ಅದೇ ಸಂಚಿಕೆಯ ಇನ್ನೊಂದೆಡೆ ಪ್ರೊ.ಹರಗೋಪಾಲ್ ಬಗ್ಗೆ ಚಿಲ್ಲರೆ ಕಾಮೆಂಟುಗಳೂ ಪ್ರಕಟಗೊಂಡಿವೆ.



ಆಂಧ್ರಪ್ರದೇಶದ ಮಾನವ ಹಕ್ಕುಗಳ ಕಾರ್ಯಕರ್ತ ಹರಗೋಪಾಲ್ ತಮ್ಮಿಡೀ ಬದುಕನ್ನೇ ದಮನಿತರ ಪರವಾದ ಕೆಲಸಕ್ಕಾಗಿ ವ್ಯಯಿಸುತ್ತಿರುವವರು. ಇದೇ ಬದ್ಧತೆ ತೋರಿದ ಕಾರಣಕ್ಕಾಗಿ ಅವರ ಜೊತೆಗಾರರನೇಕರು ಪ್ರಾಣ ಕಳೆದುಕೊಂಡಿದ್ದಾರೆ. ಕೆಲವು ದಶಕಗಳ ಕಾಲ ಸಾಮಾಜಿಕ ಹೋರಾಟಗಳಲ್ಲಿ ಭಾಗಿಯಾಗಿದ್ದು ಆ ಮೂಲಕ ಹರಗೋಪಾಲರಿಗೆ ಮಾನವ ಹಕ್ಕುಗಳು, ದಮನ, ಜಾತಿಶೋಷಣೆಗಳ ಬಗ್ಗೆ ಆಳವಾದ ಗ್ರಹಿಕೆ ಸಹಜವಾಗಿಯೇ ಬಂದಿದೆ. ಅವರು ಮಾರ್ಕ್ಸ್‌ವಾದಿ ಚಿಂತನೆಗಳ ಹಿನ್ನೆಲೆಯವರೆಂಬುದು ಎಲ್ಲರಿಗೂ ಗೊತ್ತಿದೆ. ಕೆಲವಾರಗಳ ಹಿಂದೆ ಬೆಂಗಳೂರಿನ ನ್ಯಾಷನಲ್ ಲಾ ಸ್ಕೂಲ್‌ನಲ್ಲಿ ಮಾನವ ಹಕ್ಕುಗಳ ಬಗ್ಗೆ ಹರಗೋಪಾಲ್ ಉಪನ್ಯಾಸ ನೀಡುತ್ತಿದ್ದಾಗ ಆಂಧ್ರದ ಎಡಗೈ-ಬಲಗೈ ಸಮುದಾಯಗಳ ವಿಭಜನೆಯ ಹಿಂದಿನ ಕಾರಣಗಳನ್ನು ವಿವರಿಸುತ್ತಿದ್ದಾಗ ಕೆಲವರು 'ಅಲ್ಲಿ ದಲಿತರನ್ನು ಒಡೆದಿರುವ ನಿಮ್ಮ ಮಾರ್ಕ್ಸ್‌ವಾದಿ ಪ್ರವಚನ ಇಲ್ಲಿ ಬೇಡ' ಎಂದು ತಿರುಗಿಬಿದ್ದರೆಂದು ಆನಂದ ತುಂದಿಲರಾಗಿ 'ನವಮಾನವ'ದಲ್ಲಿ ಬರೆಯಲಾಗಿದೆ. ಅದೇ ಸಭೆಯಲ್ಲಿದ್ದ ಚಿಂತಕ ಆನಂದ್ ತೇಲ್‌ತುಂಬ್ಡೆಯವರ ಬಗ್ಗೆಯೂ ಮತ್ತದೇ ಕೊಂಕುಮಾತುಗಳು ದಾಖಲಾಗಿದೆ.

ಇದು ಒಂದು ರೀತಿಯ ಸಣ್ಣತನ. 'ಕರ್ನಾಟಕದ ದಲಿತ ಚಳವಳಿಯನ್ನು ಬ್ರಾಹ್ಮಣ ರಾಮಕೃಷ್ಣ ಹೆಗಡೆ ವಿಭಜಿಸಿದರು' ಎಂದು ನಂಬಿ ಸುಮ್ಮನಾಗುವುದು, ಆಂಧ್ರದಲ್ಲಿ ಕಮ್ಯೂನಿಸ್ಟರು ಆ ಕೆಲಸ ಮಾಡಿದರೆಂದು ಪ್ರಚಾರ ಮಾಡಿ ಸಮಾಧಾನಪಟ್ಟುಕೊಳ್ಳುವುದರಿಂದ ಸತ್ಯದ ದರ್ಶನ ಆಗಲಾರದು.

ಎಡಗೈ-ಬಲಗೈ ಸಮುದಾಯಗಳ ನಡುವೆ ಇರುವ ಅಸಮಾನತೆ, ಅವಕಾಶಗಳ ಬಳಕೆಯಲ್ಲಾದ ತಾರತಮ್ಯಗಳೇ ಈ ಗುಂಪುಗಳು ಪ್ರತ್ಯೇಕ ದಾರಿ ಹಿಡಿಯಲು ಪ್ರೇರಣೆ ನೀಡಿದವೆಂಬ ವಾಸ್ತವವನ್ನು ನಾವು ಅರ್ಥಮಾಡಿಕೊಳ್ಳದೆ ಹೋದರೆ ಹೇಗೆ?


ಅದು ಬಿಟ್ಟು ದೇವನೂರ ಮಹಾದೇವರಂತೆ ಗಂಡಭೇರುಂಡ ಕತೆ ಅಥವಾ ಸಮಾಜವಾದಿಗಳ 'ದಮನಿತರ ಐಕ್ಯತೆ'ಯೆಂಬ ಒಣಮಾತುಗಳು ಈ ವಿಭಜನೆಯನ್ನು ಬಗೆಹರಿಸುವ ಸೇತುವೆ ಕಟ್ಟಲಾರದು. ಇದೇ ಪತ್ರಿಕೆಯಲ್ಲಿ ರಂಜಾನ್ ದರ್ಗಾ, ರಹಮತ್ ತರೀಕೆರೆಯ ಬಗ್ಗೆಯೂ ಕೊಂಕು ಮಾತಾಡಿ ಈ 'ನವ ಮಾನವರು' ಖುಷಿಪಟ್ಟುಕೊಂಡಿದ್ದಾರೆ.

ಇದನ್ನೆಲ್ಲಾ ನೋಡುತ್ತಿದ್ದರೆ ಆಶ್ಚರ್ಯವಾಗುತ್ತದೆ. ನಾವು ನಿಜವಾಗಲೂ ಬೆಳೆಯುವುದು ಸಾಧ್ಯವಾ ಅನಿಸುತ್ತದೆ. ಎಷ್ಟೇ ವಯಸ್ಸಾದರೂ ಪದೇಪದೇ ಒಂದನೇ ಕ್ಲಾಸಿಗೇ ಹೋಗಿ ಸೇರಿಕೊಳ್ಳುವಂತೆ ನವಮಾನವರ ಗುಂಪು ಹಳೇ ಮಾನವರಂತೆ ಆಡಿದರೆ ಈ ಪತ್ರಿಕೆಯೂ ರೇಜಿಗೆ ಹುಟ್ಟಿಸುತ್ತದೆ ಅಷ್ಟೇ.

ಇಷ್ಟರ ನಡುವೆ 'ನವ ಮಾನವ'ವನ್ನು ಸ್ವಾಗತಿಸೋಣ. ಅದು ಇನ್ನಷ್ಟು ಬದ್ಧತೆ, ಕಾಳಜಿ, ಒಳನೋಟಗಳೊಂದಿಗೆ ನಮ್ಮನ್ನೆಲ್ಲಾ ಸೇರಿದಂತೆ ಹೊಸ ತಲೆಮಾರಿನ ಯುವಜನತೆಯ ಗಮನವನ್ನು ಸೆಳೆಯುವಂತಾಗಲಿ. ಅರ್ಥಾತ್ ಹೊಸ ಮನುಷ್ಯರನ್ನು ಇದು ಪ್ರಭಾವಿಸಲಿ.

ಆಸಕ್ತರು ನಾಗಭೂಷಣ್‌ರ ಮೊಬೈಲ್(9449242284)ಗೆ ಸಂಪರ್ಕಿಸಿದರೆ ಪತ್ರಿಕೆಯ ಬಗ್ಗೆ ಮಾಹಿತಿ ಸಿಗುತ್ತದೆ.

ಬುಕಾನನ್‌ನ ಅದ್ಭು ಪುಸ್ತಕ ಈಗ ಲಭ್ಯ



ಡಾ. ಫ್ರಾನ್ಸಿಸ್ ಹ್ಯಾಮಿಲ್ಟನ್ ಬುಕಾನನ್ ಇವನ ಪೂರ್ತಿ ಹೆಸರು.


1799ರಲ್ಲಿ ನಾಲ್ಕನೇ ಆಂಗ್ಲೋ-ಮೈಸೂರು ಯುದ್ಧದಲ್ಲಿ ಟಿಪ್ಪು ಸುಲ್ತಾನ್ ಹತನಾದ ನಂತರ ಬ್ರಿಟಿಷರು ಈ ಬುಕಾನನ್‌ಗೆ ಒಂದು ಕೆಲಸ ವಹಿಸಿದ್ದರು. ತಮ್ಮ ವಿರುದ್ಧ ನಾಲ್ಕು ಯುದ್ಧ ನಡೆಸಿ ಮಣಿದ ಹಾಗೂ ಹೊಸದಾಗಿ ತಮ್ಮ ನಿಯಂತ್ರಣಕ್ಕೆ ಬಂದ ಮೈಸೂರು ರಾಜ್ಯದ ಪೂರ್ಣ ವಿವರಗಳು ಅವರಿಗೆ ಬೇಕಿತ್ತು.


ಎರಡು ವರ್ಷ ಈ ಕೆಲಸ ಮಾಡಿದ ಬುಕಾನನ್ ತನ್ನ ಅಧ್ಯಯನವನ್ನು **'A Journey from Madras through the countries of Mysore, Canara and Malabar'** ಎಂದು ಹೆಸರಿಸಿ ಈಸ್ಟ್ ಇಂಡಿಯಾ ಕಂಪನಿಯ ನಿರ್ದೇಶಕ ಮಂಡಳಿಗೆ ಒಪ್ಪಿಸಿದ. ಆಗಿನ ಮೈಸೂರು ಸೀಮೆಯ ಜನರ ಬದುಕು ಇದರಲ್ಲಿದೆ. ಒಮ್ಮೆ ಚಿತ್ರಕಲ್ (ಚಿತ್ರದುರ್ಗ)ದಿಂದ ದಕ್ಷಿಣಕ್ಕೆ ಇಳಿದು ಇನ್ನೊಮ್ಮೆ ಮಂಗಳೂರಿನಿಂದ ಮಲಬಾರ್-ಕೊಡಗು ಹಾದು ಕೊನೆಗೊಮ್ಮೆ ಶ್ರೀರಂಗಪಟ್ಟಣದಿಂದ ಮಳವಳ್ಳಿ, ಕನಕಪುರ, ತಳಿ ಮೂಲಕ ಮದ್ರಾಸ್‌ನತ್ತ ಹೋಗುವ ಬುಕಾನನ್ ಆ ಕಾಲಘಟ್ಟದ ಅತೀ ಅಮೂಲ್ಯವಾದ ಮಾಹಿತಿಗಳನ್ನು ಒದಗಿಸಿಕೊಡುತ್ತಾನೆ. ಇಲ್ಲಿನ ಸಾಮಾಜಿಕ ಬದುಕು, ಕೃಷಿ, ಕೃಷಿ ಸಲಕರಣೆಗಳು, ವ್ಯಾಪಾರ, ವ್ಯಾಪಾರಿ ಜಾತಿಗಳು, ಕೈಗಾರಿಕೆ, ಬೆಲೆಗಳು, ತೂಕ ಮತ್ತು ಅಳತೆ, ಜಾತಿ, ಸಂಪ್ರದಾಯ, ಕಾಡಿನ ಉತ್ಪನ್ನಗಳು, ರಸ್ತೆ ಸಂಪರ್ಕ... ಹೀಗೆ ಎಲ್ಲವನ್ನೂ ಒಳಗೊಂಡಿರುವ ಈ ಪುಸ್ತಕ ಓದುವುದೇ ಒಂದು ಚೇತೋಹಾರಿ ಅನುಭವ. 1807ರಲ್ಲಿ ಲಂಡನ್‌ನಲ್ಲಿ ಪುಸ್ತಕರೂಪದಲ್ಲಿ ಪ್ರಕಟವಾದ ಈ ವರದಿ ಈಗ ಇನ್ನೂರಾ ನಾಲ್ಕು ವರ್ಷಗಳ ನಂತರ ಮತ್ತೆ ಪ್ರಕಟವಾಗಿದೆ. ಮೂರು ಸಂಪುಟಗಳಲ್ಲಿರುವ ಒಂದೂ ಕಾಲು ಸಾವಿರ ಪುಟಗಳ ಈ ವರದಿಯನ್ನು ಕರ್ನಾಟಕ ಗೆಜೆಟಿಯರ್ ಇಲಾಖೆ ಪ್ರಕಟಿಸಿದೆ. ಈ ಇಲಾಖಾ ನಿರ್ದೇಶಕ ಎಸ್.ಎ.ಗಿಲಾನಿಯವರ ಅಪಾರ ಶ್ರಮದಿಂದ ಇದು ಸಾಧ್ಯವಾಗಿದೆ. ಅವರಿಗೆ ಅಭಿನಂದನೆಗಳು.

ಒಂದು ನಾಡಿನ ವಿಮೋಚನೆಗೆ ಅಥವಾ ಸಮಗ್ರ ಅಭಿವೃದ್ಧಿಗೆ ಹೇಗೆ ಅದರ ಎಲ್ಲಾ ಆಯಾಮಗಳ ಮಾಹಿತಿ ಬೇಕಾಗುತ್ತದೋ ಅದೇರೀತಿ ಆ ನಾಡನ್ನು ವ್ಯವಸ್ಥಿತ ಲೂಟಿ, ಶೋಷಣೆಗಳಿಗೆ ಒಳಪಡಿಸುವಾಗಲೂ ಅಂತದ್ದೇ ಮಾಹಿತಿ ಬೇಕಾಗುತ್ತದೆ. ಬ್ರಿಟಿಷರು ಇದನ್ನು ಬಹಳ ಚೆನ್ನಾಗಿ ಅರ್ಥಮಾಡಿಕೊಂಡಿದ್ದರೆನ್ನಬಹುದು.

ಇಂತಹ ಅಧ್ಯಯನಗಳ ಅಗತ್ಯ ಅವರಿಗೆ ಬೇಗನೆ ತಿಳಿಯುತ್ತಿ ಈ ಬುಕಾನನ್ ಎಂಥ ಇಚ್ಛಾಶಕ್ತಿಯಿದ್ದವ ಹಾಗೂ ಇಲ್ಲಿನ ಪ್ರತಿಯೊಂ ಬಗ್ಗೆಯೂ ಎಷ್ಟು ಕುತೂಹಲಿಯಾಗಿದ್ದನೆಂದು ಹೇಳಲು ಇಲ್ಲಿ ಒಂದೆರ ಉದಾಹರಣೆ ನೀಡಬಹುದು.

ಇಲ್ಲಿ ಓಡಾಡುವ ಮುನ್ನ ಬುಕಾನನ್ ಬಂಗಾಳ ಪ್ರಾಂತ ತ್ರಿಪುರ, ಚಿತ್ತಗಾಂಗ್ ಪ್ರದೇಶಗಳಲ್ಲಿ ಸಸ್ಯಶಾಸ್ತ್ರ ಕುರಿತು ಅಧ್ಯಯ ನಡೆಸಿದ್ದ. ಬ್ರಹ್ಮಪುತ್ರಾ ನದಿ ಮುಖಜ ಭೂಮಿಯಲ್ಲಿನ ನೂರಾ ಮೀನಿನ ಪ್ರಭೇದಗಳ ಬಗ್ಗೆ ಅಧ್ಯಯನ ನಡೆಸಿ ದಾಖಲಿಸಿದ್ದ. ಅವ ಇಲ್ಲಿ ತನ್ನ ಓಡಾಟ ಪ್ರಾರಂಭಿಸಿದ್ದು 1800 ಏಪ್ರಿಲ್ 23 ರಂ ಅದು ಮುಗಿದದ್ದು 1801ರ ಜುಲೈ 6ಕ್ಕೆ. ಈ ಅವಧಿಯಲ್ಲಿ ಜ್ವ ಕಣ್ಣುನೋವೆಂದು ಒಂದೆರಡು ದಿನ ಪ್ರಯಾಣ ನಿಲ್ಲಿಸಿದನೇ ಹೊರ ತನ್ನ ದೈನಂದಿನ ಬರವಣಿಗೆಯ ಕೆಲಸಕ್ಕೆ ಹಾಕಲಿಲ್ಲ.






ಬಹುಶಃ ನಿಮಗೆಲ್ಲಾ ಇದು ಗೊತ್ತೇ ಇರುತ್ತ ಶ್ರೀರಂಗಪಟ್ಟಣದ ದರಿಯಾ ದೌಲತ್ ಹಾಗ ಬೆಂಗಳೂರಿನ ಲಾಲ್‌ಬಾಗ್ ಅನ್ನು ರೂ ಅಭಿವೃದ್ಧಿ ಪಡಿಸಿದ್ದು ಹೈದರಾಲಿ ಹಾಗೂ ಟಿ . ಕರ್ನಾಟಕಕ್ಕೆ ರೇಷ್ಮೆ ಬೆಳೆ ಹಾಗೂ ನೀಲ ತಂದವನೇ ಟಿಪ್ಪು . ವಿವಿಧ ಹಣ್ಣು, ಹೂ, ತರಕ ಬೆಳೆಗಳ ಬಗ್ಗೆ ಅಪಾರ ಆಸಕ್ತಿಯಿದ್ದ ಟಿ ಯುದ್ಧಭೂಮಿಯಲ್ಲಿದ್ದಾಗಲೂ ಹೊಸ ಬೆಳೆ ಸ್ಥಿತಿಗತಿಗಳ ಬಗ್ಗೆ ಮಾಹಿತಿ ತರಿಸಿಕೊಳ್ಳುತ್ತಿ ಟಿಪ್ಪುಗೆ ಇದರ ಬಗ್ಗೆ ಗಮನ ಹರಿದದ್ದು ಬುಕಾನನ್‌ನಿಂದ ಎನ್ನುತ್ತಾರೆ!

ಅದೇನಾಯಿತೆಂದರೆ ಈ ಬುಕಾನನ್ ಹ ಸ್ಕಾಟ್‌ಲ್ಯಾಂಡಿನ ಪ್ರಖ್ಯಾತ ಸಸ್ಯವಿಜ್ಞಾನಿ ಜಾ ಹೋಪ್‌ನ ಉಪನ್ಯಾಸಗಳ ಕುರಿತ ಟಿಪ್ಪಣಿಗಳಿದ್ದ ಈ ಜಾನ್ ಹೋಪ್‌ನ ಮಗ ಚಾರ್ಲ್ಸ್ ಹೋಪ ಶಿಷ್ಯನೇ ಚಾರ್ಲ್ಸ್ ಡಾರ್ವಿನ್!

ಒಮ್ಮೆ ಬುಕಾನನ್ 1785ರಲ್ಲಿ ಹಡಗಿ ಪ್ರಯಾಣ ಹೊರಟಿದ್ದಾಗ ಜಾನ್ ಹೋಪ್‌ನ ಜಗತ್ತಿನ ಉಪನ್ಯಾಸಗಳ ಸಂಗ್ರಹವನ್ನು ಜೊತೆಗ ಅಲೆಕ್ಸಾಂಡರ್ ಬಾಸ್ವೆಲ್‌ಗೆ ಕೊಟ್ಟಿರುತ್ತಾನೆ. ನಂ ಬಾಸ್ವೆಲ್ ಎಂತದ್ದೋ ಕೆಲಸಕ್ಕಾಗಿ ದಕ್ಷಿಣ ಭಾರತಕ್ಕೆ ಬಂದಾಗ ಯು ಕ್ಷೋಭೆಯ ಗಡಿಬಿಡಿಗೆ ಸಿಕ್ಕು ಸತ್ಯಮಂಗಲ (ಆಗಿನ ಮೈಸೂ ಪ್ರಾಂತ್ಯ)ದಲ್ಲಿ ಅದನ್ನು ಕಳೆದುಕೊಳ್ಳುತ್ತಾನೆ. ಕೊನೆಗೆ ಆ ಸಸ್ಯಶಾಸ್ತ್ರೀ ಉಪನ್ಯಾಸಗಳ ಸಂಗ್ರಹ ಟಿಪ್ಪು ಕೈಸೇರುತ್ತದೆ. ಅದೂ ಟಿಪ್ಪು ನ ಆ ಕೆರಳಿಸಿ ಹೊಸ ಕೃಷಿ ಪ್ರಯೋಗಗಳಿಗೆ ಪ್ರೇರಣೆ ನೀಡುತ್ತದೆ.


ಟಿಪ್ಪು ಮಗ ಮೊಯಿನುದ್ದೀನ್

ಆಶ್ಚರ್ಯ ಅಂದರೆ ಟಿಪ್ಪು ಹತ್ಯೆಯಾದಾಗ ಬ್ರಿಟಿ ಮಿಲಿಟರಿ ಆಫೀಸರ್ ಮೇಜರ್ ಓಗ್ ಎಂಬುವ ಟಿಪ್ಪೂನ ಗ್ರಂಥಾಲಯದಲ್ಲಿ ಇದೇ ಪುಸ್ತಕ ಸಿಗುತ್ತ ಅವನದನ್ನು ಮರಳಿ ಬುಕಾನನ್‌ಗೇ ತಲುಪಿಸುತ್ತಾ

ಜೀವಜಗತ್ತಿನ ಮೂಲವನ್ನೇ ಹುಡುಕಹೊರಟ ಚಾರ್ಲ್ಸ್ ಡಾರ್ವಿನ್ ಎ ಅವನ ಗುರು ಜಾನ್‌ಹೋಪ್‌ನ ಅಧ್ಯಯನ ಸಂಗ್ರಹ ಟಿಪ್ಪು ಹತ್ತಿರ ಸಿಕ್ಕುವುದೆಂದರೇನು...!?

ನೆನೆದರೆ ಬೆರಗೆನಿಸುತ್ತದೆ.....

ಈ ಪುಸ್ತಕದಲ್ಲಿ ಕಂಡ ಟಿಪ್ಪು ಮ ಆ ಕಾಲಘಟ್ಟದ ಒಂದು ಚಿತ್ರವನ್ನು ಪ್ರಕಟಿಸಲಾಗಿದೆ.

ಶತಮಾನದ ಕಥೆ

• ಕೆ.ವಿ. ಚಂದ್ರಜ್ಯೋತಿ



ಬಿರಿದಿದ್ದು ಹರಿದು ಹೋಯಿತು
ಕೆತ್ತಿದ್ದು ಕಾಲವಶವಾಯಿತು
ಕೋಟೆ ಕುರುಹಾಗುಳಿಯಿತು
ಸಾಧನೆ ಸಾಧನೆಯನ್ನು ಹೊಡೆಯಿತು

ಗತದ ಪ್ರೇತಾತ್ಮಗಳಾದರೋ
ಹೊಸ ಶತಮಾನವನ್ನು ಆವಾಹಿಸಿವೆ
ಎಷ್ಟು ಕಣ್ಣೀರು ಸುರಿದರೂ
ಅಂತರ್ಜಲದ ಮಟ್ಟ ಏರದು
ಎಷ್ಟು ರಕ್ತ ಹರಿದರೂ
ಖಡ್ಗದ ಮೊನೆ ತುಂಡಾಗದು
ಮಾನವಹಾರವನ್ನು ಕತ್ತರಿಸುವ ಕೈ
ಜನಿವಾರವನ್ನು ತುಂಡರಿಸಲೊಲ್ಲದು
ಹೋಮದ ಹೊಗೆ ಮುಂದೆ ಕೂತವರ
ಹೊರಗಣ್ಣು ಹರಿತವಾಗೇ ಇದೆ
ಮಂತ್ರ ಉದುರಿಸುವ ಬಾಯ್ಗಳು
ಬರದಲ್ಲೂ ಬಂಗಾರ ಮೇಯುತ್ತಿವೆ
ಹಿಂದೆಲ್ಲಾ ಸಾಕಿತ್ತು ಯಜ್ಞಕ್ಕೆ ಕುದುರೆ
ಈಗ ಜಟಕಾ ಹೊಡೆಯುವವರ ಬಲಿಯೂಬೇಕು
ದೇಗುಲದ ಗೋಪುರದ ಮೇಲೆ ರಣಹದ್ದು
ಸಾಯುವವರಿಗಾಗಿ ಕಾಯುತ್ತಾ ಕುಳಿತಿದೆ
ತಾನು ಸಿಂಹಪ್ರತಾಪನೆಂದು ನಂಬಿರುವ
ನಾಯಿ ಬೊಗಳಿ ಅದನ್ನು ಕರೆಯುತ್ತಿದೆ
ಹಸಿವಿಗಿರುವ ಸಹನೆ ಹರಿ ಎಂದವರಿಗಿಲ್ಲ
ಧರ್ಮ ಕೆರಳಿ ಹಲ್ಲು ಉಗುರು ತೆರೆದು
ಬರಿ ಹೊಟ್ಟೆಗಳನ್ನು ಬಗೆಯುತ್ತದೆ
ತೇಗಿನ ಘಂಟಾನಾದದ ಮುಂದೆ ಹಸಿದ
ಕರುಳು ಗುಬ್ಬಿಯಂತೆ ಚಿಚಪಚವೆಂದಿದೆ
ಬ್ರೆಡ್‌ಗೆ ಗತಿಯಿಲ್ಲವೆ? ಕೇಕ್ ತಿನ್ನಿ
ಎಂದಳಂತೆ ಯಾವಳೋ ರಾಣಿ
ನೀರಿಗೆ ಕೊರತೆಯೇ? ರಕ್ತ ಕುಡಿಯಿರಿ
ಇದು ಧರ್ಮಾಂಧರ ವಾಣಿ

...ಡೂರಪ್ಪೀಗ ಹಗ್ಗ ಮೂಗುದಾರಿಲ್ದ ಸಿದ್ದಗಂಗೆ ಬಸವಿದ್ದಂಗೆ!

ನೀರಸವಾಗಿ ಮಾರ್ನವಮಿ ಪಕ್ಷ ಬಂದು ಹೋಗಿತ್ತು. ...ಕ್ಷಕ್ಕಾಗಿ ಒಂದೊಂದು ಕುರಿ ಕುಯ್ಯುತ್ತಿದ್ದವರೆಲ್ಲಾ ಪಾಲು ...ದುಕೊಂಡಿದ್ದರು. ಜುಮ್ಮಿ ರಾಜಕಾರಣಿಯಾದ್ದರಿಂದ ...ದು ಟಗರು ಕುಯ್ದು ಅವಳ ಫಾಲೋಯರ್‌ಗಳು ಮತ್ತು ...ಬಂಧಿಕರಿಗೆ ಹಿಕ್ಕಿ ಮರುದಿನ ಮಾಂಸ ಸಾಲದೆ ಬಂದಿದ್ದಕ್ಕೆ ...ಂಟು ಕೇಜಿ ಬಾಯ್ಲರ್ ಕೋಳಿ ಮಾಂಸ ತರಿಸಿ ಹಾಕಿ, ...ತೂ ಈ ಹಾಳು ಹಬ್ಬಗಳು ಯಾಕಾದರೂ ಬರುತ್ತವ್ಪೊ

...ಯ ಉ ಸೀ ಮೆ
ಕಪ್ಪೆಪುರಾಣ
ಬಿ. ಚಂದ್ರೇಗೌಡ

...ವಂತಾಗಿ ರೋಸಿದವಳಂತೆ,

"ಇದ್ಯಾರು ಮಾಡಿದ್ರೊ ಮಾವ ಈ ಹಾಳು ಪಕ್ಷವ. ...ಗಂತೂ ಸಾಕಾಯ್ತು" ಎಂದಳು.

"ನಿನಿಗಷ್ಟೇ ಅಲ್ಲ ಕಣೆ ಇಡೀ ಊರಿಗೇ ಸಾಕಾಗ್ಯದೆ. ...ಕೆ ಅಂದ್ರೆ ಊರು ಸುತ್ತ ವಲ ನೋಡಿದ್ರೆ ಬೆಂಕಿಕಡ್ಡಿ ...ಂಗಾಗ್ಯದೆ."

"ಹಿಂಗಾದ್ರೆ ದೇಸ ಬದುಕ್ಯತೇನ್ಲ?"

"ಈ ವರ್ಸ ಅದ್ಯಂಗೆ ಕಾಲ ಮಾಡದೋ ಏನೋ ...ೀಗತ್ತಗೆ" ಎಂದ ಸೀರ.

"ಈ ಸುತ್ತಲ ಯಾವ್ರೂರ ಕ್ಯರೆಲೂ ನೀರಿಲವಂತೆ ಕಂಢ್ಯ" ...ದ ಕಾಳಮಾವ.

"ನನಿಗಂತೂ ದಿಕ್ಕೇ ತೋಚತಾಯಿಲ್ಲ ಹೋಗತ್ತಗೆ" ...ದ ಉಗ್ರಿ.

"ಜನಗಳು ನಿಚ್ಚಯಿಸಿಗಂಡಂಗವ್ರುವ್ರೆ."

"ಊ ಕಣಮಾವ ಕೆಲುವ್ರುರಂತೂ ಪಕ್ಷ ಮಾಡಿ ಪಾರ್ಟಿ ...ಡಿದ್ದ ನೋಡಿದ್ರೆ ಅವ್ರುರೇನು ನ್ಯಲ ನಚ್ಚದಂಗೆ ...ಯಿಲ್ಲ" ಎಂದ ಉಗ್ರಿ.

"ವಸಿ ದಿನೋದ ಮ್ಯಾಲೆ ಗೊತ್ತಾಯ್ತದಿರು" ಎಂದು ಮಾವ ಒಳಗಣ್ಣಾದ.

"ನೀನೇನು ಒಂದು ಕುರಿ ಕೂದಿದ್ದೇನೊ ಸೀರ ಮಾವ?"

"ಊ ಕಂಢ್ಯ. ನನ್ನೆಡತಿ ತಮ್ಮ ಚಿಕ್ಕುಟ್ಟಣ್ಣ ತಗರಿಡಕಂಡು ...ದಿದ್ದ. ಬರಾಬರಿ ಹದುನೈದು ಕೆ.ಜಿ. ಬತ್ತು. ಮೂರು ...ಹಂಚಿಗಂಡೊ. ತಲಿಕಾಲನೂ ಚರ್ಮನೂ ಮಾರಿಬುಟ್ಟಿ...ಗ್ಗಿ" ಎಂದ ಸೀರ.

"ನೋಡು ಒಂದೊಂದು ಕುಯ್ತಿದ್ದೊರ್ರ್ಯಲ್ಲಾ ಪಾಲು ...ಂಗಾದ್ರಿ."

"ಇನ್ನೇನು ಮಾಡದ್ಲೇ. ಬಾಡತರನಾ ಅಂದ್ರೆ ...ದ್ದುರುಪಾಯಿ ಕೆ.ಜಿ. ಯಲ್ಲ ತಿನ್ನೊರೆ ಆಗ್ಯವ್ರುರೆ, ಯಾವನೂ ...ದಿಲ್ಲ."

"ಆಡು ಕುರಿ ಸಾಕಿದ್ರೆ ದಿನಾ ಮೇಸಕ್ಕೋಗಬೇಕಾಯ್ತದೆ. ...ಲ್ಲ ಚಂಗಲು ಬಿದ್ದವ್ರುರೆ. ಎಷ್ಟುರಮಟ್ಟಿಗೆ ಅಂದ್ರೆ ದುಡ್ಡು ಕೊಟ್ರೆ ಏನಾರ ಸಿಗತದೆ ಅನ್ನಂಗಾಗ್ಯವ್ರುರೆ. ಅದ್ಕೆ ಮುಂದೆ ಕೆ.ಜಿ. ಬಾಡು ನಾನೂರುಪಾಯಾದ್ರು ಆಶ್ಚರ್ಯಪಡಬ್ಯಾಡ" ಎಂದ ಉಗ್ರಿ.

"ಮಾಂಸದ ಜೊತೆಗೆ ನಾನು ವಡೆಕಜ್ಜಾಯನೂ ಮಾಡಿದ್ದೆ ಕಂಢ್ಯ" ಎಂದಳು ಜುಮ್ಮಿ.

"ನಮ್ಮನೇಲೂ ನಮ್ಮವ್ವ ಮಾಡಿದ್ಲು ಕಣೆ. ಮದ್ಲಿಗೆ ಸೀ ಊಟನೆ ಅಲವೆ ಮಾಡತಿದುದ್ದು. ಯಣ್ಣೆ ರೇಟು, ಬ್ಯಾಳೆ ರೇಟು ಏರಿದ ಮ್ಯಾಲೆ ಯಲ್ಲಾ ಮಾಂಸದ ಕಡಿಗೆ ತಿರಿಕಂಡ್ರು. ಆದ್ರು ಹಿರಿಯರ್ರಿಗೆ ಯಡೆ ಹಿಕ್ಕಬೇಕಾದ್ರೆ ವಡೆ ಕಜ್ಜಾಯನೂ ಮಾಡ್ತರೆ. ಅವ್ರುರೇನು ಇಂತದ್ನೆ ಮಾಡಿ ಅಂತ ಕೇಳಿದ್ರೆ."

"ಕೇಳದೆಯಿದ್ರು ಮಾಡದನ್ನಲ್ಲ ಮಾಡ್ಬೇಕು ಕಂಢ್ಯ."

"ನೀನು ಸುಲಬಾಗೇಳ್ತಿ ಕಣಮಾವ. ನಮ್ಮವ್ವ ಮೂರು ಮೂರು ಸೇರಲ್ಲಿ ವಡೆ, ಕಜ್ಜಾಯ, ಚಕ್ಕಳಿ, ಚಿಕ್ಕನುಂಡೆ ಮಾಡ್ಯವ್ಳೆ. ಆದೇಟಾಯ್ತು, ಅದಕ್ಕಲ್ಲ ಯಣ್ಣೆ ಎಷ್ಟಾಯ್ತು ಗೊತ್ತೆ? ಹೋಗೋ ನಂಟ್ರುಗ್ಯಲ್ಲ ಬುತ್ತಿ ಕಟ್ಟಿಕೊಡ್ತಳೆ. ನಮಿಗಂತೂ ಇವ್ರುಳಿಂದ ಸಾಕಾಗೋಗ್ಯದೆ."

"ಕಾಲಾದಿಂದ ಕೊಟ್ಟ ಕೈಯಲವೇನ್ಲ."

"ಕೊಟ್ಟಕೈಯಿ ಸರಿಕಣಮಾವ. ಗೊಟ್ಟಕಾಲ್ದಲ್ಲೂ ದಾರಾಳ ಮಾಡಕ್ಕೊದ್ರೆ ನಮ್ಮ ಕತೆ ಹೇಳು."

"ಯಂಗೊ ಅವ್ರುಳಿರಗಂಟ ಮಾಡ್ಲಿ ಬುಡ್ಯ. ಆಮ್ಯಾಲೆ ನೀನು ಮಾಡಕ್ಕಾದತೆ."

"ನಾನು ಮಾಡದಿರ್ಲಿ ಕಣೆ, ನಂಟ್ರು ಹೋಗುವಾಗ ಪ್ಲಾಸ್ಟಿಕ್ ಚೀಲ್ದವಳಿಕೆ ವಡೆ ಕಜ್ಜಾಯ ತುಂಬ ಅವ್ರುಳ ಕೊಡದ ನೋಡಿದ್ರೆ ಮ್ಯೆಯುರಿತದೆ. ಅಂಗೆ ಎಡೂರಪ್ಪ ಸರಕಾರದಣವ ಮಠಗಳಿಗೆ ಕೊಟ್ಟಂಗೆ ಕೊಡ್ತಳೆ. ದುಡದಿದ್ರೆ ಗೊತ್ತಾಗದು."

"ಎಡೂರಪ್ಪನಿಗೂ ದುಡುಮೆ ಗೊತ್ತಿದ್ರೆ ಅಷ್ಟು ಧಾರಾಳವಾಗಿ ಕೊಡತಿರಲಿಲ್ಲ ಕಣೊ. ಬೂಕನಕ್ಯರಿಂದ ಬರಿಗ್ಯೆಲೋದ ಹಾಳುಮನೆ ಆಸ್ತಿ ಸಿಕ್ರು ದಾರಾಳಿಯಾದ. ಈಗ್ಲು ಅನಾಯಾಸವಾಗಿ ಅಪ್ಪ ಮಕ್ಕಳು ಅಧಿಕಾರ ತಂದುಕೊಟ್ರು. ಅದ್ಕೆ ಮಠಗಳಿಗೆ ಹಿಡದಕ್ದ ಹಿಡದಂಗೇ ಕೊಟ್ಟ ಆತ್ತಗೆ, ಅತ್ತೆ ಆಸ್ತಿಯ ಅಳಿಯ ದಾನ ಮಾಡದಂಗೆ" ಎಂದು ವಾಟಿಸ್ಸೆ ಬಂದ.

"ಸಿರಿ ಬದ ಕಾಲಕ್ಕೆ ಕರೆದು ದಾನವ ಮಾಡು ಅಂತ ವಚನ ಹೇಳಲಿವೇನೊ. ಅದೇ ತರ ಎಡೂರಪ್ಪ ನಡಂತ್ರದಲ್ಲಿ ಬಂದ ಸಿರಿಗೆ ಗರವಡಿಸಿಗಂಡು ತನಿಗೆ ಬೇಕಾದೋರಿಗ್ಯಲ್ಲ ಕೊಡ್ತನೆ."


"ಕೊಡದ್ರಲ್ಲೂ ತಗಳದ್ರಲ್ಲೂ ಭಿನ್ನಭೇದಯಿಲ್ಲ ಕಣೊ ಅವ್ರುನಿಗೆ. ಅದ್ಕೆ ನೋಡು ಕೋರ್ಟಿಗೂ ಅಲಿತಾ ಅವ್ರುನೆ. ಇವ್ಯಲ್ಲ ಇದ್ದವೆಯಾ ಅನ್ನಂಗೆ ಅಲ್ಲೂ ಕೈಬೀಸಿಗಂಡು ನಗ್ತನೆ."

"ಕೊಪ್ಪಳದ ಚುನಾವಣೆಗೆ ಭಾರಿ ದುಡ್ಡು ಕೊಟ್ಟನಂತೆ ಕಣೊ. ಶಿಕಾರಿಪುರದ ತ್ವಾಟದ ಮನೆಲಿ ಮಡಗಿದ್ದ ಹಣವ ತಗಂಡೋಗಿ ಕೊಪ್ಪಳದಲ್ಲಿ ಸುರುದನಂತೆ. ಅದಕೆ ನೋಡು ಅಲ್ಲಿ ಕ್ಯಾಂಡೇಟು ಗೆದ್ದಿರದು."

"ಮಿಸ್ಟರ್ ಉರಿ, ಯಂಗಿದ್ರೂ ನಮ್ಮ ತಾಲೂಕಿಗೆ ಬರಗಾಲ ಬಂದದೆ. ಯಮ್ಮೆಲ್ಲೆ ಹಿಡಕಂಡು ರಾಜಿನಾಮೆ ಕೊಡಿಸಿ, ಆಪರೇಷನ್ ಕಮಲ ಮಾಡಿಸಿ, ತಿರಗ ಯಲಕ್ಷನ್ ಬರಂಗೆ ಮಾಡಿದ್ರೆ ನಾವ್ರೂ ಎಡೂರಪ್ಪನ ದುಡ್ಡ ಯಳಿಬವ್ರುದು ಕಣೊ. ಯಂಗದೆ ಐಡಿಯ?"

"ಐಡಿಯಾ ಚನ್ನಾಗೇ ಅದೆ, ಯಮ್ಮೆಲ್ಲೆ ಒಪ್ಪಬೇಕಲ್ಲೊ. ಶಿವರಾಮೇಗೌಡ ಅಥವಾ ಚಲುವರಾಯಸ್ವಾಮಿ ಆಗಿದ್ರೆ ಇಷ್ಟೊತ್ತಿಗೆ ರಾಜಿನಾಮೆ ಕೊಡಿಸಿ ನಾವು ಒಂದು ಜಾತ್ರೆ ಮಾಡಬವ್ರುದಿತ್ತು ನೀನೇಳಿದಂಗೆ."

"ಶಿವರಾಮೇಗೌಡ ಇದ್ದಿದ್ರೆ ಈಟೊತ್ತಿಗೆ ನ್ಯಡದೋಗದು. ಚಲುವರಾಯಸ್ವಾಮಿ ಅಂಥೋನಲ್ಲ ಕಂಢ್ಯ" ಎಂದಳು ಜುಮ್ಮಿ.



"ಅವ್ರುನು ಅಶೋಕನ ಜ್ವತೆ ಸೇರಿಕಂಡು ಆಟ ಆಡಕ್ಕೆ ವಂಟಿದ್ಕೆ ಅಲವೇನೆ ದ್ಯಾವೇಗೌಡ, ಅವ್ರುನ ಮಕ್ಕಳು ಸೇರಿಕಂಡು ಸೋಲಿಸಿದ್ದು."

"ದ್ಯಾವೇಗೌಡನ ಮಗ್ಯಾರೊ ಭಾರಿ ದುಡ್ಡು ಮಾಡಿದ್ದನಂತಲ್ಲಾ ನಿಜವೆ?" ಎಂದ ಸೀರ.

"ನಿಜ ಚಿಗಪ್ಪ, ದ್ಯಾವೇಗೌಡನ ಮಕ್ಕಳಾದ ದುಷ್ಟ ಚತುಷ್ಟೆಯರ ಪ್ಯೆಕಿ ಬಾಲಕೃಷ್ಣೇಗೌಡ ಅನ್ನೊನು ಕೆಎಎಸ್ ಪಾಸ್ ಮಾಡಿ ಅಧಿಕಾರಿಯಾಗಿದ್ದ. ಎ.ಸಿ.ಯಾಗಿದ್ದ ಗೊತ್ತೆ. ಅವ್ರುನೊಂತರ ಗುರುಮೆ ತ್ವಾಡಿದ್ದಂಗೆ. ಗುರುಮೆತ್ವಾಡ (ಹೊಲದ ಕಪ್ಪಿಲಿ) ಏನು ಮಾಡ್ತದೆ ಅಂದ್ರೆ ಒಂದು ಬಿಲ ಕೊರಿತದೆ. ಆ ಬಿಲದಲ್ಲಿ ಹಲವಾರು ಕೋಣೆ ಪ್ರಕಾರ ಯಲ್ಲಾ ಇರತದೆ. ರಾಗಿ ತೆನೆತಗಂಡೋಗಿ ಅಲ್ಯಲ್ಲ ತುಂಬಿಕಡದೆ. ಭಾಳ ದುರಾಸೆ ನನ್ನ ಮಗಂದದು. ಕೆಲವ್ರು ವಡ್ಡರು ಆ ಬಿಲ ಹಗದು ತ್ಯನೆ ತಗಂಡೋಯ್ತರೆ. ಈಗ ಯಾವನೊ ಲೋಕಾಯುಕ್ತಕ್ಕೆ ಎಟ್ಟಿರೊ ಅರ್ಜಿ ನೋಡಿದ್ರೆ, ಲೋಕಾಯುಕ್ತರು ಬಾಲಕೃಷ್ಣೇಗೌಡನ ಪುತಾರಕಿ ಕ್ಯೆಯಾಕ್ತರೆ ಅನ್ನೊ ಅನುಮಾನ ನನಿಗೆ."

"ಅವ್ರುನ್ಯಂಗೆ ಆಸ್ತಿ ಮಾಡಿದಾ?"

"ಅವ್ರುನೇನು ಕಷ್ಟಪಡಕ್ಕೆ ಹೋಗಿಲ್ಲ ಚಿಗಪ್ಪ ಅವ್ರುನ ತಮ್ಮ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ, ಆಗ ಬಾಲಕೃಷ್ಣ ಸರ್ಕಾರದ ಫ್ಯೆಲ್‌ಗಳನ್ಯಲ್ಲ ನೋಡಿ ಟಿಪ್ಪಣಿ ಬರಿತಿದ್ದ, ಕುಮಾರಸ್ವಾಮಿ ಹೋಗಿ ಸಯಿನು ಮಾಡತಿದ್ದನಂತೆ. ಆದ್ರಿಂದ ಬೆಂಗಳೂರಿಂದ ಮೈಸೂರು ಗಂಟ ಖಾಲಿ ಜಾಗ ಎಲ್ಲೆಲ್ಯದೆ ಅಂತ ಬಾಲಕೃಷ್ಣ ಪತ್ತೆಹಚ್ಚಿ ಹೆಡತಿ ಹೆಸರಿಗೆ, ಅವಳ ಸಂಮಂಧಿಕರ ಹೆಸರಿಗೆ ಬರಿಸಿಬುಟ್ಟವ್ರುನೆ. ಎಷ್ಟೇ ಆಗ್ಲಿ ಎ.ಸಿ. ಅಲವೆ ರೆವಿನ್ಯೂ ಇಲಾಖೆ ಇಂಚೆಂಚು ಗೊತ್ತು ಅವ್ರುನಿಗೆ."

"ಓಹೊಹೊ. ಅಂಗರೆ ಸರಿಯಾಗೆ ಮಾಡ್ಯವ್ರುನೆ ಬುಡು."

"ಇನ್ನು ಹಣಕಾಸಿನ ವಿಷಯಕ್ಕೆ ಬಂದ್ರೆ ಕುಮಾರಣ್ಣ ಗಣಿ ಕಂಪನಿಗೆ ಯರಡೇ ಗಂಟೆ ಅವ್ರುದಿಲಿ ಲೈಸೆನ್ಸ ಕೊಟ್ಟನೋಡು. ಅದರ ಡೀಲಲ್ಲಿ ಇದೇ ಬಾಲಕೃಷ್ಣೇಗೌಡನೂ ಇದ್ದನಂತೆ. ಇದನ್ಯಲ್ಲ ನೋಡಿಕಂಡಿದ್ದೊನು ಈಗ ಬಾಲಕೃಷ್ಣೇಗೌಡನತ್ರ ಸಂಬಳ ಬುಟ್ಟು ಇಸ್ಟಾಸ್ತಿ ಇರಬೇಕಾಗಿತ್ತು, ಆದ್ರೆ ಯಪ್ಪತ್ತೇಳು ಕೋಟಿ ಯಂಗೆ ಬತ್ತು ಅಂತ ಅರ್ಜಿ ಎಟ್ಟವ್ರುನೆ."

"ಅಂಗರೆ ಎಡೂರಪ್ಪನಿಗೆ ಖುಷಿಯಾಗಿರಬೇಕು."

"ಆಗದೆ ಯಿರತದೇನೊ. ಆ ಕಡೆ ಕೊಪ್ಪಳದ ಚುನಾವಣೆ ಗೆದ್ದವ್ರುನೆ, ಈ ಕಡೆ ದ್ಯಾವೇಗೌಡ ಫ್ಯಾಮಿಲಿನೂ ...ನ್ನ ತರದ್ದೆ ಕ್ಯಲಸ ಮಾಡಿ ಕೋರ್ಟಿಗೆ ಬರಂಗಾಗ್ಯದೆ. ಸದ್ದಿಕೆ ಎಡೂರಪ್ಪನೇ ಲಕ್ಕಿಫೆಲೋ."

"ಎಡೂರಪ್ಪನ ಕ್ಯಾಂಡೇಟ್ ಗೆದ್ದಿದ್ದೇ ಸರಿ ಕಣೊ."

"ಅದ್ಯಂಗೆ ಸರಿಯಂತಿಯೋ?"


"ಇನ್ನಮ್ಯಾಲೆ ರಾಜಕಾರಣ ಇಂಟರೆಸ್ಟಾಗಿರತದೆ. ಕಾಂಗ್ರೆ ದಳದವ್ರೂ ಚುರು ಕಾಯ್ತವೆ. ಎಡೂರ ನಾನೇ ಮುಖ್ಯಮಂತ್ರಿ, ಸದಾನಂದ ನನ್ನ ಡ್ಯೂಪು ಅಂತ ತಿರಗ್ತನೆ. ಅಂತೂ ಈಗ ಎಡೂರಪ್ಪ ಹಗ್ಗ ಮೂಗುದಾರ ಹರಕಂಡಿರೊ ಸಿದ್ದಗಂಗೆ ಮಠದ ಬಸವ. ಅವ್ರುನ್ನ ಹದ್ದುಬಸ್ತಲ್ಲಿಡಕ್ಕೆ ಸದಾನಂದ, ಈಶ್ವರ ಯಾರಕ್ಯಲೂ ಆಗದಿಲ್ಲ. ನೋಡು ನಾಳೆಯಿಂದ ಯಂಗಿರತದೆ ರಾಜಕಾರಣ!"

❖

ಪ್ರತ್ಯೇಕ ಲೋಕ

...ಕೆ ಪುಸ್ತಕವನ್ನು ನಾನು ಆಗಾಗ ಓದುತ್ತಿರುತ್ತೇನೆ. ಐರಿಷ್ ಕತೆಗಳ ಈ ಪುಸ್ತಕದ ಹೆಸರು 'ಸ್ಟೇಟ್ ಆಫ್ ದಿ ಆರ್ಟ್.' ...ಡ್ ಮಾರ್ಕಸ್ ಸಂಪಾದಿಸಿದ ಈ ಪುಸ್ತಕದ ಒಂದೆರಡು ಕತೆಗಳ ಬಗ್ಗೆ ನಾನು ಆಗಲೇ ನಿಮಗೆ ಹೇಳಿದ್ದೇನೆ. ಮೊನ್ನೆ ...ವಿ ಲೇಲ್ಯಾಂಡ್ ಎಂಬ ಹೆಣ್ಣುಮಗಳು ಬರೆದ **Windfalls** ಎಂಬ ಕತೆ ಓದಿ ಖುಷಿಯಿಂದ ಸುಮ್ಮನೇ ಕೂತೆ. ಈ ...ದು ಬಗ್ಗೆ ಎರಡು ಮಾತು ಹೇಳುವ ಮುನ್ನ ನನಗೆ ಎಂದೋ ಅನ್ನಿಸಿ ಆಗಾಗ ಮನಸ್ಸಿನಲ್ಲಿ ಸುಳಿವ ...ದು ವಿಚಾರವನ್ನು ಇಲ್ಲಿ ಹೇಳಬೇಕು. ಕತೆ, ಪದ್ಯ ಬರೆಯುವುದು, ಚಿತ್ರ ಬರೆಯುವುದು ಒಂದು ...ತ್ಸ ಶಕ್ತಿಯದ್ಯೋತಕ. ಒಮ್ಮೆ ರಷ್ಯಾದ ಒಂಭತ್ತು ವರ್ಷದ ಹುಡುಗಿಯೊಬ್ಬಳು ಎಷ್ಟು ಚೆನ್ನಾಗಿ ...ರಚಿಸುತ್ತಿದ್ದಳೆಂದರೆ, ರಷ್ಯಾದ ಅನುಭವಿ ಕವಿಗಳು ಅವನ್ನು ಓದಿ ದಂಗಾದರು. ಒಂಭತ್ತು ವರ್ಷದ ...ಡುಗಿಯಷ್ಟು ಚೆನ್ನಾಗಿ ತಾವು ಬರೆಯಲಾಗದಿದ್ದರೆ? ಸಂಗೀತದಲ್ಲೂ ಹಾಗೇ. ಚಿಕ್ಕಹುಡುಗರು ...ತ ಶಕ್ತಿ ತೋರುತ್ತಾರೆ. ಕೀಟ್ಸ್ ತನ್ನ ಇಪ್ಪತ್ತೇ ವಯಸ್ಸಿನಲ್ಲಿ ಅರ್ಥಪೂರ್ಣ ಕವನಗಳನ್ನು ರಚಿಸಿದ. ...ಸ್ಸಿ ಎಳೆಯರ ಕಾವು, ತೀವ್ರತೆ, ಚೆಂದ ತೋರುತ್ತವೆ. ಇದು ಕಾವ್ಯಕ್ಕೆ ಅತ್ಯಗತ್ಯ. ಕತೆಗೂ ಅಷ್ಟೆ. ...ಲ್ಲಿ ಕಾವು, ಬೆಚ್ಚನೆಯ ಪ್ರೀತಿ ಇಲ್ಲದಿದ್ದರೆ ನಿಮ್ಮ ಕತೆ ಎಂಥ ಅನುಭವ ಹೇಳಿದರೂ ಒಳ್ಳೆಯ ...ವಾಗುವುದಿಲ್ಲ, ಹಾಗೆಯೇ ಇನ್ನೊಂದು ರೀತಿಯಲ್ಲಿ ಇದನ್ನು ನೋಡಿ. ಒಬ್ಬಳು ಚಿಕ್ಕ ಹುಡುಗಿ ...ರದ ನೋವು, ಪರಕೀಯತೆ, ಬೇಸರದ ಬಗ್ಗೆ ಬರೆಯಬಲ್ಲಳೆ? ಮನುಷ್ಯನ ಸಾಮಾಜಿಕ, ಲೈಂಗಿಕ ...ಂಧಗಳು ಮತ್ತು ವೈಷಮ್ಯಗಳ ಬಗ್ಗೆ ಬರೆಯಬಲ್ಲಳೆ? ಹೀಗೆ ಕೇಳಿದಾಗ ಒಂದು ಉತ್ತರ ...ಳೆಯುತ್ತದೆ. 'ಈಡಿಪಸ್' ನಾಟಕದ ಅರ್ಥವಿರುವುದು ಅಲ್ಲಿಯ ಸಂಘರ್ಷದಲ್ಲಿ, ಮಹಾನ್ ...ಮುಖಿಯಲ್ಲಿ; ಮನುಷ್ಯನ ವಿವಿಧ ಬಗೆಯ ಅಂಧತ್ವವನ್ನು ಮಂಡಿಸುವುದರಲ್ಲಿ; ವ್ಯಕ್ತಿಯೊಬ್ಬ ...ಜಕ್ಕೆ ಹೊಣೆಯಾಗಿರುವುದರ ವಿವಿಧ ಎಳೆಗಳಲ್ಲಿ. ಇದನ್ನು ಪುಟ್ಟ ಕವಯಿತ್ರಿ ಹೇಳಲಾರಳು; ...ಯು ಕತೆಗಾರ ಗ್ರಹಿಸಲಾರ. ಆದ್ದರಿಂದಲೇ ಟಾಲ್‌ಸ್ಟಾಯ್‌ನ ಮಹಾನ್ ಕತೆಗಳಲ್ಲಿ ಮಹತ್ವದ ... ದೊರೆಯುತ್ತದೆ; ಈ ಬದುಕನ್ನು ಕೈಯಲ್ಲಿಟ್ಟುಕೊಂಡು ಧ್ಯಾನಿಸಿದ ಅದ್ಭುತ ಪವಾಡ ...ಳೆಯುತ್ತದೆ.

...ಈಗ ನಾನು ಓದಿದ ಪುಟ್ಟ ಕತೆ **Windfalls** ಎಂಬುದರಲ್ಲಿ ಒಬ್ಬಳು ತಾಯಿ ತನ್ನ ತೋಟದಲ್ಲಿ ಗಾಳಿಗೆ ಬಿದ್ದ ಸೇಬುಗಳನ್ನು ಆರಿಸಿ ಬುಟ್ಟಿಗೆ ತುಂಬುತ್ತಿದ್ದಾಳೆ. ಅರೆಗತ್ತಲಿನ ಮಾಳಿಗೆಯಲ್ಲಿ ತನ್ನ ಪುಟ್ಟ ಮಗಳೊಂದಿಗೆ ಸೇಬುಗಳನ್ನು ಆರಿಸುತ್ತಿದ್ದಾಗ ಮಗಳು ಅವ್ವನಿಗೆ, 'ಅವ್ವ, ನಾನು ನನ್ನ ಅಣ್ಣನೊಂದಿಗೆ ಇವತ್ತಿನಿಂದ ಜಗಳ ಆಡೋಲ್ಲ, ತಂಟೆ ಮಾಡೋಲ್ಲ' ಅನ್ನುತ್ತಾಳೆ.



'ಸರಿ' ಅನ್ನುತ್ತಾಳೆ ತಾಯಿ.

ಪುಟ್ಟ ಹುಡುಗಿ ತನ್ನ ಸಂಕೋಚದ ಮಾತು ಮುಂದುವರಿಸುತ್ತಾಳೆ:

'ನಾನು ಅಣ್ಣ ಡೆಸ್ ಜೊತೆಗೆ ಬಿಸ್ಕತ್ ತಿಂತೀನಿ. ಜಗಳ ಕಾಯೋಲ್ಲ. ಈಗಲಾದರೂ ನೀನು-ಅಪ್ಪ ನಿಮ್ಮ ಜಗಳ ಮರೆತು.....'


'ನಾವು ಜಗಳ ಆಡಿಲ್ಲ.'

'ಅಲ್ಲ, ಮುಂಚಿನ ಹಾಗೇ ಇರ್ತೀರಿ ಅಲ್ವ?"

ಅಮ್ಮ ಯೋಚಿಸುತ್ತಾಳೆ.

'ಅಲ್ಲ ಅಮ್ಮ ಅಪ್ಪ ತುಂಬ ಒಳ್ಳೇರು."

'ಸರಿ ಲೊಟ್ಟೀ.... ನಿನಗೆ ಗೊತ್ತಾಗೋಲ್ಲ. ಇದೆಲ್ಲ ಗೊತ್ತಾಗೋಲ್ಲ, ಸುಮ್ಮನಿರು.'



ಅವ್ವನ ಜಗಳ ತೀರಾ ಮುಂದೆ ಹೋಗಿರುವುದು ಪುಟ್ಟ ಲೊಟ್ಟಿಗೆ ಗೊತ್ತಿಲ್ಲ. ಅವ್ವ-ಅಪ್ಪನ ಮರುಸ್ನೇಹ ಸಾಧ್ಯವಿಲ್ಲ, ಯಾಕೆಂದು ಆವಳಿಗೆ ಬಗೆಹರಿಯುವುದಿಲ್ಲ.

ಆಳವಾದ ನೋವಿನಲ್ಲಿ ಮುಳುಗುತ್ತಾಳೆ ಲೊಟ್ಟಿ.


ಅವ್ವನೂ ಅಷ್ಟೆ. ತನ್ನ ಜಗತ್ತು ಮತ್ತು ಗಂಡನ ಜಗತ್ತು ಬೇರೆ ಬೇರೆಯಾಗಿವೆ. ಕಾರಣವೇ ಇಲ್ಲದೆ ಮನಸ್ತಾಪವಾಗಿದೆ. ಇಬ್ಬರೂ ದೂರವಾಗಿದ್ದಾರೆ.

ಪುಟ್ಟ ಮಕ್ಕಳಾದ ಲೊಟ್ಟಿ ಮತ್ತು ಡೆಸ್ ಗಾಢ ನಿದ್ರೆಯಲ್ಲಿ ಬೆಂದುಹೋಗಿದ್ದಾರೆ.

ಬರೀ ನಾಲ್ಕು ಪುಟಗಳ ಈ ಕತೆಯನ್ನು ಮತ್ತೆಮತ್ತೆ ಓದಿದೆ. ಲೋಟಿ ಅಥವಾ ಡೆಸ್ ಈ ಕತೆಯನ್ನು ಬರೆಯಲು ಸಾಧ್ಯವಿಲ್ಲ, ಅವ್ವ ರೂತ್ ಮಾತ್ರ ಇದನ್ನು ಧರಿಸಬಲ್ಲಳು. ಈ ಕತೆಯನ್ನು ಗರ್ಭದಲ್ಲಿ ಇಟ್ಟುಕೊಳ್ಳಬಲ್ಲಳು. ಹಾಗೆಯೇ ನಮಗೆ ಹೇಳಬಲ್ಲಳು.

-ನವೆಂಬರ್ 17, 1995

ದೇವರ ನ್ಯಾಯ!



ಎಚ್.ಎಲ್. ಕೇಶವಮೂರ್ತಿ

ಅಣಕ

ದೇವರು ಇದ್ದಾನೆಯೋ? ಇಲ್ಲವ್ರೋ? ಇದ್ದರೆ ಅವನು ನ್ಯಾಯದ ಪರವ್ರೋ? ಅನ್ಯಾಯದ ಪರವ್ರೋ? ಇಂತಹ ಪ್ರಶ್ನೆಗಳು ಕಾಲದಿಂದಲೂ ಇದ್ದದ್ದೆ. ಯಾಕೆಂದರೆ ದೇಶಕೊಳ್ಳೆ ಹೊಡೆಯುವವರೂ ಭಯಭಕ್ತಿಯಿಂದ ಅವನನ್ನು ಪೂಜಿಸುತ್ತಾರೆ. ಕಾಣಿಕೆಯನ್ನು ಘನವಾಗಿ ಅರ್ಪಿಸುತ್ತಾರೆ. ಹುಲುಮಾನವರ ತರಹವೇ ಆ ಭಗವಂತನೂ ಇಂತಹ ಆಮಿಷಗಳಿಗೆ ಬಲಿಯಾಗಿ ಅವರ ಅಪರಾಧಗಳಿಗೆ ಬೆಂಬಲವಾಗಿ ನಿಂತರೂ ನಿಲ್ಲಬಹುದು ಎನ್ನುವ ಅನುಮಾನ ಬರುವ್ರದು ಸಹಜ. ಆದರೆ ಇತ್ತೀಚಿನ ಕೆಲವು ಬೆಳವಣಿಗೆಗಳು ದೇವರು ಯಾವಾಗಲೂ ನ್ಯಾಯದ ಪರ ಎಂಬುದಕ್ಕೆ ಸಾಕ್ಷಿಯಾಗಿರುವಂತಿವೆ.

ದೇವೇಗೌಡರ ಕುಟುಂಬ, ಯಡ್ಯೂರಪ್ಪನವರ ಕುಟುಂಬ ಪೂಜೆ ಮಾಡದ ದೇವರೇ ಇಲ್ಲ ಎನ್ನಬಹುದು. ಕಂಡಕಂಡ ದೇವರಿಗೆಲ್ಲ ಅಡ್ಡಬೀಳೋ ದೈವ ಭೀರುಗಳು ಅವರು. ಹೋಮಹವನ, ಪೂಜೆಪುನಸ್ಕಾರಗಳಿಂದ ಎಲ್ಲ ದೇವರುಗಳನ್ನು ತೃಪ್ತಿಪಡಿಸಲಾಗಿದೆ ಎಂದೇ ನಂಬಿರುವವರು. ಜನಾರ್ದನ ರೆಡ್ಡಿ ಮತ್ತು ಸಹೋದರರಂತೂ ತಿರುಪತಿ ತಿಮ್ಮಪ್ಪನ ಸೇವಕರು. ಏನು ಮಾಡಿದರೂ ಆ ದಯಾಮಯನ ಹೆಸರು ಹೇಳೇ ಮಾಡುವವರು. ಅಕ್ರಮ ಗಣಿಗಾರಿಕೇನೂ ಅಷ್ಟೇ. ಅವನ ಹೆಸರು ಹೇಳೇ ಮಾಡುತ್ತಿದ್ದರು. ತಿರುಪತಿ ತಿಮ್ಮಪ್ಪನಿಗೇನೂ ದ್ರೋಹ ಮಾಡುತ್ತಿರಲಿಲ್ಲ, ನಿನ್ನ ಪಾಲು ನೀನು ತಗೋ ಎಂದು ಕಂಡಹಾಗೆ ನಲ್ವತ್ತೈದು ಕೋಟಿ ರೂಪಾಯಿಯ ಬಂಗಾರದ ಕಿರೀಟ ತೊಡಿಸಿದ್ದರು. ಕೃಷ್ಣಯ್ಯ ಶೆಟ್ಟರಂತೂ ರಾಜ್ಯದ ಜನತೆಗೆ ಗಂಗಾಜಲ, ತಿರುಪತಿ ಲಡ್ಡು ತಿನ್ನಿಸಿ ಕುಡಿಸಿ ಆಧ್ಯಾತ್ಮ ಶಿಖರಕ್ಕೇರಿಸಿದ್ದರು. ಕಟ್ಟಾ ಅವರಂತೂ ಸರಿಯೇ ಸರಿ. ತಿರುಪತಿ ತಿಮ್ಮಪ್ಪನಿಗೆ ಅವರ ಕೂದಲನ್ನೂ ಮೀಸಲಾಗಿಟ್ಟಿದ್ದರು. ಇಂತಹವರಿಗೆಲ್ಲ ಈಗ ಏನಾಗಿದೆ ನೋಡಿದೆ. ಕೆಲವರು ಜೈಲು ಪಾಲಾದರೆ ಇನ್ನು ಉಳಿದವರು ಇಷ್ಟರಲ್ಲೇ ಆಗಲಿರುವ ಎಲ್ಲಾ ಸೂಚನೆಗಳೂ ಬಲವಾಗಿವೆ.

ದೇವರು ಯಾವಾಗಲೂ ನ್ಯಾಯದಪರ ಎಂಬ ಅರಿವು ಅವರಿಗೆ ಇರಬೇಕಾಗಿತ್ತು. ಆದರೆ ಹಾಗೆ ಆಗುತ್ತಿಲ್ಲ, ಕೆಟ್ಟ ಮೇಲೂ ಬುದ್ಧಿಬಂದಂತಿಲ್ಲ, ಯಡ್ಯೂರಪ್ಪನವರು ಕೋರ್ಟಿಗೆ ಬರುವುದಕ್ಕೆ ಮುಂಚೆ ದೇವಾಲಯಕ್ಕೆ ತೆರಳಿ ಪೂಜೆ ಮಾಡಿ ಬಂದಿದ್ದರಂತೆ! ಅಷ್ಟೊಂದು ಸಂಪತ್ತನ್ನು ಕಾಣಿಕೆ ಹೆಸರಿನಲ್ಲಿ ಗುಳುಂ ಮಾಡಿದ ತಿರುಪತಿ ತಿಮ್ಮಪ್ಪ ಮಾಡಿದ ಉಪಕಾರ ಏನು? ಸುಮ್ಮನೆ ತನಗೂ ಇದಕ್ಕೂ ಸಂಬಂಧವೇ ಇಲ್ಲ ಎನ್ನುವ ರೀತಿಯಲ್ಲಿ ಆಡುವಂತಿದೆ. ಕೋಟ್ಯಾಂತರ ರೂಪಾಯಿ ಕಾಣಿಕೆ ನೀಡಿದ ಭಕ್ತರನ್ನೇ ಜೈಲಿಗೆ ಹಾಕಿಸಿದ್ದಾನೆ. ಈ ಎಲ್ಲ ಬೆಳವಣಿಗೆಗಳಿಂದಾಗಿ ಅಂತಹ ಭಕ್ತರಿಗೆ ಆ ದೇವರ ಮೇಲೇ ಅನುಮಾನ ಬರುವಂತಾಗಿದೆ. ಅದಕ್ಕೆ ಇರಬೇಕು ಸನ್ಮಾನ್ಯ ಜನಾರ್ದನ ರೆಡ್ಡಿಯವರು ತಿರುಪತಿ ತಿಮ್ಮಪ್ಪನ ಮೇಲಿನ ಭಕ್ತಿಯನ್ನು ಶಿವನಿಗೆ ಟ್ರಾನ್ಸ್‌ಫರ್ ಮಾಡಿಕೊಂಡಿದ್ದಾರಂತೆ. ಈಗ ಅವರು ಸದಾ ಶಿವನ ಧ್ಯಾನದಲ್ಲಿ ತಲ್ಲೀನರಾಗಿದ್ದಾರಂತೆ. ಇತ್ತ ಆ ತಿಮ್ಮಪ್ಪನಿಗೆ ಇಂತಹ ಬಲವಾದ ಕುಳಾನೆ ತನ್ನ ಒಕ್ಕಲು ಬಿಟ್ಟು ಹೋಗಿರುವುದರಿಂದ ಚಿಂತೆ, ಕೋಪ ಬಂದಿರಬಹುದು. ಅದಕ್ಕೆ ಅವನೇನು ಮಾಡಿದ...ಜೈಲಿನ ಅಧಿಕಾರಿಗಳು ಅಂದರೆ ಹಣ ನೀಡಿದರೆ ಯಾವ ಸೌಲಭ್ಯಬೇಕಾದರೂ ಒದಗಿಸುವಂತಹವರು... ಅಂತಹವರ ಮನಸ್ಸನ್ನೇ ಕೆಡಿಸಿ ಬಿಟ್ಟಿದ್ದಾನೆ. ಕೋಟಿಕೋಟಿ ಸುರಿದರೂ ಜೈಲಿನ ಒಳಗೆ ಈಶ್ವರನ ಪ್ರತಿಮೆಯನ್ನಾಗಲೀ, ಲಿಂಗವನ್ನಾಗಲೀ ಪ್ರತಿಷ್ಠಾಪಿಸಲು ಸಾಧ್ಯವೇ ಇಲ್ಲ ಎನ್ನುವ ಮಾತನಾಡುತ್ತಿದ್ದಾರೆ. ಈಗ ಶ್ರೀಯುತರು ಮನಸ್ಸಿನಲ್ಲೇ ಆ ದೇವರನ್ನು ಕಲ್ಪಿಸಿಕೊಂಡು ಧ್ಯಾನಮಗ್ನರಾಗುವಂತಾಗಿದೆಯಂತೆ! ಈಶ್ವರನಿಗೆ ಸಲ್ಲಬೇಕಾದ್ದನ್ನು ಅವರ ಆತ್ಮೀಯರು ಹೊರಗಡೆ ಸಲ್ಲಿಸುತ್ತಿದ್ದಾರಂತೆ! ಈಶ್ವರ-ತಿಮ್ಮಪ್ಪ ಜಟಾಪಟಿಯಲ್ಲಿ ಯಾರು ಗೆಲ್ಲುತ್ತಾರೋ ನೋಡಬೇಕು!



ನೊಣದ ತಿಗದಲ್ಲಿ ನೆಣ ಕೀಳೋ ಭೈರವ

ನಮ್ದು ಭೈರವನ ಒಕ್ಕಲು.

ಅವನ ಪಾದ ತೊಳದೇ ದಿನಾ ನೂಕೋರು ನಾವು.

ನಮ್ ದೇವ್ರನ ಕಳ್ಳ ಭೈರವ ಅಂತಾರೆ. ಅದೇನೋ ತಿರುಪತಿ ತಿಮ್ಮಪ್ಪನ ತೇರ್ನೇ ಇವ್ನ ಕದ್ಬುಟ್ನಂತೆ. ತಿರುಪತಿ ತಿಮ್ಮಪ್ಪ ಅಂದ್ರೆ ಅಂತಿಂತ ಕುಳ ಅಲ್ಲ, ಅವನ್ದೊಂದು ಬುದ್ಧಿ. ಯಾವಾಗಲೂ ತಾತಾ ಅಂತಾನೆ ಹೊರತು ಕ್ವಾ ಕ್ವಾ ಅಂದಿದ್ದ ದಿನ ಇಲ್ಲ, ಅಂತ ಜಿಪುಣ. ಅಂತೋನ ತೇರ್ನೇ ಕದ್ದವ್ನೆ ಅಂದ್ರೆ ಭೈರವ ನೊಣದ ತಿಗದಲ್ಲಿ ನೆಣ ಕೀಳೋ ಜಾತಿಯವನೇ ಇರಬೇಕು. ಅವನೆಂತ ಕಸುಬುದಾರ ಇರ್ಬೇಕು ಅನ್ನೋದ ತಿಳ್ಕಳಿ.

ಹಿಂಗೆಲ್ಲ ಮಾಡವ್ನಲ್ಲ ನಮ್ಮ ದೇವ್ರು ಅಂತ ನಮಗೇನು ಬ್ಯಾಸರ ಇಲ್ಲ, ನಮ್ ಮಠದೋರೂ ಅಷ್ಟೇಯ. ದುಡ್ಡು ಅಂತ ಬಂದ್ರೆ ಸಾಕು. ಅದೆಂಗೆ ಬಂತು? ಎಲ್ಲಿಂದ ಬಂತು ಅಂತೆಲ್ಲ ಕೇಳ್ತಾ ಕೂರಲ್ಲ, ಅದರ ಜಾಡ ಹಿಡ್ದು ಜಾಲಾಡೋಕೋಗಲ್ಲ, ದೇಶಾನೆ ಕೊಳ್ಳೆಹೊಡೆದವ್ನೂ ಮಠಕ್ಕೆ ಗುರುಕಾಣಿಕೆ ನೀಡಿದರೆ, ಕದ್ದು ಉಪಚರಿಸುತ್ತದೆ. ರಾಜರ ಕಾಲ್ದಲ್ಲಿ ಬಿರುದು ಬಾವಲಿಗಳನ್ನು ಕೊಡ್ತಿದ್ದರಲ್ಲ, ಅವೆಷ್ಟು ಪಸಂದಾಗಿರ್ತಿದ್ವೊ ಅಂತಾವ... ರಾವ್‌ಬಹದ್ದೂರ್, ರಾಜಸೇವಾಸಕ್ತ, ಧರ್ಮರತ್ನಾಕರ ಎಷ್ಟು ಚೆನ್ನಾಗಿ ಅವೆ! ಈಗ ಸರ್ಕಾರ ಅನ್ನೋದು ಇದ್ನೆಲ್ಲ ಮರ್‍ತುಬುಟ್ಟದೆ. ಸರ್ಕಾರ ಇಂತ ಯಡವಟ್ಟು ಕೆಲ್ಸ ಮಾಡದೆ ಅಂತ ಮಠ ಏನೂ ಸುಮ್ನೆ ಕುಂತಿಲ್ಲ, ಇಂತ ಐನಾತಿ ಕೆಲ್ಸವ ಬುಟ್ ಬುಟ್ಟದಲ್ಲ ಹಾಳುಬಸ್ರ ಸರ್ಕಾರ ಅಂತಾವ ಅದು ಕೈಗೆತ್ತಿಕೊಂಡದೆ. ಈದಪ ಅವರ ಕಣ್ಗೆ ಒಬ್ಬ ರಾಚವ್ನೆ, ಅದು ಯಾರಪ್ಪ ಅವನು ಅಂದ್ರೆ.... ವಸಿ ಅವನ ಜಾತಕ ನೋಡಿ. ಆಹಾ ಏನು ವೈನಾಗಿ ಭೈರವನ ಒಕ್ಕಲು ಜನಾವ ಬೋಳಿಸವ್ನೆ ಅಂತಾವ ಅವನ ಕಸುಬುದಾರಿಕೆಗೆ ತಲೆದೂಗೋವ್ರು ಅವನ ಅರವತ್ತನೇ ಹುಟ್ಟುಹಬ್ಬಾವ ಮಂಡ್ಯದಲ್ಲಿ ಭರ್ಜರಿಯಾಗೇ ಮಾಡಿದ್ರು. ಯಾಕೇಂದ್ರೆ ನಮ್ ಭೈರವನಂಗೆ ಕದಿಯೋದ್ರಲಿ ಎಕ್ಸ್‌ಪರ್ಟು ಅಂತಾವ. ಗುರುಮಠನೂ ಅವರ ಜಾಡನ್ನೇ ಹಿಡೀತು. ಆಹಾ ಇಂಥ ಕೈಚಳಕ ಇರೋ ಮನಸ್ಸ ಅಂದ್ಮೇಲೆ ಭೈರವನಿಗೆ ಲಾಯಕ್ಕಾದ ಮನ್ಸನೇ ಅಲ್ವಾ ಅಂತಾರ 'ಧರ್ಮರತ್ನಾಕರ' ಬಿರುದು ನೀಡ್ತು!

ನಿಮ್ಗೂ ಅಂತ ಬಿರುದ್ ಮೇಲೆ ಕಾಯಶ್ ಆದ್ರೆ ಅದೇನೂ ಕಷ್ಟದ್ದಲ್ಲ, ಭೈರವನ ಮಠಕ್ಕೆ ಬನ್ನಿ, ಅಲ್ಲಿ ಗುರುಗಳಿರ್‍ತಾರೆ. ಅವರ ಪಾದಕ್ಕೆ ಕೋಟಿ ಸುರೀರಿ. ಅಷ್ಟೇಯ ನೀವೂ 'ಧರ್ಮರತ್ನಾಕರ' ಆಗ್ಬೌದು! ಅದು ಬ್ಯಾಡ ಆಗ್ಲೆ ಒಬ್ಬ ಆಗವ್ನೆ ಅಂದ್ರೆ ನಿಮಗೆ ಯಾವ ಬಿರುದು ಬೇಕು ಹೇಳಿ. ಒಂದತ್ತು ಕೋಟಿ ಬಿಸಾಕಿ. ಜಾಸ್ತಿ ಆಯ್ತಲ್ವಾ ಅಂದ್ರಾ. ಬಿರುದು ಬೇಕು ಅಂದ್ರೆ ಕೊಡಬೇಕಪಾ ಅದೇನು ಸುಮ್ನೆ ಬತ್ತದಾ. ಅದು ಹಾದಿಬೀದಿಲಿ ಹೋಗೋರು ಕೊಡೋ ಬಿರ್ದಲ್ಲ, ಗುರುಮಠ ಕೊಡೋ ಬಿರ್ದು ಅನ್ನೋದ ನೆನಪ್ಟ್ಕಳಿ. ವಸಿ ಕಡಿಮೆ ಮಾಡ್ಕಳಿ ಅಂದ್ರಾ. ಹಂಗಾದ್ರೆ ಧರ್ಮಸಿಗಾಕಿಲ್ಲ ರತ್ನಾಕರ ಸಿಗ್ತದೆ. ರತ್ನಾಕರ ಅಂದ್ರೆ ಆರ್ಡಿನರಿ ಹೆಸರಾಯ್ತದೆ. ಶೂರ ಅಂದ್ರೆ ಯಾವ ಸೂರ ಬಾಲಕನಪ್ಪ ಇವ್ನ ಅನ್ನಬೋದು. ವಸೀ ನೋಡಿ ಅಂದ್ರಾ. ಈಗ ರೇಟೆಲ್ಲ ಆಕಾಸಕ್ಕೇರಿರೋದ ನೀವೇ ಕಂಡಿದ್ದೀರಿ. ಯಾವ್ದುದ್ಕೂ ಗುರುಗಳ ಕೇಳಿನೋಡಿ. ಯಾರೂ ಹತ್ತುಕೋಟಿ ಗಿರಾಕಿ ಸಿಗಲಿಲ್ಲ ಅಂದ್ರೆ ನಿಮಗೇ ಕೊಟ್ರೂ ಕೊಡಬೋದು!

ನಿಮಗೆಷ್ಟು ಹಣ ಬೇಕು?

ಟಾಲ್‌ಸ್ಟಾಯ್ ಅವರ ಒಂದು ಕತೆ. ನಿಮಗೆಷ್ಟು ಭೂಮಿ ಬೇಕು? ಆರಡಿ, ಮೂರಡಿ ತಾನೇ?

ಯೋಜನಾ ಆಯೋಗದ ಮುಂದಿದ್ದ ಪ್ರಶ್ನೆ : ಜನ[...] ಆದಾಯ ಎಷ್ಟಿರಬೇಕು?

ಎಷ್ಟು ಇದ್ದರೂ ಸಾಲದು. ಅದಲ್ಲ, ಬಡತನ ರೇ[...] ಮೀರಲು ಕನಿಷ್ಠ ಆದಾಯ ಎಷ್ಟು ಇರಬೇಕು?

ಯೋಜನಾ ಆಯೋಗದ ಬುದ್ಧಿವಂತರ[...] ತಲೆಗೂಡಿಸಿದರು. ಬುದ್ಧಿವಂತರಲ್ವಾ. ಮೊದಲು ಬಡತ[...] ರೇಖೆ ಕೆಳಗೆ ಎಷ್ಟು ಜನರಿರಬೇಕು ಎಂಬುದನ್ನು ನಿರ್ಧರಿಸ[...] ಯೋಜನೆ ರೂಪಿಸಿದರು.

'ಇಷ್ಟಿದ್ದರೆ ಆಗಬಹುದಾ' ಎಂದು ಒಂದು ಸಂ[...] ಸೂಚಿಸಿದರು. ಒಬ್ಬ ಬುದ್ಧಿವಂತರು. 'ಅಯ್ಯೋ ಅಯ್[...] ಹಾಗಿದ್ದರೆ ದೇಶದ ತುಂಬಾ ಬಡವರು ತುಂಬಿರುತ್ತಾ[...] ಎಂದು ಹೌಹಾರಿದರು. ಉಳಿದ ಬುದ್ಧಿವಂತ[...] ಆದಾಯಮಿತಿ ಸ್ವಲ್ಪ ಕೆಳಕ್ಕೆ ಇಳಿಸಿದರು. ಬಡವರ ಸಂ[...] ಕಡಿಮೆ ಆಯಿತು. ಆದರೂ ಅದು ಬಹಳ ಹೆಚ್ಚು ಅನ್ನುವ[...] ಬುದ್ಧಿವಂತರ ಲೆಕ್ಕಾಚಾರ. ತೃಪ್ತಿಯಾಗಲಿಲ್ಲ, ಇನ[...] ಕೆಳಕ್ಕಿಳಿಸಿದರು. ಅದೂ ಸರಿ ಇಲ್ಲ ಅನ್ನಿಸಿತು ಬುದ್ಧಿವಂತರ[...] ಹೀಗೆ ಇಳಿಸುತ್ತಾ ಬಂದರು. ಒಂದು ಸಂಖ್ಯೆ ತಲುಪಿದ[...] ಇದು ಸರಿಯಾದ ಅಂಕಿ ಎಂದು ನಿರ್ಧರಿಸಿದರ[...] ಬುದ್ಧಿವಂತರಿಗೆಲ್ಲ ತೃಪ್ತಿಯಾಯಿತು.

ಈಗ ನೀವು ಹೇಳಿ-ಉತ್ತಮ ಆಹಾರ, ಗುಣಮಟ್ಟ[...] ಆರೋಗ್ಯ ಶಿಕ್ಷಣಕ್ಕೆ ಒಬ್ಬರಿಗೆ ಒಂದು ದಿವಸಕ್ಕೆ ಕನಿಷ್ಠ ಆದಾ[...] ಎಷ್ಟಿರಬೇಕು?

ಅಯ್ಯೋ ರಾಮನೆ ಎಲ್ಲ ಮೂರಂಕಿ, ನಾಲ್ಕಂಕಿ ಮಾ[...] ಆಡುತ್ತಿದ್ದೀರಲ್ಲ ಇದನ್ನು ಕೇಳಿದರೆ ಯೋಜನಾ ಆಯೋಗ[...] ಬುದ್ಧಿವಂತರು ನೇಣಿಗೆ ಶರಣಾಗಬೇಕು ಅಷ್ಟೇ!

ಅವರೆಲ್ಲ ಪಂಡಿತರಲ್ವಾ. ಎಲ್ಲಾ ಅಳೆದು ಸುರಿದು [...] ಹಾಕಿದ್ದಾರೆ.

ಎಷ್ಟು ಅಂತೀರಾ?

ಗ್ರಾಮೀಣ ಪ್ರದೇಶದವರಿಗಾದರೆ ದಿನಕ್ಕೆ 25 ರ[...] ನಗರವಾಸಿಗಳಾದರೆ ದಿನಕ್ಕೆ 32 ರೂ ಮಸ್ತು!

ಇದು ಎಲ್ಲಾದರೂ ಉಂಟೆ ಅಂದರೆ ಹಿ[...] ಸುಪ್ರೀಂಕೋರ್ಟಿಗೇ ಹೇಳಿದ್ದಾರೆ ಬುದ್ಧಿವಂತರು! ಅ[...] ಕುಂತಿರೋರೂ ಬುದ್ಧಿವಂತರೇ ಅಲ್ವಾ. 'ಭೇಷ್' ಕಣ್ರಾ[...] ಅಂತ ತಾರೀಫು ಮಾಡಿದರೂ ಮಾಡಬಹುದು!

ಯೋಜನಾ ಆಯೋಗದ ಬುದ್ಧಿವಂತರ ಸಂಬಳ ಎ[...] ಅನ್ನುತ್ತೀರಾ? ದೇಶದಲ್ಲಿ ದಿನಕ್ಕೆ ಕೋಟಿಕೋಟಿ ರೂಪಾ[...] ಆದಾಯ ಸಂಪಾದಿಸುವವರೂ ಇದಾರೆ. ಅವರೆಲ್ಲರ ಸು[...] ಕಟ್ಟಿಕೊಂಡು ನೀವೇನು ಮಾಡ್ತೀರಿ? ನಿಮ್ದು ನೀವು ತೊಳ[...]

ಸಾವಿನ ವ್ಯಾಪಾರಿ ಈಗ ಸದ್ಭಾವನಾ ಮುಸುಕುಧಾರಿ

ಧರ್ಮದ ಭಾಗವಾಗಿದ್ದ ಉಪವಾಸವನ್ನು ರಾಜಕೀಯದ ಭಾಗವನ್ನಾಗಿ ಮಾಡಿದ್ದು ಗಾಂಧೀಜಿ. ಸ್ವಾತಂತ್ರ್ಯದ ಹಕ್ಕೊತ್ತಾಯಕ್ಕಾಗಿ ಅಹಿಂಸಾವಾದಿಯಾಗಿದ್ದ ಗಾಂಧೀ ಸದುದ್ದೇಶದಿಂದ ತನ್ನನ್ನು ತಾನು ದಂಡಿಸಿಕೊಂಡು ಉಪವಾಸ ಸತ್ಯಾಗ್ರಹವೆಂಬ ಅಹಿಂಸಾ ಅಸ್ತ್ರದ ಮೂಲಕ ಬ್ರಿಟಿಷರನ್ನು ಮಣಿಸುತ್ತಾ ಸಾಮಾನ್ಯ ಜನರಲ್ಲಿ ಭರವಸೆ ಮೂಡಿಸುತ್ತ ರಾಜಕೀಯದ ಮೇಲೆ ಹಿಡಿತ ಸಾಧಿಸುತ್ತಿದ್ದರು.

ಗಾಂಧೀಜಿಯ ಉಪವಾಸ ಬೆದರಿಕೆ ತಂತ್ರವಾಗಿರಲಿಲ್ಲ, ಬದಲಾಗಿ ಸತ್ಯಾಗ್ರಹದ ತಂತ್ರವಾಗಿತ್ತು, ಈ ಕಾರಣದಿಂದಾಗಿಯೇ ಗಾಂಧೀಜಿಯವರು ಉಪವಾಸ ಮಾಡುತ್ತಿದ್ದಾರೆಂದರೇ ಬ್ರಿಟಿಷ್ ಸರ್ಕಾರ ಬೆವರುತ್ತಿತ್ತು, ಭಾರತೀಯ ಸಮಾಜ ಜಾಗೃತವಾಗುತ್ತಿತ್ತು, ಸ್ವತಂತ್ರ ಭಾರತದಲ್ಲಿ, ಆಂಧ್ರದ ಪೊಟ್ಟಿ ಶ್ರೀರಾಮುಲು ಭಾಷಾವಾರು ಪ್ರಾಂತ್ಯಗಳ ರಚನೆಗಾಗಿ ಅಮರಣಾಂತ ಉಪವಾಸ ಕೈಗೊಂಡು ಸಾವನ್ನಪ್ಪಿದ ಮೇಲೆಯೇ ಎಚ್ಚೆತ್ತುಗೊಂಡ ನೆಹರೂ ಸರ್ಕಾರ ಭಾಷಾವಾರು ಪ್ರಾಂತಗಳ ರಚನೆಗೆ ಮುಂದಾಯಿತು.

ಇಂತಹ ರಾಜಕೀಯ ಪರಂಪರೆ ಇರುವ ಉಪವಾಸ ಸತ್ಯಾಗ್ರಹ ಇಂದು ತನ್ನ ಸದುದ್ದೇಶವನ್ನು ಕಳೆದುಕೊಂಡು ಸ್ವಯಂಪ್ರತಿಷ್ಠೆ ವ್ಯಕ್ತಿಪೂಜೆ ಹಾಗೂ ಆತ್ಮರತಿಯ ಪ್ರದರ್ಶನವಾಗಿದೆ.

ನಾಗರಿಕ ಸಮಾಜದ ಅಣ್ಣಾ ಹಜಾರೆ, ಯೋಗ ಗುರು ಬಾಬಾ ರಾಮದೇವ್, ಈಗ ರಾಜಕಾರಣಿ ನರೇಂದ್ರ ಮೋದಿಯ ಉಪವಾಸೋತ್ಸವಗಳು ಬಲ್ಲಿದರ ಅದ್ದೂರಿ ಮದುವೆಗಳಂತೆ ವಿಜೃಂಭಣೆಯಿಂದ ವ್ಯವಸ್ಥಿತ, ಸುಸಜ್ಜಿತ, ಹವಾನಿಯಂತ್ರಿತ ಸಭಾ ಮಂಟಪಗಳಲ್ಲಿ ನಡೆಯುತ್ತವೆ. ಉಪವಾಸವನ್ನು ಬೆಂಬಲಿಸುವವರ ಪುಷ್ಕಳ ಭೋಜನಕ್ಕಾಗಿ ಕೋಟಿ ಕೋಟಿ ಹಣವನ್ನು ಸುರಿಯಲಾಗುತ್ತದೆ. ಉಪವಾಸವನ್ನು ಬಲ್ಲಿದರ ಹಕ್ಕು-ಬಡವರ ಹಣೆಬರಹ ಎಂಬಂತೆ ಬಿಂಬಿಸಲಾಗುತ್ತದೆ.

ಅಣ್ಣಾ ಹಜಾರೆಯಂತೆ ನರೇಂದ್ರ ಮೋದಿ ಸಮಾಜ ಸೇವಕರಲ್ಲ, ಬಾಬಾ ರಾಮದೇವರಂತೆ ಯೋಗದ ಗುರುವಲ್ಲ, ಮೋದಿ ಗುಜರಾತಿನ ಮುಖ್ಯಮಂತ್ರಿ. ಧರ್ಮ ನಿರಪೇಕ್ಷ ಆಡಳಿತದಿಂದ ಶಾಂತಿಸೌಹಾರ್ದತೆಯ ವಾತಾವರಣ ಕಲ್ಪಿಸಿ ಬದುಕಿಗೆ ಭದ್ರತೆಯನ್ನು ನೀಡಬೇಕಾದುದು ಸರ್ಕಾರದ ಆದ್ಯ ಕರ್ತವ್ಯ. ಇಂತಹ ಹೊಣೆಯನ್ನು ನಿರ್ವಹಿಸದೇ ಮುಖ್ಯಮಂತ್ರಿಗಳೇ ಶಾಂತಿಸೌಹಾರ್ದತೆಯ ಹಕ್ಕೊತ್ತಾಯಕ್ಕಾಗಿ ಉಪವಾಸ ಸತ್ಯಾಗ್ರಹ ಮಾಡಿದರೆ ಆ ಹಕ್ಕೊತ್ತಾಯವನ್ನು ಈಡೇರಿಸುವವರು ಯಾರು?

ಶಾಂತಿಯನ್ನು ಕದಡಿದ ವಿಚಾರಧಾರೆ ಯಾವುದು? ಅಖಂಡ ಭಾರತವನ್ನು ಭಾರತ ಮತ್ತು ಪಾಕಿಸ್ತಾನವೆಂದು ವಿಭಜಿಸಿದ ವಿಚಾರಧಾರೆ ಯಾವುದು? ರಾಷ್ಟ್ರಪಿತ ಗಾಂಧೀಜಿಯನ್ನು ಕೊಂದಂತ ವಿಚಾರಧಾರೆ ಯಾವುದು? ಬಾಬರಿ ಮಸೀದಿಯನ್ನು ಹೊಡೆದುರುಳಿಸಿ ದೇಶದ ಐಕ್ಯತೆಗೆ, ಸಮಗ್ರತೆ, ಭದ್ರತೆ ಹಾಗೂ ಸೌಹಾರ್ದತೆಗೆ ಧಕ್ಕೆ ತಂದಂತಹ ವಿಚಾರಧಾರೆ ಯಾವುದು? ಮಂಡಲ ವಿರುದ್ಧ ಕಮಂಡಲ ಹಿಡಿದ ವಿಚಾರಧಾರೆ ಯಾವುದು? ಕ್ರಿಶ್ಚಿಯನ್ ಮಿಷನರಿ ಸ್ಟೇನ್ ಹಾಗೂ ಆತನ ಮಕ್ಕಳನ್ನು ಜೀವಂತವಾಗಿ ದಹಿಸಿದ ವಿಚಾರಧಾರೆ ಯಾವುದು? ಭಗವದ್ಗೀತೆಯ ಮೂಲಕ ಭ್ರಾತೃತ್ವಕ್ಕೆ ಧಕ್ಕೆ ತರುವ ವಿಚಾರಧಾರೆ ಯಾವುದು? ವಂದೇಮಾತರಂ ಮೂಲಕ ಒಂದು ಕೋಮಿನವರನ್ನು ಹಿಂಸಿಸುತ್ತಿರುವ ವಿಚಾರಧಾರೆ ಯಾವುದು?

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.



ಬುದ್ಧ ಹುಟ್ಟಿದ ನಾಡಿನಿಂದ ಬುದ್ಧನನ್ನು ಬುದ್ಧ ತತ್ವವನ್ನು ಗಡಿಪಾರು ಮಾಡಿದಂತೆ, ಅಹಿಂಸೋ ಪರಮೋ ಧರ್ಮವೆನ್ನುವ ನಾಡಿನಲ್ಲಿ ಅಹಿಂಸೆಯ ಹರಿಕಾರ ಗಾಂಧೀಜಿಯನ್ನು ಹಾಗೂ ಗಾಂಧೀ ತತ್ವಗಳನ್ನು ಗಡಿಪಾರು ಮಾಡಿದ ಕೀರ್ತಿ ಮೋದಿಗೇ ಸಲ್ಲಬೇಕು. ಗುಜರಾತಿನ ಗಾಂಧಿ ಅಹಿಂಸೆ, ಕರುಣೆಯಿಂದ ಪ್ರಖ್ಯಾತರಾದರೆ, ಮೋದಿ ಹಿಂಸೆ ಹಾಗೂ ಕ್ರೌರ್ಯದಿಂದ ಕುಖ್ಯಾತರು.

ಮತೀಯ ಗಲಭೆ-ಹಿಂಸಾಚಾರ ಭಾರತಕ್ಕೆ ಹೊಸತಲ್ಲ, ಇದಕ್ಕೆ ಅಗಾಧ ಇತಿಹಾಸ ಹಾಗೂ ಪರಂಪರೆಯೂ ಇದೆ. ಬೌದ್ಧ ಜೈನ, ಶೈವ, ವೈಷ್ಣವ ಮತಗಳ ಸಂಘರ್ಷಕ್ಕೆ ಮಿಲಿಯಾಂತರ ಜನರು ಈ ನಾಡಿನಲ್ಲಿ ಬಲಿಯಾಗಿದ್ದಾರೆ. ಧಾರ್ಮಿ[...] ಸಂಘರ್ಷಕ್ಕಾಗಿಯೇ ಬಲಿಕೊಡುವ ಘಟನೆಗಳು ಅನವರತ ಹಾಗೂ[...] ಸರ್ವಕಾಲಿಕ.

ಸ್ವತಂತ್ರ ಭಾರತದಲ್ಲಿ ಎಲ್ಲಾ ರಾಜ್ಯಗಳಲ್ಲಿ ಕೋಮುಗಲಭೆ, ಕೋಮು[...] ಹಿಂಸಾಚಾರ ಸಂಭವಿಸಿವೆ. ಇವಲ್ಲೆವ್ರಾ ಆಕಸ್ಮಿಕ ಘಟನೆಗಳೇ ಹೊರತು ಪೂರ್ವ[...] ನಿಯೋಜಿತ ಕೃತ್ಯಗಳಲ್ಲ. ಆದರೆ 2001ರಲ್ಲಿ ಗುಜರಾತಿನಲ್ಲಿ ನಡೆದಿದ್ದು[...] ಕೋಮುಗಲಭೆ, ಅಥವಾ ಕೋಮು ಹಿಂಸಾಚಾರವಲ್ಲ[...] ಬದಲಾಗಿ ಅಲ್ಪಸಂಖ್ಯಾತ ಜನಾಂಗದ ಮಾರಣಹೋಮ[...]

ಸಂಘ ಪರಿವಾರದ ವಿಚಾರಧಾರೆಯ ಮುಖ್ಯಮಂತ್ರಿ[...]ಯೊಬ್ಬರು ಪೂರ್ಣ ಪ್ರಮಾಣದಲ್ಲಿ ಸರ್ಕಾರವನ್ನು[...] ಬಳಸಿಕೊಂಡು, ತಾವೇ ಖುದ್ದಾಗಿ ನೇತೃತ್ವವನ್ನು ವಹಿಸಿ[...] ಎರಡು ಸಾವಿರಕ್ಕೂ ಹೆಚ್ಚು ಜನರನ್ನು ಕೊಂದಂತಹ ಘಟನೆ[...] ವಿಶ್ವದ ಯಾವುದೇ ರಾಷ್ಟ್ರದಲ್ಲಿ ಇದುವರೆಗೂ ನಡೆದಿಲ್ಲ[...] ಈ ಮಾರಣಹೋಮದೊಂದಿಗೆ ಗುಜರಾತಿನ[...] ಅಸ್ಮಿತೆಯನ್ನು ಹಿಂದೂ ಅಸ್ಮಿತೆ, ಮುಸ್ಲಿಂ ಅಸ್ಮಿತೆ ಎಂದು[...] ವಿಭಜಿಸಿ, ಮುಸ್ಲಿಂ ಅಸ್ಮಿತೆಯನ್ನು ಶಾಶ್ವತವಾಗಿ ಅಳಿಸಿ[...] ಮತೀಯ ವಿಚಾರಧಾರೆಯ ವಿಜಯೋತ್ಸವವನ್ನು ಆಚರಿಸಲಾಯಿತು.


ವಿಶ್ವವಾಣಿಜ್ಯ ಕೇಂದ್ರವನ್ನುರುಳಿಸಿ ಮೂರು ಸಾವಿರಕ್ಕೂ ಹೆಚ್ಚು ಸಾವಿಗೆ[...] ಕಾರಣನಾದ ಬಿನ್ ಲಾಡೆನ್‌ನನ್ನು 10 ವರ್ಷಗಳ ಕಾಲ ಸತತ ಬೇಟೆಯಾಡಿದ[...] ಅಮೆರಿಕಾ ಆತನನ್ನು ಹತ್ಯೆಗೈಯಿತು. ಆದರೆ ಭಾರತದ ಗುಜರಾತಿನಲ್ಲಿ 10[...] ವರ್ಷ ಗತಿಸಿದರೂ ಸಾವಿನ ವ್ಯಾಪಾರಿಯೊಬ್ಬ 'ನಾನು ಅಪರಾಧಿಯಲ್ಲ, ನನ್ನ[...] ಮೇಲೆ ಯಾವುದೇ ಎಫ್.ಐ.ಆರ್. ದಾಖಲಾಗಿಲ್ಲ, ನ್ಯಾಯಾಲಯದಲ್ಲಿ ಕೇಸಿಲ್ಲ[...] ನಾನು ಮಾಡಿದ ಗುಜರಾತ್ ಅಭಿವೃದ್ಧಿಯನ್ನು ಜಗತ್ತೇ ಕೊಂಡಾಡುತ್ತದೆ, ಜನತಾ[...] ನ್ಯಾಯಾಲಯದಲ್ಲಿ ಅಂದರೆ ಚುನಾವಣೆಯಲ್ಲಿ ಪದೇ ಪದೇ ಗೆಲ್ಲುತ್ತಿದ್ದೇನೆ[...] ಎಂದು ಬೀಗುತ್ತಾ ಸದ್ಭಾವನಾ ನೆಪದಲ್ಲಿ ಪ್ರಧಾನಿ ಪಟ್ಟದ ಕನಸನ್ನು ಕಾಣುತ್ತಾ[...] ಮನಸ್ಸಿನಲ್ಲಿಯೇ ಮಂಡಿಗೆಯನ್ನು ತಿನ್ನುತ್ತಿದ್ದಾರೆ.

ಸೈಲೆಂಟಾಗಿ ಸಿನಿಮಾ ಮಾಡಿದವರು

ಈಗ ಕನ್ನಡ ಚಿತ್ರರಂಗದಲ್ಲಿ ಒಂದು ಹೊಸ ಟ್ರೆಂಡ್ ಆರಂಭವಾಗಿದೆ. ಅದೇನೆಂದರೆ ಯಾರಿಗೂ ಗೊತ್ತಾಗದಂತೆ ಸದ್ದುಗದ್ದಲವಿಲ್ಲದೇ ಸಿನಿಮಾವನ್ನು ಮಾಡಿ ಮುಗಿಸುವುದು.

ಈ ತರಹ ತೆರೆಮರೆಯಲ್ಲಿ ಗುಟ್ಟಾಗಿ ಸಿನಿಮಾ ಮಾಡುವ ಟ್ರೆಂಡ್‌ಅನ್ನು ಆರಂಭಿಸಿದ್ದು ಬರಗೂರು ರಾಮಚಂದ್ರಪ್ಪ. ಈಗ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷ ನಾಗಾಭರಣ ಕೂಡ ಯಾವ ಪ್ರಚಾರವೂ ಇಲ್ಲದೆ ಒಂದು ಸಿನಿಮಾವನ್ನು ಮಾಡಿಮುಗಿಸಿದ್ದಾರೆ.





ನಾಗಾಭರಣ ನಿರ್ದೇಶಿಸಿರುವ ಚಿತ್ರದ ಹೆಸರು 'ಕಂಸಾಳೆ, ಕೈಸಾಲೆ'. ಇದು ಮಕ್ಕಳ ಚಿತ್ರ. ಬಹುತೇಕ ಹೊಸ ಮಕ್ಕಳನ್ನು ಈ ಚಿತ್ರದಲ್ಲಿ ನಾಗಾಭರಣ ಹಾಕಿಕೊಂಡಿದ್ದಾರೆ. ಅನಂತ್ ಅರಸ್‌ರವರ ಛಾಯಾಗ್ರಹಣವೂ, ಶಿಂಪರಾಜ್‌ರವರ ಸಂಕಲನವೂ ಈ ಚಿತ್ರಕ್ಕಿದೆ. ಪ್ರೇಮಕವಿ ಕಲ್ಯಾಣ್ ಈ ಚಿತ್ರದ ಸಂಗೀತ ನಿರ್ದೇಶನದ ಜವಾಬ್ದಾರಿ ವಹಿಸಿಕೊಂಡಿದ್ದಾರೆ. 'ಅಪ್ಪು' ಎಂಬ ಮಕ್ಕಳ ಚಿತ್ರದಲ್ಲಿ ನಾಯಕ ನಟನಾಗಿ ನಟಿಸಿದ್ದ ನಿರ್ಮಾಪಕ ಸೌಂದರ್ಯ ಜಗದೀಶ್ ಅವರ ಮಗ ಮಾಸ್ಟರ್ ಸ್ನೇಹಿತ್ ಈ ಚಿತ್ರದ ನಾಯಕ ನಟ.

ಮಕ್ಕಳ ಚಿತ್ರಕ್ಕೆ ರಾಜ್ಯ ಸರ್ಕಾರ ಇಪ್ಪತ್ತೈದು ಲಕ್ಷ ರೂಪಾಯಿಗಳ ಸಬ್ಸಿಡಿಯನ್ನು ಘೋಷಿಸಿರುವುದರಿಂದ ಹಾಗೂ ಮಕ್ಕಳ ಚಿತ್ರಕ್ಕೆ ರಾಷ್ಟ್ರಮಟ್ಟದಲ್ಲಿ ಪ್ರಶಸ್ತಿಗೆ ಹೆಚ್ಚಿನ ಅವಕಾಶವಿರುವುದರಿಂದ ಕನ್ನಡದ ನಿರ್ದೇಶಕರು ಇತ್ತೀಚೆಗೆ ಮಕ್ಕಳ ಚಿತ್ರಗಳ ಕಡೆಗೆ ಹೆಚ್ಚು ಒಲವು ವ್ಯಕ್ತಪಡಿಸುತ್ತಿರುವುದು ಹೊಸತೇನಲ್ಲ. ರಾಮದಾಸ್ ನಾಯ್ಡು ಮತ್ತು ನಂಜುಂಡೇಗೌಡರು ಈಗಾಗಲೇ ಈ ಮಕ್ಕಳ ಚಿತ್ರದ ವಲಯದಲ್ಲಿ ಗುರುತಿಸಿಕೊಂಡವರು.

ದುರದೃಷ್ಟವಶಾತ್, ಮಕ್ಕಳ ಚಿತ್ರದ ಹೆಸರಿನಲ್ಲಿ ಮಕ್ಕಳಾಟಿಕೆಯ ಚಿತ್ರ ತೆಗೆಯುವ ನಿರ್ಮಾಪಕರೇ ನಮ್ಮ ಚಿತ್ರರಂಗದಲ್ಲಿ ಹೆಚ್ಚಾಗಿದ್ದಾರೆ. ಮುಖ್ಯವಾಗಿ ಇಪ್ಪತ್ತೈದು ಲಕ್ಷ ಸಬ್ಸಿಡಿಯ ಮೇಲೆ ಈ ನಿರ್ಮಾಪಕರ ಕಣ್ಣಿರುತ್ತದೆಯೇ ವಿನಃ ಒಂದು ಒಳ್ಳೆಯ ಚಿತ್ರ ಮಾಡುವ ಮನಸ್ಥಿತಿ ಅವರಿಗಿರುವುದೇ ಇಲ್ಲ.

ಆದರೆ ನಾಗಾಭರಣ ಈ ಹಿಂದೆ ನಿರ್ದೇಶಿಸಿದ್ದ 'ಚಿನ್ನಾರಿ ಮುತ್ತ' ಎಂಬ ಮಕ್ಕಳ ಚಿತ್ರ ವಿಮರ್ಶಕರ ಮತ್ತು ಪ್ರೇಕ್ಷಕರ ಮನಸ್ಸನ್ನು ಗೆದ್ದಿತ್ತು. ಆ ಚಿತ್ರ ಪ್ರಶಸ್ತಿಗಳ ಜೊತೆಗೆ ಬಾಕ್ಸ್ ಆಫೀಸ್‌ನಲ್ಲೂ 'ರಜತ ಮಹೋತ್ಸವ'ವನ್ನೂ ಆಚರಿಸಿತ್ತು. ಹೀಗಾಗಿ ಭರಣರ ಹೊಸ ಚಿತ್ರದ ಬಗ್ಗೆ ಒಂದಿಷ್ಟು ಕುತೂಹಲವಿದೆ. ಅಷ್ಟೇ ಅಲ್ಲ, ಸುಮಾರು ಐದಾರು ವರ್ಷಗಳ ನಂತರ ನಾಗಾಭರಣರ ಚಿತ್ರ ತೆರೆ ಕಾಣುತ್ತಿರುವುದರಿಂದಲೂ ಕುತೂಹಲ ದುಪ್ಪಟ್ಟಾಗಿದೆ.

ಇಷ್ಟೆಲ್ಲ ಇದ್ದರೂ ಅವರು ಯಾಕೆ ಗುಟ್ಟಾಗಿ ಸಿನಿಮಾ ಮಾಡಿದರು ಎಂಬುದೇ ಅರ್ಥವಾಗುತ್ತಿಲ್ಲ. ❖

1993ರಲ್ಲಿ ಸುದೀಪ್



ಉಪೇಂದ್ರ ಮತ್ತು ಕಿಚ್ಚ ಸುದೀಪ್ ಎಂಬ ಹುಚ್ಚರ ಜೋಡಿ ಒಂದಾಗುತ್ತಿದೆ ಎಂಬ ಮಾತು ಇತ್ತೀಚೆಗಷ್ಟೇ ಕೇಳಿಬಂದಿತ್ತು. ಆದರೆ ಈಗ ಅದು ಸ್ವಲ್ಪ ಬದಲಾಗುವ ಸಾಧ್ಯತೆಯಿದೆ. ಸದ್ಯ ಡೇಟ್ಸ್ ಹೊಂದಾಣಿಕೆಯಾಗದ ಕಾರಣ ಉಪ್ಪಿ ಮತ್ತು ಕಿಚ್ಚ ಒಂದಾಗುವುದು ಸಾಧ್ಯವಾಗುತ್ತಿಲ್ಲ. ಬದಲಾಗಿ ಶಿವರಾಜ್‌ಕುಮಾರ್ ಮತ್ತು ಸುದೀಪ್ ಒಂದೇ ಚಿತ್ರದಲ್ಲಿ ನಟಿಸುವುದು ಹೆಚ್ಚೂ ಕಮ್ಮಿ ಖಾತ್ರಿಯಾಗಿದೆ. ಈ ಚಿತ್ರವನ್ನು ಸುದೀಪ್ ಅವರೇ ನಿರ್ದೇಶಿಸುತ್ತಿದ್ದಾರೆ. ಆ ಚಿತ್ರದ ಹೆಸರು '1993'.

'1993'ರಲ್ಲಿ ನಡೆದ ಸತ್ಯಘಟನೆಯನ್ನು ಆಧರಿಸಿ ಈ ಚಿತ್ರದ ಕಥೆ, ಚಿತ್ರಕಥೆಯನ್ನು ಸ್ವತಃ ಸುದೀಪ್ ಸಿದ್ಧ ಮಾಡಿಕೊಂಡಿದ್ದಾರಂತೆ. ತನ್ನ ಫೇವರಿಟ್ ಡೈರೆಕ್ಟರ್ ರಾಮ್‌ಗೋಪಾಲ್ ವರ್ಮಾರ ಮೂರ್‍ನಾಲ್ಕು ಚಿತ್ರಗಳಲ್ಲಿ ನಟಿಸುತ್ತಿದ್ದಂತೇ ಸುದೀಪ್ ಈಗ ರಿಯಲ್ ಸ್ಟೋರಿಗಳ ಬೆನ್ನು ಹತ್ತಿರುವಂತೆ ಕಾಣಿಸುತ್ತದೆ.

ಓರ್ವ ಕಮರ್ಷಿಯಲ್ ಹೀರೋ ಆಗಿರುವ ಸುದೀಪ್ ನಿರ್ದೇಶಕನಾಗಿ ಹೊಸತನ್ನು ಹುಡುಕುತ್ತಿದ್ದಾರೆ ಅನ್ನೋದು ನಿಜ. ಆದರೆ ಸಿದ್ಧತೆಯ ಕೊರತೆಯಿಂದಲೋ ಅಥವಾ ಆತುರದ ನಿರ್ಧಾರದಿಂದಲೋ ಅವರು ಆರಂಭಿಸುವ ಅನೇಕ ಪ್ರಾಜೆಕ್ಟ್‌ಗಳು ಸಂಪೂರ್ಣಗೊಳ್ಳುವ ಬದಲು ಮಧ್ಯಕ್ಕೇ ನಿಂತು ಹೋಗುತ್ತಿವೆ.

ಹೀರೋಗಿರಬೇಕಾದ ಕ್ವಾಲಿಟಿಗಳು, ನಿರ್ದೇಶಕನಿಗೆ ಬೇಕಾದ ಪ್ರತಿಭೆ ಎಲ್ಲವನ್ನೂ ಹೊಂದಿರುವ ಸುದೀಪ್ ತಮ್ಮ ಯಡವಟ್ಟು, ಆತುರಗಳನ್ನು ಪಕ್ಕಕ್ಕಿಟ್ಟರೆ ಇಡೀ ಚಿತ್ರರಂಗವನ್ನು ಬೆರಗುಗೊಳಿಸುವಂಥ ಚಿತ್ರ ಮಾಡಬಹುದು. ಹೀಗಾಗಿ ಕಿಚ್ಚನಿಗೆ ಸದ್ಯಕ್ಕೆ ಬೇಕಿರುವುದು ತಾಳ್ಮೆಯೊಂದೇ... ❖

ಮತ್ತೊಂದು ಮುತ್ತು!

ನೂರು ಚಿತ್ರಗಳ ಸರದಾರ ಶಿವರಾಜ್‌ಕುಮಾರ್ ಈಗ ಹೊಸ ದಿಕ್ಕಿನತ್ತ ಸಾಗುತ್ತಿದ್ದಾರೆ.

ಅದೇನೆಂದರೆ ಮುಂದಿನ ಏಪ್ರಿಲ್ 24 ರಂದು ಅಂದರೆ ಅಣ್ಣಾವ್ರು ಹುಟ್ಟಿದ ದಿನದಂದು ತಮ್ಮದೇ ಆದ 'ಶ್ರೀಮುತ್ತು' ಎಂಬ ನಿರ್ಮಾಣ ಸಂಸ್ಥೆಯನ್ನು ಆರಂಭಿಸಲು ಚಿಂತಿಸಿದ್ದಾರೆ.


"ಅದೆಷ್ಟೋ ಚಿತ್ರಗಳನ್ನು ನಾವು ಮಾಡಬೇಕು ಎಂದೆನಿಸಿದರೂ ನಮ್ಮ ಆಶೆಯನ್ನು ನಿರ್ಮಾಪಕರ ಮೇಲೆ ಹೊರಿಸುವುದಕ್ಕೆ ಆಗುವುದಿಲ್ಲ. ಆ ಕಾರಣಕ್ಕಾಗಿ ನಮಗೆ ಆತ್ಮತೃಪ್ತಿ ನೀಡುವ ಪಾತ್ರ ಮತ್ತು ಚಿತ್ರಗಳನ್ನು ನಾವೇ ನಿರ್ಮಾಣ ಮಾಡಬೇಕೆಂಬ ನಿರ್ಧಾರಕ್ಕೆ ಬಂದಿದ್ದೇವೆ. ಆ ಕಾರಣಕ್ಕಾಗಿ ಶ್ರೀಮುತ್ತು ನಿರ್ಮಾಣ ಸಂಸ್ಥೆ ಆರಂಭಿಸುತ್ತಿದ್ದೇವೆ" ಎಂದಿದ್ದಾರೆ ಶಿವಣ್ಣ.

ಈ ತನಕ ಶಿವಣ್ಣ ವಜ್ರೇಶ್ವರಿ ಕಂಬೈನ್ಸ್ ಮತ್ತು ಇತರೆ ನಿರ್ಮಾಪಕರ ಚಿತ್ರಗಳಲ್ಲಿ ನಟಿಸಿದ್ದಾರೆಯೇ ವಿನಃ ಯಾವತ್ತೂ ಅವರು ತಮ್ಮ ಸ್ವಂತ ಬ್ಯಾನರ್‌ನಲ್ಲಿ ಚಿತ್ರ ತೆಗೆಯುವ ಆಲೋಚನೆಯನ್ನು ಮಾಡಿರಲಿಲ್ಲ. ಆದರೆ ಇತ್ತೀಚಿನ ಯುವ ನಟರ ನಾಲ್ಕೈದು ಸಿನಿಮಾಗಳು ಹಿಟ್ ಆದರೆ ಸಾಕು, ಬೇರೆಯವರಿಗೆ ತಮ್ಮ ಕಾಲ್‌ಶೀಟ್ ಕೊಡುವ ಬದಲು ತಾವೇ ಚಿತ್ರ ನಿರ್ಮಾಣಕ್ಕೆ ಇಳಿದು ಹಣ ಮಾಡುತ್ತಿದ್ದಾರೆ. ಇದಕ್ಕೆ ಸುದೀಪ್, ಗಣೇಶ್, ದರ್ಶನ್ ಮೊದಲಾದವರೆಲ್ಲ ಸಾಕ್ಷಿ.

ಇಂತಹವರ ನಡುವೆ ಬರೀ ಬೇರೆಯವರಿಗೆ ತಮ್ಮ ಕಾಲ್‌ಶೀಟ್ ನೀಡುತ್ತ ಬಂದ ಶಿವಣ್ಣ ಅಪರೂಪವಾಗಿ ಕಾಣಿಸಿಕೊಂಡಿದ್ದರು.


ಇವರ ಮತ್ತೊಂದು ವಿಶೇಷ ಯೋಜನೆ ರಾಜ್‌ಕುಮಾರ್ ನೆನಪಿಗಾಗಿ ಒಟ್ಟು ಏಳು ಮಿನಿ ಚಿತ್ರಮಂದಿರಗಳಿರುವ ಒಂದು ಮಾಲ್ ಅನ್ನು ಕಟ್ಟುವುದು. ಈ ಏಳು ಚಿತ್ರಮಂದಿರಗಳಲ್ಲಿ ಮೂರರಲ್ಲಿ ರಾಜ್‌ಕುಮಾರ್, ವಿಷ್ಣುವರ್ಧನ್ ಮತ್ತು ಶಂಕರ್ ನಾಗ್ ಅವರ ಚಿತ್ರಗಳು ವರ್ಷವಿಡೀ ಕಡಿಮೆ ದರದಲ್ಲಿ ನಡೆಯಬೇಕೆಂಬ ಆಶೆ ಅವರದ್ದು. ಉಳಿದ ನಾಲ್ಕು ಚಿತ್ರಮಂದಿರಗಳಲ್ಲಿ ಹೊಸ ಚಿತ್ರಗಳ ಬಿಡುಗಡೆಯಾಗಲಿ ಎಂಬುದು ಅವರ ಇಚ್ಛೆ.

ಈ ಮಾಲ್‌ಅನ್ನು ಜನನಿಬಿಡ ಪ್ರದೇಶದಲ್ಲಿ ಮಾಡುವ ಬದಲು ಅಣ್ಣಾವ್ರ ಸಮಾಧಿಯ ಅಕ್ಕಪಕ್ಕದಲ್ಲೇ ಮಾಡಬೇಕೆಂಬ ಯೋಜನೆ ಹಾಕಿಕೊಂಡಿದ್ದಾರೆ. ಇಲ್ಲಿ ಅಣ್ಣಾವ್ರನ್ನು ವರ್ಷವಿಡೀ ನೆನೆಸಿಕೊಳ್ಳುವ ಜೊತೆಜೊತೆಗೆ ಕನ್ನಡ ಚಿತ್ರರಂಗದ ಇನ್ನಿಬ್ಬರು ದಿಗ್ಗಜರುಗಳಾದ ವಿಷ್ಣು ಮತ್ತು ಶಂಕರ್ ನಾಗ್ ಅವರಿಗೂ ಶ್ರದ್ಧಾಂಜಲಿ ಅರ್ಪಿಸುವ ಮುಖಾಂತರ ದೊಡ್ಡತನ ಮೆರೆದಿದ್ದಾರೆ ಎಂದು ಹೇಳಬಹುದು.



ಬಹುಶಃ ಇಂತಹ ಸಣ್ಣಪುಟ್ಟ ಕಾರಣಗಳಿಂದಾಗಿಯೇ ಇಂದು ಶಿವರಾಜ್‌ಕುಮಾರ್ ಇಡೀ ಕನ್ನಡ ಚಿತ್ರರಂಗ ಇಷ್ಟಪಡುವ ನಟನಾಗಿ ರೂಪುಗೊಂಡಿದ್ದಾರೆ.

ಅಕ್ಕಿಯ ಹೊಸ ಡಾರ್ಲಿಂಗ್!



ಟೀವಿ ಕ್ಯಾಮೆರಾ ಮುಂದೆ ಕುಳಿತು ಪ್ಯಾನಲ್ ಡಿಸ್‌ಕಷನ್, ವಾರ್ತಾ ವಾಚನ ಮಾಡುತ್ತಿದ್ದ ಕಿರುತೆರೆ ನಿರೂಪಕ ಗೌರೀಶ್ ಅಕ್ಕಿ ಈಗ ಮೊದಲ ಬಾರಿಗೆ ಸಿನಿಮಾ ನಿರ್ದೇಶನಕ್ಕೆ ಇಳಿದಿದ್ದಾರೆ.

ಮೊದಲು ಈ ಟಿವಿ, ನಂತರ ಟಿವಿ-9 ಆಮೇಲೆ ಸುವರ್ಣ ನ್ಯೂಸ್ ಹೀಗೆ ಒಂದರನಂತರ ಮತ್ತೊಂದರಂತೆ ಬಿಡಾರ ಬದಲಿಸುತ್ತಾ ಬಂದಿರುವ ಅಕ್ಕಿಗೆ ಮೊದಲಿನಿಂದಲೂ ಸಿನಿಮಾ ವ್ಯಾಮೋಹ ಜಾಸ್ತಿ. ಎರಡು ವರ್ಷಗಳ ಮುಂಚೆಯೇ ಟಿ.ಎನ್. ಸೀತಾರಾಮ್ ಮತ್ತು ಯೋಗರಾಜ ಭಟ್ಟರೊಂದಿಗೆ ಪಳಗಿದ್ದ ಮಧುಚಂದ್ರ ಎಂಬ ಯುವಕನೊಂದಿಗೆ ಸಿನಿಮಾ ಮಾಡುವ ಸ್ಕೆಚ್ಚು ರೂಪಿಸಿದ್ದರು ಅಕ್ಕಿ. ಆದರೆ ಅದು ಟೇಕ್ ಆಫ್ ಆಗಿರಲಿಲ್ಲ. ಈಗ 'ಸಿನಿಮಾ ಮೈ ಡಾರ್ಲಿಂಗ್' ಎಂಬ ಸಿನಿಮಾವನ್ನು ಆರಂಭಿಸಲು ಅಕ್ಕಿ ಸಕಲ ಸಿದ್ಧತೆಯನ್ನು ಮಾಡಿ ಮುಗಿಸಿದ್ದಾರೆ. ಈ ಚಿತ್ರವನ್ನು ಅನಿಲ್ ಮೆಣಸಿನಕಾಯಿ ಮತ್ತು ಉಮೇಶ್ ಬಣಕಾರ್ ಸೇರಿ ನಿರ್ಮಿಸುತ್ತಿದ್ದಾರೆ. ❖

ಇಂತಹ ಹಿನ್ನಲೆ ಇರುವ ಮುಖ್ಯಮಂತ್ರಿ ತನ್ನ ಉಪವಾಸವನ್ನು ದೆಹಲಿಯ ರಾಮಲೀಲಾ ಮೈದಾನದಲ್ಲಿ ಮಾಡಿದ್ದರೆ ಇಡೀ ದೇಶವೇ ಹೊತ್ತಿ ಉರಿಯುತ್ತಿತ್ತೋ ಏನೋ??

- ಸಂಡೂರು ಕುಮಾರಸ್ವಾಮಿ, ಬೆಂಗಳೂರು

ಪತ್ರಿಕೆಯಲ್ಲಿ ಈಗೀಗ ಹೆಚ್ಚು ಹೆಚ್ಚು ಓದುಗರ ಪತ್ರಗಳನ್ನು ಪ್ರಕಟಿಸುತ್ತಿರುವುದನ್ನು ಗಮನಿಸಿದ್ದೇನೆ. ಇದೊಂದು ಸ್ವಾಗತಾರ್ಹ ಹೆಜ್ಜೆ. ನಾನೂ ಇದನ್ನೇ ಬಹಳ ಕಾಲದಿಂದ ನಿರೀಕ್ಷಿಸುತ್ತಿದ್ದೆ ಬಯಸುತ್ತಿದ್ದೆ. ಯಾಕೆಂದರೆ ಪತ್ರಿಕೆಯ ಪ್ರಕಟಣೆ ಒಂದು ಏಕಮುಖ ವ್ಯವಹಾರವಾಗಕೂಡದು. ಬದಲಿಗೆ ಅದು ಸಂವಾದದ ಒಂದು ವೇದಿಕೆಯಾದರೇ ಚೆನ್ನ. ಆಗ ಓದುಗರಿಗೂ 'ಇದು ನಮ್ಮ ಪತ್ರಿಕೆ' ಎಂಬ ಭಾವ ಹೆಚ್ಚಾಗುತ್ತದೆ. ತಮ್ಮ ದನಿಗೂ ಅವಕಾಶ ಸಿಕ್ಕಾಗ ಬರೆಯಲು ಪ್ರತಿಕ್ರಿಯಿಸಲು ಪ್ರೋತ್ಸಾಹವೂ ದೊರೆತಂತಾಗುತ್ತದೆ. ಪ್ರಜಾವಾಣಿಯಂತಹ ಕೆಲವೇ ಕೆಲವು ಪತ್ರಿಕೆಗಳನ್ನು ಹೊರತುಪಡಿಸಿದರೆ ಓದುಗರ ಪತ್ರಗಳಿಗೆ ಎಲ್ಲೂ ಸ್ಥಾನವೇ ಇಲ್ಲವಾಗಿರುವುದು ಒಂದು ವಿಷಾದದ ಸಂಗತಿ. ಗೌರಿ ಲಂಕೇಶ್ ಪತ್ರಿಕೆಯಲ್ಲಿ ಮಂಗಳೂರಿನ ಪ್ರವೀಣ್ ಶೆಟ್ಟಿಯಂಥವರ ವಿಚಾರಪೂರ್ಣ ಪತ್ರಗಳನ್ನು ಓದುವುದೇ ಒಂದು ಸೊಗಸು. ಹಾಗಾಗಿ ಈ ಒಂದು ಕ್ರಮ ಹೀಗೆಯೇ ಮುಂದುವರಿಯಲಿ. ವಿಸ್ತಾರವಾದ ಜಾಗ ಅದಕ್ಕೆ ಮೀಸಲಿರಲಿ.

- ಶ್ರೀನಿವಾಸ ಕಾರ್ಕಳ, ಮಂಗಳೂರು

ಭ್ರಷ್ಟಾಚಾರದ ವಿರುದ್ಧ ದೇಶದಾದ್ಯಂತ ಜನರು ರೊಚ್ಚಿಗೆದ್ದಿದ್ದಾರೆ. ಈ ಭ್ರಷ್ಟಾಚಾರಕ್ಕೆ ಮೂಲಕಾರಣ ನಮ್ಮ ಚುನಾವಣಾ ನಿಯಮಗಳು. ದೇಶದ ಸಂಪತ್ತನ್ನು ಕೆಲವೇ ಭ್ರಷ್ಟ ವ್ಯಕ್ತಿಗಳು ಕೊಳ್ಳೆ ಹೊಡೆದು ತಮ್ಮ ಪ್ರಭಾವದಿಂದ ಸರಕಾರ ಹಾಗೂ ಅಧಿಕಾರವನ್ನು ವಶಪಡಿಸಿಕೊಳ್ಳುವುದನ್ನು ನೋಡಿದ್ದೇವೆ. ಬಂಡವಾಳಶಾಹಿಗಳು ಕೋಟ್ಯಂತರ ರೂಪಾಯಿಗಳನ್ನು ಭ್ರಷ್ಟಾಚಾರದ ರೂಪದಲ್ಲಿ ಚುನಾವಣೆಗಳಲ್ಲಿ ಖರ್ಚು ಮಾಡಿ, ಅವರ ಪ್ರತಿನಿಧಿಗಳೇ ಚುನಾಯಿತರಾಗಿ ಬರುವಂತೆ ಮಾಡುವಲ್ಲಿ ಸಮರ್ಥರಾಗಿದ್ದಾರೆ. ಅವರ ಎದುರು ಸಭ್ಯ ಅಭ್ಯರ್ಥಿಗಳು ಸ್ಪರ್ಧಿಸಿದರೂ ಗೆಲ್ಲುವ ಸಾಧ್ಯತೆಗಳು ನಗಣ್ಯ.

ನಮ್ಮ ರಾಜ್ಯದ ಭ್ರಷ್ಟ ರಾಜಕಾರಣಿಗಳು ದೇಶದ ಸಂಪತ್ತನ್ನು ದರೋಡೆ ಮಾಡಿ ತಮ್ಮ ಆರ್ಥಿಕ ಬಲದಿಂದ ನಮ್ಮ ರಾಜ್ಯದ ರಾಜಕೀಯದಲ್ಲಿ ತಮ್ಮ ಪ್ರಭಾವ ಬೀರಿಕೊಂಡಿದ್ದನ್ನು ನೋಡಿದ್ದೇವೆ. ಕೇಂದ್ರ ಮತ್ತು ರಾಜ್ಯ ಸರಕಾರಗಳ ವಿಭಿನ್ನ ಪಕ್ಷಗಳ ತಿಕ್ಕಾಟ, ಜಗ್ಗಾಟದಿಂದಾಗಿ ಮಾತ್ರ ಈ ಪ್ರಕರಣ ಬೆಳಕಿಗೆ ಬರಲು ಕಾರಣವಾಯ್ತು ಎಂಬುವುದನ್ನು ನಾವು ಗಮನಿಸಬೇಕು.

ಇಲ್ಲಿ ಆಪರೇಷನ್ ಕಮಲದಂತಹ ವಿಕೃತ ರಾಜಕೀಯ, ಕೇಂದ್ರದಲ್ಲಿ ಓಟಿಗಾಗಿ ನೋಟಿನ ಪ್ರಹಸನ, 2-ಜಿ ಸ್ಪೆಕ್ಟ್ರಂ ಹಗರಣದಲ್ಲಿ 1,76,000 ಕೋಟಿ ರೂಪಾಯಿಗಳ ಅವ್ಯವಹಾರಗೈದ ಮಂತ್ರಿ ಜೈಲು ಸೇರಿದ್ದು ನಮ್ಮ ಕಣ್ಣ ಮುಂದಿದೆ. ನಮ್ಮ ಪ್ರಸ್ತುತ ಸಂಸತ್ತಿನ ಸದಸ್ಯರಲ್ಲಿ ಬಹುತೇಕ ಮಂದಿ ಕೋಟ್ಯಾಧಿಪತಿಗಳೇ ಆಗಿರಲು ಕಾರಣ ಇದುವೇ ಆಗಿರುತ್ತದೆ. ಆದುದರಿಂದ ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತುವವರು ಚುನಾವಣಾ ನೀತಿಸಂಹಿತೆಯಲ್ಲಿನ ನಿಯಮಗಳ ಸುಧಾರಣೆಗೆ ಪ್ರಥಮ ಆದ್ಯತೆಯನ್ನು ನೀಡಬೇಕಿದೆ. ಅಣ್ಣಾ ಹಜಾರೆಯವರ ತಂಡದವರೂ ಇದನ್ನು ತಿಳಿದು ಅದನ್ನು ಕೈಗೆತ್ತಿಕೊಂಡಿರುವುದನ್ನು ನಾವು ಸ್ವಾಗತಿಸುತ್ತೇವೆ. ಆದರೆ ಅದನ್ನು ಹೇಗೆ ಮತ್ತು ಯಾವ ರೂಪದಲ್ಲಿ ಕಾರ್ಯಗತಗೊಳಿಸಬೇಕೆಂಬ ಬಗ್ಗೆ ಬಹಳಷ್ಟು ವಿಚಾರಗೋಷ್ಠಿಗಳು ಮತ್ತು ಸಾರ್ವಜನಿಕ ಚರ್ಚೆಗಳು ನಡೆಸಿ ಸಲಹೆ ಸೂಚನೆಗಳನ್ನು ಆಹ್ವಾನಿಸುವ ಅವಶ್ಯಕತೆ ಇದೆ.

ಪ್ರಪಂಚದ ಅನೇಕ ರಾಷ್ಟ್ರಗಳಲ್ಲಿ ವಿವಿಧ ಚುನಾವಣಾ ವ್ಯವಸ್ಥೆಗಳು ಜಾರಿಯಲ್ಲಿದ್ದು ಅವುಗಳಲ್ಲಿ ಅನುಪಾತ ಪ್ರಾತಿನಿಧ್ಯ ವ್ಯವಸ್ಥೆಯು ಪ್ರಮುಖವಾಗಿದೆ. 93 ರಾಷ್ಟ್ರಗಳಲ್ಲಿ ಅದು ಜಾರಿಯಲ್ಲಿದ್ದು ಕೆಲವು ರಾಷ್ಟ್ರಗಳಲ್ಲಿ ಅಲ್ಪಸ್ವಲ್ಪ ಬದಲಾವಣೆಗಳನ್ನು ಹೊಂದಿವೆ. ಒಟ್ಟು ಸದಸ್ಯರ ಪೈಕಿ ಅರ್ಧಾಂಶ ಸದಸ್ಯರನ್ನು ಅನುಪಾತ ಮತದ ಪ್ರಕಾರ ಪಕ್ಷಗಳು ನೇಮಿಸಿ ಉಳಿದ ಅರ್ಧಾಂಶ ಸದಸ್ಯರನ್ನು ನೇರ ಬಹುಮತದಿಂದ ಚುನಾಯಿಸುವ ವ್ಯವಸ್ಥೆಯನ್ನು ಸಹ ಹೊಂದಿರುತ್ತದೆ. ಫ್ರಾನ್ಸ್ ಇದಕ್ಕೆ ಒಂದು ಉತ್ತಮ ಮಾದರಿಯಾಗಿದೆ.

ನಮ್ಮ ದೇಶದಲ್ಲೂ ಈ ಅನುಪಾತ ವ್ಯವಸ್ಥೆಯನ್ನು ಜಾರಿಗೊಳಿಸಲು ಕಮ್ಯುನಿಸ್ಟ್ ಪಕ್ಷಗಳು ಮುಂಚಿನಿಂದಲೂ ಒತ್ತಾಯಿಸುತ್ತಿದ್ದು ವಾಜಪೇಯಿ ಸರ್ಕಾರವು 1996ರಲ್ಲಿ ಅದಕ್ಕೆ ಬೆಂಬಲ ಸೂಚಿಸಿತ್ತು. ಭಾರತದ ಕಾನೂನು ಆಯೋಗವು ಅದನ್ನು 1999ರಲ್ಲಿ ಶಿಫಾರಸ್ಸು ಮಾಡಿತ್ತು. ಅಕಾಲಿ ದಳ, ಶಿವ ಸೇನೆ, ಡಿಎಂಕೆ ಪಕ್ಷಗಳೂ ಅದಕ್ಕೆ ಬೆಂಬಲ ಸೂಚಿಸಿದ್ದವು.

ಬಂಡವಾಳಶಾಹಿ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿ ಅಧಿಕಾರವನ್ನು ಕಬಳಿಸಲು ಪೈಪೋಟಿ ನಡೆಸುತ್ತಿರುವ ಈ ಸಂದರ್ಭದಲ್ಲಿ ನಮ್ಮ ದೇಶದ ಎಲ್ಲಾ ಎಡ ಮತ್ತು ಪ್ರಜಾಪ್ರಭುತ್ವವಾದಿ ಸಮಾಜವಾದಿ ಪಕ್ಷಗಳು ಸಂದರ್ಭವಾದಿ ಸಾಧ್ಯತೆಗಳನ್ನು ತೂರೆದು ಅನುಪಾತ ವ್ಯವಸ್ಥೆಯ ಚುನಾವಣಾ ರೀತಿಯನ್ನು ಜಾರಿಗೊಳ್ಳುವಂತೆ ಮಾಡಿದರೆ ಪ್ರಜಾಪ್ರಭುತ್ವವನ್ನು ಈ ದೇಶದಲ್ಲಿ ಸುಸ್ಥಿರಗೊಳಿಸಬಹುದು.

ಅನುಪಾತ ವ್ಯವಸ್ಥೆಯ ಚುನಾವಣಾ ರೀತಿಯು ಜಾರಿಗೊಳ್ಳುವಂತೆ ಕೆಲವು ಸೂಚನೆಗಳನ್ನು ನೀಡಬಯಸುತ್ತೇವೆ.

1) ಕ್ಷೇತ್ರಗಳಲ್ಲಿ ಪಡೆದ ಮತಗಳ ದಶಾಂಶಗಳ ಆಧಾರದಲ್ಲಿ ಪಕ್ಷಗಳೇ ಚುನಾವಣೆಯ ಬಳಿಕ ತಮ್ಮ ಅಭ್ಯರ್ಥಿಯನ್ನು ಸೂಚಿಸುವಂತಾಗಬೇಕು. ಪಕ್ಷಾತೀತ ಅಭ್ಯರ್ಥಿಗಳು ಚುನಾವಣೆಯ ಬಳಿಕ ಯಾವುದೇ ಪಕ್ಷಕ್ಕೂ ಸೇರಲಿಕ್ಕೆ ಅವಕಾಶವಿರಬಾರದು.
2) ಫ್ರಾನ್ಸ್ ಹಾಗೂ ಮತ್ತಿತರ ಕೆಲವು ದೇಶಗಳಲ್ಲಿ ಇರುವಂತೆ ಅಭ್ಯರ್ಥಿಯು ಆತನನ್ನು ಬೆಂಬಲಿಸುವ ಪಕ್ಷದ ಶಿಸ್ತಿಗೆ ಒಳಪಡುವಂತಿರಬೇಕು.
3) ಪಕ್ಷಾಂತರ ಮಾಡುವವರು ಮತ್ತು ಅದಕ್ಕೆ ಪ್ರೇರೇಪಣೆ ನೀಡುವ, ಹಣ ಒದಗಿಸುವ ಎಲ್ಲರೂ ಅಪರಾಧಿಗಳೆಂದು ಪರಿಗಣಿಸಿ ಶಿಕ್ಷೆಗೆ ಒಳಪಟ್ಟು ಮುಂದೆ ಚುನಾವಣೆಗೆ ಅನರ್ಹರಾಗುವಂತಾಗಬೇಕು.
4) ದಂಡಸಂಹಿತೆಯಲ್ಲಿ ಅಪರಾಧಿ ಎಂದೆನಿಸಲ್ಪಟ್ಟವರು ಚುನಾವಣೆಗೆ ಸ್ಪರ್ಧಿಸಲು ಅನರ್ಹರಾಗಬೇಕು.
5) ಅಭ್ಯರ್ಥಿಗಳು ತಮ್ಮ ಮತ್ತು ಕುಟುಂಬಿಕರ ಆಸ್ತಿಪಾಸ್ತಿಗಳ ವೃಧೀಕೃತ ವಿವರಗಳನ್ನು ಸ್ಪರ್ಧಿಸುವಾಗ ಮತ್ತು ಗೆದ್ದ ಬಳಿಕ ವರ್ಷಂಪ್ರತಿ ನೀಡುವುದನ್ನು ಖಡ್ಡಾಯಗೊಳಿಸಬೇಕು. ನೀಡದೇ ಇದ್ದರೆ ಅವರ ಸದಸ್ಯತ್ವವನ್ನು ರದ್ದುಗೊಳಿಸುವ ಅಧಿಕಾರವು ಸಂಬಂಧಪಟ್ಟ ಅಧಿಕಾರಿಗೆ ಇರಬೇಕು.
6) ಪ್ರಸ್ತುತ ಕರ್ನಾಟಕದ ವಿಧಾನ ಪರಿಷತ್ತಿನ ಆಯ್ಕೆಯ ನಿಯಮಗಳನ್ನು ಶಾಸನಸಭೆಗೂ, ಸಂಸತ್‌ಸಭೆಗೂ ಅನ್ವಯಗೊಳಿಸಬಹುದು.
7) ಅಭ್ಯರ್ಥಿಗಳು ಯಾವುದೇ ಲಾಭದಾಯಕ ಹುದ್ದೆ ಅಥವಾ ವ್ಯವಹಾರಗಳನ್ನು ಹೊಂದಿರಬಾರದು.
8) ಪಕ್ಷಗಳ ಮತ್ತು ಅಭ್ಯರ್ಥಿಗಳ ಚುನಾವಣಾ ವೆಚ್ಚದ ಮಿತಿಯನ್ನು ಕಟ್ಟುನಿಟ್ಟಿನಿಂದ ಪಾಲಿಸುವಂತಾಗಬೇಕು.

- ಬಿ.ವಿ. ಕಕ್ಕಿಲ್ಲಾಯ, ಮಾಜಿ ಸಂಸದರು, ಮಂಗಳೂರು

ಸಾರಥಿಯೇ ಇಲ್ಲದೆ ಸಿನಿಮಾ ಬಂತು!

ಇದು ಕನ್ನಡ ಚಿತ್ರರಂಗದ ಇತಿಹಾಸದಲ್ಲೇ ಹಿಂದೆಂದೂ ನಡೆಯದಂತಹ ಅತಿ ಅಪರೂಪವಾದ ಘಟನೆ. ಅದೇನೆಂದರೆ ಚಿತ್ರದ ನಾಯಕ ಜೈಲಿನಲ್ಲಿರುವಾಗ ಆತ ನಟಿಸಿದ ಚಿತ್ರ ಬಿಡುಗಡೆಯಾಗುತ್ತಿರುವುದು. ನಾವು ಹೇಳುತ್ತಿರುವುದು ದರ್ಶನ್ ಬಗ್ಗೆ.




ಸುಮಾರು 34 ವರ್ಷಗಳ ಹಿಂದೆ ಆಗಿನ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ತುರ್ತು ಪರಿಸ್ಥಿತಿ ಹೇರಿದ ನಂತರ ನಡೆದ ಮಹಾಚುನಾವಣೆ ಸಂದರ್ಭದಲ್ಲಿ ಇಂತಹುದೇ ಒಂದು ಘಟನೆ ನಡೆದಿತ್ತು. ಆಗ ಕಾರ್ಮಿಕರ ನಾಯಕರಾಗಿದ್ದ ಜಾರ್ಜ್ ಫರ್ನಾಂಡಿಸ್ ಜೈಲಿನಲ್ಲಿದ್ದೇ ಬಿಹಾರದ ಮುಜಾಫರ್ ಲೋಕಸಭಾ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಿದ್ದರು. ಫಲಿತಾಂಶ ಬಂದನಂತರ ಎಲ್ಲರಿಗೂ ಅತ್ಯಾಶ್ಚರ್ಯ. ಅದೇನೆಂದರೆ ಒಂದೇ ಒಂದು ಮತದಾರನನ್ನೂ ಕೂಡ ಭೇಟಿಯಾಗದ ಜಾರ್ಜ್ ಫರ್ನಾಂಡಿಸ್ ದಾಖಲೆ ಮತದ ಅಂತರದಿಂದ ಚುನಾಯಿತರಾಗಿದ್ದರು.

ಹಾಗಂತ ದರ್ಶನ್‌ಗೂ ಜಾರ್ಜ್ ಫರ್ನಾಂಡಿಸ್‌ಗೂ ಹೋಲಿಸಲು ಸಾಧ್ಯವೇ ಇಲ್ಲ, ಜಾರ್ಜ್ ಫರ್ನಾಂಡೀಸ್ ಜೈಲಿನಲ್ಲಿದ್ದರೂ ಜನ ಅವರ ಪರ ಅನುಕಂಪ ಹೊಂದಿದ್ದರು. ಆದರೆ ದರ್ಶನ್ ವಿಷಯ ತಿರುಗಾಮುರುಗಾ. ಚಿತ್ರಗಳಲ್ಲಿ ನಾಯಕನಾಗಿ ನಟಿಸುತ್ತಿದ್ದ ದರ್ಶನ್ ನಿಜಜೀವನದಲ್ಲಿ ಖಳನಾಯಕನ ತರ ವರ್ತಿಸಿದ್ದರಿಂದ ಈಗ ಜೈಲುಗಂಬಿ ಎಣಿಸುತ್ತಿದ್ದಾನೆ.

ಒಂದು ವೇಳೆ ದರ್ಶನ್ ನಟಿಸಿರುವ 'ಸಾರಥಿ' ಬಾಕ್ಸ್ ಆಫೀಸ್‌ನಲ್ಲಿ ಗೆದ್ದರೆ, ದರ್ಶನ್ ವೃತ್ತಿಜೀವನಕ್ಕೆ ಅದು ಮುಂದೆ ಸಹಾಯವಾದೀತೇ ವಿನಃ ಜೈಲಿನಿಂದ ಬಿಡುಗಡೆ ಹೊಂದುವ ವಿಷಯದಲ್ಲಿ ಯಾವುದೇ ಪರಿಣಾಮ ಬೀರುವುದಿಲ್ಲ.

ಆದರೂ ನಾಯಕ ನಟನೊಬ್ಬ ಜೈಲಿನಲ್ಲಿ ಕೊಳೆಯುತ್ತಿರುವಾಗ ಆತ ನಟಿಸಿದ ಚಿತ್ರವನ್ನು ಆತನ ಅಭಿಮಾನಿಗಳು ಹಾಗೂ ಉಳಿದ ಪ್ರೇಕ್ಷಕರು ಹೇಗೆ ಸ್ವೀಕರಿಸುತ್ತಾರೆ ಎಂಬ ಕುತೂಹಲ ಮತ್ತು ಸಸ್ಪೆನ್ಸ್ ಎಲ್ಲರಲ್ಲೂ ಇದೆ.



ಜೈಲಲ್ಲಿ ದರ್ಶನ!

ಶಿವರಾಜ್‌ಕುಮಾರ್ ಈಗ ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದಾರೆ!

ಗಾಬರಿಯಾಗಬೇಡಿ!!

ಶಿವಣ್ಣ ಜೈಲಿಗೆ ಹೋಗುತ್ತಿರುವುದು ಕೆ.ಪಿ. ಶ್ರೀಕಾಂತ್ ನಿರ್ಮಿಸುತ್ತಿರುವ 'ಶಿವ' ಚಿತ್ರದ ಚಿತ್ರೀಕರಣಕ್ಕಾಗಿ..

ಈ ಸಂದರ್ಭದಲ್ಲಿ ಶಿವಣ್ಣ ದರ್ಶನ್‌ನನ್ನು ಭೇಟಿ ಮಾಡಿ, ಯೋಗಕ್ಷೇಮ ವಿಚಾರಿಸಿದ್ದಾರಂತೆ.


ಕಟ್ಟಾ ಜಗ್ಗನೊಂದಿಗೆ ಗಿಡಗಳಿಗೆ ನೀರುಣಿಸುತ್ತಾ, ಕೈದಿಗಳೊಂದಿಗೆ ನಾಟಕದ ತಾಲೀಮಿಗೆ ಸಿದ್ಧವಾಗುತ್ತಿರುವ ದರ್ಶನ್ ಶಿವಣ್ಣನನ್ನು ಭೇಟಿ ಮಾಡಲು ಒಪ್ಪುತ್ತಾನಾ? ಅದೂ ಪತ್ನಿಗೆ ಹೊಡೆಯುವ ಸಂದರ್ಭದಲ್ಲಿ ಇದೇ ಶಿವಣ್ಣ ಮತ್ತು ಅವರ ಪತ್ನಿಯ ಕುರಿತಾಗಿ ಅವಾಚ್ಯವಾಗಿ ಮಾತನಾಡಿದ್ದ ದರ್ಶನ್‌ಗೆ ಮತ್ತದೇ ಶಿವಣ್ಣನ ಮುಖ ನೋಡಲು ಮನಸ್ಸಾಗುತ್ತದಾ? ಎಂಬೆಲ್ಲ ಪ್ರಶ್ನೆಗಳೂ ಈಗ ಮೂಡಿವೆ.

ಇಷ್ಟಾಗಿಯೂ ದರ್ಶನ್ ಶಿವಣ್ಣನನ್ನು ಕಂಡು ಮಾತಾಡಿದರೆ ಆತ ಒಂದಿಷ್ಟಾದರೂ ಬದಲಾಗಬಹುದೇನೋ?



ಜರಾಸಂಧ
ಪ್ರಣೀತಾ

ಕ್ರೇಜಿಯ ಈಜಿ ಲೋಕ



ಚಿತ್ರರಂಗದಲ್ಲಿ ಮೂರು ದಶಕಗಳನ್ನು ಸವೆದಿರುವ ರವಿಚಂದ್ರನ್‌ಗೆ ಇಷ್ಟು ಸುಲಭವಾಗಿ, ಶಿಸ್ತಿನಿಂದ ಸಿನಿಮಾ ಮಾಡಬಹುದು ಅನ್ನೋದು ಬಹುಶಃ ತಿಳಿಯುತ್ತಿರುವುದು ಈಗಲೇ ಇರಬೇಕು. ಸ್ವತಃ ಅವರೇ ನಿರ್ದೇಶಕರಾಗಿ ಹತ್ತಾರು ಹಿಟ್ ಚಿತ್ರಗಳನ್ನು ನೀಡಿ ಕನ್ನಡ ಚಿತ್ರರಂಗದಲ್ಲಿ ಎಂತೆಂಥದ್ದೋ ಆವಿಷ್ಕಾರಗಳನ್ನು ಮಾಡಿರುವ ರವಿಚಂದ್ರನ್ ಒಂದೊಂದು ಸಿನಿಮಾಕ್ಕೂ ತಿಂಗಳುಗಟ್ಟಲೆ, ವರ್ಷಗಟ್ಟಲೆ ತೆಗೆದುಕೊಂಡಿದ್ದಾರೆ. ಉದಾಹರಣೆಗೆ, ಈಗ ಅವರೇ ನಿರ್ಮಿಸಿ, ನಟಿಸಿ, ನಿರ್ದೇಶಿಸುತ್ತಿರುವ 'ಮಂಜಿನ ಹನಿ' ಚಿತ್ರ ಕಳೆದ ನಾಲ್ಕು ವರ್ಷಗಳಿಂದ ಸತತವಾಗಿ ಚಿತ್ರೀಕರಣ, ಗ್ರಾಫಿಕ್ಸು ಇತ್ಯಾದಿಯನ್ನು ನಡೆಸುತ್ತಲೇ ಇದೆ.

ಹೀಗಿರುವಾಗ ಕವಿತಾ ಲಂಕೇಶ್ ನಿರ್ದೇಶನದ 'ಕ್ರೇಜಿ ಲೋಕ' ಎರಡು ತಿಂಗಳ ಹಿಂದೆ ಶುರುವಾದರೂ ಆದಾಗಲೇ ಚಿತ್ರೀಕರಣವನ್ನು ಸಂಪೂರ್ಣಗೊಳಿಸಿಬಿಟ್ಟಿದೆ. ಇದುವರೆಗೂ ಅಂದುಕೊಂಡ ಷೆಡ್ಯೂಲ್‌ನಲ್ಲೇ ಕೆಲಸ ಮುಗಿಸಿ ಅಭ್ಯಾಸವೇ ಇಲ್ಲದ ರವಿ ಮಾಮನಿಗೆ ಇಷ್ಟು ಶಿಸ್ತಿನ ಕೆಲಸ ಹೊಸ ಅನುಭವದಂತಾಗಿದೆ!

ಅದೂಅಲ್ಲದೆ, ರವಿ ಈ ಚಿತ್ರದ ಮೂಲಕ ಮೊಟ್ಟಮೊದಲ ಬಾರಿಗೆ ಮಹಿಳಾ ನಿರ್ದೇಶಕಿಯೊಬ್ಬರೊಂದಿಗೆ ಕೆಲಸ ಮಾಡಿದ್ದಾರೆ. ಬೇರೆ ನಿರ್ದೇಶಕರ ಚಿತ್ರಗಳಲ್ಲಿ ಈ ಹಿಂದೆ ನಟಿಸಿದ್ದರೂ ಅಲ್ಲಿ ರವಿಯ ಮಧ್ಯಪ್ರವೇಶ, ಕೈಚಳಕ ಇದ್ದೇ ಇರುತ್ತಿತ್ತು, ಆದರೆ ಕವಿತಾ ಚಿತ್ರದಲ್ಲಿ ರವಿಚಂದ್ರನ್ ಅವರಿಗೆ ಅಂಥ ಯಾವ ತಲೆಬಿಸಿಯೂ ಆಗಲಿಲ್ಲ, ಬದಲಾಗಿ ತಮ್ಮ ಪಾಡಿಗೆ ನಿರ್ದೇಶಕಿ ಹೇಳಿದಷ್ಟು ಕೆಲಸ ಮಾಡಿ ಮುಗಿಸಿದ್ದಾರೆ ರವಿ.

ಈ ಅನುಭವದ ಬಗ್ಗೆ "ಇಷ್ಟೊಂದು ಸಲೀಸಾಗಿ ಸಿನಿಮಾ ಮಾಡಬಹುದು ಅಂತಾ ಈಗಷ್ಟೇ ಗೊತ್ತಾಗ್ತಿದೆ. ಅಷ್ಟು ಬೇಗ ಸಿನಿಮಾ ಮುಗೀತು" ಎಂದು ಸ್ವತಃ ರವಿಯೇ ಹೇಳಿದ್ದಾರೆ.

ಪವರ್ ಸಿಂಗರ

ಕಾಲ್‌ಶೀಟ್ ಕೊಡಲೂ ಪುರುಸೊತ್ತಿಲ್ಲದ ಪುನೀತ್ ಹಾಡುವುದಕ್ಕೆ ಅ... ಸಮಯ ಒದಗಿಸಿಕೊಳ್ಳುತ್ತಾರೋ ಗೊತ್ತಿಲ್ಲ.

'ಮೈಲಾರಿ' ಚಿತ್ರದ ಟೈಟಲ್ ಸಾಂಗ್ ಹಾಡಿದ ನಂತರವಂತೂ ಪುನೀ... ರಾಜ್‌ಕುಮಾರ್ ಕಂಠಕ್ಕೂ ಈಗ ಸಿಕ್ಕಾಪಟ್ಟೆ ಡಿಮ್ಯಾಂಡ್ ಕ್ರಿಯೇಟ್ ಆಗಿಬ... ಇತ್ತೀಚಿಗೆ ಗಣೇಶ್ ನಟಿಸುತ್ತಿರುವ 'ಶೈಲೂ' ಚಿತ್ರಕ್ಕೆ ಪುನೀತ್ ಒಂದು ಹಾ... ಹಾಡಿದ್ದಾರೆ ಎಂದು ವರದಿ ಮಾಡಿದ್ದೆವು. ಈಗ ಲೂಸ್ ಮಾದ ನಟಿಸುತ್ತಿ... 'ಸಿದ್ಲಿಂಗು' ಚಿತ್ರಕ್ಕೂ ಪುನೀತ್ ಒಂದು ಹಾಡು ಹಾಡಿದ್ದಾರೆ. ಆರಂಭದಲ್ಲಿ ... ಚಿತ್ರಗಳಿಗೆ ಮಾತ್ರ ಹಾಡುತ್ತಿದ್ದ ಪುನೀತ್ ಈಗ ಕಮರ್ಷಿಯಲ್ ಸಿಂಗರ್ ಆಗಿಬಿಟ್ಟಿದ್ದಾರೆ.



ಪುನೀತ್ ಎಷ್ಟೇ ಬ್ಯುಸಿ ಇದ್ದರೂ ಬೇರೆಯವರ ಚಿತ್ರಗಳಿಗೆ ಹಾಡುತ್ತಿದ್ದಾರೆ ಮಾತ್ರವಲ್ಲ ಅದಕ್ಕೆಂದು ಅಗತ್ಯವಾದ ತಯಾರಿಯನ್ನೂ ಮಾಡಿಕೊಳ್ಳುತ್ತಾರೆ. ಹಾಡಿನ ರೆಕಾರ್ಡಿಂಗ್‌ಗೆ ಐದಾರು ದಿನಗಳ ಮುನ್ನವೇ ಅದರ ಸಾಹಿತ್ಯ ಮತ್ತು ಟ್ಯೂನ್ ಪಡೆದು ಸಮಯ ಸಿಕ್ಕಾಗಲೆಲ್ಲಾ ಅದನ್ನು ಪ್ರಾಕ್ಟೀಸ್ ಮಾಡಿ ನಂತರ ಧ್ವನಿಮುದ್ರಣ ಮಾಡಿಕೊಡುತ್ತಾರಂತೆ. ಇದು ಪುನೀತ್‌ರ ವೃತ್ತಿಪರತೆಗೆ ಸ...

ಈಗ ಪುನೀತ್ ಒಂದು ಹಾಡು ಹಾಡಿದರೆ ಆಡಿಯೋ ಬೆಲೆ ಲ... ಏರುತ್ತದೆ. ನೀವು ನಂಬುತ್ತೀರೋ ಇಲ್ಲವೋ 'ಮೈಲಾರಿ'ಯಲ್ಲಿ ಪುನೀತ್ ... ಹಾಡನ್ನು ಕೇಳಿಸಿಕೊಂಡ ನಂತರ ಆಡಿಯೋ ಸಂಸ್ಥೆಯವರಿಂದ ಆ ... ನಿರ್ಮಾಪಕರು ಬರೋಬ್ಬರಿ ಮೂವತ್ತು ಲಕ್ಷ ರೂಪಾಯಿ ಹೆಚ್ಚುವರಿ ... ಕುದುರಿಸಿದ್ದರು.

ಇಷ್ಟಾದರೂ ಪುನೀತ್ ತಮ್ಮ ಗಾಯನಕ್ಕೆ ಇನ್ನೂ ಸಂಭಾವನೆ ಫಿಕ್ಸ್ ... ಉಚಿತವಾಗಿ ಹಾಡುತ್ತಿದ್ದಾರೆ ಅನ್ನೋದೇ ವಿಶೇಷ!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com, Printed at Rajhans Enterprises, # 134, ...